ಸೋಮವಾರ, ಜನವರಿ 31, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 31 | ಪುಟ 14
www.prajavani.net
f /prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಪೆಗಾಸಸ್ ಕುತಂತ್ರಾಂಶ ಇಸ್ರೇಲ್‌ನ ರಾಜತಾಂತ್ರಿಕ ಅಸ್ತ್ರ
ಪಂಜಾಬ್: 2 ಕ್ಷೇತ್ರಗಳಿಂದ ಚನ್ನಿ ಸ್ಪರ್ಧೆ 10
ಸಿದ್ದರಾಮಯ್ಯಗೆ ಸಿ.ಎಂ ತಿರುಗೇಟು
ಕವಿ ಸಿದ್ಧಲಿಂಗಯ್ಯ ಹೆಸರಲ್ಲಿ ಪ್ರಶಸ್ತಿ 6
'ಮೊಸರಲ್ಲಿ ಕಲ್ಲು ಹುಡುಕಬೇಡಿ' 6

ಸರ್ಕಾರದ ವಿರುದ್ಧ ವಾಗ್ದಾಳಿಗೆ ಪೆಗಾಸಸ್ 'ಅಸ್ತ್ರ'? • ಚರ್ಚೆ ಕಾವೇರುವ ಸಾಧ್ಯತೆ

ಇಂದಿನಿಂದ ಬಜೆಟ್ ಅಧಿವೇಶನ

ನವದೆಹಲಿ (ಪಿಟಿಐ): ಉತ್ತರ ಪ್ರದೇಶ ಸೇರಿದಂತೆ ಐದು ರಾಜ್ಯಗಳ ವಿಧಾನಸಭೆಗೆ ನಡೆಯಲಿರುವ ಚುನಾವಣೆಯ ನೆರಳಿನಲ್ಲಿಯೇ ಸಂಸತ್ತಿನ ಬಜೆಟ್ ಅಧಿವೇಶನವು ಸೋಮವಾರ ಆರಂಭವಾಗುತ್ತಿದ್ದು, ಆಡಳಿತ ಮತ್ತು ವಿರೋಧಪಕ್ಷಗಳು ಪರಸ್ಪರ ವಾಗ್ದಾಳಿಗೆ ಸಜ್ಜಾಗಿವೆ.

ಪೆಗಾಸಸ್ ಕುತಂತ್ರಾಂಶ ಕುರಿತ ಹೊಸ ಬೆಳವಣಿಗೆಗಳು ಆಡಳಿತ ಪಕ್ಷದ ವಿರುದ್ಧ ದಾಳಿ ನಡೆಸಲು ವಿರೋಧ ಪಕ್ಷಗಳಿಗೆ ಪ್ರಬಲ 'ಅಸ್ತ್ರ'ವಾಗುವ ಸಾಧ್ಯತೆಯಿದೆ. ಇದರ ಜೊತೆಗೆ ಕೃಷಿಕರ ಸಮಸ್ಯೆಗಳು, ಗಡಿಯಲ್ಲಿ ಚೀನಾದ ಅತಿಕ್ರಮಣ ವಿಷಯವೂ ಪ್ರಮುಖವಾಗಿ ಚರ್ಚೆಯಾಗುವ ಸಂಭವವಿದೆ.

ಕಾರ್ಯಸೂಚಿಯ ಅನುಸಾರ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮೊದಲ ದಿನ ಆರ್ಥಿಕ ಸಮೀಕ್ಷೆ 2021–22ರ ವರದಿಯನ್ನು ಹಾಗೂ ಮಂಗಳವಾರ 2022–23ನೇ ಸಾಲಿನ ಕೇಂದ್ರ ಬಜೆಟ್ ಮಂಡಿಸಲಿದ್ದಾರೆ.

ಆದರೆ, ಪೆಗಾಸಸ್ ಕುತಂತ್ರಾಂಶ ಕುರಿತ ಹೊಸ ಬೆಳವಣಿಗೆಗಳ ಹಿನ್ನೆಲೆಯಲ್ಲಿ ನಿಗದಿಯಂತೆ ಮೊದಲ ಅವಧಿಯ ಅಧಿವೇಶನದಲ್ಲಿ ಸುಗಮವಾಗಿ ಕಲಾಪ ನಡೆಯುವುದೇ ಅನುಮಾನ ಎಂಬ ಸ್ಥಿತಿಯೂ ಇದೆ. ಅಧಿವೇಶನದ ಮೊದಲ ಅವಧಿಯು ಫೆಬ್ರುವರಿ 11ರವರೆಗೆ ನಿಗದಿಯಾಗಿದೆ.

ಸೋಮವಾರ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಭಾಷಣ ಮಾಡುವರು. ಪರಸ್ಪರ ಅಂತರ ಇರುವಂತೆ ಸದಸ್ಯರಿಗೆ ಆಸನ ವ್ಯವಸ್ಥೆ ಮಾಡಲಾಗಿದೆ.

ರಾಷ್ಟ್ರಪತಿಯವರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲೆ ಲೋಕಸಭೆಯಲ್ಲಿ ಬುಧವಾರ ಚರ್ಚೆ ಆರಂಭವಾಗಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಫೆಬ್ರುವರಿ 7ರಂದು ಈ ನಿರ್ಣಯಕ್ಕೆ ಉತ್ತರಿಸುವ ನಿರೀಕ್ಷೆಯಿದೆ.

ಲೋಕಸಭೆ ಸಚಿವಾಲಯದ ಅಧಿಕಾರಿಗಳ ಪ್ರಕಾರ, ವಂದನಾ ನಿರ್ಣಯದ ಮೇಲಿನ ಚರ್ಚೆಗೆ ನಾಲ್ಕು ದಿನ ನಿಗದಿಯಾಗಿದೆ. ಫೆ. 11ರವರೆಗೆ ನಡೆಯುವ ಮೊದಲ ಅವಧಿಯಲ್ಲಿ ವಿವಿಧ ಇಲಾಖೆಗಳಿಗೆ ಹಣಕಾಸು ಹಂಚಿಕೆ ಪ್ರಸ್ತಾವ ಚರ್ಚೆಯಾಗಲಿದೆ. ಎರಡನೇ ಅವಧಿಯು ಮಾರ್ಚ್ 14ರಂದು ಆರಂಭವಾಗಿದ್ದು, ಏಪ್ರಿಲ್ 8ರವರೆಗೂ ಮುಂದುವರಿಯಲಿದೆ.

ಅತಿ ಹೆಚ್ಚು ಸಂಸದರನ್ನು ಲೋಕಸಭೆಗೆ ಕಳುಹಿಸಿಕೊಡುವ ಉತ್ತರ ಪ್ರದೇಶ ರಾಜ್ಯವೂ ಒಳಗೊಂಡಂತೆ ಒಟ್ಟು ಐದು ರಾಜ್ಯಗಳ ವಿಧಾನಸಭೆಗೆ ಚುನಾವಣೆ ನಡೆಯಲಿರುವ ಅವಧಿಯಲ್ಲಿಯೇ ಈ ಬಾರಿ ಬಜೆಟ್ ಅಧಿವೇಶನವೂ ಸೇರುತ್ತಿರುವುದು ಗಮನಾರ್ಹ.

ಉತ್ತರಾಖಂಡ, ಪಂಜಾಬ್, ಗೋವಾ, ಮಣಿಪುರ ಚುನಾವಣೆ ನಡೆಯುತ್ತಿರುವ ಇತರೆ ರಾಜ್ಯಗಳು. ಫೆ.10 ರಿಂದ ಮಾ.7ರ ಅವಧಿಯಲ್ಲಿ ಈ ರಾಜ್ಯಗಳಲ್ಲಿ ಮತದಾನ ನಡೆಯಲಿದೆ.

ಆರ್ಥಿಕ ಸಮೀಕ್ಷೆ ವರದಿ ಮಂಡನೆ ಇಂದು

ನವದೆಹಲಿ (ಪಿಟಿಐ): ಕೇಂದ್ರ ಬಜೆಟ್‌ಗೂ ಮೊದಲು ಮಂಡನೆ ಆಗುವ ಆರ್ಥಿಕ ಸಮೀಕ್ಷೆ ವರದಿಯು, ಜಿಡಿಪಿ ಬೆಳವಣಿಗೆ ಕುರಿತು ಮಾಡುವ ಅಂದಾಜು ತಪ್ಪಾದ ನಿದರ್ಶನಗಳು ಈಚಿನ ವರ್ಷಗಳಲ್ಲಿ ಹೆಚ್ಚಿವೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ವರದಿಯನ್ನು ಸೋಮವಾರ ಸಂಸತ್ತಿನಲ್ಲಿ ಮಂಡಿಸಲಿದ್ದಾರೆ.

ಆರ್ಥಿಕ ಸಮೀಕ್ಷೆಯು ದೇಶದ ಅರ್ಥ ವ್ಯವಸ್ಥೆಯ ಸ್ಥಿತಿ ಹೇಗಿದೆ ಎಂಬುದನ್ನು ಕೂಡ ಹೇಳಲಿದೆ. ಈ ಬಾರಿಯ ವರದಿಯು, ಮುಂದಿನ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ದರ ಶೇ 9ರಷ್ಟು ಇರಬಹುದು ಎಂಬ ಅಂದಾಜು ಮಾಡುವ ಸಾಧ್ಯತೆ ಇದೆ.

ಹಿಂದಿನ ಆರ್ಥಿಕ ಸಮೀಕ್ಷಾ ವರದಿಯನ್ನು 2021ರ ಜನವರಿಯಲ್ಲಿ ಮಂಡಿಸಲಾಗಿತ್ತು. ಅದು 2021–22ರಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 11ರಷ್ಟು ಇರಲಿದೆ ಎಂದು ಅಂದಾಜಿಸಿತ್ತು. ಆದರೆ, ಕೇಂದ್ರ ಸಾಂಖ್ಯಿಕ ಸಚಿವಾಲಯದ ಪ್ರಕಾರ ಜಿಡಿಪಿ ಬೆಳವಣಿಗೆ ಶೇ 9.2ರಷ್ಟು ಮಾತ್ರ ಇರಲಿದೆ.

ಕೋವಿಡ್ ಸಾಂಕ್ರಾಮಿಕ ಹರಡುವ ಮೊದಲು, 2020ರ ಜನವರಿಯಲ್ಲಿ ಮಂಡನೆಯಾದ ವರದಿಯು, 2020–21ರಲ್ಲಿ ಜಿಡಿಪಿ ಬೆಳವಣಿಗೆ ಶೇ 6–6.5ರಷ್ಟು ಇರಲಿದೆ ಎಂದು ಅಂದಾಜಿಸಿತ್ತು. ಆದರೆ, ಆ ವರ್ಷ ಜಿಡಿಪಿ ಶೇ (-)7.3ರಷ್ಟು ಕುಸಿತ ದಾಖಲಿಸಿತು. 2020ರ ಮಾರ್ಚ್‌ನಲ್ಲಿ ದೇಶದಲ್ಲಿ ಕಠಿಣ ಲಾಕ್‌ಡೌನ್ ಜಾರಿಗೆ ಬಂದ ಕಾರಣ ಆರ್ಥಿಕ ಚಟುವಟಿಕೆಗಳು ತಗ್ಗಿದ್ದವು.

2019–20ರಲ್ಲಿ ಜಿಡಿಪಿ ಬೆಳವಣಿಗೆ ಶೇ 7ರಷ್ಟು ಇರಲಿದೆ ಎಂದು 2018–19ರ ಸಮೀಕ್ಷೆ ಅಂದಾಜಿಸಿತ್ತಾದರೂ, 2019–20ರಲ್ಲಿ ಜಿಡಿಪಿ ಬೆಳವಣಿಗೆ ಶೇ 4ರಷ್ಟು ಮಾತ್ರ ಆಗಿತ್ತು. 2018–19ರಲ್ಲಿ ಕೂಡ ಸಮೀಕ್ಷೆಯ ವರದಿಯಲ್ಲಿ ಅಂದಾಜಿಸಿದ್ದ ಮಟ್ಟಕ್ಕಿಂತ ಕಡಿಮೆ ಪ್ರಮಾಣದ ಬೆಳವಣಿಗೆ ಕಂಡುಬಂದಿತ್ತು.

ಆದರೆ, 2015–16 ಹಾಗೂ 2017–18ರಲ್ಲಿ ಜಿಡಿಪಿ ಬೆಳವಣಿಗೆ ದರವು ಸಮೀಕ್ಷೆಯಲ್ಲಿ ಅಂದಾಜಿಸಿದ್ದಕ್ಕೆ ಹತ್ತಿರವಾಗಿತ್ತು.

ರಫೆಲ್ ನಡಾಲ್‌ಗೆ 21ನೇ ಕಿರೀಟ



ಮೆಲ್ಬರ್ನ್ (ಎಪಿ): ಸ್ಪೇನ್ ದೇಶದ ರಫೆಲ್ ನಡಾಲ್ ಭಾನುವಾರ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿ ಜಯಿಸುವುದರೊಂದಿಗೆ 21ನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗಳಿಸಿದ ಇತಿಹಾಸ ರಚಿಸಿದರು. 35 ವರ್ಷದ ನಡಾಲ್ ಈ ಸಾಧನೆ ಮಾಡಿದ ಮೊದಲ ಟೆನಿಸ್ ಆಟಗಾರ.

ಫೈನಲ್ ಫಲಿತಾಂಶ

ನಡಾಲ್ (ಸ್ಪೇನ್)	2	6	6	6	7
ಮೆಡ್ವೆಡೆವ್ (ರಷ್ಯಾ)	6	7	4	4	5

* ಪಂದ್ಯ ನಡೆದ ಅವಧಿ: 5 ಗಂಟೆ, 24ನಿಮಿಷ

ಗ್ರ್ಯಾನ್‌ಸ್ಲಾಮ್ ಸಾಧಕರು

ಆಟಗಾರ	ದೇಶ	ಪ್ರಶಸ್ತಿ
ರಫೆಲ್ ನಡಾಲ್	ಸ್ಪೇನ್	21
ರೋಜರ್ ಫೆಡರರ್	ಸ್ವಿಟ್ಜರ್‌ಲೆಂಡ್	20
ನೊವಾಕ್ ಜೊಕೊವಿಚ್	ಸರ್ಬಿಯಾ	20
ಪೀಟ್ ಸಾಂಪ್ರಾಸ್	ಅಮೆರಿಕ	14

ಟೋಯಿಂಗ್ ವ್ಯವಸ್ಥೆ ಸುಧಾರಣೆಗೆ ಕ್ರಮ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತ ಸ್ಥಳಗಳಲ್ಲಿ ನಿಲುಗಡೆ ಮಾಡುವ ವಾಹನಗಳನ್ನು ಟೋಯಿಂಗ್ ಮಾಡುವ ವ್ಯವಸ್ಥೆಯಲ್ಲಿನ ಲೋಪಗಳನ್ನು ಸರಿಪಡಿಸಿ, ಸುಧಾರಣೆ ತರಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, ಹಿಂದೆ ಪೊಲೀಸ್ ಇಲಾಖೆಯೇ ಟೋಯಿಂಗ್ ಕೆಲಸವನ್ನು ನಿರ್ವಹಿಸುತ್ತಿತ್ತು. ಈಗ ಖಾಸಗಿಯವರಿಗೆ ಗುತ್ತಿಗೆ ನೀಡಲಾಗಿದೆ. ಇತ್ತೀಚೆಗೆ ನಡೆಯುತ್ತಿರುವ ಬೆಳವಣಿಗೆಗಳಿಂದ ಟೋಯಿಂಗ್ ವ್ಯವಸ್ಥೆ ಕುರಿತು ಪುನರ್ ಪರಿಶೀಲನೆ ಅಗತ್ಯ ಎಂಬ ತೀರ್ಮಾನಕ್ಕೆ ಬರಲಾಗಿದೆ ಎಂದರು.



ಬಸವರಾಜ ಬೊಮ್ಮಾಯಿ

ಟೋಯಿಂಗ್ ವ್ಯವಸ್ಥೆಯ ಸುಧಾರಣೆಗೆ ಸಂಬಂಧಿಸಿದಂತೆ ಸೋಮವಾರ ಉನ್ನತ ಮಟ್ಟದ ಸಭೆ ನಡೆಸಲಾಗುವುದು. ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಮತ್ತು ಸಂಚಾರ ವಿಭಾಗದ ಹಿರಿಯ ಅಧಿಕಾರಿಗಳ ಜತೆ ಚರ್ಚಿಸಲಾಗುವುದು ಎಂದು ಹೇಳಿದರು.

ಸಾರ್ವಜನಿಕರು ಕಾನೂನು ಪಾಲಿಸಬೇಕು. ಕಾನೂನು ಉಲ್ಲಂಘಿಸುವವರ ವಿರುದ್ಧ ಕ್ರಮ ಅಗತ್ಯ. ಆದರೆ, ಕಾನೂನಿನ ರಕ್ಷಣೆ ಮಾಡುವವರು ಸಾರ್ವಜನಿಕರ ಜತೆ ಅತ್ಯಂತ ಸೌಹಾರ್ದಯುತವಾಗಿ ವರ್ತಿಸಬೇಕು. ಕಾನೂನು ಜಾರಿಯ ಹೆಸರಿನಲ್ಲಿ ಅತಿರೇಕದ ವರ್ತನೆಗಳನ್ನೂ ಸಹಿಸಲಾಗದು. ಜನಸ್ನೇಹಿಯಾದ ವ್ಯವಸ್ಥೆಯನ್ನು ರೂಪಿಸುವ ಕುರಿತು ಯೋಚಿಸಲಾಗುತ್ತಿದೆ ಎಂದರು.

ಒಳ ಪುಟ

ದಾಂಡೇಲಿ: ರಾಜ್ಯದ ಮೊದಲ ಮೊಸಳೆ ಉದ್ಯಾನ ಮುಕ್ತ 6

ಚಿನಕುರಳಿ

ಪ್ರಕಾಶ್ ಶೆಟ್ಟಿ

ವೆಬ್‌ಸೈಟ್‌ನಲ್ಲಿದ್ದ ಪಟ್ಟಿ ಕಣ್ಮರೆ! • ವೈದ್ಯಕೀಯ ನಿರ್ದೇಶನಾಲಯಕ್ಕೆ ದೂರು

ನರ್ಸಿಂಗ್ 'ಸೀಟು ಬ್ಲಾಕಿಂಗ್'?

• ರಾಜೇಶ್ ರೈ ಚಟ್ಲ

ಬೆಂಗಳೂರು: ವೈದ್ಯಕೀಯ ಕಾಲೇಜುಗಳಲ್ಲಿನ 'ಸೀಟು ಬ್ಲಾಕಿಂಗ್' ದಂಧೆ ಮಾದರಿಯಲ್ಲಿ ಈ ಬಾರಿ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ಸೀಟುಗಳನ್ನು ಅಕ್ರಮವಾಗಿ ಹಂಚಿರುವ ಆರೋಪ ಕೇಳಿ ಬಂದಿದೆ.

ಈ ಆರೋಪಗಳಿಗೆ ಪುಷ್ಟಿ ನೀಡುವಂತೆ, ಸರ್ಕಾರಿ ಶುಶ್ರೂಷಾ (ಸ್ಕೂಲ್ ಆಫ್ ನರ್ಸಿಂಗ್) ಸಂಸ್ಥೆಗಳಲ್ಲಿನ ನರ್ಸಿಂಗ್ (ಜಿಎನ್‌ಎಂ–ಜನರಲ್ ನರ್ಸಿಂಗ್ ಆ್ಯಂಡ್ ಮಿಡ್‌ವೈಫರಿ) ಮತ್ತು ಅರೆ ವೈದ್ಯಕೀಯ (ಪ್ಯಾರಾ ಮೆಡಿಕಲ್) ಕೋರ್ಸ್‌ಗಳಿಗೆ 2021–22ನೇ ಸಾಲಿಗೆ ಸೀಟು ಆಯ್ಕೆ ಮಾಡಿಕೊಂಡಿದ್ದ ವಿದ್ಯಾರ್ಥಿಗಳ ಪಟ್ಟಿ, ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿ (ಕೆಎಸ್‌ಡಿಎನ್‌ಇಬಿ) ಮತ್ತು ಪ್ಯಾರಾ ವೈದ್ಯಕೀಯ ಮಂಡಳಿಯ ವೆಬ್‌ಸೈಟ್‌ನಿಂದಲೇ ಕಣ್ಮರೆ ಆಗಿದೆ!

ಸರ್ಕಾರಿ ನರ್ಸಿಂಗ್ ಮತ್ತು ಅರೆ ವೈದ್ಯಕೀಯ ಸಂಸ್ಥೆಗಳಲ್ಲಿ ಕಡಿಮೆ ರ್‍ಯಾಂಕ್ ಪಡೆದಿರುವ ವಿದ್ಯಾರ್ಥಿಗಳು ಸೀಟು ಗಿಟ್ಟಿಸಿಕೊಂಡಿದ್ದು, ಉನ್ನತ ರ್‍ಯಾಂಕ್ ಪಡೆದವರು ಸೀಟು ವಂಚಿತರಾಗಿದ್ದಾರೆ. ಈ ಬಗ್ಗೆ ಪ್ರಶ್ನಿಸಿದಾಗ ಬೇಜವಾಬ್ದಾರಿಯ ಉತ್ತರ ನೀಡಲಾಗಿದೆ ಎಂದು ಕೆಲವು ಅಭ್ಯರ್ಥಿಗಳು, ಪೋಷಕರು ವೈದ್ಯಕೀಯ ನಿರ್ದೇಶನಾಲಯದ ನಿರ್ದೇಶಕರಿಗೆ ದೂರು ನೀಡಿದ್ದಾರೆ.

'ರಾಜ್ಯದಲ್ಲಿ 18 ಸರ್ಕಾರಿ ನರ್ಸಿಂಗ್ ಕಾಲೇಜುಗಳಿವೆ. ಈ ಕಾಲೇಜುಗಳಲ್ಲಿ ಜಿಎನ್‌ಎಂ ಕೋರ್ಸಿಗೆ ಸುಮಾರು 650 ಸೀಟುಗಳಿವೆ. ಈ ಸೀಟುಗಳಿಗೆ ರ್‍ಯಾಂಕ್ ಪ್ರಕಾರ, ಕೌನ್ಸೆಲಿಂಗ್ ನಡೆಸಿ ಪ್ರವೇಶ ನೀಡಬೇಕು. ಡಿ. 24ರಂದು ಮಾಪ್‌ಅಪ್ ಸುತ್ತಿನ ಕೌನ್ಸೆಲಿಂಗ್ ನಡೆದಿದೆ. ಈ ವೇಳೆ ಸೀಟು ಖಾಲಿ ಇದ್ದರೂ ಅದನ್ನು ಮರೆಮಾಚಿ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳಿಗೆ ಹಂಚಿಕೆ ಮಾಡಲಾಗಿದೆ. ಬಳಿಕ ವೆಬ್‌ಸೈಟ್‌ನಲ್ಲಿ ಪಟ್ಟಿ ಪ್ರಕಟಿಸಲಾಗಿತ್ತು. ಆದರೆ, ಈ ಪಟ್ಟಿಗೆ ಆಕ್ಷೇಪ ವ್ಯಕ್ತವಾದಾಗ ವೆಬ್‌ಸೈಟ್‌ನಿಂದ ಆಯ್ಕೆ ಪಟ್ಟಿಯನ್ನೇ ತೆಗೆಯಲಾಗಿದೆ' ಎಂದು ದೂರಿದ್ದಾರೆ.

ಪ್ರಜಾವಾಣಿ ವಿಶೇಷ

'ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಡಿ. 24ರಂದು ನಡೆದ ಜಿಎನ್‌ಎಂ ಕೋರ್ಸ್ ಪ್ರವೇಶಕ್ಕೆ ಮಾಪ್ ಅಪ್ ಸುತ್ತಿನ ಕೌನ್ಸೆಲಿಂಗ್ ನಡೆದಿತ್ತು. ನಾನು ದ್ವಿತೀಯ ಪಿಯುಸಿಯಲ್ಲಿ 524 ಅಂಕ (ಶೇ 87.33) ಪಡೆದಿದ್ದು, 3,301 ರ್‍ಯಾಂಕ್ ಪಡೆದಿದ್ದೇನೆ. ಮಾಪ್ ಕೌನ್ಸೆಲಿಂಗ್‌ಗೆ ಹೋದಾಗ ಸರ್ಕಾರಿ ನರ್ಸಿಂಗ್ ಕಾಲೇಜುಗಳಲ್ಲಿ ಸೀಟು ಲಭ್ಯ ಇಲ್ಲ, ಖಾಸಗಿ ನರ್ಸಿಂಗ್ ಕಾಲೇಜುಗಳಲ್ಲಿ ಸೀಟು ಕೊಡುತ್ತೇವೆ ಎಂದರು. ಆದರೆ, ನನಗಿಂತ ಕಡಿಮೆ ರ್‍ಯಾಂಕ್ ಪಡೆದ ಹಲವು ವಿದ್ಯಾರ್ಥಿಗಳಿಗೆ ಸೀಟು ನೀಡಲಾಗಿದೆ. ಅರ್ಹತೆ ಇದ್ದವರಿಗೆ ದ್ರೋಹ ಮಾಡಲಾಗಿದೆ' ಎಂದು ವಿದ್ಯಾರ್ಥಿಯೊಬ್ಬರು ದೂರಿದ್ದಾರೆ.

6ನೇ ಪುಟ ನೋಡಿ

ಸರ್ಕಾರಿ ಸೀಟಿನ ಮೇಲೆ ಕಣ್ಣು!

'ಖಾಸಗಿ ನರ್ಸಿಂಗ್ ಸಂಸ್ಥೆಗಳು ಶೇ 20ರಷ್ಟು ಸೀಟುಗಳನ್ನು ಸರ್ಕಾರಿ ಕೋಟಾದಡಿ ಬಿಟ್ಟುಕೊಡಬೇಕು. ಆದರೆ, ಈಗಾಗಲೇ ಮೊದಲ ಸುತ್ತಿನ ಕೌನ್ಸೆಲಿಂಗ್ ಮುಗಿದಿರುವುದರಿಂದ, ಭರ್ತಿ ಆಗದೇ ಉಳಿದಿರುವ ಸೀಟುಗಳನ್ನು ಅವರೇ ತುಂಬಿಕೊಳ್ಳುವುದಾಗಿ ಈ ಸಂಸ್ಥೆಗಳ ಆಡಳಿತ ಮಂಡಳಿಗಳು ಬೇಡಿಕೆ ಇಟ್ಟಿವೆ. ಅದಕ್ಕೆ ನಾನು ಒಪ್ಪಿಲ್ಲ' ಎಂದು ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ (ನಿಯಂತ್ರಣ) ಪ್ರಾಧಿಕಾರ ವಿಶೇಷಾಧಿಕಾರಿ ಡಾ. ಟಿ.ಎಸ್. ರಂಗನಾಥ್ ತಿಳಿಸಿದರು.

ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದ ಪಟ್ಟಿ ನಕಲಿ. ಈ ಕೋರ್ಸ್‌ಗಳ ಉಳಿಕೆ ಸೀಟುಗಳಿಗೆ ಫೆ. 16ರಿಂದ ಕೌನ್ಸೆಲಿಂಗ್ ನಡೆಯಲಿದೆ. ಆಗ ಇನ್ನಷ್ಟು ವಿದ್ಯಾರ್ಥಿಗಳಿಗೆ ಅವಕಾಶ ಸಿಗಲಿದೆ

ಡಾ. ಟಿ.ಎಸ್.ರಂಗನಾಥ್
ವಿಶೇಷಾಧಿಕಾರಿ ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ (ನಿಯಂತ್ರಣ) ಪ್ರಾಧಿಕಾರ

ಗೋವಾದಲ್ಲಿ ಗಣಿಗಾರಿಕೆ ಪುನರಾರಂಭ: ಶಾ

ಪಣಜಿ (ಪಿಟಿಐ): ವಿಧಾನಸಭಾ ಚುನಾವಣೆ ಬಳಿಕ, ಗೋವಾದ ಗಣಿಗಾರಿಕೆ ಉದ್ಯಮವು ಎರಡು ಪಟ್ಟು ವೇಗದಲ್ಲಿ ಪುನರಾರಂಭವಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ಹೇಳಿದ್ದಾರೆ. 10

'ಪೆಗಾಸಸ್ ತಂತ್ರಾಂಶ: ತಪ್ಪು ಮಾಡಿಲ್ಲ ಒಂದು ದೇಶಕ್ಕಷ್ಟೇ ಮಾರಿಲ್ಲ'

ಜೆರುಸಲೇಂ: 'ಪ್ರಜಾಪ್ರಭುತ್ವಯೇತರ ದೇಶಗಳಿಗೂ ಪೆಗಾಸಸ್ ತಂತ್ರಾಂಶವನ್ನು ಮಾರಲಾಗಿದ್ದು, ತಪ್ಪು ಎಸಗಲಾಗಿದೆ ಎಂಬ ಟೀಕೆಗಳು ಪೂರ್ವಗ್ರಹಪೀಡಿತವಾದುದು' ಎಂದು ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಹೇಳಿದೆ. 11

ಬ್ಯಾಡ್ಮಿಂಟನ್: 14ರ ಉನ್ನತಿಗೆ ಪ್ರಶಸ್ತಿ

ಕಟಕ್ (ಪಿಟಿಐ): ಭಾರತದ ಉನ್ನತಿ ಹೂಡಾ ಭಾನುವಾರ ಒಡಿಶಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಜಯಿಸಿದರು. 14 ವರ್ಷದ ಉನ್ನತಿ, ಸೂಪರ್ 100 ಟೂರ್ನಿಯಲ್ಲಿ ಚಾಂಪಿಯನ್ ಆದ ದೇಶದ ಅತಿ ಕಿರಿಯ ಆಟಗಾರ್ತಿ ಎನಿಸಿಕೊಂಡರು. 11

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಯುತ ಎಂ.ಸಿ. ನಾರಾಯಣ ಗೌಡ IPS (Rtd)
05/11/1953 - 29/01/2022
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ನಿರ್ದೇಶಕರು
ಹರ್ಷ ಸಮೂಹ ಸಂಸ್ಥೆಗಳು, ನೆಲಮಂಗಲ
ತಮ್ಮ ನೆನಪು ನಮ್ಮ ಹೃದಯದಲ್ಲಿ ಹಸಿರಾಗಿದೆ.
ತಮ್ಮ ಆಶೀರ್ವಾದ ಸದಾ ನಮ್ಮ ಮೇಲಿರಲಿ
ಎಂದು ಬಯಸುತ್ತೇವೆ.
HARSHA INSTITUTIONS
ಶ್ರೀಮತಿ ಚಂದ್ರಮತಿ, ಎಂ.ಎನ್. ಅಭಿಷೇಕ್, ಎಂ.ಎನ್. ಅನುಚೇತ್ IPS,
ಎಸ್. ಶಿವಕುಮಾರ್, ಗಿರಿಜಾ ಶಿವಕುಮಾರ್, ಹರ್ಷ, ಯಶಸ್ ಮತ್ತು
ಕುಟುಂಬ ವರ್ಗ, ಆಡಳಿತ ವರ್ಗ ಹಾಗು ಸಿಬ್ಬಂದಿ ವರ್ಗ

ವಿಧಾನಸಭೆ: ಯು.ಟಿ. ಖಾದರ್ ವಿರೋಧ ಪಕ್ಷದ ಉಪ ನಾಯಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಲ್ಲಿ ವಿರೋಧ ಪಕ್ಷದ ಉಪ ನಾಯಕನ ಸ್ಥಾನಕ್ಕೆ ಮಂಗಳೂರು (ಉಳ್ಳಾಲ) ಕ್ಷೇತ್ರದ ಶಾಸಕ ಯು.ಟಿ. ಖಾದರ್ ಅವರನ್ನು ನೇಮಿಸಿ ಭಾನುವಾರ ಆದೇಶ ಹೊರಡಿಸಲಾಗಿದೆ.

ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಖಾದರ್ ಅವರನ್ನು ವಿಧಾನಸಭೆಯಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಉಪ ನಾಯಕನನ್ನಾಗಿ ನೇಮಕ ಮಾಡಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಸ್ಥಾನಕ್ಕೆ ಬಿ.ಕೆ. ಹರಿಪ್ರಸಾದ್, ಉಪ ನಾಯಕ ಸ್ಥಾನಕ್ಕೆ ಕೆ. ಗೋವಿಂದರಾಜು ಮತ್ತು ಮುಖ್ಯ ಸಚೇತಕ ಸ್ಥಾನಕ್ಕೆ ಪ್ರಕಾಶ್ ರಾಥೋಡ್ ಅವರನ್ನು ನೇಮಿಸಿ ಇದೇ 26ರಂದು ಆದೇಶ ಹೊರಡಿಸಲಾಗಿತ್ತು. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕನ ಸ್ಥಾನದ ಮೇಲೆ ಕಣ್ಣಿಟ್ಟಿದ್ದ ಸಿ.ಎಂ. ಇಬ್ರಾಹಿಂ ಇದರಿಂದ ಕೆರಳಿದ್ದರು. ಪಕ್ಷ ತೊರೆಯುವ ನಿರ್ಧಾರ ಪ್ರಕಟಿಸಿದ್ದ ಅವರು, ಮುಸ್ಲಿಂ ಶಾಸಕರಿಗೆ ಸ್ಥಾನಮಾನ ನೀಡಿಲ್ಲ ಎಂಬ ವಿಚಾರವನ್ನು ಚರ್ಚೆಯ ಮುನ್ನೆಲೆಗೆ ತಂದಿದ್ದರು.

ಮುಸ್ಲಿಮರಿಗೆ ಸ್ಥಾನಮಾನ ನೀಡುವ ವಿಷಯದ ಕುರಿತು ಪಕ್ಷದಲ್ಲೂ ತೀವ್ರವಾದ ಚರ್ಚೆ ಆರಂಭವಾಗಿತ್ತು. ಚುನಾವಣೆ ಸಂದರ್ಭದಲ್ಲಿ ಇದರಿಂದ ಪಕ್ಷಕ್ಕೆ ಹಾನಿಯಾಗಬಹುದು ಎಂಬುದನ್ನು ಕಾಂಗ್ರೆಸ್ ಹೈಕಮಾಂಡ್‌ಗೆ ಮನವರಿಕೆ ಮಾಡಿದ್ದ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಖಾದರ್ ಅವರನ್ನು ಉಪ ನಾಯಕನ ಸ್ಥಾನಕ್ಕೆ ನೇಮಿಸುವಂತೆ ಶಿಫಾರಸು ಮಾಡಿದ್ದರು ಎಂದು ಮೂಲಗಳು ತಿಳಿಸಿವೆ.

ಜೆಇಎಂ ಕಮಾಂಡರ್ ಸೇರಿ ಐವರು ಉಗ್ರರ ಹತ್ಯೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ದಕ್ಷಿಣ ಕಾಶ್ಮೀರದ ಪುಲ್ವಾಮಾ ಹಾಗೂ ಬುಡ್ಗಾಂ ಜಿಲ್ಲೆಯಲ್ಲಿ ಭಾನುವಾರ ನಡೆದ ಪ್ರತ್ಯೇಕ ಗುಂಡಿನ ಚಕಮಕಿಯಲ್ಲಿ ಜೈಶ್–ಎ–ಮೊಹಮ್ಮದ್ ಸಂಘಟನೆಯ ಅತ್ಯುನ್ನತ ಕಮಾಂಡರ್ ಹಾಗೂ ಪಾಕಿಸ್ತಾನದ ಭಯೋತ್ಪಾದಕ ಸೇರಿ ಐವರು ಉಗ್ರರು ಹತರಾಗಿದ್ದಾರೆ.

'ಕಳೆದ 12 ಗಂಟೆಗಳ ಅವಧಿಯಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಜೆಇಎಂ ಕಮಾಂಡರ್ ಜಹೀದ್ ಮನ್ಸೂರ್ ವಾನಿ ಹಾಗೂ ಪಾಕಿಸ್ತಾನದ ಕಫೀಲ್ ಅಲಿಯಾಸ್ ಛೋಟು ಸೇರಿ ಐವರು ಉಗ್ರರನ್ನು ಹತ್ಯೆ ಮಾಡಲಾಗಿದ್ದು, ಇದು ಭದ್ರತಾ ಪಡೆಗಳಿಗೆ ಸಿಕ್ಕ ದೊಡ್ಡ ಯಶಸ್ಸು' ಎಂದು ಕಾಶ್ಮೀರ ವಲಯ ಪೊಲೀಸರು ಟ್ವೀಟ್ ಮಾಡಿದ್ದಾರೆ.

'ಪುಲ್ವಾಮಾ ಜಿಲ್ಲೆಯ ನೈರಾದಲ್ಲಿ ನಡೆದ ಕಾರ್ಯಾಚರಣೆ ವೇಳೆ ಜೆಇಎಂ ಕಮಾಂಡರ್ ಜಹೀದ್ ಮನ್ಸೂರ್ ವಾನಿ, ಒಬ್ಬ ಪಾಕಿಸ್ತಾನಿ ಸೇರಿ ಮೂವರು ಜೆಇಎಂ ಉಗ್ರರು ಹತರಾಗಿದ್ದು, ಬುಡ್ಗಾಂ ಜಿಲ್ಲೆಯ ಚಾರರ್–ಇ–ಶರೀಫ್ ಪ್ರದೇಶದಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಇಬ್ಬರು ಲಷ್ಕರ್–ಎ–ತೈಬಾ ಸಂಘಟನೆಯ ಇಬ್ಬರು ಭದ್ರತಾ ಪಡೆಗಳ ಗುಂಡಿಗೆ ಬಲಿಯಾಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಪುಲ್ವಾಮಾ ದಾಳಿಯ ಪ್ರಮುಖ ಸೂತ್ರಧಾರ ಸಮೀರ್ ದಾರ್‌ನನ್ನು ಭದ್ರತಾ ಪಡೆಗಳು ಕೊಂದ ನಂತರ ಜಹೀದ್ ವಾನಿ ಜೆಇಎಂನ ದಕ್ಷಿಣ ಕಾಶ್ಮೀರದ ಅತ್ಯುನ್ನತ ಕಮಾಂಡರ್ ಆಗಿ ಕೆಲಸ ಮಾಡುತ್ತಿದ್ದ. ಜಹೀದ್ ವಾನಿ ಹತ್ಯೆಯು ಕಣಿವೆಯಲ್ಲಿನ ಉಳಿದ ಜೆಇಎಂ ಉಗ್ರರಿಗೆ ದಿಗ್ಭ್ರಮೆ ಉಂಟು ಮಾಡಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಚಿತ್ರಾವಳಿ

ಹುತಾತ್ಮ ದಿನದ ಅಂಗವಾಗಿ ಬೆಂಗಳೂರಿನ ಅಂಚೆ ಇಲಾಖೆ ಹೊರತಂದಿರುವ ವಿಶೇಷ ಲಕೋಟೆಯನ್ನು ಪೋಸ್ಟ್ ಮಾಸ್ಟರ್ ಜನರಲ್ ಎಲ್‌.ಕೆ.ದಾಸ್ ಬಿಡುಗಡೆ ಮಾಡಿದರು. ಕರ್ನಾಟಕ ವೃತ್ತದ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಶಾರದಾ ಸಂಪತ್, ಕ್ಯಾಪ್ಟನ್ ನವೀನ್ ನಾಗಪ್ಪ ಹಾಗೂ ಕರ್ನಲ್ ಅಖಿಲೇಶ್ ಪಾಂಡೆ ಇದ್ದಾರೆ –ಪ್ರಜಾವಾಣಿ ಚಿತ್ರ

ಮಹಾತ್ಮಾ ಗಾಂಧೀಜಿ ಅವರ ಪುಣ್ಯ ತಿಥಿಯ ಪ್ರಯುಕ್ತ ಬಿಬಿಎಂಪಿಯು ಎಂ.ಜಿ. ರಸ್ತೆಯ ಎಂ.ಜಿ. ಉದ್ಯಾನದಲ್ಲಿ ಭಾನುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಗಾಂಧೀಜಿ ಅವರ ಪ್ರತಿಮೆಗೆ ಸ್ಕೌಡ್ ಮತ್ತು ಗೈಡ್ಸ್‌ನ ಸದಸ್ಯರು ಪುಷ್ಪ ನಮನ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಕನ್ನಡ ಕಡೆಗಣನೆ: ಶಿಸ್ತುಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತದಲ್ಲಿ ಕನ್ನಡವನ್ನು ಕಡೆಗಣಿಸಿ, ಆಂಗ್ಲ ಭಾಷೆ ಬಳಕೆ ಮಾಡಿದ ಅರಣ್ಯ ಇಲಾಖೆಯ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜಾರಿ ಮಾಡಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಗ್ರಹಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಅವರು ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿದ್ದಾರೆ.

'ಸರ್ಕಾರದ ಎಲ್ಲ ಇಲಾಖೆಗಳೂ ಆಡಳಿತದಲ್ಲಿ ಪೂರ್ಣ ಪ್ರಮಾಣ ಕನ್ನಡ ಬಳಸಬೇಕು. ಸರ್ಕಾರಿ ಇಲಾಖೆ ಹಾಗೂ ಕಚೇರಿಗಳಲ್ಲಿ ಕನ್ನಡ ಭಾಷೆ ಬಳಕೆಯಲ್ಲಾಗುವ ಅಡೆತಡೆಗಳಿಗೆ ಆಯಾ ಇಲಾಖೆಗಳ ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ. ಅರಣ್ಯ ಇಲಾಖೆಯು ಆಡಳಿತದಲ್ಲಿ ಆಂಗ್ಲ ಭಾಷೆಯನ್ನು ಬಳಸುತ್ತಿರುವ ಬಗ್ಗೆ ದೂರುಗಳು ಬಂದಿವೆ. ಸಭೆಯ ನಡಾವಳಿಗಳನ್ನೂ ಆಂಗ್ಲ ಭಾಷೆಯಲ್ಲಿಯೇ ನೀಡಲಾಗುತ್ತಿದೆ. ಜನರಿಗೆ ಅರ್ಥವಾಗದ ಭಾಷೆಯಲ್ಲಿ ಅಧಿಕಾರಿಗಳು ವ್ಯವಹಾರ ನಡೆಸಿದರೆ ಸರ್ಕಾರದ ಯೋಜನೆಗಳು ಜನರನ್ನು ತಲುಪುವುದು ಹೇಗೆ' ಎಂದು ಪ್ರಶ್ನಿಸಿದ್ದಾರೆ.

ಸರ್ವೋದಯ ದಿನಾಚರಣೆ: ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸಿ.ಎಂ ಹೇಳಿಕೆ

'ಗಾಂಧಿ ತತ್ವಗಳೇ ಪ್ರಜಾತಂತ್ರದ ಆಧಾರಸ್ತಂಭ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸತ್ಯ, ಅಹಿಂಸೆ ಮತ್ತು ಶಾಂತಿಯಿಂದಲೇ ದೇಶಕ್ಕೆ ಸ್ವಾತಂತ್ರ್ಯ ಪಡೆಯುವ ತಮ್ಮ ಗುರಿಯನ್ನು ಛಲ ಬಿಡದೇ ಸಾಧಿಸಿದ ಮಹಾತ್ಮ ಗಾಂಧೀಜಿಯವರ ಸಿದ್ಧಾಂತಗಳು ಭಾರತದ ಪ್ರಜಾತಂತ್ರ ವ್ಯವಸ್ಥೆಯ ಆಧಾರಸ್ತಂಭ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಗಾಂಧೀಜಿ ಹುತಾತ್ಮರಾದ ದಿನದ ಅಂಗವಾಗಿ ನಡೆದ ಸರ್ವೋದಯ ದಿನಾಚರಣೆ ಪ್ರಯುಕ್ತ ವಿಧಾನಸೌಧದ ಆವರಣದಲ್ಲಿ ಗಾಂಧಿ ಪ್ರತಿಮೆಗೆ ಭಾನುವಾರ ಮಾಲಾರ್ಪಣೆ ಮಾಡಿದ ಬಳಿಕ ಮಾತನಾಡಿದ ಅವರು, 'ಹೋರಾಟದ ಹಾದಿಯಲ್ಲಿ ಎಷ್ಟೇ ಸಂಕಷ್ಟಗಳು ಬಂದರೂ ಗಾಂಧೀಜಿಯವರು ಸತ್ಯ, ಅಹಿಂಸೆ ಮತ್ತು ಶಾಂತಿಯ ಸಿದ್ಧಾಂತವನ್ನು ಎಂದೂ ಬಿಟ್ಟುಕೊಡಲಿಲ್ಲ. ನೈತಿಕವಾಗಿ ದೊಡ್ಡ ಶಕ್ತಿ ಹೊಂದಿದ್ದ ನಾಯಕ ಅವರು' ಎಂದರು.

ಮಹಾತ್ಮ ಗಾಂಧೀಜಿಯವರ ಜೀವನ ಅತ್ಯಂತ ಪರಿಶುದ್ಧವಾಗಿತ್ತು ಮತ್ತು ಆದರ್ಶಪ್ರಾಯವಾದುದು. ಅವರ ಬದುಕು ಮತ್ತು ಸಿದ್ಧಾಂತಗಳೇ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯ ಆಧಾರ ಸ್ತಂಭಗಳಾಗಿವೆ. ಅವುಗಳ ಆಧಾರದಲ್ಲಿ ದೇಶದ ಪ್ರಜಾತಂತ್ರ ಗಟ್ಟಿಯಾಗಿ ನಿಂತಿದೆ. ಗಾಂಧಿ ಇಡೀ ಜಗತ್ತಿನ ನಾಯಕರೂ ಹೌದು ಎಂದು ಹೇಳಿದರು.

ಇದು ದೇಶದ ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದ ಲಕ್ಷಾಂತರ ಮಂದಿಯನ್ನು ಸ್ಮರಿಸುವ ದಿನ. ಸುಭಾಷ್‌ಚಂದ್ರ ಬೋಸ್, ಭಗತ್ ಸಿಂಗ್, ಲಾಲಾ ಲಜಪತ್ ರಾಯ್ ಅವರಂತಹ ಅನೇಕರ ಬಲಿದಾನದಿಂದ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದೆ. ಅವರನ್ನು ಸ್ಮರಿಸುವುದು ದೇಶದ ನಾಗರಿಕರ ಕರ್ತವ್ಯ ಎಂದರು.

ದೇಶಕ್ಕೆ ಸ್ವಾತಂತ್ರ್ಯ ಸುಲಭವಾಗಿ ದೊರಕಿಲ್ಲ. ಸ್ವಾತಂತ್ರ್ಯ ದೊರಕಿ 75 ವರ್ಷಗಳಾಗಿವೆ. ಈ ಅವಧಿಯಲ್ಲಿ ಸಾಕಷ್ಟು ಸಾಧನೆಗಳಾಗಿವೆ. ಆದರೆ, ಸಾಮಾನ್ಯ ಜನರ ಬದುಕಿನ ಸುಧಾರಣೆಯ ನಿಟ್ಟಿನಲ್ಲಿ ಇನ್ನಷ್ಟು ಕೆಲಸ ಆಗಬೇಕಿತ್ತು. ಕೆಲಸ ಮಾಡಲು ಸಾಧ್ಯವಿತ್ತು ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ ಎಂದು ಹೇಳಿದರು.

ದೇಶದಲ್ಲಿ ಕ್ರಾಂತಿಕಾರಿ ಬದಲಾವಣೆಗಾಗಿ ಆತ್ಮನಿರ್ಭರ ಭಾರತ ಸೃಷ್ಟಿಸುವ ಗುರಿಯೊಂದಿಗೆ ಹಲವು ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಜಾರಿಗೆ ತರುತ್ತಿದ್ದಾರೆ. ಈ ದಿಸೆಯಲ್ಲಿ ರಾಜ್ಯ ಸರ್ಕಾರವೂ ಕ್ರಮಗಳನ್ನು ಕೈಗೊಂಡಿದೆ ಎಂದರು.

ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ರಾಜ್‌ಕುಮಾರ್ ತೇಲ್ಕೂರ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಇದ್ದರು. ಹುತಾತ್ಮರ ಗೌರವಾರ್ಥ ಎರಡು ನಿಮಿಷಗಳ ಕಾಲ ಮೌನಾಚರಣೆ ನಡೆಸಲಾಯಿತು.

ಗಾಂಧೀಜಿ ಹುತಾತ್ಮರಾದ ದಿನದ ಅಂಗವಾಗಿ ನಡೆದ ಸರ್ವೋದಯ ದಿನಾಚರಣೆ ಪ್ರಯುಕ್ತ ವಿಧಾನಸೌಧದ ಆವರಣದಲ್ಲಿ ಗಾಂಧಿ ಪ್ರತಿಮೆಗೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್‌.ಅಶೋಕ, ವಿಧಾನಪರಿಷತ್ ಸದಸ್ಯ ಎನ್‌.ರವಿಕುಮಾರ್ ನಮನ ಸಲ್ಲಿಸಿದರು.

'ದೇಶದ ಮೊದಲ ಭಯೋತ್ಪಾದಕ ಗೋಡ್ಸೆ'

ಕೆಪಿಸಿಸಿ ಕಚೇರಿಯಲ್ಲಿ ಹುತಾತ್ಮರ ದಿನಾಚರಣೆ • ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪ ನಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧೀಜಿಯವರನ್ನು ಕೊಲೆ ಮಾಡಿದ ನಾಥೂರಾಮ್ ಗೋಡ್ಸೆ ದೇಶದ ಮೊದಲ ಭಯೋತ್ಪಾದಕ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದರು.

ಬಿ.ಕೆ. ಹರಿಪ್ರಸಾದ್

ಹುತಾತ್ಮರ ದಿನದ ಅಂಗವಾಗಿ ಕೆಪಿಸಿಸಿ ಕಚೇರಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, 'ಗಾಂಧೀಜಿಯವರ ಪ್ರಗತಿಪರ ಚಿಂತನೆಗಳನ್ನು ಸಹಿಸದ ಸಂಘ ಪರಿವಾರವು ಪಿತೂರಿ ನಡೆಸಿ ಗೋಡ್ಸೆಯ ಮೂಲಕ ಅವರನ್ನು ಹತ್ಯೆ ಮಾಡಿಸಿತು. ಆತ ಈ ದೇಶದ ಮೊದಲ ಉಗ್ರಗಾಮಿ ಮತ್ತು ರಾಷ್ಟ್ರದ್ರೋಹಿ' ಎಂದರು.

ಗಾಂಧೀಜಿಯವರು ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಜಾತ್ಯತೀತ ತತ್ವಗಳನ್ನು ಪ್ರತಿಪಾದಿಸುತ್ತಿದ್ದರು. ಸಂಘ ಪರಿವಾರ ಈ ತತ್ವಗಳಿಗೆ ವಿರುದ್ಧವಾಗಿದೆ. ಪ್ರಗತಿಪರ ಚಿಂತನೆ ಮತ್ತು ಸಾಮಾಜಿಕ ನ್ಯಾಯದ ವಿರೋಧಿಯಾದ ಸಂಘ ಪರಿವಾರಕ್ಕೆ ಗಾಂಧೀಜಿ ವಿರುದ್ಧ ದ್ವೇಷವಿತ್ತು. ದೇಶ ವಿಭಜನೆಯ ಕಾರಣಕ್ಕಾಗಿ ಗಾಂಧಿ ಹತ್ಯೆ ನಡೆದಿಲ್ಲ. ಅವರ ಚಿಂತನೆಗಳ ಕಾರಣಕ್ಕಾಗಿ ನಡೆದಿದೆ ಎಂದು ಹೇಳಿದರು.

'ಮಹಾತ್ಮ ಗಾಂಧಿಗಿಂತ ದೊಡ್ಡ ಹಿಂದೂ ಪ್ರಪಂಚದಲ್ಲಿ ಯಾರೂ ಇಲ್ಲ. ಅವರನ್ನು ಕೊಂದವರು ಮುಸ್ಲಿಂ, ಕ್ರೈಸ್ತ, ಅಥವಾ ಸಿಖ್ ವ್ಯಕ್ತಿಗಳಲ್ಲ. ಗಾಂಧಿಯನ್ನು ಕೊಂದಿರುವುದು ಒಬ್ಬ ಹಿಂದೂ ಭಯೋತ್ಪಾದಕ. ಇವರಿಗೆ ಹಿಂದೂಗಳ ಮೇಲೆ ಅಷ್ಟು ಪ್ರೀತಿ ಇದ್ದಿದ್ದರೆ ಮೊಹಮ್ಮದ್ ಅಲಿ ಜಿನ್ನಾ ಅವರನ್ನು ಕೊಲೆ ಮಾಡಬೇಕಿತ್ತು. ಅದನ್ನು ಮಾಡಲಿಲ್ಲ. ಈ ರಾಷ್ಟ್ರದಲ್ಲಿ ಹಿಂದೂ ಧರ್ಮವನ್ನೇ ಪರಿಪಾಲನೆ ಮಾಡುವವರನ್ನು ಕೊಲೆ ಮಾಡುವ ಸಂಪ್ರದಾಯ ಹಾಕಿಕೊಟ್ಟವರು ಸಂಘ ಪರಿವಾರದ ಸದಸ್ಯರು' ಎಂದು ಹರಿಪ್ರಸಾದ್ ವಾಗ್ದಾಳಿ ನಡೆಸಿದರು.

ಮತಾಂಧ ಶಕ್ತಿಗಳು ಗೋಡ್ಸೆಯನ್ನು ಆರಾಧಿಸುತ್ತಿವೆ. ಪ್ರಧಾನಿ ನರೇಂದ್ರ ಮೋದಿಯವರು ಈವರೆಗೂ ಈ ವಿಚಾರದಲ್ಲಿ ಯಾವುದೇ ಮಾತನಾಡದೆ ಇರುವುದು ಮತ್ತು ಗಾಂಧಿಯನ್ನು ಕೊಂದವನ ವಿಜೃಂಭಣೆ ಸಲ್ಲದು ಎಂದು ಹೇಳದೇ ಇರುವುದು ದುರ್ದೈವ ಎಂದರು.

ವಿಚಾರಗಳನ್ನು ಕೊಲ್ಲಲು ಸಾಧ್ಯವಿಲ್ಲ: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, 'ಮತಾಂಧತೆಯ ವಿರುದ್ಧ ನಿಂತು ಮನುಕುಲದ ಒಳಿತಿಗಾಗಿ ಶ್ರಮಿಸುತ್ತಿದ್ದ ಗಾಂಧಿಯನ್ನು ಮತಾಂಧನೊಬ್ಬ ಕೊಂದ. ಗಾಂಧೀಜಿ ಅವರನ್ನು ಕೊಂದಿರಬಹುದು, ಅವರ ವಿಚಾರಗಳನ್ನು ಕೊಲ್ಲಲು ಯಾರಿಗೂ ಸಾಧ್ಯವಿಲ್ಲ' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, 'ಜಗತ್ತಿಗೆ ಶಾಂತಿಯುತ ಮತ್ತು ಅಹಿಂಸಾತ್ಮಕ ಹೋರಾಟದ ಮಾರ್ಗವನ್ನು ಪರಿಚಯಿಸಿದವರು ಗಾಂಧಿ. ರಾಜಕೀಯವಾಗಿ ಯಾರು ಏನೇ ಮಾಡಬಹುದು. ಆದರೆ, ಗಾಂಧೀಜಿಯವರ ತತ್ವ ಮತ್ತು ಚಿಂತನೆಗಳನ್ನು ಅಳಿಸಿಹಾಕಲು ಯಾರಿಗೂ ಸಾಧ್ಯವಿಲ್ಲ' ಎಂದು ಹೇಳಿದರು.

ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಕಾಂಗ್ರೆಸ್ ಮುಖಂಡರಾದ ಎಚ್. ಆಂಜನೇಯ, ವಿ.ಎಸ್. ಉಗ್ರಪ್ಪ ಈ ವೇಳೆ ಉಪಸ್ಥಿತರಿದ್ದರು.

'ಹಿಂದೂ ರಾಷ್ಟ್ರ ಎಂದು ಘೋಷಿಸಿ'

ಲಖನೌ: 'ಭಾರತವನ್ನು ಹಿಂದೂ ರಾಷ್ಟ್ರ ಎಂದು ಘೋಷಿಸಬೇಕು' ಎಂದು ಉತ್ತರ ಪ್ರದೇಶದ ಪ್ರಯಾಗ್‌ರಾಜ್ ಜಿಲ್ಲೆಯಲ್ಲಿ ಗಂಗಾ, ಯಮುನಾ, ಸರಸ್ವತಿ ನದಿಗಳ ಸಂಗಮ ತಟದಲ್ಲಿ ಭಾನುವಾರ ನಡೆದ 'ಮಾಘ ಮೇಳ' ಕರೆ ನೀಡಿದೆ.

'ಭಾರತದಲ್ಲಿ ಯಾರಾದರೂ ರಾಷ್ಟ್ರಪುತ್ರ ಆಗಬಹುದು ಆದರೆ, ರಾಷ್ಟ್ರಪಿತ ಆಗಲಾರರು' ಎಂದು ನರೇಂದ್ರಾನಂದ ಸರಸ್ವತಿ ತಮ್ಮ ಭಾಷಣದಲ್ಲಿ ಪ್ರತಿಪಾದಿಸಿದರು. ಗಾಂಧೀಜಿ ಅವರನ್ನು ರಾಷ್ಟ್ರಪಿತ ಎಂದು ಕರೆಯಲು ಈ ಸಭೆ ನಿರಾಕರಿಸಿದೆ.

ಸರ್ವೋದಯ ದಿನಾಚರಣೆ ಅಂಗವಾಗಿ ನಗರದ ಮಹಾತ್ಮ ಗಾಂಧಿ ರಸ್ತೆಯಲ್ಲಿರುವ ಗಾಂಧೀಜಿ ಅವರ ಪ್ರತಿಮೆಗೆ ಬಿಬಿಎಂಪಿ ಆಡಳಿತಗಾರ ರಾಕೇಶ್ ಸಿಂಗ್ ಅವರು ಪುಷ್ಪ ನಮನ ಸಲ್ಲಿಸಿದರು. ವಿಶೇಷ ಆಯುಕ್ತ ಮನೋಜ್ ಜೈನ್, ಮಾಜಿ ಮೇಯರ್ ರಾಮಚಂದ್ರಪ್ಪ ಇದ್ದರು.

'ಗಾಂಧಿ ತತ್ವದ ಮೂಲಕ ಗೋಡ್ಸೆಯ ಮಾರಕ ಸಿದ್ಧಾಂತ ಹತ್ತಿಕ್ಕಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಾಂಧಿಯನ್ನು ಕೊಂದ ಶಕ್ತಿಗಳೇ ಗೌರಿ ಲಂಕೇಶ್, ಎಂ.ಎಂ.ಕಲಬುರ್ಗಿ ಅವರನ್ನು ಹತ್ಯೆ ಮಾಡಿವೆ. ಪ್ರಸ್ತುತ ಸನ್ನಿವೇಶದಲ್ಲಿ ಗಾಂಧಿಯ ಸರಳತೆಯನ್ನು ಮೈಗೂಡಿಸಿಕೊಳ್ಳುವ ಮೂಲಕ ಗೋಡ್ಸೆಯ ಮಾರಕ ಸಿದ್ಧಾಂತ ಹತ್ತಿಕ್ಕಬೇಕು' ಎಂದು ಪತ್ರಕರ್ತ ಪಾರ್ವತೀಶ್ ಬಿಳಿದಾಳೆ ಹೇಳಿದರು.

ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ರಾಜ್ಯ ಸಮಿತಿಯು ಗಾಂಧೀಜಿ ಹುತಾತ್ಮರಾದ ದಿನದ ಅಂಗವಾಗಿ ಹಮ್ಮಿಕೊಂಡಿದ್ದ 'ಗಾಂಧಿಯನ್ನು ಕೊಂದ ಆರ್‌ಎಸ್‌ಎಸ್' ಕುರಿತ ವಿಚಾರ ಸಂಕಿರಣದಲ್ಲಿ ಭಾನುವಾರ ಅವರು ಮಾತನಾಡಿದರು.

'ಜಗತ್ತಿನ ಅತ್ಯಂತ ದೊಡ್ಡ ಸಾಮ್ರಾಜ್ಯಶಾಹಿ ಶಕ್ತಿಯ ವಿರುದ್ಧ ನಿರಾಯುಧರಾಗಿ ಹೋರಾಡಿದವರು ಗಾಂಧೀಜಿ. ಇಚ್ಛಾಶಕ್ತಿ ಹಾಗೂ ಆತ್ಮಶುದ್ಧಿಯ ಮೂಲಕ ಭಾರತದ ಕೋಟ್ಯಂತರ ಜನರನ್ನು ಹುರಿದುಂಬಿಸಿದ ಅವರು ಬ್ರಿಟಿಷ್ ಸಾಮ್ರಾಜ್ಯವನ್ನೇ ಮಣಿಸಿದ್ದರು. ಹೀಗಾಗಿ ಆರ್‌ಎಸ್‌ಎಸ್‌ಗೂ ಗಾಂಧಿಯ ಬಗ್ಗೆ ಭಯವಿತ್ತು' ಎಂದು ಹೇಳಿದರು.

ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ರಾಜ್ಯ ಘಟಕದ ಅಧ್ಯಕ್ಷ ಅಥಾವುಲ್ಲ ಪೂಂಜಾಲಕಟ್ಟೆ, 'ಗೋಡ್ಸೆ ಪಸರಿಸಿದ ಸಿದ್ಧಾಂತವನ್ನೇ ರಾಷ್ಟ್ರೀಯತೆ ಎಂದು ಬಿಂಬಿಸುವ ಮೂಲಕ ಗಾಂಧಿ, ದಾಭೋಲ್ಕರ್, ಪನ್ಸಾರೆ ಹೀಗೆ ಹಲವು ಪ್ರಗತಿಪರ ಚಿಂತಕರನ್ನು ಗುಂಡಿಕ್ಕಿ ಕೊಲ್ಲಲಾಗಿದೆ. ಇಂತಹ ಉಗ್ರ ಹಿಂದುತ್ವ ಸಿದ್ಧಾಂತವನ್ನು ಸೋಲಿಸುವುದು ಜಾತ್ಯತೀತ ಆಶಯದಲ್ಲಿ ನಂಬಿಕೆ ಇಟ್ಟ ಪ್ರತಿಯೊಬ್ಬ ಭಾರತೀಯ ನಾಗರಿಕನ ಜವಾಬ್ದಾರಿ' ಎಂದು ಹೇಳಿದರು.

ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಶ್ವಾನ್ ಸಾದಿಕ್, 'ಆರ್‌ಎಸ್‌ಎಸ್‌ನವರು ಬಹಿರಂಗವಾಗಿಯೇ ಗಾಂಧಿಯನ್ನು ದ್ವೇಷಿಸುತ್ತಾರೆ. ಗೋಡ್ಸೆಯನ್ನು ಆರಾಧಿಸುತ್ತಾರೆ. ಈ ಬೆಳವಣಿಗೆಯು ಕೋಮುದ್ವೇಷಕ್ಕೆ ಕಾರಣವಾಗುತ್ತಿದೆ' ಎಂದರು.

ಬೆಂಗಳೂರಿನಲ್ಲಿ ಕಚೇರಿ ಕಟ್ಟಡ ನಿರ್ಮಾಣಕ್ಕೆ ₹850 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ 19 ಲಕ್ಷ ಚದರ ಅಡಿ ಪ್ರದೇಶದಲ್ಲಿ ₹ 850 ಕೋಟಿ ವೆಚ್ಚದಲ್ಲಿ ಕಚೇರಿ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುವುದು ಎಂದು ಎಂಬಸಿ ಆಫೀಸ್ ಪಾರ್ಕ್ ಆರ್‌ಇಐಟಿನ ಉಪ ಸಿಇಒ ವಿಕಾಸ್ ಖಡ್ಲೋಯಾ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಇರುವ ಎಂಬಸಿ ಟೆಕ್ ವಿಲೇಜ್‌ನಲ್ಲಿ ಹೊಸ ಕಚೇರಿ ಕಟ್ಟಡಗಳ ನಿರ್ಮಾಣ ಆರಂಭಿಸುವ ಮೂಲಕ ಬೆಳವಣಿಗೆಯ ಹೊಸ ಹೆಜ್ಜೆಯನ್ನು ಇಟ್ಟಿದ್ದೇವೆ ಎಂದು ಅವರು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. ಬೇಡಿಕೆಯು ಚೇತರಿಸಿಕೊಳ್ಳುತ್ತಿರುವುದರಿಂದ ಬೆಳವಣಿಗೆಯ ಕಡೆಗೆ ಗಮನ ಹರಿಸಲಾಗಿದೆ ಎಂದಿದ್ದಾರೆ.

ಚೆನ್ನೈನಲ್ಲಿ 50 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಇರುವ ಐ.ಟಿ. ಪಾರ್ಕ್ ಸ್ವಾಧೀನಪಡಿಸಿಕೊಳ್ಳುವ ಬಗ್ಗೆಯೂ ಮೌಲ್ಯಮಾಪನ ಮಾಡುತ್ತಿರುವುದಾಗಿ ಕಂಪನಿಯು ತಿಳಿಸಿದೆ.

ನಗರದಲ್ಲಿ ಇಂದು

ಡಾ.ಕಫೀಲ್ ಖಾನ್ ಅವರ 'ಗೋರಖ್‌ಪುರ್ ಆಸ್ಪತ್ರೆ ದುರಂತ' ಪುಸ್ತಕ ಬಿಡುಗಡೆ: ಅತಿಥಿಗಳು–ಕೆ.ಸಿ.ರಘು, ಎಂ.ಎ.ಸಿರಾಜ್, ಕೆ.ಎಸ್.ಗಂಗಾಧರ್, ರಾಜಶೇಖರ್, ಎಸ್.ಕೆ.ಶೆಟ್ಟಿ, ಆಯೋಜನೆ–ಮೆಡಿಕಲ್ ಸರ್ವಿಸ್ ಸೆಂಟರ್, ಸ್ಥಳ–ಬೆಂಗಳೂರು ಪ್ರೆಸ್‌ಕ್ಲಬ್, ಮಧ್ಯಾಹ್ನ 12

ವರಕವಿ ಬೇಂದ್ರೆ ಜಯಂತಿ: 'ಬೇಂದ್ರೆ ಅವರ ಕಾವ್ಯದ ಅನುಸಂಧಾನ' ಕುರಿತು ಉಪನ್ಯಾಸ–ಶ್ರೀನಿವಾಸ ಪ್ರಸಾದ್, ಅಧ್ಯಕ್ಷತೆ–ರಾಜಶೇಖರನ್, ಭಾಗವಹಿಸುವವರು–ಬಿ.ಸಿ.ನಾಗೇಂದ್ರ ಕುಮಾರ್, ರುದ್ರೇಶ್ ಅದರಂಗಿ, ಆಯೋಜನೆ–ಸರ್ಕಾರಿ ಕಲಾ ಕಾಲೇಜು ಕನ್ನಡ ಸಂಘ, ಮಧ್ಯಾಹ್ನ 2 (ಆನ್‌ಲೈನ್ ಕಾರ್ಯಕ್ರಮ)

ಜಿ.ಕೃಷ್ಣಪ್ಪ ಮತ್ತು ಟಿ.ಎನ್.ವಾಸುದೇವಮೂರ್ತಿ ಅವರು ಬರೆದಿರುವ 'ಅಂಬಿಕಾತನಯದತ್ತರ ಕನ್ನಡ ಮೇಘದೂತ-ಒಂದು ಸಹಪಯಣ' ಪುಸ್ತಕ ಬಿಡುಗಡೆ: ಜಿ.ಬಿ.ಹರೀಶ್, ಅಧ್ಯಕ್ಷತೆ–ಮಲ್ಲೇಪುರಂ ಜಿ.ವೆಂಕಟೇಶ್, ಬೇಂದ್ರೆ ಸ್ಮೃತಿ ಲೇಖನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ:ಜಿ.ಕೃಷ್ಣಪ್ಪ, ಆಯೋಜನೆ–ದ.ರಾ.ಬೇಂದ್ರೆ ಕಾವ್ಯ ಕೂಟ, ಸಂಜೆ 4 (ಆನ್‌ಲೈನ್ ಕಾರ್ಯಕ್ರಮ)

ದ.ರಾ.ಬೇಂದ್ರೆ ಜನ್ಮದಿನೋತ್ಸವ:'ಬೇಂದ್ರೆಯವರ ಕನ್ನಡ ಮೇಘದೂತ-ಒಂದು ತೌಲನಿಕ ಅಧ್ಯಯನ' ಉಪನ್ಯಾಸ:ಟಿ.ಎನ್.ವಾಸುದೇವಮೂರ್ತಿ, ಆಯೋಜನೆ–ಕನ್ನಡ ಸಂಘ ನಾಗಮಂಗಲ, ರಾತ್ರಿ 7 (ಆನ್‌ಲೈನ್ ಕಾರ್ಯಕ್ರಮ)

SAD DEMISE

Sri. T. Govinda Reddy
DOB : 10/10/1938 DOD : 30/01/2022

He has left behind a rich harvest of memories to cherish, honour and emulate.

MOURNED BY HIS DEAR FAMILY & FRIENDS

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENTS And Finance Available On Low Interest Against Properties, Land& Buildings, Finance Sites, Flats, Converted and Agriculture Lands. Also Introducing Luxury Cars Finance @ Very Low Interest Call: 7411265189

WANTED INVESTER We Are Manufacturer, Pure Silk Sarees, Invester Get Good Profit in-our Business, 7899356649

General

EARN 65,000/- to 90,000/- per-month. Setup Paper-bags, Tea-cups, LED-Bulbs unit. We provide free raw material. Buyback Agreement. Contact: 9958628785.

PERSONAL

Change of Name

I, GIRIJA W/o Mudlappa Resident at Idigara Dasarahalli, Yalliyuru Post, Sira Taluk, Tumakur-572137. have Changed my Name to RAJAMMA. M. vide Affidavit Dated 27/01/2022, Before Notary G. Rajendra, Bangalore.

REAL ESTATE SELLING

Commerical

Indiranagar

INDRA NAGAR sale 40x60 Very Prime Commercial site excellent location call 9844001942 Brokers Excuse

JOB OPPORTUNITIES

Accounts & Finance

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

Graphic Designers

WANTED DTP Operator/ Graphic Designer Corel Draw Illustrator & Photoshop for a Pvt Limited Company in around Rajajinagar Contact: 23307910/ 9108458798

General

LADY FOR office on lalbagh road. Call 9343750305. Age no bar.

Hospital & Medical Jobs

WANTED NURSING Staff Accommodation Given Contact: 9900520357 Chaitanya Hospital, No 80, P&T Colony, R.T.Nagar Bangalore-32

Multiple Vacancy

REQUIRED IMMEDIATELY HR, Administration, Manager, Accounts, Supervisor, Technical Mechanical, Electronics, Electrical, Computer Engineers -08047498888/7676760299

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD
SELL, RENT, BUY PROPERTY THROUGH PROPERTY CLASSIFIEDS ADS IN DECCAN HERALD & PRAJAVANI NEWS PAPER

ಪ್ರಜಾವಾಣಿ ಕ್ಲಾಸಿಫೈಡ್ಸ್

BOOK YOUR CLASSIFIEDS ADS ONLINE WWW.DHCLASSIFIEDS.COM
FOR MORE INFORMATION CONTACT 9880856233 | 9886213331 Email: santhoshkumar@deccanherald.co.in

ವಿಶೇಷ ತಹಸೀಲ್ದಾರ್‌ರವರ ಕಛೇರಿ
ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ
ಬೆಂಗಳೂರು ಗ್ರಾಮಾಂತರ ಶಾಖಾ ಕಛೇರಿ.
ನಂ.197,ವೆಸ್ಟ್ ಆಫ್ ಕಾರ್ಡ್ ರಸ್ತೆ, 1ನೇ ಬ್ಲಾಕ್, 3ನೇ ಮಹಡಿ, ರಾಜಾಜಿನಗರ, ಬೆಂಗಳೂರು–560 086
ದೂರವಾಣಿ ಸಂಖ್ಯೆ: 23197995/996 ಇ–ಮೇಲ್ : rur@ksfc.co ವೆಬ್‌ಸೈಟ್ : ksfc.in
ಕ.ರಾ.ಹ.ಸಂ/ಎಸ್.ಟಿಆರ್/ಆರ್–186/2021–22 ದಿನಾಂಕ: 25.01.2022

ಬಹಿರಂಗ ಹರಾಜು ಪ್ರಕಟಣೆ

ಈ ಕೆಳಗೆ ಕಾಣಿಸಿದ ಕಾಲಂ (1)ರ ಘಟಕದ ಬಾಬ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ತೆಗೆದುಕೊಂಡ ಸಾಲದ ಬಾಕಿ ಹಣವನ್ನು ಸಂಸ್ಥೆಗೆ ಮರು ಪಾವತಿ ಮಾಡದೇ ಇದ್ದುದರಿಂದ, ಈ ಕೆಳಗೆ ಕಾಣಿಸಿರುವ ಕಾಲಂ (2)ರ ಸ್ಥಿರಾಸ್ತಿಯನ್ನು **"ಎಲ್ಲಿ ಹೇಗಿವೆಯೋ ಹಾಗೆಯೇ"** ಇರುವ ಸ್ಥಿತಿಯಲ್ಲಿ ಭೂಕಂದಾಯ ಬಾಕಿಯಂತೆ ಪರಿಗಣಿಸಿ ವಸೂಲು ಮಾಡಲು ಕೆಳಗೆ ಕಾಲಂ (3) ರಲ್ಲಿ ಕಾಣಿಸಿದ ಸ್ಥಳದಲ್ಲಿ ಮತ್ತು ದಿನಾಂಕದಂದು ಹರಾಜು ನಡೆಸಲಾಗುವುದು. ಹರಾಜು ಮಾಡಲಾಗುವ ಆಸ್ತಿಯನ್ನು ಅದೇ ದಿನ ಬೆಳಿಗ್ಗೆ 11.30 ಗಂಟೆಯಿಂದ ಮದ್ಯಾಹ್ನ 12.00 ಗಂಟೆಯವರೆಗೆ ಪರಿಶೀಲಿಸಬಹುದು. ಸದರಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲಿಚ್ಛಿಸುವವರು ಹರಾಜಿಗೆ ರೂ.10,000/– (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು ಶಾಖೆಯ ಹೆಸರಿಗೆ ಠೇವಣಿ ಮೊಬಲಗನ್ನು ಪಾವತಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. ಸ್ಥಿರಾಸ್ತಿ ಕೊಳ್ಳಲು ಹರಾಜಿನಲ್ಲಿ ಅಂತಿಮ ಬಿಡ್ಡುದಾರರು ಸ್ಥಳದಲ್ಲಿಯೇ ಬಿಡ್ ಮಾಡಿದ ಮೊತ್ತದ 1/4ನೇ ಭಾಗದ ಹಣವನ್ನು ಪಾವತಿಸಿ ಉಳಿದ ಹಣವನ್ನು ಹರಾಜು ದಿನಾಂಕ ದಿಂದ 15 ದಿನಗಳೊಳ ಗಾಗಿ ತಪ್ಪದೇ ಪಾವತಿ ಮಾಡತಕ್ಕದ್ದು.

ಘಟಕದ ಬಾಕಿದಾರರ ಹೆಸರು ಮತ್ತು ವಿಳಾಸ: 1) ಶ್ರೀ ಎ.ಕೆ.ಅಬ್ದುಲ್ ಸಮದ್, **2)** ಶ್ರೀ ಮೊಹಮ್ಮದ್ ಮಾಹಿಷೀನ್ & **3)** ಶ್ರೀ ಮುನಿರಾಜು ಬಿನ್ ಸಂಜೀವರಾಜು ನಿರ್ದೇಶಕರು ಮೆ: ಕರೀಮ್ ಸಿಲ್ಕ್ ಇಂಟರ್‌ನ್ಯಾಷನಲ್ ಲಿಮಿಟೆಡ್, ನಂ.6–ಬಿ & 7, ಇಂಡಸ್ಟ್ರೀಯಲ್ ಏರಿಯಾ, ನಂಜನಗೂಡು, ಮೈಸೂರು.

ಸಾಲಗಾರರ ಸ್ಥಿರಾಸ್ತಿಯ ವಿವರ: ಫ್ಲ್ಯಾಟ್ ನಂ.FF-3, ಆಲ್‌ಪೈನ್ ವ್ಯು, 1ನೇ ಮಹಡಿ, ಗಂಗೇನಹಳ್ಳಿ 3ನೇ ಕ್ರಾಸ್, ಬೆಂಗಳೂರು ಇಲ್ಲಿರುವ ಸ್ವತ್ತಿನ ವಿಸ್ತೀರ್ಣ 636 ಚದರ ಅಡಿಯುಳ್ಳ ಫ್ಲ್ಯಾಟ್. ಈ ಆಸ್ತಿಯು ಶ್ರೀ ಮುನಿರಾಜು ಬಿನ್ ಸಂಜೀವರಾಜು & ಲೇಟ್ ಸಿ.ವಿ.ನಾಗರಾಜು ಬಿನ್ ಗೋವಿಂದರಾಜು ರವರ ಹೆಸರಿನಲ್ಲಿರುತ್ತದೆ.

ಬಹಿರಂಗ ಹರಾಜು ಬಗ್ಗೆ ನಿಗದಿಪಡಿಸಿದ ದಿನಾಂಕ & ಸ್ಥಳ: ದಿ: 15.02.2022 ರಂದು ಮಧ್ಯಾಹ್ನ 12.00 ಘಂಟೆಗೆ ಆಸ್ತಿ ಇರುವ ಸ್ಥಳದಲ್ಲಿ.

ಹರಾಜು ಷರತ್ತುಗಳು: 1) ಹರಾಜಿನಲ್ಲಿ ಭಾಗವಹಿಸುವವರು ಭಾರತದ ಪ್ರಜೆಯಾಗಿರತಕ್ಕದ್ದು, ಹರಾಜಿಗೆ ಮುನ್ನ ಬಿಡ್ಡುದಾರಿಕೆ ಫಾರಂ ಪಡೆದು ಪೂರ್ಣ ರೂಪದಲ್ಲಿ ತುಂಬಿ ಠೇವಣಿ ಮೊತ್ತ ಪ್ರತಿ ಹರಾಜಿಗೆ ತಲಾ ರೂ.10,000/– (ಹತ್ತು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು ಶಾಖೆ, ಇವರ ಹೆಸರಿಗೆ ಠೇವಣಿ ನೀಡಿ ನೋಂದಣಿ ಮಾಡಿಕೊಳ್ಳತಕ್ಕದ್ದು ಹಾಗೂ ಬಿಡ್ಡುದಾರರು ಖುದ್ದು ಹಾಜರಾಗಿರುವುದು, ಬಿಡ್ಡುದಾರರ ಪರವಾಗಿ ಇತರೆಯವರು ಹಾಜರಿಯಾಗುವಂತಿಲ್ಲ. **2)** ಬಿಡ್ಡುದಾರರು ಅವರ ಮೂಲ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್ ಗಳನ್ನು ಹರಾಜು ಸಂದರ್ಭದಲ್ಲಿ ತೋರಿಸಬೇಕು ಹಾಗೂ ಜೆರಾಕ್ಸ್ ಪ್ರತಿಯನ್ನು ಸಲ್ಲಿಸತಕ್ಕದ್ದು. ಬಿಡ್ಡುದಾರರು ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳನ್ನು ಸಲ್ಲಿಸತಕ್ಕದ್ದು. **3)** ಬಹಿರಂಗ ಹರಾಜು ಮುಖೇನ ಮಾರಾಟಕ್ಕಿರುವ ಆಸ್ತಿಯನ್ನು "ಎಲ್ಲಿ ಹೇಗಿದೆಯೋ ಹಾಗಿರುವ ಸ್ಥಿತಿ" ಯಲ್ಲಿ ಮಾರಾಟ ಮಾಡಲಾಗುವುದು. **4)** ಮೇಲ್ಕಂಡ ಸ್ಥಿರಾಸ್ತಿಯನ್ನು ಸಕ್ಷಮ ಪ್ರಾಧಿಕಾರದಲ್ಲಿ ಬಾಕಿ ಇರುವ ಎಲ್ಲಾ ತೆರಿಗೆಗಳನ್ನು ಪಾವತಿಸಿ ಸೂಕ್ತ ದಾಖಲಾತಿಗಳನ್ನು ಸಲ್ಲಿಸಿ ಖಾತೆ ಮಾಡಿಸಿಕೊಳ್ಳುವ ಸಂಪೂರ್ಣ ಜವಾಬ್ದಾರಿ ಬಿಡ್‌ದಾರರದ್ದಾಗಿರುತ್ತದೆ. **5)** ಹರಾಜಿನಲ್ಲಿ ವಿಜೇತರಾದ (ಅಂತಿಮ ಬಿಡ್ಡುದಾರರು) ಆಖೈರು ಬಿಡ್ಡು ಮೊಬಲಗಿನ 25% ರಷ್ಟನ್ನು ಸ್ಥಳದಲ್ಲೇ ಪಾವತಿಸಿ, ಉಳಿಕೆ ಮೊಬಲಗನ್ನು ಹರಾಜು ನಡೆಸಿದ ದಿನಾಂಕದಿಂದ 15 ದಿವಸಗಳೊಳಗಾಗಿ ತಪ್ಪದೇ ಪಾವತಿ ಮಾಡತಕ್ಕದ್ದು, ತಪ್ಪಿದಲ್ಲಿ ಪಾವತಿಸಿರುವ ಮೊತ್ತವನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. **6)** ಹರಾಜಿನ ದಿನಾಂಕದಿಂದ 90 ದಿವಸಗಳೊಳಗಾಗಿ ಆಕ್ಷೇಪಣೆ/ತಂಟೆ/ತಕರಾರು/ಬಿನ್ನಾಭಿಪ್ರಾಯ/ ನ್ಯಾಯಾಲಯದ ಪ್ರಕರಣಗಳು ಉಂಟಾದಲ್ಲಿ ಸದರಿ ಹರಾಜನ್ನು ಅಂಗೀಕರಿಸುವ / ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುವರು. **7)** ಸ್ಥಿರಾಸ್ತಿಯ ಭೂಕಂದಾಯ, ನೀರು, ವಿದ್ಯುತ್, ವಾಣಿಜ್ಯ ತೆರಿಗೆ, ಯಾವುದೇ ಬಾಕಿ ಅಥವಾ ಯಾವುದೇ ಇಲಾಖೆಯ ಬಾಕಿಯನ್ನು ಖರೀದಿದಾರರೇ ಭರಿಸಲು ಬಾಧ್ಯಸ್ಥರು. **8)** ಕರ್ನಾಟಕ ಭೂಕಂದಾಯ ಕಾಯ್ದೆಯ ಅನ್ವಯ ಸದರಿ ಹರಾಜು ಸಂಬಂಧಪಟ್ಟ ಉಪವಿಭಾಗಾಧಿಕಾರಿ ಯವರಿಂದ ಸ್ಥಿರೀಕರಣದ ಆದೇಶಕ್ಕೆ ಒಳಪಟ್ಟಿದೆ. ನಂತರ ಸ್ಥಿರಾಸ್ತಿಯನ್ನು ಆಖೈರು ಬಿಡ್ಡುದಾರರಿಗೆ ನೋಂದಣಿ ಮಾಡಿಸಲು ಸೇಲ್ಸ್ ಸರ್ಟಿಫಿಕೇಟನ್ನು ಕೊಡಲಾಗುವುದು. ಇದಕ್ಕೆ ತಗಲುವ ನೋಂದಣಿ, ಸ್ಟ್ಯಾಂಪ್ ಶುಲ್ಕ ಪ್ರಕ್ರಿಯೆ ಹಾಗೂ ಇತರೆ ಶುಲ್ಕಗಳನ್ನು ಆಖೈರು ಬಿಡ್ಡುದಾರರೇ ಭರಿಸತಕ್ಕದ್ದು. ಸಕ್ಷಮ ಪ್ರಾಧಿಕಾರ ಯಾವುದಾದರೂ ದಾಖಲಾತಿಗಳನ್ನು ಅಪೇಕ್ಷಿಸಿದಲ್ಲಿ ಬಿಡ್ಡುದಾರನು ಒದಗಿಸಲು ಬದ್ದನಾಗಿರಬೇಕು. **9)** ಹರಾಜಿನ ಬಗ್ಗೆ ಹೆಚ್ಚಿನ ವಿವರಗಳು, ಮಾಹಿತಿ ಮತ್ತು ಷರತ್ತುಗಳನ್ನು ಈ ಕೆಳಗೆ ಸಹಿ ಮಾಡಿರುವ ವಿಶೇಷ ತಹಸೀಲ್ದಾರ್ ಅಥವಾ ಶಾಖಾ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ಮೈಸೂರು ಶಾಖೆ ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ವಿಶೇಷ ತಹಸೀಲ್ದಾರರು
(ಸರ್ಕಾರಿ ಬಾಕಿ ವಸೂಲಾತಿ)
ಕ.ರಾ.ಹ.ಸಂಸ್ಥೆ, ಬೆಂಗಳೂರು ಗ್ರಾಮಾಂತರ ಕಛೇರಿ

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಹೊಸಹಳ್ಳಿ ಮೆಟ್ರೊ ನಿಲ್ದಾಣ ಬಳಿಯ ಉದ್ಯಾನದ ಸಮೀಪ ವಿದ್ಯುತ್ ಪರಿವರ್ತಕದ ರಕ್ಷಣಾ ಬೇಲಿ ಹಾಳಾಗಿರುವುದು

ವಿದ್ಯುತ್ ಪರಿವರ್ತಕದ ಬೇಲಿ ದುರಸ್ತಿ ಮಾಡಿ

ಹೊಸಹಳ್ಳಿ ಮೆಟ್ರೊ ನಿಲ್ದಾಣದ ಸಮೀಪದಲ್ಲಿ ಉದ್ಯಾನವಿದೆ. ಇದರ ಬಳಿ ಇರುವ ವಿದ್ಯುತ್ ಪರಿವರ್ತಕದ ರಕ್ಷಣಾ ಬೇಲಿಯು ಹಲವು ದಿನಗಳಿಂದ ಹಾಳಾಗಿದೆ. ಆದರೆ, ಈವರೆಗೆ ಅದನ್ನು ಸರಿಪಡಿಸುವ ಕೆಲಸಕ್ಕೆ ಸಂಬಂಧಪಟ್ಟವರು ಮುಂದಾಗಿಲ್ಲ. ವಿದ್ಯುತ್ ಪರಿವರ್ತಕದ ಸುತ್ತ ಬೇಲಿ ನಿರ್ಮಿಸಿದರೆ ಅಪಾಯಗಳನ್ನು ತಡೆಯಬಹುದು.

ಈ ಪ್ರದೇಶದಲ್ಲಿ ಸ್ವಚ್ಛತೆಯೂ ಇಲ್ಲ. ಇದೇ ರಸ್ತೆಯಲ್ಲಿ ಆದಿಚುಂಚನಗಿರಿ ಮಠ ಹಾಗೂ ವಾಸವಿಸಂಸ್ಥೆಯಕಾಲೇಜುಸಹಇದೆ.ವಿದ್ಯಾರ್ಥಿಗಳು ಹಾಗೂ ಜನರು ಹೆಚ್ಚಿನ ಸಂಖ್ಯೆಯಲ್ಲಿ ಈ ದಾರಿಯಲ್ಲಿ ಸಾಗುತ್ತಾರೆ. ಸ್ಥಳೀಯ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ನಿರ್ಲಕ್ಷ್ಯದಿಂದ ಈ ದುಸ್ಥಿತಿ ತಲುಪಿದೆ.

ರಾಮಮೂರ್ತಿ, ಸ್ಥಳೀಯ

‘ರಸ್ತೆಯಲ್ಲೇ ಗುಂಡಿ ಬಿಟ್ಟರು’

ಬಸವನಪುರ ವಾರ್ಡ್ ಸಂಖ್ಯೆ-53ಕ್ಕೆ ಸೇರಿದ ಮೇಡಹಳ್ಳಿ ಬಡಾವಣೆಯಲ್ಲಿ ಈ ಹಿಂದೆ ಒಎಫ್‌ಸಿ ಕೇಬಲ್ ಅಳವಡಿಕೆ ಕಾಮಗಾರಿ ನಡೆದಿತ್ತು. ಕಾಮಗಾರಿಗಾಗಿ ಅಗೆಯಲಾಗಿದ್ದ ಗುಂಡಿಯನ್ನು ಈವರೆಗೆ ಮುಚ್ಚದೆ, ಹಾಗೆಯೇ ಬಿಡಲಾಗಿದೆ. ಇದು, ರಸ್ತೆಯ ಮಧ್ಯಭಾಗದಲ್ಲೇ ಇರುವುದರಿಂದ ವಾಹನಗಳ ಸಂಚಾರಕ್ಕೆ ತೊಡಕಾಗಿದೆ.

ಅವೈಜ್ಞಾನಿಕ ಕಾಮಗಾರಿಯಿಂದಾಗಿ ಅಪಘಾತಗಳು ಸಂಭವಿಸುತ್ತಿರುವುದು ಸಾಮಾನ್ಯವಾಗಿವೆ. ಈ ಸಮಸ್ಯೆ ಪರಿಹರಿಸುವಂತೆ ಪಾಲಿಕೆಗೆ ದೂರು ನೀಡಲಾಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕು.

ಕಿರಣ್ ಕುಮಾರ್, ಮೇಡಹಳ್ಳಿ

ಮೇಡಹಳ್ಳಿ ಬಡಾವಣೆಯ ರಸ್ತೆ ಮಧ್ಯದಲ್ಲೇ ಇರುವ ಗುಂಡಿ



ಐಡಿಯಲ್ ಹೋಮ್ಸ್ ಬಡಾವಣೆಯಲ್ಲಿ ರಸ್ತೆಗೆ ಬಾಗಿರುವ ಮರ

ರಸ್ತೆಗೆ ಬಾಗಿದ ಮರ ತೆರವು ಮಾಡಿ

ರಾಜರಾಜೇಶ್ವರಿ ನಗರದ ಐಡಿಯಲ್ ಹೋಮ್ಸ್ ಟೌನ್‌ನ 10ನೇ ಮುಖ್ಯರಸ್ತೆಯಲ್ಲಿ ಮರವೊಂದು ರಸ್ತೆಗೆ ಅಡ್ಡವಾಗಿ ಬೆಳೆದಿದೆ. ಅರ್ಧರಸ್ತೆಯವರೆಗೆ ಮರ ಆವರಿಸಿರುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಸಮಸ್ಯೆಯಾಗಿದೆ. ಸರಕು ಹೊತ್ತು ಬರುವ ದೊಡ್ಡ ವಾಹನಗಳು ಮರದಿಂದಾಗಿ ಮುಂದೆ ಬರದೆ ನಿಲ್ಲುತ್ತವೆ.

ಮರ ಹರಡಿಕೊಂಡು ಇಲ್ಲಿನ ಬೀದಿದೀಪಗಳ ಬೆಳಕಿಗೂ ಅಡ್ಡವಾಗಿದೆ. ಇದರಿಂದ ರಾತ್ರಿ ಸಮಯದಲ್ಲಿ ಜನ ಕತ್ತಲಿನಲ್ಲೇ ನಡೆಯಬೇಕಾಗಿದೆ. ಮರವನ್ನು ತೆರವು ಮಾಡಿದರೆ, ಈ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ. ಇದಕ್ಕೆ ಪರ್ಯಾಯವಾಗಿ ಸಸಿಗಳನ್ನು ನೆಡುವ ಕೆಲಸವೂ ಆಗಬೇಕು.

ಜಯಪ್ರಕಾಶ್, ರಾಜರಾಜೇಶ್ವರಿ ನಗರ

ಲಕ್ಕಪ್ಪ ಬಡಾವಣೆಯ ರಸ್ತೆಯ ಡಾಂಬರು ಕಿತ್ತು ಬಂದಿರುವುದು

ರಸ್ತೆ ದುರಸ್ತಿಗೆ ಮುಂದಾಗಿ

ಲಕ್ಕಪ್ಪ ಬಡಾವಣೆಯ 5ನೇ ಅಡ್ಡರಸ್ತೆ ಪೂರ್ಣವಾಗಿ ಹದಗೆಟ್ಟಿದೆ. ವಾಹನ ಸಂಚಾರಕ್ಕೆ ನಿತ್ಯವೂ ಸಮಸ್ಯೆಯಾಗಿದೆ. ಈ ರಸ್ತೆಯಲ್ಲಿ ದೊಡ್ಡ ವಾಹನಗಳ ಸಂಚಾರ ಮಿತಿ ಮೀರಿರುವುದರಿಂದ ರಸ್ತೆ ಮತ್ತಷ್ಟು ಹಾಳಾಗಿದೆ. ಡಾಂಬರನ್ನು ಹೆಸರಿಗೆ ಮಾತ್ರ ಹಾಕಲಾಗಿದ್ದು, ಕೆಲವೇ ತಿಂಗಳಲ್ಲಿ ಡಾಂಬರು ಕಿತ್ತು ಬಂದಿದೆ. ರಸ್ತೆ ದುರಸ್ತಿ ಮಾಡುವಂತೆ ಸ್ಥಳೀಯ ಪಾಲಿಕೆ ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಕೆಟ್ಟ ರಸ್ತೆಯಲ್ಲಿ ಬಿದ್ದು, ಹಲವರಿಗೆ ಗಾಯಗಳಾಗಿವೆ. ಕೂಡಲೇ ರಸ್ತೆಯನ್ನು ದುರಸ್ತಿ ಮಾಡಿಕೊಡಿ.

ಪ್ರಸಾದ್, ಸ್ಥಳೀಯ

ಚರಂಡಿ ಕಾಮಗಾರಿ ಅಪೂರ್ಣ

ವಿದ್ಯಾರಣ್ಯಪುರದ ಎಂಎಸ್ ಬಡಾವಣೆಯ 6ನೇ ಮುಖ್ಯರಸ್ತೆಯಲ್ಲಿ ನಡೆದ ಚರಂಡಿ ಕಾಮಗಾರಿ ಅಪೂರ್ಣವಾಗಿದೆ. ಚರಂಡಿ ನಿರ್ಮಿಸಿ ತಿಂಗಳುಗಳು ಕಳೆದರೂ ಅದರ ಮೇಲ್ಭಾಗವನ್ನು ಮುಚ್ಚದೆ ಹಾಗೆಯೇ ಬಿಡಲಾಗಿದೆ. ಇದು ಪಾದಚಾರಿಗಳು ಹಾಗೂ ವಾಹನ ಸವಾರರಿಗೆ ಮೃತ್ಯುಕೂಪವಾಗಿದ್ದು, ಅಪೂರ್ಣತೆಯನ್ನು ಕೂಡಲೇ ಸರಿಪಡಿಸಬೇಕು. ಕಾಮಗಾರಿಯಿಂದಾಗಿ ಬಡಾವಣೆಯ ರಸ್ತೆಗಳೂ ಹದಗೆಟ್ಟಿದ್ದು, ಡಾಂಬರು ಹಾಕಿ ಸರಿಪಡಿಸಬೇಕು.

ಪ್ರಶಾಂತ್ ಕೊಡ್ನಾಡ್
ಎಂಎಸ್ ಬಡಾವಣೆ ನಿವಾಸಿ

ವಿದ್ಯಾರಣ್ಯಪುರದ ಎಂಎಸ್ ಬಡಾವಣೆಯಲ್ಲಿ ಅಪೂರ್ಣವಾಗಿರುವ ಚರಂಡಿ ಕಾಮಗಾರಿ

‘ವಿಸ್ಮೃತಿಗೆ ಸರಿದ ಘಟನೆಗಳಿಗೆ ಜೀವಂತಿಕೆ ನೀಡುವ ಕೃತಿ’

ಬೆಂಗಳೂರು: ‘ಜೋತ್ಸ್ನಾ ಕಾಮತ್ ಅವರ ‘ಕಲಕತ್ತಾ ದಿನಗಳು’ ಕೃತಿಯು ವಿಸ್ಮೃತಿಗೆ ಸರಿದುಹೋದ ಹಲವು ಘಟನೆಗಳು ಹಾಗೂ ಅತ್ಯಂತ ಧೀಮಂತ ವ್ಯಕ್ತಿಗಳನ್ನು ಜೀವಂತಗೊಳಿಸಿದೆ’ ಎಂದು ಸಾಹಿತಿ ನೇಮಿಚಂದ್ರ ಅಭಿಪ್ರಾಯಪಟ್ಟರು.

ಅಂಕಿತ ಪುಸ್ತಕ ಪ್ರಕಾಶನವು ಬುಕ್ ಬ್ರಹ್ಮ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾನುವಾರ ಮಾತನಾಡಿದರು.

‘ಜೋತ್ಸ್ನಾ ಅವರು ಕೊಲ್ಕತ್ತದ ಸ್ಮಶಾನಕ್ಕೆ ಭೇಟಿ ನೀಡಿ 18ನೇ ಶತಮಾನದ ಗೋರಿಗಳು ಹೇಳುವ ಕಥೆಗಳನ್ನು ಪುಸ್ತಕದಲ್ಲಿ ದಾಖಲಿಸಿದ್ದಾರೆ. ಒಂದೊಂದು ಕಥೆಯ ಹಿನ್ನೆಲೆಯನ್ನು ಚರಿತ್ರೆಯ ಪುಟಗಳಿಂದ ಹೆಕ್ಕಿ ಅವುಗಳಿಗೆ ಅಕ್ಷರ ರೂಪ ನೀಡಿದ್ದಾರೆ. 200 ವರ್ಷಗಳ ಹಿಂದೆ ಭಾರತವನ್ನು ಒಂದು ಕವನದ ರೂಪದಲ್ಲಿ ಬರೆದ ಆಂಗ್ಲೊ ಇಂಡಿಯನ್‌ವ್ಯಕ್ತಿಯಕುರಿತಮಾಹಿತಿಯನ್ನೂ ಪುಸ್ತಕ ಒಳಗೊಂಡಿದೆ’ ಎಂದರು.

ವಿದ್ವಾಂಸ ಆರ್. ಶೇಷಶಾಸ್ತ್ರಿ, ‘ಕೊಲ್ಕತ್ತದಲ್ಲಿ ಸಿಗುವ ಸೀರೆಗಳು, ತಿಂಡಿ–ತಿನಿಸು, ಉಡುಗು–ತೊಡುಗೆ, ಸಂಸ್ಕೃತಿ ಹಾಗೂ ಅಲ್ಲಿನ ಗ್ರಾಮೀಣ ಪರಿಸರ ಹೀಗೆ ಎಲ್ಲದರ ಚಿತ್ರಣವನ್ನೂ ಈ ಪುಸ್ತಕದಲ್ಲಿ ಕಟ್ಟಿಕೊಡಲಾಗಿದೆ. ಹಾಗಂತ ಇದು ಪ್ರವಾಸ ಕಥನವಲ್ಲ’ ಎಂದು ಹೇಳಿದರು.

ಲೇಖಕಿ ಜೋತ್ಸ್ನಾ ಕಾಮತ್, ಅಂಕಿತ ಪುಸ್ತಕ ಪ್ರಕಾಶನದ ಪ್ರಕಾಶ್ ಕಂಬತ್ತಳ್ಳಿ ಹಾಗೂ ಪ್ರಭಾ ಕಂಬತ್ತಳ್ಳಿ ಇದ್ದರು.

‘ಕನ್ನಡ ವಿಶ್ವವಿದ್ಯಾಲಯದ ಕೇಸರೀಕರಣಕ್ಕೆ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ವಿಶ್ವವಿದ್ಯಾಲಯವನ್ನು ಕೇಸರೀಕರಣಗೊಳಿಸುವ ಪ್ರಯತ್ನಗಳ ಮೂಲಕ ಸಂಸ್ಥೆಯ ಚೈತನ್ಯವನ್ನು ಕುಂದಿಸಲಾಗುತ್ತಿದೆ’ ಎಂದು ಚಿಂತಕ ಬಂಜಗೆರೆ ಜಯಪ್ರಕಾಶ್ ಹೇಳಿದರು.

ಬಂಡಾಯ ಸಾಹಿತ್ಯ ಸಂಘಟನೆ ಭಾನುವಾರ ‘ಕನ್ನಡ ವಿಶ್ವವಿದ್ಯಾಲಯದ ಸ್ಥಿತಿ–ಗತಿ’ ಕುರಿತು ಆಯೋಜಿಸಿದ್ದ ಆನ್‌ಲೈನ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ’ಕನ್ನಡ ವಿಶ್ವವಿದ್ಯಾಲಯಕ್ಕೆ ಸಿಂಡಿಕೇಟ್ ಸದಸ್ಯರ ನೇಮಕ, ಕ್ರಿಯಾ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ವಿಶ್ಲೇಷಿಸಿದಾಗ ಬಲಪಂಥೀಯರು ವಿಶ್ವವಿದ್ಯಾಲಯವನ್ನು ಕೇಸರೀಕರಣಗೊಳಿಸಲು ನಡೆಸುತ್ತಿರುವ ಪ್ರಯತ್ನಗಳು ತಿಳಿಯುತ್ತವೆ‘ ಎಂದರು.

’ಕನ್ನಡದ ಅರಿವು ವಿಸ್ತರಿಸುವ ಜತೆ ಹಿರಿಮೆ ಹೆಚ್ಚಿಸಿದ ವಿಶ್ವವಿದ್ಯಾಲಯದಲ್ಲಿ ಈಗ ಮುಕ್ತ ಚಿಂತನೆಗಳಿಗೆ ಅವಕಾಶಗಳು ಇಲ್ಲದಂತಹ ವಾತಾವರಣ ಸೃಷ್ಟಿಯಾಗುತ್ತಿದೆ‘ ಎಂದರು.

’ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವೂ ನೀಡುತ್ತಿಲ್ಲ. ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಸಾಕಷ್ಟು ಅನುದಾನ ನೀಡಲು ಮುಂದಾಗಿರುವ ರಾಜ್ಯ ಸರ್ಕಾರ, ಕನ್ನಡದ ಭಾಷೆಗಾಗಿಯೇ ಮೀಸಲಾಗಿರುವ ಏಕೈಕ ವಿಶ್ವವಿದ್ಯಾಲಯಕ್ಕೆ ಅನುದಾನ ನೀಡಲು ಹಿಂದೇಟು ಹಾಕುತ್ತಿದೆ‘ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಮಾತನಾಡಿ, ’ಕನ್ನಡ ವಿಶ್ವವಿದ್ಯಾಲಯದ ಬಗ್ಗೆ ಚರ್ಚಿಸುವ ಪರಿಸ್ಥಿತಿ ಬಂದಿರುವುದೇ ವಿಪರ್ಯಾಸ. ಕನ್ನಡ ವಿಶ್ವವಿದ್ಯಾಲಯದ ಸ್ವರೂಪಕ್ಕೆ ಯಾವುದೇ ರೀತಿಯಲ್ಲೂ ಧಕ್ಕೆ ತಾರದೇ ಬೆಳೆಸಬೇಕು‘ ಎಂದು ಸಲಹೆ ನೀಡಿದರು.

’ಬಹುಪಾಲು ವಿಶ್ವವಿದ್ಯಾಲಯಗಳು ಇಂದು ವಿಶ್ವಾಸಾರ್ಹತೆಯ ಕೊರತೆ ಎದುರಿಸುತ್ತಿವೆ. ಕಾಲೇಜು ರೀತಿಯಲ್ಲಿ ಈ ವಿಶ್ವವಿದ್ಯಾಲಯಗಳು ನಡೆಯುತ್ತಿದ್ದು, ಗುಣಮಟ್ಟ ಕ್ಷೀಣಿಸುತ್ತಿದೆ. ಈಗಿರುವ ವಿಶ್ವವಿದ್ಯಾಲಯಗಳಿಗೆ ಸೌಲಭ್ಯಗಳನ್ನು ಕಲ್ಪಿಸಿ ಉತ್ತಮ ಶೈಕ್ಷಣಿಕ ವಾತಾವರಣ ಸೃಷ್ಟಿಸಬೇಕಾಗಿದೆ. ವಿಶ್ವವಿದ್ಯಾಲಯಗಳ ಸಂಖ್ಯೆ ಮುಖ್ಯವಲ್ಲ. ಸತ್ವ ಮುಖ್ಯ. ಎಂತಹ ಶಿಕ್ಷಣ ನೀಡುತ್ತವೆ ಎನ್ನುವುದು ಮುಖ್ಯ. ಈ ವಿಷಯದಲ್ಲಿ ವಿಶ್ವವಿದ್ಯಾಲಯಗಳ ಜತೆಗೆ ಸರ್ಕಾರವೂ ಜವಾಬ್ದಾರಿಯಾಗಬೇಕು‘ ಎಂದರು.

’ಕನ್ನಡ ವಿಶ್ವವಿದ್ಯಾಲಯ ಕೇವಲ ಸಂಶೋಧನೆಗೆ ಮೀಸಲಾಗಿದೆ ಎನ್ನುವ ತಪ್ಪು ಕಲ್ಪನೆ ಇದೆ. ಸಂಶೋಧನೆ ಪ್ರಧಾನವಾದ ವಿಶ್ವವಿದ್ಯಾಲಯ ಎನ್ನುವುದು ನಿಜ. ಆದರೆ, ಇಲ್ಲಿ ಸಂಶೋಧನೆಯ ಜತೆಗೆ ಬೋಧನೆಯನ್ನು ಒಳಗೊಂಡಿದೆ‘ ಎಂದು ವಿವರಿಸಿದರು.

’ಕನ್ನಡ ವಿಶ್ವವಿದ್ಯಾಲಯಕ್ಕೆ ಸರ್ಕಾರ ಸಕಾಲಕ್ಕೆ ಅನುದಾನ ನೀಡುತ್ತಿಲ್ಲ. ಸರ್ಕಾರವೇ ಆರ್ಥಿಕವಾಗಿ ಪೋಷಿಸದಿದ್ದರೆ ಹೇಗೆ? ಮುಖ್ಯಮಂತ್ರಿ ಅವರು ಈ ಬಗ್ಗೆ ಗಮನಹರಿಸಬೇಕು. ಮುಂಬರುವ ಬಜೆಟ್‌ನಲ್ಲಾದರೂ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಬಲ ತುಂಬಬೇಕು‘ ಎಂದು ಸಲಹೆ ನೀಡಿದರು.

‘ನಮ್ಮ ಬೇಡಿಕೆ ಈಡೇರಿಸುವವರಿಗೆ ಬೆಂಬಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸೇರಿ ವಿವಿಧ ರಾಜಕೀಯ ಪಕ್ಷಗಳಲ್ಲಿ ಮುಸ್ಲಿಂ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ಸಿಗುತ್ತಿಲ್ಲ ಎಂದು ಮುಸ್ಲಿಂ ಧಾರ್ಮಿಕ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಮೀರ್ ಎ ಶರಿಯತ್ ಸಗೀರ್ ಅಹಮದ್ ಖಾನ್ ಅವರ ನೇತೃತ್ವದಲ್ಲಿ ಭಾನುವಾರ ಸಮುದಾಯದ ಧಾರ್ಮಿಕ ಮುಖಂಡರ ಸಭೆ ಬೆಂಗಳೂರಿನಲ್ಲಿ ನಡೆಯಿತು. ನರಗುಂದದಲ್ಲಿ ಇತ್ತೀಚೆಗೆ ನಡೆದ ಘಟನೆಯ ಹಿನ್ನೆಲೆಯಲ್ಲಿ ಈ ಸಭೆ ನಡೆದರೂ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಚರ್ಚೆ ನಡೆಯಿತು.

‘ಈ ಸಭೆಯಲ್ಲಿ ಯಾವುದೇ ಒಂದು ನಿರ್ದಿಷ್ಟ ರಾಜಕೀಯ ಪಕ್ಷ ಅಥವಾ ವ್ಯಕ್ತಿಯ ಬಗ್ಗೆ ಚರ್ಚೆ ನಡೆದಿಲ್ಲ. ಆದರೆ, ಎಲ್ಲ ರಾಜಕೀಯ ಪಕ್ಷಗಳಿಗೂ ಒಂದು ಸಂದೇಶ ಕಳುಹಿಸಬೇಕು ಎಂಬುದು ಸಮುದಾಯದ ಕಳಕಳಿಯಾಗಿದೆ’ ಎಂದು ಮೌಲಾನ ಶಬ್ಬೀರ್ ಅಹಮದ್ ನದ್ವಿ ಸುದ್ದಿಗಾರರಿಗೆ ತಿಳಿಸಿದರು.

‘ನಮ್ಮ ಸಮುದಾಯಕ್ಕೆ ಯಾವುದೇ ಲಾಭ ಸಿಗುತ್ತಿಲ್ಲ. ಅಲ್ಪಸಂಖ್ಯಾತರ ಬಗ್ಗೆ ಕಳಕಳಿ ತೋರಿಸುತ್ತಿರುವ ಪಕ್ಷಗಳೂ ನಮ್ಮ ಜನಾದೇಶಕ್ಕೆ ಬೆಲೆ ಇಲ್ಲ ನೀಡುತ್ತಿಲ್ಲ ಎಂಬ ಭಾವನೆ ಬಂದಿದೆ. ಯಾವುದೇ ಹುದ್ದೆ ಅಥವಾ ಸ್ಥಾನಗಳನ್ನು ಭರ್ತಿ ಮಾಡುವ ವಿಚಾರ ಬಂದಾಗ ನಮ್ಮ ಜನಸಂಖ್ಯೆ ಅಥವಾ ಮತಗಳ ಪ್ರಮಾಣಕ್ಕೆ ಅನುಗುಣವಾಗಿ ಪ್ರಾತಿನಿಧ್ಯವನ್ನು ನೀಡುತ್ತಿಲ್ಲ. ಹೀಗಾಗಿ ಯಾವ ಪಕ್ಷಕ್ಕೆ ಮತ ಹಾಕಬೇಕು ಎಂಬ ಬಗ್ಗೆ ಚಿಂತನೆ ನಡೆಸುತ್ತಿದ್ದೇವೆ. ನಮ್ಮ ಬೇಡಿಕೆಗಳನ್ನು ಈಡೇರಿಸುವ ಮತ್ತು ನಮ್ಮ ಕಳಕಳಿಗಳಿಗೆ ಸ್ಪಂದಿಸುವ ಪಕ್ಷಕ್ಕೆ ನಾವು ಬೆಂಬಲ ನೀಡಲು ಸಿದ್ಧರಿದ್ದೇವೆ’ ಎಂದು ಅವರು ಹೇಳಿದರು.

ನರಗುಂದ ಘಟನೆಯ ಬಗ್ಗೆ ಆಡಳಿತ ಮತ್ತು ವಿರೋಧ ಪಕ್ಷಗಳ ನಿರ್ಲಕ್ಷ್ಯದ ಬಗ್ಗೆ ಸಭೆಯಲ್ಲಿ ಧಾರ್ಮಿಕ ಮುಖಂಡರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

LIC
ಭಾರತೀಯ ಜೀವ ವಿಮಾ ನಿಗಮ
भारतीय जीवन बीमा निगम
LIFE INSURANCE CORPORATION OF INDIA

ವಿಭಾಗೀಯ ಕಛೇರಿ–2, ಅಂಚೆ ಪೆಟ್ಟಿಗೆ ಸಂಖ್ಯೆ. 3829,
“ಜೀವನ ಜ್ಯೋತಿ” ಇಂದಿರಾನಗರ 2ನೇ ಹಂತ, ಬೆಂಗಳೂರು – 560038.
ದೂರವಾಣಿ: 080–22966894, 25205044.

ಭಾರತೀಯ ಜೀವ ವಿಮಾ ನಿಗಮದ ಎಲ್ಲಾ ಪಾಲಿಸಿದಾರರು ಮತ್ತು ಸಾರ್ವಜನಿಕರ ಗಮನಕ್ಕೆ

ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ, ನಮ್ಮ Customer Zone ಇದುವರೆಗೆ ಗಿರಿಜಾ ಕಾಂಪ್ಲೆಕ್ಸ್, 9ನೇ ಬ್ಲಾಕ್, 80 ಅಡಿ ಮುಖ್ಯ ರಸ್ತೆ, ಪೊಲೀಸ್ ಠಾಣೆ ಎದುರು, ಕೋರಮಂಗಲ, ಬೆಂಗಳೂರು – 32, ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಈಗ ನಮ್ಮ ಸ್ವಂತ ಆವರಣದಲ್ಲಿರುವ ಕೆಳಕಂಡ ವಿಳಾಸಕ್ಕೆ ಸ್ಥಳಾಂತರಗೊಂಡು ದಿನಾಂಕ : 01–04–2022ದಿಂದ (ಶುಕ್ರವಾರ) ಕಾರ್ಯಾರಂಭಗೊಳ್ಳಲಿದೆ. Customer Zone, ಭಾರತೀಯ ಜೀವ ವಿಮಾ ನಿಗಮ, ನೆಲಮಹಡಿ, ಸಿಎಂಎಲ್ ಕಟ್ಟಡ, ರೆಸಿಡೆನ್ಸಿ ರಸ್ತೆ, ಬೆಂಗಳೂರು – 560025.

ಸ್ಥಳ : ಬೆಂಗಳೂರು
ದಿನಾಂಕ : 31–01–2022
ಸಹಿ/–
ಹಿರಿಯ ವಿಭಾಗಾಧಿಕಾರಿಗಳು

‘ರಾಷ್ಟ್ರೀಯತೆ ಪರಿಕಲ್ಪನೆ ಬದಲಾಗುತ್ತಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆ ಬದಲಾಗಿದ್ದು, ಪಾಕಿಸ್ತಾನ ಕೇಂದ್ರಿತವಾಗುತ್ತಿದೆ. ರಾಷ್ಟ್ರೀಯತೆಯ ಬಗ್ಗೆ ಮಾತನಾಡುವ ಕೆಲವರು ಎಲ್ಲ ವಿಚಾರಕ್ಕೂ ಪಾಕಿಸ್ತಾನಕ್ಕೆ ಹೋಗಿ ಎನ್ನುತ್ತಿದ್ದಾರೆ’ ಎಂದು ಲೇಖಕ ಪುರುಷೋತ್ತಮ ಬಿಳಿಮಲೆ ಬೇಸರ ವ್ಯಕ್ತಪಡಿಸಿದರು.

ನವಕರ್ನಾಟಕ ಪ್ರಕಾಶನ, ಸಮಕಾಲೀನ ಸಾಮಾಜಿಕ ಸಾಂಸ್ಕೃತಿಕ ವೇದಿಕೆ ಮತ್ತು ಎಂ.ಎಸ್. ಕೃಷ್ಣ ಸ್ಮರಣ ಸಂಸ್ಥೆ ಆನ್‌ಲೈನ್ ವೇದಿಕೆಯಲ್ಲಿ ಜಂಟಿಯಾಗಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಬಿ.ಆರ್. ಮಂಜುನಾಥ್ ಅವರ ‘ವಿದ್ಯಾಸಾಗರರ ಮುಗಿಯದ ನಡಿಗೆ’ ಕೃತಿ ಬಿಡುಗಡೆ ಮಾಡಿ, ಮಾತನಾಡಿದರು.

ಪುರುಷೋತ್ತಮ ಬಿಳಿಮಲೆ

‘ಒಂದು ಕಾಲದಲ್ಲಿ ಭಾರತವನ್ನು ಕಟ್ಟಿ, ಜನಪರವಾಗಿದ್ದ ಸಂಸ್ಥೆಗಳೇ ಈಗ ಜನ ವಿರೋಧಿ ಆಗುತ್ತಿವೆ. ರಾಮಕೃಷ್ಣ ಪರಮಹಂಸ ಅವರು ಕಟ್ಟಿದ ಸಂಸ್ಥೆಗಳು ಈಗ ಮತ್ತೆ ಸಂಪ್ರದಾಯ ವಾದಿಗಳಾಗುತ್ತಿವೆ. ಈಶ್ವರಚಂದ್ರ ವಿದ್ಯಾಸಾಗರ ಅವರು ಸಂಸ್ಥೆಗಳನ್ನು ಕಟ್ಟುವ ಬದಲು ಶಾಲೆಗಳನ್ನು ಪ್ರಾರಂಭಿಸಿದರು. ಇದರಿಂದ ಸಮಾಜದಲ್ಲಿ ಸುಧಾರಣೆ ಕಾಣಲು ಸಾಧ್ಯವಾಯಿತು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರ.

‘ವಿದ್ಯಾಸಾಗರ ಅವರು ಬಾಲ್ಯವಿವಾಹ, ಬಹುಪತ್ನಿತ್ವ ಸೇರಿದಂತೆ ವಿವಿಧ ಅನಿಷ್ಟ ಪದ್ಧತಿಗಳನ್ನು ಬುಡಸಮೇತ ತೆಗೆದುಹಾಕಲು ಶ್ರಮಿಸಿದರು. 19ನೇ ಶತಮಾನದ ಇಲ್ಲಿನ ಬರಹಗಾರರೂ ಅದೇ ಹಾದಿಯಲ್ಲಿ ಸಾಗಿದರು. ಬಂಗಾಳ ಮತ್ತು ಕರ್ನಾಟಕದ ಮಣ್ಣಿನ ಸಂಬಂಧ ಸುದೀರ್ಘ ಮತ್ತು ನಿರ್ಣಾಯಕವಾದದ್ದಾಗಿದೆ’ ಎಂದು ಹೇಳಿದರು.

ಕೃತಿಯ ಬಗ್ಗೆ ಮಾತನಾಡಿದ ವಿಶ್ರಾಂತ ಕುಲಪತಿ ಸಬಿಹಾ ಭೂಮಿಗೌಡ, ‘ಈಶ್ವರಚಂದ್ರ ವಿದ್ಯಾಸಾಗರ ಅವರ ಬಗ್ಗೆ ಶಾಲಾ ಪಠ್ಯದಲ್ಲಿ ಹೆಚ್ಚಿನ ಉಲ್ಲೇಖಗಳು ಕಾಣಸಿಗುವುದಿಲ್ಲ. ಇದರಿಂದಾಗಿ ಅವರ ಬಗ್ಗೆ ಓದಿರುವುದು ನೆನಪಿನಲ್ಲಿರುವುದು ಕಡಿಮೆ. ಅವರ ಸಾಮಾಜಿಕ ನಿಲುವು ಮತ್ತು ಸಹಾಯ ಹಸ್ತದ ಗುಣವನ್ನು ಪಾಲಿಸಿಕೊಂಡು ಸಾಗಬೇಕಾಗಿದೆ. ಈಶ್ವರಚಂದ್ರ ಅವರು ಈ ಸಮಾಜಕ್ಕೆ ಮಾದರಿಯಾಗಿದ್ದಾರೆ. ಅವರು ಮಹಿಳೆಯರ ಸಮಸ್ಯೆಗಳ ಬಗ್ಗೆ ಸ್ಪಂದಿಸಿದ ಬಗೆ ಹಾಗೂ ಕೈಗೊಂಡ ಕಾರ್ಯಗಳು ಸದಾ ನೆನಪಿನಲ್ಲಿ ಇರುತ್ತವೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು	17,10,198	▲
ಸಕ್ರಿಯ ಪ್ರಕರಣಗಳು	1,32,171	▲
ಗುಣಮುಖರಾದವರು	15,61,445	▲
ಒಟ್ಟು ಸಾವು	16,581	▲

ದಿನದ ಏರಿಕೆ

ಹೊಸ ಪ್ರಕರಣ	11,938	▼
ಗುಣಮುಖ	10,454	▼
ಸಾವು	14	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



ಕಾಣದ ಅಂತರ

ವಾರಾಂತ್ಯ ದಿನವಾದ ಭಾನುವಾರ ಅವೆನ್ಯೂ ರಸ್ತೆಯಲ್ಲಿ ಜನರು ಅಗತ್ಯ ವಸ್ತುಗಳ ಖರೀದಿಗೆ ಅಂತರ ಮರೆತು ಮುಗಿಬಿದ್ದಿದ್ದರು – ಪ್ರಜಾವಾಣಿ ಚಿತ್ರ

ಬ್ಯಾಡರಹಳ್ಳಿ ಮುಖ್ಯರಸ್ತೆಯಲ್ಲಿ ಅವಘಡ: ಗೂಡ್ಸ್ ವಾಹನ ಚಾಲಕ ಬಂಧನ

ರಸ್ತೆ ಗುಂಡಿಯಿಂದ ಅಪಘಾತ: ಶಿಕ್ಷಕಿ ಸಾವು

ಪ್ರಜಾವಾಣಿ ವಾರ್ತೆ

ಶರ್ಮಿಳಾ

ಬೆಂಗಳೂರು: ಬ್ಯಾಡರಹಳ್ಳಿ ಮುಖ್ಯರಸ್ತೆಯ ಅಂಜನಾನಗರ ವೃತ್ತದಲ್ಲಿ ಭಾನುವಾರ ಅಪಘಾತ ಸಂಭವಿಸಿದ್ದು, ಶರ್ಮಿಳಾ (38) ಎಂಬುವರು ಮೃತಪಟ್ಟಿದ್ದಾರೆ.

'ಶಿಕ್ಷಕಿಯಾಗಿದ್ದ ಶರ್ಮಿಳಾ, ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ. ಅಪಘಾತಕ್ಕೆ ಕಾರಣ ಎನ್ನಲಾದ ಗೂಡ್ಸ್ ವಾಹನ ಚಾಲಕ ಮಾದೇಶ್ ಎಂಬಾತನನ್ನು ವಶಕ್ಕೆ ಪಡೆಯಲಾಗಿದೆ. ಆತನ ವಿರುದ್ಧ ಬ್ಯಾಡರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮಾಗಡಿಗೆ ಸಂಪರ್ಕ ಕಲ್ಪಿಸುವ ಬ್ಯಾಡರಹಳ್ಳಿ ಮುಖ್ಯರಸ್ತೆಯಲ್ಲಿ ಹೆಚ್ಚು ಗುಂಡಿಗಳು ಬಿದ್ದಿವೆ. ದ್ವಿಚಕ್ರ ವಾಹನದಲ್ಲಿ ಹೊರಟಿದ್ದ ಶರ್ಮಿಳಾ, ಗುಂಡಿಯಿಂದಾಗಿ ವಾಹನದ ಸಮೇತ ರಸ್ತೆಯಲ್ಲಿ ಬಿದ್ದಿದ್ದರು. ಅದೇ ರಸ್ತೆಯಲ್ಲಿ ಹೊರಟಿದ್ದ ಗೂಡ್ಸ್ ವಾಹನ, ಶರ್ಮಿಳಾ ಅವರ ಮೈ ಮೇಲೆ ಹರಿದಿತ್ತು ಎನ್ನಲಾಗಿದೆ.'

'ಅಪಘಾತದ ಬಗ್ಗೆ ಸ್ಥಳೀಯರು ಹೇಳಿಕೆ ನೀಡಿದ್ದಾರೆ. ಸ್ಥಳ ಪರಿಶೀಲನೆಯನ್ನೂ ನಡೆಸಲಾಗಿದೆ. ಅಪಘಾತಕ್ಕೆ ರಸ್ತೆಯಲ್ಲಿನ ಗುಂಡಿ ಕಾರಣವೇ ? ಅಥವಾ ಬೇರೆ ಏನಾದರೂ ಕಾರಣವಿದೆಯಾ? ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದೂ ಪೊಲೀಸ್ ಅಧಿಕಾರಿ ಹೇಳಿದರು.

ಸ್ಥಳೀಯರ ಆಕ್ರೋಶ: ಅಪಘಾತವಾದ ಸ್ಥಳದಲ್ಲಿ ಸೇರಿದ್ದ ಸ್ಥಳೀಯರು, 'ಗುಂಡಿಯಿಂದಲೇ ಅಪಘಾತವಾಗಿದೆ' ಎಂದು ಆರೋಪಿಸಿದರು.

'ಹಲವು ಬಾರಿ ಮನವಿ ನೀಡಿದರೂ ಗುಂಡಿ ಮುಚ್ಚಲು ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ' ಎಂದೂ ಆಕ್ರೋಶ ವ್ಯಕ್ತಪಡಿಸಿದರು.

ಇಂದು ಪ್ರತಿಭಟನೆ: ಶಿಕ್ಷಕಿ ಸಾವು ಖಂಡಿಸಿ ಅಪಘಾತ ನಡೆದ ಸ್ಥಳದಲ್ಲಿ ಆಮ್ ಆದ್ಮಿ ಪಾರ್ಟಿ (ಎಎಪಿ) ಕಾರ್ಯಕರ್ತರು ಜನವರಿ 31ರಂದು ಬೆಳಿಗ್ಗೆ 9 ಗಂಟೆಗೆ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದಾರೆ.

'ಅಭಿವೃದ್ಧಿ ಹೊಣೆ ಕೆಆರ್‌ಡಿಸಿಎಲ್‌ಗೆ'

'ಮಾಗಡಿ ಮುಖ್ಯರಸ್ತೆಯು ಮೂಲಭೂತ ಸೌಕರ್ಯ ವಿಭಾಗಕ್ಕೆ ಬರುತ್ತದೆ. ಹೆಚ್ಚು ಸಂಚಾರ ದಟ್ಟಣೆ ಇರುವ ರಸ್ತೆ ಇದಾಗಿದ್ದು, ಕೊಟ್ಟಿಗೇಪಾಳ್ಯದಿಂದ ನೈಸ್ ರಸ್ತೆಯವರೆಗೆ ಅಭಿವೃದ್ಧಿಗೊಳಿಸುವ ಜವಾಬ್ದಾರಿಯನ್ನು ಕೆಆರ್‌ಡಿಸಿಎಲ್ (ಪಿಡಬ್ಲ್ಯುಡಿ) ಅವರಿಗೆ ವಹಿಸಲಾಗಿದೆ' ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದ್ದಾರೆ.

ಅಪಘಾತವಾದ ಸ್ಥಳ ಪರಿಶೀಲನೆ ನಡೆಸಿ ಹಿರಿಯ ಅಧಿಕಾರಿಗಳಿಗೆ ವರದಿ ನೀಡಿರುವ ಅವರು, 'ಅಪಘಾತವಾದ ಸ್ಥಳದಲ್ಲೇ, ಜಲಮಂಡಳಿ ವತಿಯಿಂದ ರಸ್ತೆ ಅಗೆದು ಕುಡಿಯುವ ನೀರಿನ ಪೈಪ್ ಅಳವಡಿಸಲಾಗಿದೆ. ಕಾಮಗಾರಿ ಮುಗಿದ ನಂತರ, ಸ್ಥಳವನ್ನು ಮುಚ್ಚಲಾಗಿದೆ' ಎಂದಿದ್ದಾರೆ.

'ಮಾಗಡಿ ಮುಖ್ಯರಸ್ತೆ ಅಭಿವೃದ್ಧಿಪಡಿಸಲು ಈಗಾಗಲೇ ಟೆಂಡರ್ ಕರೆಯಲಾಗಿದೆ. ತಾಂತ್ರಿಕ ಬಿಡ್ ತೆರೆಯಲಾಗಿದ್ದು, ಅನುಮೋದನೆ ಸರ್ಕಾರದ ಹಂತದಲ್ಲಿ ಬಾಕಿ ಇದೆ. ಅನುಮೋದನೆ ದೊರೆಯುವವರೆಗೂ ರಸ್ತೆ ನಿರ್ವಹಣೆ ಮಾಡುವಂತೆ ಹಾಗೂ ಗುಂಡಿಗಳನ್ನು ಮುಚ್ಚುವಂತೆ ಮೂಲ ಸೌಕರ್ಯ ವಿಭಾಗದವರಿಗೆ ಹೇಳಲಾಗಿದೆ. ಅವರು ಗುಂಡಿಗಳನ್ನು ಮುಚ್ಚಿ ನಿರ್ವಹಣೆ ಮಾಡುತ್ತಿದ್ದಾರೆ' ಎಂದೂ ವರದಿಯಲ್ಲಿ ಹೇಳಲಾಗಿದೆ.

ಬಿಬಿಎಂಪಿಗೆ ತಾಕೀತು ಮಾಡಿದ್ದ ಹೈಕೋರ್ಟ್

ಬೆಂಗಳೂರಿನಲ್ಲಿ ಹೆಚ್ಚಾಗಿರುವ ರಸ್ತೆ ಗುಂಡಿ ಸಂಬಂಧ ಕೋರಮಂಗಲದ ವಿಜಯ್ ಮೆನನ್ ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ಫೆಬ್ರುವರಿ 7ಕ್ಕೆ ಪಾಲಿಕೆಯ ಮುಖ್ಯ ಎಂಜಿನಿಯರ್ ಕೋರ್ಟ್‌ಗೆ ಖುದ್ದು ಹಾಜರಾಗಬೇಕು ಮತ್ತು ಗುಂಡಿ ಮುಚ್ಚುವ ಬಗ್ಗೆ ಹೊಸ ಪ್ರಮಾಣಪತ್ರ ಸಲ್ಲಿಸಬೇಕು' ಎಂದು ತಾಕೀತು ಮಾಡಿತ್ತು.

'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿನ ರಸ್ತೆ ಗುಂಡಿ ಮುಚ್ಚಲು ವಿಫಲವಾಗಿರುವ ಪಾಲಿಕೆ ಎಂಜಿನಿಯರ್‌ಗಳನ್ನು ಜೈಲಿಗೆ ಕಳಿಸಿದರೆ ಬುದ್ಧಿ ಬರುತ್ತದೆ' ಎಂದು ಹೈಕೋರ್ಟ್ ಕಠಿಣ ಎಚ್ಚರಿಕೆ ನೀಡಿತ್ತು.

'ಇವತ್ತು ರಸ್ತೆ ರಿಪೇರಿ ಮಾಡಿದ್ದರೆ ನಾಳೆ ಪುನಃ ಅಗೆಯಲಾಗುತ್ತದೆ. ಇದನ್ನು ಗಮನಿಸಿದರೆ ಪಾಲಿಕೆ ಮತ್ತು ಇತರೆ ನಗರಾಡಳಿತ ಸಂಸ್ಥೆಗಳ ನಡುವೆ ಸಮನ್ವಯತೆ ಇಲ್ಲ ಎಂಬುದು ಕಾಣುತ್ತದೆ' ಎಂದೂ ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿತ್ತು.

ಈ ಹಿಂದೆ ಅಪಘಾತವಾಗಿದ್ದ ಪ್ರಕರಣಗಳು

- **2021ರ ನ. 27:** ಥಣಿಸಂದ್ರ ಮುಖ್ಯರಸ್ತೆಯಲ್ಲಿ ರಸ್ತೆ ಗುಂಡಿಯಲ್ಲಿ ಆಯತಪ್ಪಿ ಬಿದ್ದ ಸ್ಕೂಟರ್ ಸವಾರ ಅಜೀಂ ಅಹ್ಮದ್ (21) ಎಂಬುವರಿಗೆ ಗೂಡ್ಸ್ ವಾಹನವೊಂದು ಡಿಕ್ಕಿ ಹೊಡೆದಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಅಜೀಂ, ಚಿಕಿತ್ಸೆಗೆ ಸ್ಪಂದಿಸದೇ ಮೃತಪಟ್ಟಿದ್ದರು
- **2021ರ ಸೆಪ್ಟೆಂಬರ್ 7:** ಕಾಮಾಕ್ಷಿಪಾಳ್ಯ ಸಂಚಾರ ಠಾಣೆ ವ್ಯಾಪ್ತಿಯ ಮಂಗನಹಳ್ಳಿ ಮುಖ್ಯರಸ್ತೆಯಲ್ಲಿ ಗುಂಡಿಯಿಂದಾಗಿ ದ್ವಿಚಕ್ರ ವಾಹನ ಉರುಳಿ ಬಿದ್ದಿದ್ದು, ಮೈಕೊ ಲೇಔಟ್‌ನ ಬಿಸ್ಮಿಲ್ಲಾ ನಗರದ ಸವಾರ ಖುರ್ಷಿದ್ ಅಹ್ಮದ್ (65) ಎಂಬುವರು ಮೃತಪಟ್ಟಿದ್ದರು

ಸುದ್ದಿ 2 ನಿಮಿಷ

14 ವರ್ಷಗಳ ನಂತರ ಸಿಕ್ಕಿಬಿದ್ದ ಕೈದಿ

ಬೆಂಗಳೂರು: ಪೆರೋಲ್ ಮೇಲೆ ಜೈಲಿನಿಂದ ಹೊರಬಂದು ವಾಪಸು ಹೋಗದೇ 14 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಕೈದಿ ಕರುಣಾಕರ್ (48) ಎಂಬಾತನನ್ನು ಮಡಿವಾಳ ಪೊಲೀಸರು ಬಂಧಿಸಿದ್ದಾರೆ.

'ಹಾವೇರಿ ಜಿಲ್ಲೆಯ ಹಾನಗಲ್‌ನ ಕರುಣಾಕರ್, ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲಿ 1998ರಲ್ಲಿ ನಡೆದಿದ್ದ ಸಂಜೀವ್ ಎಂಬುವರ ಕೊಲೆ ಪ್ರಕರಣದ ಅಪರಾಧಿಯಾಗಿದ್ದ. ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ' ಎಂದು ಪೊಲೀಸರು ಹೇಳಿದರು.

'ತಾಯಿಗೆ ಹುಷಾರಿಲ್ಲದ ಕಾರಣ ನೀಡಿದ್ದ ಕರುಣಾಕರ್, 2008ರಲ್ಲಿ ಪೆರೋಲ್ ಮೇಲೆ ಜೈಲಿನಿಂದ ಹೊರಬಂದಿದ್ದ. ಪೆರೋಲ್ ಅವಧಿ ಮುಗಿದರೂ ವಾಪಸು ಜೈಲಿಗೆ ಬಂದಿರಲಿಲ್ಲ. ಆತನ ವಿರುದ್ಧ ಜೈಲಿನ ಅಧಿಕಾರಿಗಳು ಮಡಿವಾಳ ಠಾಣೆಗೆ ದೂರು ನೀಡಿದ್ದರು.'

'ಕರುಣಾಕರ್, ಹಾವೇರಿಯಲ್ಲಿ ಹೋಟೆಲ್ ನಡೆಸುತ್ತಿದ್ದ. ಈ ಬಗ್ಗೆ ಮಾಹಿತಿ ಇತ್ತೀಚೆಗೆ ಲಭ್ಯವಾಗಿತ್ತು. ಪೊಲೀಸರ ತಂಡ ಹಾನಗಲ್‌ಗೆ ಹೋಗಿ ಆರೋಪಿಯನ್ನು ಬಂಧಿಸಿ ನಗರಕ್ಕೆ ಕರೆತಂದಿದೆ' ಎಂದೂ ಪೊಲೀಸರು ತಿಳಿಸಿದರು.

ಕಂದಾಯ ಇಲಾಖೆ ಸಿಬ್ಬಂದಿ ಪ್ರತಿಭಟನೆ

ಬೆಂಗಳೂರು: ಕರ್ತವ್ಯನಿರತ ತಹಶೀಲ್ದಾರ್ ಮೇಲಿನ ಹಲ್ಲೆ ಖಂಡಿಸಿ ಕಂದಾಯ ಇಲಾಖೆ ಸಿಬ್ಬಂದಿ ಈಚೆಗೆ ಸಾಂಕೇತಿಕ ಪ್ರತಿಭಟನೆ ನಡೆಸಿದರು.

ಹುಮನಾಬಾದ್‌ನಲ್ಲಿ ತಹಶೀಲ್ದಾರ್ ಅವರ ಮೇಲೆ ಸಂಘಟನೆಯೊಂದರ ಪದಾಧಿಕಾರಿಗಳು ನಡೆಸಿರುವ ಹಲ್ಲೆ ಖಂಡನೀಯ. ಕೋಲಾರ ಜಿಲ್ಲೆಯ ಬಂಗಾರಪೇಟೆಯಲ್ಲಿ ತಹಶೀಲ್ದಾರ್ ಅವರನ್ನು ಚೂರಿಯಿಂದ ಇರಿದು ಹತ್ಯೆ ಮಾಡಲಾಗಿತ್ತು. ಈ ರೀತಿಯ ಘಟನೆಗಳು ಮರುಕಳಿಸುತ್ತಿದ್ದು, ತಹಶೀಲ್ದಾರ್ ಕಚೇರಿಗೆ ಪೊಲೀಸರನ್ನು ನಿಯೋಜಿಸಬೇಕು ಎಂದು ಒತ್ತಾಯಿಸಿದರು.

ಮನವಿ ಸ್ವೀಕರಿಸಿದ ಬೆಂಗಳೂರು ಉತ್ತರ ತಹಶೀಲ್ದಾರ್ ಬಾಲಕೃಷ್ಣ ಅವರು ಜಿಲ್ಲಾಧಿಕಾರಿ ಅವರ ಮೂಲಕ ಸರ್ಕಾರಕ್ಕೆ ಕಳುಹಿಸುವುದಾಗಿ ತಿಳಿಸಿದರು.

ನಾಳೆ ಪುರಂದರದಾಸರ ಆರಾಧನಾ ಮಹೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀನಿವಾಸ ಉತ್ಸವ ಬಳಗವು ದಾಸ ಸಾಹಿತ್ಯ ಪ್ರಚಾರ ಮಾಧ್ಯಮದ ಸಹಯೋಗದಲ್ಲಿ ಫೆಬ್ರುವರಿ 1ರಂದು 'ಪುರಂದರದಾಸರ ಆರಾಧನಾ ಮಹೋತ್ಸವ'ವನ್ನು ಬಸವನಗುಡಿಯ ಉತ್ತರಾದಿ ಮಠದ ಬಳಿ ಇರುವ ಸತ್ಯಪ್ರಮೋದ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದೆ.

ಮಧ್ಯಾಹ್ನ 3 ಗಂಟೆಗೆ ಯಲಹಂಕ ವಿಶ್ವ ಮಧ್ವ ಮಹಾ ಪರಿಷತ್ ಅವರಿಂದ ಭಜನೆ, 3.30ಕ್ಕೆ ರೇಖಾ ಪದಕಿ ತಂಡದಿಂದ ಭಜನೆ, 4ಕ್ಕೆ ಜಯನಗರದ ಹಿರಣ್ಮಯಿ ಸಂಗೀತ ಶಾಲೆ ಹಾಗೂ 4.30ಕ್ಕೆ ಸಂತವಾಣಿ ಸುಧಾಕರ್ ತಂಡದಿಂದ ಸಮೂಹ ಗಾಯನ, 5ಕ್ಕೆ ಸುವರ್ಣ ಮೋಹನ್ ತಂಡದಿಂದ ಸಮೂಹ ಗಾಯನ, 5.30ರಿಂದ ಉಡುಪಿ ಪುತ್ತಿಗೆ ಮಠದ ವಾದಿರಾಜ ಸಂಶೋಧನಾ ಪ್ರತಿಷ್ಠಾನದ ನಿರ್ದೇಶಕ ಬಿ.ಗೋಪಾಲಾಚಾರ್ಯ ಅವರಿಂದ ಉಪನ್ಯಾಸ ಇರಲಿದೆ.

'ಸಂಜೆ 6 ಗಂಟೆಗೆ ನಡೆಯಲಿರುವ ವೇದಿಕೆ ಕಾರ್ಯಕ್ರಮವನ್ನು ಜಯತೀರ್ಥ ವಿದ್ಯಾಪೀಠದ ಪ್ರಾಂಶುಪಾಲರಾದ ಸತ್ಯಧ್ಯಾನಾಚಾರ್ಯ ಕಟ್ಟಿ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಉತ್ತರಾದಿಮಠದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಂಡಿತ ವಿದ್ಯಾದೀಶಚಾರ್ಯ ಗುತ್ತಲ್, ಶಿಕ್ಷಣ ತಜ್ಞ ಎ.ಎಸ್. ಸಮೀರ ಸಿಂಹ, ಗಾಯನ ಸಮಾಜದ ಅಧ್ಯಕ್ಷ ಎಂ.ಆರ್. ವಿ.ಪ್ರಸಾದ್ ಭಾಗವಹಿಸಲಿದ್ದಾರೆ. ನಂತರ ಪುರಂದರದಾಸರ ನವರತ್ನ ಮಾಲಿಕೆ ಗೀತಗಾಯನ ನಡೆಯಲಿದೆ' ಎಂದು ಶ್ರೀನಿವಾಸ ಉತ್ಸವ ಬಳಗದ ಅಧ್ಯಕ್ಷ ಟಿ.ವಾದಿರಾಜ್ ತಿಳಿಸಿದ್ದಾರೆ .

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಶಾಸಕ ಪತ್ರ

ಮೇಲ್ಸೇತುವೆ ದುರಸ್ತಿ ವಿಳಂಬಕ್ಕೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಂತ ಹೆಚ್ಚಿನ ವಾಹನ ದಟ್ಟಣೆ ಇರುವ ತುಮಕೂರು ರಸ್ತೆಯ ಮೇಲ್ಸೇತುವೆಯಲ್ಲಿ ಕೈಗೊಂಡಿರುವ ದುರಸ್ತಿ ಕಾಮಗಾರಿ ವಿಳಂಬವಾಗುತ್ತಿರುವ ಬಗ್ಗೆ ದಾಸರಹಳ್ಳಿ ಶಾಸಕ ಆರ್. ಮಂಜುನಾಥ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಪ್ರಾದೇಶಿಕ ಅಧಿಕಾರಿ ಮತ್ತು ಯೋಜನಾ ನಿರ್ದೇಶಕರಿಗೆ ಪತ್ರ ಬರೆದಿರುವ ಅವರು, '102ನೇ ಮತ್ತು 103ನೇ ಕಂಬಗಳಲ್ಲಿ ಕಾಣಿಸಿಕೊಂಡ ತಾಂತ್ರಿಕ ತೊಂದರೆಯ ಕಾರಣಕ್ಕೆ ಈ ಮೇಲ್ಸೇತುವೆ ಮೇಲೆ ಸಂಚಾರವನ್ನು ಕಳೆದ ವರ್ಷ ಡಿಸೆಂಬರ್ 25ರಿಂದ ನಿರ್ಬಂಧಿಸಲಾಗಿದೆ. ಆದರೆ, ಒಂದು ತಿಂಗಳು ಮೀರಿದರೂ ಇನ್ನೂ ಕಾಮಗಾರಿ ಮುಗಿದಿಲ್ಲ' ಎಂದು ಕಿಡಿಕಾರಿದ್ದಾರೆ.

'ಕೇವಲ ಏಳು ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವುದಾಗಿ ಸಂಚಾರ ಪೊಲೀಸರಿಗೆ ಎನ್‌ಎಚ್‌ಎಐ ತಿಳಿಸಿತ್ತು. ಈ ಗಡುವು ಪಾಲಿಸಲು ಪ್ರಾಧಿಕಾರಕ್ಕೆ ಸಾಧ್ಯವಾಗಿಲ್ಲ. ರಾಜ್ಯದ ಸುಮಾರು 22 ಜಿಲ್ಲೆಗಳು ಮತ್ತು ನೆರೆಯ ರಾಜ್ಯಗಳ ವಿವಿಧೆಡೆಯಿಂದ ಬರುವ ಸುಮಾರು ಎರಡು ಲಕ್ಷ ವಾಹನಗಳು ಈ ಮಾರ್ಗದಲ್ಲಿ ಸಂಚರಿಸುತ್ತವೆ. ಆದರೆ, ಮೇಲ್ಸೇತುವೆ ಮೇಲೆ ಸಂಚಾರ ನಿರ್ಬಂಧಿಸಿರುವುದರಿಂದ ಸರ್ವಿಸ್ ರಸ್ತೆಯಲ್ಲಿ ಸಂಚಾರ ದಟ್ಟಣೆ ತೀವ್ರವಾಗುತ್ತಿದೆ. ಗಂಭೀರ ಸ್ಥಿತಿಯಲ್ಲಿರುವ ರೋಗಿಗಳು ಮತ್ತು ಅಪಘಾತದಲ್ಲಿ ತೀವ್ರ ಗಾಯಗೊಂಡವರನ್ನು ಕರೆದೊಯ್ಯುವ ಆಂಬುಲೆನ್ಸ್‌ಗಳ ಸುಗಮ ಸಂಚಾರಕ್ಕೂ ಅಡ್ಡಿಯಾಗುತ್ತಿದೆ. ಇದರಿಂದ, ಸಕಾಲಕ್ಕೆ ಆಸ್ಪತ್ರೆಗೆ ದಾಖಲಿಸಲು ಸಾಧ್ಯವಾಗದೆ ಹಲವರು ಜೀವ ಕಳೆದುಕೊಂಡಿದ್ದಾರೆ. ಸಂಚಾರ ದಟ್ಟಣೆಯಿಂದ ಸಂಭವಿಸಿದ ಸಾವು–ನೋವುಗಳಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವೇ ಹೊಣೆ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. 'ಜತೆಗೆ, ಕಾನೂನುಬಾಹಿರವಾಗಿ ಟೋಲ್‌ಗಳಲ್ಲಿ ಸಾರ್ವಜನಿಕರಿಂದ ಹಣ ಸಂಗ್ರಹಿಸುತ್ತಿರುವುದನ್ನು ಸ್ಥಗಿತಗೊಳಿಸಲು ಸಹ ಕ್ರಮಕೈಗೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

ತುಮಕೂರು ರಸ್ತೆ ಮೇಲ್ಸೇತುವೆ

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಮತ್ತೆ ಶುರುವಾಯಿತೇ ಪಕ್ಷಾಂತರ?

ಭಾಗವಹಿಸುವವರು:

ಎನ್.ರವಿಕುಮಾರ್, ಶಾಸಕರು, ಪ್ರಧಾನ ಕಾರ್ಯದರ್ಶಿ, ಬಿಜೆಪಿ ರಾಜ್ಯ ಘಟಕ. **ಐಶ್ವರ್ಯ ಮಹದೇವ್,** ವಕ್ತಾರರು, ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ). **ಎಚ್.ಎನ್. ದೇವರಾಜು,** ವಕ್ತಾರರು, ಜೆಡಿಎಸ್ ರಾಜ್ಯ ಘಟಕ

ಸಂವಾದ ಬೆಳಿಗ್ಗೆ 11ರಿಂದ 12

ಪಾಡ್‌ಕಾಸ್ಟ್: ಬೆಳಿಗ್ಗೆ 9 **ಪ್ರಚಲಿತ,** ಬೆಳಿಗ್ಗೆ 9.30 **ಸಂಪಾದಕೀಯ.** ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್.**

ಪ್ರಜಾಮತ: ರಾತ್ರಿ 9 **ಚುನಾವಣೆ ವಾರ್ತೆ**

ಪ್ರಜಾವಾಣಿ ಕನ್ನಡ ಧ್ವನಿ

ಅರ್ಜಿ ಭರ್ತಿಗೆ ವಿಶೇಷ ತರಬೇತಿ

ಬೆಂಗಳೂರು: 'ಸಿಇಟಿ, ನೀಟ್, ಜೆಇಇ ಮುಂತಾದ ಉನ್ನತ ಹಂತದ ಪರೀಕ್ಷೆಗಳಿಗೆ ಅರ್ಜಿ ತುಂಬುವಾಗ ಅಭ್ಯರ್ಥಿಗಳು ತಪ್ಪು ಮಾಡುತ್ತಿದ್ದಾರೆ. ಹೀಗಾಗಿ, ಪದವಿಪೂರ್ವ ಮತ್ತು ಪದವಿ ಹಂತಗಳಲ್ಲಿ ಆಯಾ ಕಾಲೇಜುಗಳಲ್ಲಿಯೇ ವಿಶೇಷ ತರಬೇತಿ ನೀಡಲು ಉದ್ದೇಶಿಸಲಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದ್ದಾರೆ.

'ಅಭ್ಯರ್ಥಿಗಳು ಹೆಚ್ಚಾಗಿ ಈ ಅರ್ಜಿಗಳಲ್ಲಿ ವಾರ್ಷಿಕ ಆದಾಯ, ಹೆಸರು, ವರ್ಗ, ಜನ್ಮ ದಿನಾಂಕ, ಕೋರ್ಸ್ ಆಯ್ಕೆ ಮುಂತಾದ ಮಾಹಿತಿಗಳನ್ನು ಭರ್ತಿ ಮಾಡುವಾಗ ತಪ್ಪು ಮಾಡುತ್ತಿರುವುದು ಕಂಡುಬಂದಿದೆ. ಇದರಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ತಿರಸ್ಕೃತವಾಗುತ್ತಿವೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಅರ್ಜಿಗಳು ತಿರಸ್ಕೃತವಾಗುತ್ತಿರುವುದರಿಂದ ಅಭ್ಯರ್ಥಿಗಳು ಉನ್ನತ ಶಿಕ್ಷಣದ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ಇದನ್ನು ಗಮನಿಸಿ 'ಗೆಟ್ ಸೆಟ್ ಗೋ' ಮೂಲಕ ತರಬೇತಿ ನೀಡುವ ವ್ಯವಸ್ಥೆ ಮಾಡಲಾಗುತ್ತಿದೆ' ಎಂದು ವಿವರಿಸಿದ್ದಾರೆ.

'ಈ ಪರೀಕ್ಷೆಗಳಿಗೆ ಹೆಚ್ಚಾಗಿ ಎಂಜಿನಿಯರಿಂಗ್, ವೈದ್ಯಕೀಯ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುತ್ತಿದ್ದು, ಇವರಿಗೆ ಗೆಟ್ ಸೆಟ್ ಗೋ ಮೂಲಕ ತರಬೇತಿಯಿಂದ ಪ್ರಯೋಜನವಾಗಲಿದೆ. ತರಬೇತಿಯ ಜತೆಗೆ ಸಾಮಾಜಿಕ ಮಾಧ್ಯಮಗಳು, ವೆಬ್‌ಸೈಟ್‌ಗಳು ಮತ್ತು ದಿನಪತ್ರಿಕೆಗಳಲ್ಲಿ ಈ ಅರ್ಜಿ ತುಂಬುವ ಸರಿಯಾದ ವಿಧಾನದ ಬಗ್ಗೆ ವ್ಯಾಪಕವಾಗಿ ಜಾಹೀರಾತು ಕೂಡ ನೀಡುವ ಮೂಲಕ ಅರಿವು ಮೂಡಿಸಲಾಗುವುದು' ಎಂದು ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂಜಿನಿಯರಿಂಗ್ ಸೀಟಿನ ಆಮಿಷ, ವಂಚನೆ: ಬಂಧನ

ಬೆಂಗಳೂರು: ನಗರದ ಎಂಜಿನಿಯರಿಂಗ್ ಕಾಲೇಜೊಂದರಲ್ಲಿ ಸೀಟು ಕೊಡಿಸುವ ಆಮಿಷವೊಡ್ಡಿ ₹ 1.27 ಲಕ್ಷ ಪಡೆದು ವಂಚಿಸಿದ್ದ ಆರೋಪದಡಿ ರಾಜೇಶ್ವರ್ ಎಂಬಾತನನ್ನು ಈಶಾನ್ಯ ವಿಭಾಗದ ಸೈಬರ್ ಕ್ರೈಂ ಪೊಲೀಸರು ಬಂಧಿಸಿದ್ದಾರೆ.

'ಎಂಜಿನಿಯರಿಂಗ್ ವಿದ್ಯಾರ್ಥಿನಿಯೊಬ್ಬರ ಪೋಷಕರು ದೂರು ನೀಡಿದ್ದರು. ಅದರನ್ವಯ ತನಿಖೆ ಕೈಗೊಂಡು ಆರೋಪಿಯನ್ನು ಬಂಧಿಸಲಾಗಿದೆ. 3 ಮೊಬೈಲ್, 4 ಲ್ಯಾಪ್‌ಟಾಪ್, 7 ಸಿಮ್ ಕಾರ್ಡ್ ಹಾಗೂ 27 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಾಲೇಜಿನಲ್ಲಿ ಕೆಲ ಸೀಟುಗಳು ಖಾಲಿ ಇವೆ. ಹಣ ನೀಡಿದರೆ ಸೀಟು ಸಿಗುತ್ತದೆ' ಎಂಬುದಾಗಿ ಆರೋಪಿ ಹೇಳಿದ್ದ. ಆತನ ಮಾತು ನಂಬಿದ್ದ ಪೋಷಕರು, ಜ. 13ರಂದು ₹ 1.27 ಲಕ್ಷ ನೀಡಿದ್ದರು. ಹಣ ಪಡೆದ ನಂತರ ನಾಪತ್ತೆಯಾಗಿದ್ದ ಆರೋಪಿ, ಮೊಬೈಲ್ ಸಹ ಸ್ವಿಚ್ ಆಫ್ ಮಾಡಿದ್ದ. ನೊಂದ ಪೋಷಕರು, ಠಾಣೆಗೆ ದೂರು ನೀಡಿದ್ದರು' ಎಂದೂ ತಿಳಿಸಿದರು.

ಉಪ ಕಾರ್ಯದರ್ಶಿ– 4 ವಿಭಾಗದ ನೌಕರರು ಭಾಗಿ

ಹಳೆಯ ದರಕ್ಕೆ 17 ಜನರಿಗೆ ನಿವೇಶನ ಹಂಚಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಉಪ ಕಾರ್ಯದರ್ಶಿ– 4 ವಿಭಾಗದಿಂದ ಮತ್ತೊಂದು ಅಕ್ರಮ
- ಅರ್ಕಾವತಿ ಬಡಾವಣೆಯಲ್ಲಿ ನಿವೇಶನ ಹಂಚಿಕೆ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟ
- ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದ ಜಾಗೃತ ದಳದ ಎಸ್‌ಪಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಅರ್ಕಾವತಿ ಬಡಾವಣೆಯಲ್ಲಿ ಹಳೆಯ ದರಕ್ಕೆ 17 ಜನರಿಗೆ ನಿವೇಶನಗಳನ್ನು ಅಕ್ರಮವಾಗಿ ಹಂಚಿರುವ ಪ್ರಕರಣದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉಪಕಾರ್ಯದರ್ಶಿ-4 ಹಾಗೂ ಆರು ನೌಕರರು ಭಾಗಿಯಾಗಿರುವುದು ಪ್ರಾಧಿಕಾರ ನಡೆಸಿದ ಆಂತರಿಕ ವಿಚಾರಣೆಯಿಂದ ದೃಢಪಟ್ಟಿದೆ.

ಈ ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹ ದಳದಿಂದ (ಎಸಿಬಿ) ತನಿಖೆ ನಡೆಸಲು ಕ್ರಮ ಕೈಗೊಳ್ಳಬಹುದು ಎಂದು ಬಿಡಿಎ ಆಯುಕ್ತ ಎಂ.ಬಿ.ರಾಜೇಶ ಗೌಡ ಅವರು ನಗರಾಭಿವೃದ್ಧಿ ಇಲಾಖೆಗೆ 2022ರ ಜನವರಿ 17ರಂದು ಶಿಫಾರಸು ಮಾಡಿದ್ದಾರೆ. ಮುಂದಿನ ಕ್ರಮಕ್ಕಾಗಿ ನಗರಾಭಿವೃದ್ಧಿ ಇಲಾಖೆಯು ಮುಖ್ಯಮಂತ್ರಿ ಸಚಿವಾಲಯಕ್ಕೆ ಕಡತ ಕಳುಹಿಸಿದೆ. ತನಿಖೆ ನಡೆಸಲು ಮುಖ್ಯಮಂತ್ರಿ ಅವರು ಅನುಮೋದನೆ ನೀಡಬೇಕಿದೆ.

ಬಿಡಿಎ ಉಪ ಕಾರ್ಯದರ್ಶಿ– 4 ಆಗಿದ್ದ ಎಚ್.ಎಸ್. ಸತೀಶ್ ಬಾಬು, ವಿಶೇಷ ಭೂಸ್ವಾಧೀನಾಧಿಕಾರಿ ಮಲ್ಲಿಕಾರ್ಜುನ, ಉಪಕಾರ್ಯದರ್ಶಿ– 4 ವಿಭಾಗದ ಮೇಲ್ವಿಚಾರಕ ಕೆ.ಎಂ.ರವಿಶಂಕರ್, ದ್ವಿತೀಯದರ್ಜೆ ಸಹಾಯಕಿ ಬಿ.ಎಸ್. ಪೂರ್ಣಿಮಾ, ಆರ್ಥಿಕ ಸದಸ್ಯರ ವಿಭಾಗದ ಲೆಕ್ಕ ಅಧೀಕ್ಷಕಿ ಸುಜಾತಾ, ಆರ್ಥಿಕ ಸದಸ್ಯರ ವಿಭಾಗದ ಪ್ರಥಮದರ್ಜೆ ಲೆಕ್ಕ ಸಹಾಯಕ ಜಯರಾಮ್ ಅವರು ಅಕ್ರಮದಲ್ಲಿ ಶಾಮೀಲಾಗಿದ್ದಾರೆ ಎಂದು ಆಯುಕ್ತರು ಶಿಫಾರಸು ಮಾಡಿದ್ದಾರೆ.

ಕೆ.ಆರ್.ಪುರ ಹೋಬಳಿಯ ಕೆ.ನಾರಾಯಣಪುರ ಗ್ರಾಮದಲ್ಲಿ ಅರ್ಕಾವತಿ ಬಡಾವಣೆ ನಿರ್ಮಾಣಕ್ಕೆ ಭೂಸ್ವಾಧೀನ ಮಾಡಲಾಗಿದೆ. ಪ್ರಾಧಿಕಾರದ ನಿರ್ಣಯಕ್ಕೆ ವಿರುದ್ಧವಾಗಿ ಇಲ್ಲಿ 17 ಜನರಿಗೆ 40x60 ಅಳತೆಯ ನಿವೇಶನಗಳನ್ನು ಈ ಅಧಿಕಾರಿಗಳು ಹಂಚಿದ್ದರು. ಈ ಪ್ರಕರಣದ ಬಗ್ಗೆ ಪ್ರಾಧಿಕಾರದ ಎಸ್‌ಟಿಎಫ್ ಮತ್ತು ಜಾಗೃತ ದಳದಿಂದ ಆಂತರಿಕ ತನಿಖೆ ನಡೆಸಲಾಗಿತ್ತು. ಅಧಿಕಾರಿಗಳು ನಿವೇಶನಗಳನ್ನು ಹಳೆಯ ದರಕ್ಕೆ ಹಂಚಿಕೆ ಮಾಡಿ ಪ್ರಾಧಿಕಾರಕ್ಕೆ ನಷ್ಟ ಉಂಟುಮಾಡಿದ್ದಾರೆ ಎಂದು ಜಾಗೃತ ದಳದ ಎಸ್‌ಪಿ ಅವರು 2019ರ ಆಗಸ್ಟ್ 1ರಂದು ವಿಚಾರಣಾ ವರದಿ ಸಲ್ಲಿಸಿದ್ದರು.

ಈ ಅಧಿಕಾರಿಗಳು ಟ್ರಿನಿಟಿ ವಿಲೇಜ್ ಫ್ಲ್ಯಾಟ್ಸ್ ಓನರ್ಸ್ ಅಸೋಸಿಯೇಷನ್ಸ್ ಜತೆಗೆ ಶಾಮೀಲಾಗಿ ಅಕ್ರಮವಾಗಿ ನಿವೇಶನಗಳನ್ನು ಹಂಚಿದ್ದಾರೆ. ಅಸೋಸಿಯೇಷನ್ಸ್‌ಗೆ ಸಂಬಂಧಿಸಿದ ಮೂಲ ಕಡತಗಳನ್ನು ಈಗಾಗಲೇ ಎಸಿಬಿಗೆ ಸಲ್ಲಿಸಲಾಗಿದೆ ಎಂದು ಆಯುಕ್ತರು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಆರು ಅಧಿಕಾರಿಗಳು/ನೌಕರರ ವಿರುದ್ಧ ಎಸಿಬಿಯಿಂದ ವಿಚಾರಣೆ/ತನಿಖೆ ನಡೆಸಲು 1988ರ ಭ್ರಷ್ಟಾಚಾರ ತಡೆ ಕಾಯ್ದೆಯ ಕಲಂ 17(ಎ) ರನ್ವಯ ಅನುಮತಿ ನೀಡಬಹುದು ಎಂದು ಆಯುಕ್ತರು ತಿಳಿಸಿದ್ದಾರೆ.

ಶ್ವಾನದ ಮೇಲೆ ಕಾರು ಹರಿಸಿದ ಚಾಲಕ: ಎಫ್‌ಐಆರ್

ಬೆಂಗಳೂರು: ರಸ್ತೆ ಪಕ್ಕದಲ್ಲಿ ಮಲಗಿದ್ದ ಶ್ವಾನದ ಮೇಲೆ ಚಾಲಕನೊಬ್ಬ ಕಾರು ಹರಿಸಿದ್ದು, ಈ ಬಗ್ಗೆ ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜಯನಗರದ ಒಂದನೇ ಹಂತದಲ್ಲಿ ಜ. 29ರಂದು ಈ ಘಟನೆ ನಡೆದಿದೆ. ತೀವ್ರ ಗಾಯಗೊಂಡು ಶ್ವಾನ ಮೃತಪಟ್ಟಿದೆ. ಸ್ಥಳೀಯ ನಿವಾಸಿಯೊಬ್ಬರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮನೆಯೊಂದರ ಮುಂದೆ ಶ್ವಾನ ಮಲಗಿತ್ತು. ಕೆಎ 51 ಎಂಎ 0045 ನೋಂದಣಿ ಸಂಖ್ಯೆಯ ಆಡಿ ಕಾರು ಸ್ಥಳಕ್ಕೆ ಬಂದಿತ್ತು. ಚಾಲಕ ನಿರ್ಲಕ್ಷ್ಯದಿಂದ ಕಾರು ಚಲಾಯಿಸಿ ಶ್ವಾನದ ಮೇಲೆ ಹರಿಸಿ ಪರಾರಿಯಾಗಿದ್ದಾನೆ. ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಶ್ವಾನದ ಸಾವಿಗೆ ಕಾರಣವಾಗಿರುವ ಕಾರು, ಉದ್ಯಮಿ ಡಿ.ಕೆ. ಆದಿಕೇಶವಲು ಮೊಮ್ಮಗನಿಗೆ ಸೇರಿದ್ದೆಂದು ಹೇಳಲಾಗುತ್ತಿದೆ. ನೋಂದಣಿ ಸಂಖ್ಯೆ ಆಧರಿಸಿ, ಮಾಲೀಕರ ನಿಖರ ಮಾಹಿತಿ ಕಲೆ ಹಾಕಲಾಗುತ್ತಿದೆ. ಕಾರು ಚಾಲನೆ ಯಾರು ಮಾಡುತ್ತಿದ್ದರೆಂಬುದನ್ನೂ ಪತ್ತೆ ಮಾಡಬೇಕಿದೆ' ಎಂದೂ ಮೂಲಗಳು ಹೇಳಿವೆ.

ಘಟನೆ ಬಗ್ಗೆ ಟ್ವೀಟ್ ಮಾಡಿರುವ ಪಶುಸಂಗೋಪನಾ ಇಲಾಖೆ, 'ಜಯನಗರದ 1ನೇ ಹಂತದಲ್ಲಿ ನಡೆದಿರುವ ಘಟನೆ ಬಗ್ಗೆ ದೂರು ದಾಖಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ ' ಎಂದಿದೆ.

ಅಕ್ಷಯ ಪಾತ್ರೆ ಸಂಸ್ಥೆ ವತಿಯಿಂದಕೆ.ಆರ್.ಮಾರುಕಟ್ಟೆ ಬಳಿ ಬಡವರು ಮತ್ತು ನಿರಾಶ್ರಿತರಿಗೆ ಆಹಾರದ ಪೊಟ್ಟಣಗಳನ್ನು ಭಾನುವಾರ ಉಚಿತವಾಗಿ ವಿತರಿಸಲಾಯಿತು – ಪ್ರಜಾವಾಣಿ ಚಿತ್ರ

ವೈದ್ಯಕೀಯ, ದಂತ ವೈದ್ಯಕೀಯ ಶುಲ್ಕ ಹೆಚ್ಚಳ ಇಲ್ಲ

ಬೆಂಗಳೂರು: ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಶುಲ್ಕವನ್ನು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಸರ್ಕಾರ ಈ ಬಾರಿ ಹೆಚ್ಚಿಸಿಲ್ಲ.

ಖಾಸಗಿ ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿಗಳು ಕನಿಷ್ಠ ಶೇ 30ರಷ್ಟು ಶುಲ್ಕ ಹೆಚ್ಚಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದವು. ಸರ್ಕಾರ ಈ ಆಡಳಿತ ಮಂಡಳಿಗಳನ್ನು ಮನವೊಲಿಸುವಲ್ಲಿ ಯಶಸ್ವಿಯಾಗಿದೆ.

ಪ್ರಸಕ್ತ ಶೈಕ್ಷಣಿಕ ವರ್ಷದ ಶುಲ್ಕದ ವಿವರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ಸರ್ಕಾರ ನೀಡಿದೆ. ಕೆಇಎ ಈ ಶುಲ್ಕದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಭಾನುವಾರ ಪ್ರಕಟಿಸಿದೆ.

ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿನ ಸರ್ಕಾರಿ ಕೋಟಾದ ಎಂಬಿಬಿಎಸ್ ಸೀಟುಗಳಿಗೆ ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿನ ಶುಲ್ಕ ಯಥಾ ಸ್ಥಿತಿ ಮುಂದುವರಿಯಲಿದೆ. ವಿದ್ಯಾರ್ಥಿಗಳು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರಿ ಕೋಟಾ ಸೀಟಿಗೆ ಪ್ರತಿ ವರ್ಷ ₹ 1,28,746 ಮತ್ತು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಪ್ರತಿ ವರ್ಷ ₹59,800 ಪಾವತಿ ಸಬೇಕು. ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಖಾಸಗಿ ಕಾಲೇಜುಗಳಲ್ಲಿ ₹83,356 ಶುಲ್ಕ ನಿಗದಿಪಡಿಸಲಾಗಿದೆ.

ಜ.24ರಂದು ನಡೆದಿದ್ದ ಘಟನೆ: ಸಾರ್ವಜನಿಕರಿಂದ ಆಕ್ರೋಶ

ಅಂಗವಿಕಲೆಗೆ ಒದ್ದಿದ್ದ ಎಎಸ್‌ಐ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್‌ಗೆ ಕಲ್ಲಿನಿಂದ ಹೊಡೆದರೆಂಬ ಕಾರಣಕ್ಕೆ ಅಂಗವಿಕಲ ಮಹಿಳೆಗೆ ಒದ್ದು ಹಲ್ಲೆ ಮಾಡಿದ್ದ ಆರೋಪದಡಿ ಹಲಸೂರು ಗೇಟ್ ಸಂಚಾರ ಠಾಣೆ ಸಹಾಯಕ ಸಬ್ ಇನ್‌ಸ್ಪೆಕ್ಟರ್ (ಎಎಸ್‌ಐ) ನಾರಾಯಣ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಜನವರಿ 24ರಂದು ನಡೆದಿದ್ದ ಘಟನೆ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ಈ ಬಗ್ಗೆ ಮಾಧ್ಯಮಗಳಲ್ಲಿ ಸುದ್ದಿ ಪ್ರಕಟವಾಗುತ್ತಿದ್ದಂತೆ ಗೃಹ ಸಚಿವ ಆರಗ ಜ್ಞಾನೇಂದ್ರ, ತನಿಖೆ ನಡೆಸಲು ಬೆಂಗಳೂರು ಪೊಲೀಸ್ ಕಮಿಷನರ್ ಅವರಿಗೆ ಸೂಚಿಸಿದ್ದರು.

ಕಮಿಷನರ್ ನಿರ್ದೇಶನದಂತೆ ಪ್ರಾಥಮಿಕ ತನಿಖೆ ನಡೆಸಿದ್ದ ಜಂಟಿ ಕಮಿಷನರ್ ಡಾ. ಬಿ.ಆರ್. ರವಿಕಾಂತೇಗೌಡ, ಎಎಸ್‌ಐ ನಾರಾಯಣ ಅವರನ್ನು ಅಮಾನತು ಮಾಡಿದ್ದಾರೆ.

'ಇಲಾಖೆ ವಿಚಾರಣೆ ಬಾಕಿ ಇರಿಸಿ ಎಎಸ್‌ಐ ಅವರನ್ನು ಅಮಾನತು ಮಾಡಲಾಗಿದೆ' ಎಂದು ರವಿಕಾಂತೇಗೌಡ ತಿಳಿಸಿದ್ದಾರೆ.

ಘಟನೆ ಬಗ್ಗೆ ಪ್ರತಿಕ್ರಿಯಿಸಿರುವ ಗೃಹ ಸಚಿವ ಆರಗ ಜ್ಞಾನೇಂದ್ರ, 'ಒಬ್ಬ ಅಮಾಯಕ ಮಹಿಳೆ ಮೇಲೆ ಪೊಲೀಸ್ ಅಧಿಕಾರಿಯೊಬ್ಬರು ಅವಾಚ್ಯ ಮಾತುಗಳನ್ನು ಬಳಸಿದ್ದಲ್ಲದೆ, ಹಲ್ಲೆ ಮಾಡಿರುವ ಘಟನೆಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಸೂಚಿಸಲಾಗಿತ್ತು. ಯಾರೇ ಆದರೂ ಕಾನೂನು ಕೈಗೆ ತೆಗೆದುಕೊಳ್ಳಬಾರದು, ಇದಕ್ಕೆ ಪೊಲೀಸರೂ ಹೊರತಾಗಿಲ್ಲ' ಎಂದರು.

ವಿಡಿಯೊದಲ್ಲಿ ಏನಿತ್ತು?: ವಾಹನ ಟೋಯಿಂಗ್ ಮಾಡಿದ್ದನ್ನು ಪ್ರಶ್ನಿಸಿದ್ದ ಮಹಿಳೆ, ಕರ್ತವ್ಯ ನಿರತ ಎಎಸ್‌ಐ ತಲೆಗೆ ಕಲ್ಲಿನಿಂದ ಹೊಡೆದಿದ್ದರು. ಎಎಸ್‌ಐ ತಲೆಯಿಂದ ರಕ್ತ ಸೋರುತ್ತಿತ್ತು. ಸಿಟ್ಟಾದ ಎಎಸ್‌ಐ, ನಡುರಸ್ತೆಯಲ್ಲಿ ಮಹಿಳೆಯನ್ನು ಅಟ್ಟಾಡಿಸಿ ಹಿಡಿದು ಬೂಟುಗಾಲಿನಿಂದ ಒದ್ದಿದ್ದರು. ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಈ ದೃಶ್ಯ ವಿಡಿಯೊದಲ್ಲಿತ್ತು.

ಎಎಸ್‌ಐ ನೀಡಿದ್ದ ದೂರು ಆಧರಿಸಿ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ಮಹಿಳೆಯನ್ನು ಎಸ್.ಜೆ. ಪಾರ್ಕ್ ಪೊಲೀಸರು ಬಂಧಿಸಿದ್ದರು.

ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ್ದ ವಿಡಿಯೊ ನೋಡಿದ್ದ ಜನ, ಎಎಸ್‌ಐ ವರ್ತನೆಗೆ ಆಕ್ರೋಶ ವ್ಯಕ್ತಪಡಿಸಿದ್ದರು.

'ಟೋಯಿಂಗ್ ವಾಹನ ಸೇವೆ ಅಮಾನತು'

ಇಂದಿರಾನಗರದಲ್ಲಿ ಕೋರಿಯರ್ ಬಾಯ್ ತಮ್ಮ ಬೈಕ್ ಬಿಡಿಸಿಕೊಳ್ಳಲು ಟೋಯಿಂಗ್ ವಾಹನದ ಹಿಂದೆ ಓಡಿದ್ದರು. ಈ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

ಈ ಬಗ್ಗೆ ಪ್ರತಿಕ್ರಿಯಿಸಿರುವ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ, 'ಟೋಯಿಂಗ್ ವಾಹನದ ಸೇವೆಯನ್ನು ಅಮಾನತಿನಲ್ಲಿರಿಸಲಾಗಿದೆ. ಟೋಯಿಂಗ್ ವಾಹನದಲ್ಲಿ ಕರ್ತವ್ಯದಲ್ಲಿದ್ದ ಎಎಸ್‌ಐ ಅವರನ್ನು ಬೇರೆ ಕಡೆ ಕೆಲಸಕ್ಕೆ ನಿಯೋಜಿಸಲಾಗಿದೆ' ಎಂದರು.

'ಕಸಾಪ ಎದುರು ಸರ್ವಜ್ಞ ಪ್ರತಿಮೆ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕೇಂದ್ರ ಕಚೇರಿ ಎದುರು ಸರ್ವಜ್ಞನ ಪ್ರತಿಮೆ ಸ್ಥಾಪಿಸಬೇಕು. ಆ ಮೂಲಕ ಕ್ರಾಂತಿಕವಿ ಎಂದೇ ಪ್ರಸಿದ್ಧರಾಗಿದ್ದ ಅವರ ನೆನಪು ಜನರ ಮನಸ್ಸಿನಲ್ಲಿ ಚಿರಸ್ಥಾಯಿಯಾಗುವಂತೆ ಮಾಡಬೇಕು' ಎಂದು ಸಾಹಿತಿ ಪುಸ್ತಕಮನೆ ಹರಿಹರಪ್ರಿಯ, ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

'ಚಿಂತನ' ರಂಗ ಕಲಾವಿದರ ಬಳಗ ಹಮ್ಮಿಕೊಂಡಿದ್ದ ಮಹಾಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕನ್ನಡದ ಮೊದಲ ಬಂಡಾಯ ಕವಿ ಸರ್ವಜ್ಞ. ಸಮಾಜಮುಖಿ ಚಿಂತನೆಗಳನ್ನು ಹೊಂದಿದ್ದ ಅವರು ನಿಜ ಅರ್ಥದ ನಾಡೋಜ. ಅಂತಹ ಮಹಾನ್ ಕವಿಯನ್ನೇ ನಾವು ಮೂಲೆಗುಂಪು ಮಾಡುತ್ತಿದ್ದೇವೆ' ಎಂದು ವಿಷಾದ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಕಲಾ ತಂಡದ ಸದಸ್ಯರು ನೃತ್ಯ ಪ್ರದರ್ಶಿಸಿದರು

'ಸರ್ವಜ್ಞನವರು ಜಾತಿ–ಕುಲ–ಧರ್ಮಗಳ ಸಂಕೋಲೆಯಿಂದ ಸಾಹಿತ್ಯ ಲೋಕವನ್ನು ಬೇರ್ಪಡಿಸಿದವರು. ಅಂತಹ ದಾರ್ಶನಿಕ ಕವಿಯ ಆದರ್ಶಗಳನ್ನು ಎಲ್ಲರೂ ಮೈಗೂಡಿಸಿಕೊಂಡು ಸಾಗಬೇಕು' ಎಂದರು.

ಕವಯತ್ರಿ ಎಂ.ಪ್ರಿಯದರ್ಶಿನಿ, ರಂಗ ನಿರ್ದೇಶಕ ಜೆ.ಎಚ್.ಕುಮಾರ್, ರಾ.ನ.ರಸಿಂಹಮೂರ್ತಿ, ಅಕ್ಷಯ ಕೃಷ್ಣಮೂರ್ತಿ ಇದ್ದರು.

ಎಚ್–1ಬಿ ವೀಸಾಕ್ಕೆ ಮಾರ್ಚ್ 1 ರಿಂದ ನೋಂದಣಿ

ವಾಷಿಂಗ್ಟನ್ (ಪಿಟಿಐ): 2023ರ ಆರ್ಥಿಕ ವರ್ಷದಲ್ಲಿ ಎಚ್1–ಬಿ ವೀಸಾದ ನೋಂದಣಿ ಕಾರ್ಯ ಮಾರ್ಚ್ 1ರಿಂದ ಪ್ರಾರಂಭವಾಗಲಿದೆ ಎಂದು ಅಮೆರಿಕದ ವಲಸೆ ಸಂಸ್ಥೆ ಹೇಳಿದೆ.

ಫಲಾನುಭವಿ ಅರ್ಜಿದಾರರನ್ನು ಯಾದೃಚ್ಛಿಕ ಕ್ರಮದಲ್ಲಿ ಆರಿಸಲಾಗುತ್ತದೆ. ಅವರ ಹೆಸರನ್ನು ಮಾರ್ಚ್ 31ರೊಳಗೆ ಆನ್‌ಲೈನ್‌ನಲ್ಲಿ ತಿಳಿಸಲಾಗುತ್ತದೆ ಎಂದೂ ಅದು ಹೇಳಿದೆ.

ಬೆಂಗಳೂರಿನಲ್ಲಿ ಭಾನುವಾರ ನಡೆದ ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರ ಪುತ್ರಿ ಡಾ. ರೋಷ್ನಿ ಆರ್. ಕೆ. ಮತ್ತು ಪ್ರದೀಪ್ ಕುಮಾರ್ ಎಸ್. ಅವರ ಮದುವೆ ಆರತಕ್ಷತೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭಾಗವಹಿಸಿ ಶುಭ ಹಾರೈಸಿದರು. ಮಾಜಿ ಸಚಿವ ಬಿ.ಬಿ. ನಿಂಗಯ್ಯ ಇದ್ದಾರೆ. ಮದುವೆ ಜ.24ರಂದು ಮೈಸೂರಿನಲ್ಲಿ ನಡೆದಿತ್ತು.

ಅಂತರರಾಷ್ಟ್ರೀಯ ಸಮಿತಿಗೆ ಪತ್ರ ಬರೆದ ಸ್ಥಳೀಯರು: ಪರಿಶೀಲಿಸಿ ಕ್ರಮದ ಭರವಸೆ

ರಸ್ತೆ ನಿರ್ಮಾಣದಿಂದ 'ಬ್ಲೂ ಫ್ಲ್ಯಾಗ್'ಗೆ ಆತಂಕ

• ಸದಾಶಿವ ಎಂ.ಎಸ್

ಕಾರವಾರ: ಹೊನ್ನಾವರದ ಟೊಂಕದಲ್ಲಿ ನಡೆಯುತ್ತಿರುವ ಖಾಸಗಿ ಬಂದರಿನ ರಸ್ತೆ ಕಾಮಗಾರಿಯಿಂದ ಕಾಸರಕೋಡು ಕಡಲತೀರದ 'ಬ್ಲೂಫ್ಲ್ಯಾಗ್' ಗರಿಮೆಗೂ ಆತಂಕ ಎದುರಾಗಿದೆ. ಈ ಬಗ್ಗೆ ಸ್ಥಳೀಯರು ಡೆನ್ಮಾರ್ಕ್‌ನ ಕೋಪನ್‌ಹೆಗನ್‌ನಲ್ಲಿರುವ 'ಬ್ಲೂ ಫ್ಲ್ಯಾಗ್'ನ ಅಂತರರಾಷ್ಟ್ರೀಯ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ. ಅವರು, ಭಾರತದಲ್ಲಿರುವ ತಮ್ಮ ತಂಡದಿಂದ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ್ದಾರೆ.

ನಿರ್ಮಾಣ ಹಂತದಲ್ಲಿರುವ ಬಂದರಿನ ರಸ್ತೆಯು ಕಾಸರಕೋಡು 'ಬ್ಲೂಫ್ಲ್ಯಾಗ್' ಕಡಲತೀರದ ಮೂಲಕವೇ ಸಾಗುತ್ತದೆ. ಇದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರತಿಷ್ಠೆ ಪಡೆದುಕೊಂಡಿರುವ ಕಡಲತೀರಕ್ಕೆ ತೊಂದರೆಯಾಗಲಿದೆ. ಪ್ರತಿಷ್ಠಿತ ಮನ್ನಣೆಯನ್ನು ದಕ್ಕಿಸಿಕೊಳ್ಳಲು ವಿಧಿಸಲಾಗಿರುವ 33 ಮಾರ್ಗಸೂಚಿಗಳ ಪಾಲನೆ ಸಾಧ್ಯವಿಲ್ಲ. ಹಾಗಾಗಿ, ರಸ್ತೆ ಕಾಮಗಾರಿಯನ್ನು ನಿಲ್ಲಿಸಬೇಕು. ಇದು ಸಾಧ್ಯವಿಲ್ಲ ಎಂದಾದರೆ ಬ್ಲೂ ಫ್ಲ್ಯಾಗ್ ಮನ್ನಣೆಯನ್ನು ರದ್ದು ಮಾಡಬೇಕು' ಎಂದು ಕಡಲಜೀವ ವಿಜ್ಞಾನ ಸಂಶೋಧಕ ಡಾ.ಪ್ರಕಾಶ ಮೇಸ್ತ ಅವರು 'ಬ್ಲೂ ಫ್ಲ್ಯಾಗ್'ನ ಅಂತರರಾಷ್ಟ್ರೀಯ ಸಮಿತಿ ನಿರ್ದೇಶಕ ಜೋಹನ್ ಡುರಾಂಡ್ ಅವರಿಗೆ ಪತ್ರ ಬರೆದಿದ್ದರು.

> ಕಾಸರಕೋಡಿನಲ್ಲಿ ರಸ್ತೆ ನಿರ್ಮಾಣದಿಂದ ಬ್ಲೂ ಫ್ಲ್ಯಾಗ್ ಕಡಲತೀರಕ್ಕೆ ಏನೂ ಸಮಸ್ಯೆಯಿಲ್ಲ. ಪ್ರತಿಷ್ಠಿತ ಮನ್ನಣೆಯನ್ನು ಉಳಿಸಿಕೊಳ್ಳಲು ಜಿಲ್ಲಾಡಳಿತವು ಬದ್ಧವಾಗಿದೆ.
> **ಮುಲ್ಲೈ ಮುಗಿಲನ್,** ಜಿಲ್ಲಾಧಿಕಾರಿ

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಡಾ.ಪ್ರಕಾಶ ಮೇಸ್ತ, 'ರಸ್ತೆ ನಿರ್ಮಾಣಕ್ಕಾಗಿ ಕೆಂಪು ಮಣ್ಣು ಮತ್ತು ಕಲ್ಲನ್ನು ಕಡಲತೀರದಲ್ಲಿ ಸುರಿಯಲಾಗಿದೆ. ಮಳೆಗಾಲದಲ್ಲಿ ದೊಡ್ಡ ಅಲೆಗಳು ಬಂದು ಅವುಗಳನ್ನು ಕೊಚ್ಚಿಕೊಂಡು ಹೋಗಲಿವೆ. ಬಳಿಕ ಕಲ್ಲನ್ನು ಸಮುದ್ರವು ದಡಕ್ಕೆ ತಂದು ಸುರಿಯಲಿದೆ. ರಸ್ತೆಯಿಂದಾಗ ದೂಳು, ವಾಯು ಮಾಲಿನ್ಯ ಉಂಟಾಗಲಿದೆ. ಹಾಗಾಗಿ ಈ ಕಡಲತೀರದಲ್ಲಿ ಈಜುವುದು ಸೂಕ್ತವಾಗದು' ಎಂದು ಪ್ರತಿಪಾದಿಸಿದರು.

ಪ್ರಜಾವಾಣಿ ವಿಶೇಷ

'ಬ್ಲೂ ಫ್ಲ್ಯಾಗ್‌ನಂಥ ಪ್ರತಿಷ್ಠಿತ ಮನ್ನಣೆಯನ್ನು ಪಡೆಯುವ ತನಕ ಎಲ್ಲ ಮಾರ್ಗಸೂಚಿಗಳನ್ನು ಪಾಲಿಸಿ, ಬಳಿಕ ಅವುಗಳನ್ನು ಉಲ್ಲಂಘಿಸುವುದು ಸರಿಯಲ್ಲ. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ಮೋಸ ಮಾಡಿದಂತಾಗುತ್ತದೆ. ಬ್ಲೂ ಫ್ಲ್ಯಾಗ್ ರದ್ದಾದರೆ ಅದೂ ದೊಡ್ಡ ಹಿನ್ನಡೆಯಾಗುತ್ತದೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಲು ಬ್ಲೂ ಫ್ಲ್ಯಾಗ್ ಅಂತರರಾಷ್ಟ್ರೀಯ ಸಮಿತಿಗೆ ಮನವಿ ಮಾಡಿದ್ದೇನೆ' ಎಂದರು.

ಹೊನ್ನಾವರದ ಟೊಂಕದಲ್ಲಿ ಬಂದರು ಪ್ರದೇಶಕ್ಕೆ ಕಾಸರಕೋಡು ಕಡಲತೀರದಲ್ಲಿ ಕೆಂಪು ಮಣ್ಣು ಸುರಿದು ರಸ್ತೆ ನಿರ್ಮಿಸುತ್ತಿರುವುದು

'ಸ್ಥಳ ಪರಿಶೀಲಿಸಲಾಗುವುದು'

'ಕಾಸರಕೋಡು ಬ್ಲೂ ಫ್ಲ್ಯಾಗ್ ಕಡಲತೀರದ ಮೂಲಕ ರಸ್ತೆ ನಿರ್ಮಾಣಕ್ಕೆ ಪ್ರವಾಸೋದ್ಯಮ ಇಲಾಖೆಯು ನಿರಾಕ್ಷೇಪಣಾ ಪತ್ರ ನೀಡಿಲ್ಲ. ಬ್ಲೂ ಫ್ಲ್ಯಾಗ್ ಸಮಿತಿಯ ಭಾರತದ ತಂಡದ ಸದಸ್ಯರು ಮಂಗಳವಾರ ಸ್ಥಳ ಪರಿಶೀಲನೆಗೆ ಬರುವ ಸಾಧ್ಯತೆಯಿದೆ. ಅವರೊಂದಿಗೆ ತೆರಳಿ ಎಲ್ಲವನ್ನು ಸ್ಪಷ್ಟಪಡಿಸಲಾಗುವುದು' ಎಂದು ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕ ಜಯಂತ್ ತಿಳಿಸಿದ್ದಾರೆ.

ಅವಮಾನಿಸಿದ ಷೋ ರೂಂನಲ್ಲೇ ವಾಹನ ಖರೀದಿಸಿದ ರೈತ

ಪ್ರಜಾವಾಣಿ ವಾರ್ತೆ

ತುಮಕೂರು: ಇತ್ತೀಚೆಗೆ ವಾಹನ ಖರೀದಿಸಲು ನಗರದ ಷೋ ರೂಂ ಒಂದಕ್ಕೆ ಭೇಟಿ ನೀಡಿದ್ದ ತಾಲ್ಲೂಕಿನ ರಾಮನಪಾಳ್ಯದ ರೈತ ಕೆಂಪೇಗೌಡ ಅವರನ್ನು ಷೋ ರೂಂ ಸಿಬ್ಬಂದಿ ಅವಮಾನಿಸಿದ ಪ್ರಕರಣ ಸದ್ಯ ಸುಖಾಂತ್ಯ ಕಂಡಿದ್ದು, ಯುವ ರೈತ ಅದೇ ಷೋ ರೂಂನಲ್ಲಿ ವಾಹನ ಖರೀದಿಸಿದ್ದಾರೆ.

ಈ ಕುರಿತು ಮಹೀಂದ್ರ ಚೇರ್ಮನ್ ಆನಂದ್ ಮಹೀಂದ್ರ 'ಲೆಟ್ ಮಿ ಆ್ಯಡ್ ಮೈ ವೆಲ್‌ಕಮ್ ಟು ಕೆಂಪೇಗೌಡ' ಎಂದು ಟ್ವೀಟ್ ಮಾಡುವ ಮೂಲಕ ಮಹೀಂದ್ರ ಕುಟುಂಬಕ್ಕೆ ಕೆಂಪೇಗೌಡ ಅವರನ್ನು ಸ್ವಾಗತಿಸಿದ್ದಾರೆ.

ರೈತ ಕೆಂಪೇಗೌಡ ಖರೀದಿಸಿದ ಬೊಲೆರೋ ಗೂಡ್ಸ್ ವಾಹನ

ಜ.21ರಂದು ನಗರದ ಷೊ ರೂಂಗೆ ವಾಹನ ಖರೀದಿಸಲು ಬಂದಿದ್ದ ರೈತ ಕೆಂಪೇಗೌಡ ಮತ್ತು ಅವರ ಸ್ನೇಹಿತರನ್ನು ಅವರ ವೇಷಭೂಷಣ ನೋಡಿ, ಷೋ ರೂಂ ಸಿಬ್ಬಂದಿ ನಿನಗೆ ₹10 ಕೊಡೋಕೆ ಆಗಲ್ಲ, ಕಾರ್ ಕೊಳ್ಳುವ ಯೋಗ್ಯತೆ ನಿನಗಿಲ್ಲ ಎಂದು ಅವಮಾನಿಸಿ ವಾಪಸ್ ಕಳುಹಿಸಿದ್ದರು. ಘಟನೆ ನಡೆದ ಅರ್ಧ ಗಂಟೆಯೊಳಗೆ ಕೆಂಪೇಗೌಡ ₹10 ಲಕ್ಷ ಹಣವನ್ನು ತಂದು ವಾಹನ ನೀಡುವಂತೆ ಪಟ್ಟು ಹಿಡಿದಿದ್ದ. ಆದರೆ ಷೋ ರೂಂ ಸಿಬ್ಬಂದಿ ದೊಡ್ಡ ಮೊತ್ತವನ್ನು ಒಮ್ಮೆಲೆ ಸ್ವೀಕರಿಸಲು ಸಾಧ್ಯವಿಲ್ಲ. ಹಾಗಾಗಿ ಕಾರ್ ನೀಡಲು ಸಾಧ್ಯವಿಲ್ಲ ಎಂದು ಹೇಳಿದ್ದರು.

ಇದರಿಂದ ಸಮಾಧಾನಗೊಳ್ಳದ ರೈತ ಕ್ಷಮೆಯಾಚಿಸುವಂತೆ ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಿದ್ದರು. ಕೊನೆಗೆ ಷೋ ರೂಂ ಸಿಬ್ಬಂದಿ ಕ್ಷಮೆಯಾಚಿಸಿದ್ದರು. ಈ ಘಟನೆ ಎಲ್ಲೆಡೆ ವೈರಲ್ ಆಗಿತ್ತು. ಸದ್ಯ ಕೆಂಪೇಗೌಡ ಅದೇ ಷೊ ರೂಂ ನಲ್ಲಿ ಮಹೀಂದ್ರ ಬೊಲೆರೋ ಗೂಡ್ಸ್ ವಾಹನ ಖರೀದಿಸಿ ನಗೆ ಬೀರಿದ್ದಾರೆ.

ಜೆಡಿಎಸ್ ಮುಖಂಡ ಎಲ್.ಆರ್.ಶಿವರಾಮೇಗೌಡರ ಧ್ವನಿಯ ಆಡಿಯೊ

'ನಾಗಮಂಗಲದಲ್ಲಿ ಸುರೇಶ್ ಗೌಡರನ್ನು ಕರೆತಂದದ್ದು ನಾನೇ'

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ): ಜೆಡಿಎಸ್ ಮುಖಂಡ ಎಲ್.ಆರ್.ಶಿವರಾಮೇಗೌಡ ಅವರು ಪಕ್ಷದ ಕಾರ್ಯಕರ್ತರೊಬ್ಬರ ಜೊತೆ ಮುಂದಿನ ವಿಧಾನಸಭಾ ಚುನಾವಣೆ ಅಭ್ಯರ್ಥಿ ವಿಚಾರ, ಕಳೆದ ಬಾರಿ ನಡೆದ ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ವೆಚ್ಚ ಮಾಡಿರುವ ಮೊತ್ತ ಸೇರಿದಂತೆ ಮಂಡ್ಯ ಜಿಲ್ಲೆಯ ರಾಜಕೀಯ ಕುರಿತು ಮಾತನಾಡಿರುವ ಆಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

'ವಿಧಾನ ಪರಿಷತ್ ಚುನಾವಣೆಗೆ ನಾನು ಸ್ಪರ್ಧೆ ಮಾಡಿದ್ದಾಗ ₹ 27 ಕೋಟಿ ಖರ್ಚು ಮಾಡಿದ್ದೆ. ನಂತರ ಆರು ತಿಂಗಳ ಅವಧಿಗೆ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧೆ ಮಾಡಿದ್ದಾಗ ₹ 30 ಕೋಟಿ ವೆಚ್ಚವಾಯಿತು. ಮುಂದಿನ ನಾಗಮಂಗಲ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲೂ ₹ 30 ಕೋಟಿ ಬೇಕಾಗುತ್ತದೆ. ಅಷ್ಟು ಹಣ ತಂದು ಚುನಾವಣೆಗೆ ಸ್ಪರ್ಧಿಸುತ್ತೇನೆ. ಹೀಗಾಗಿ, ನಿಮ್ಮೆಲ್ಲರ ಬೆಂಬಲ ಬೇಕಾಗಿದೆ' ಎಂದಿದ್ದಾರೆ.

ಎಲ್.ಆರ್. ಶಿವರಾಮೇಗೌಡ

ಕೊಪ್ಪ ಹೋಬಳಿಯ ಜೆಡಿಎಸ್ ಕಾರ್ಯಕರ್ತೆ ಸುನೀತಾ ಎಂಬುವರೊಂದಿಗೆ ಸಂಭಾಷಣೆ ನಡೆಸಿರುವ ಆಡಿಯೊ ಎನ್ನಲಾಗುತ್ತಿದೆ.

'ನಾನು ಎರಡನೇ ಬಾರಿ ಸಂಸದನಾದರೆ ಬಲಿಷ್ಠವಾಗಿ ಬೆಳೆಯುತ್ತೇನೆ ಎಂಬ ಕಾರಣಕ್ಕೆ ಶಾಸಕ ಸುರೇಶ್ ಗೌಡ ಸೇರಿದಂತೆ ಇತರ ಇಬ್ಬರು, ನಿಖಿಲ್ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿ ಅವರ ಕುಟುಂಬಕ್ಕೂ ಕಂಟಕರಾದರು. ಜೊತೆಗೆ ನನ್ನನ್ನು ಕೆಡವಿದರು. ನಾವು ಸುರೇಶ್ ಗೌಡ ಅವರಿಗೆ ಮೂರು ಬಾರಿ ಬೆಂಬಲ ನೀಡಿದ್ದು, ಎರಡು ಬಾರಿ ಶಾಸಕರಾಗಿದ್ದಾರೆ. ಅಪ್ಪಾಜಿಗೌಡ ಧರ್ಮರಾಯನಿದ್ದಂತೆ. ಚುನಾವಣೆಗೆ ಹಣ ತಂದು ಕೆಲಸ ಮಾಡಿದ್ದಾರೆ. ಎಷ್ಟು ದಿನ ಬೇರೆಯವರಿಗಾಗಿ ದುಡಿಯುತ್ತಾ ಇರೋದು ಎಂಬ ಕಾರಣಕ್ಕೆ ನಾನೇ ಎಂಎಲ್ಎ ಅಭ್ಯರ್ಥಿಯಾಗಲು ನಿರ್ಧಾರ ಮಾಡಿದ್ದೇನೆ' ಎಂದು ಶಿವರಾಮೇಗೌಡರು ಹೇಳಿರುವುದು ಆಡಿಯೊದಲ್ಲಿ ದಾಖಲಾಗಿದೆ.

ಸಂಭಾಷಣೆಯಲ್ಲಿ ಕಾರ್ಯಕರ್ತೆ ಸುನೀತಾ ಮಾತನಾಡುತ್ತಾ, 'ನಾವು ದೇವೇಗೌಡ ಮತ್ತು ಕುಮಾರಸ್ವಾಮಿ ಅವರ ಅಭಿಮಾನಿಯಾಗಿದ್ದು, ನಮಗೆ ಶಾಸಕ ಸುರೇಶ್ ಗೌಡರೂ ಮುಖ್ಯ ಅಲ್ಲ, ಶಿವರಾಮೇಗೌಡರೂ ಮುಖ್ಯವಲ್ಲ. ಕುಮಾರಣ್ಣ ಮತ್ತು ದೇವೇಗೌಡರು ಒಂದು ನಾಯಿಯನ್ನು ಪಕ್ಷದಿಂದ ಅಭ್ಯರ್ಥಿಯಾಗಿ ಸೂಚಿಸಿದರೆ ಅವರನ್ನೇ ಬೆಂಬಲಿಸಿ ಅವರ ಪರವಾಗಿ ಕೆಲಸ ಮಾಡುತ್ತೇವೆ. ಈ ವಿಚಾರವಾಗಿ ನಮ್ಮ ನಿಲುವನ್ನು ಬದಲಾಯಿಸಿಕೊಳ್ಳಲು ಸಾಧ್ಯವಿಲ್ಲ. ದಯವಿಟ್ಟು ಈ ವಿಚಾರವಾಗಿ ನೀವು ಬೇಜಾರಾಗುವುದು ಬೇಡ' ಎಂದಿದ್ದಾರೆ.

ಯಕ್ಕಡದಲ್ಲಿ ಹೊಡೆದಿದ್ದೆವು: 'ಮಾದೇಗೌಡ ಅಂತ ಇದ್ದ. ಅವನ ಮನೆ ಹಾಳಾಗ. ಸತ್ತು ಇಪ್ಪತ್ತು ವರ್ಷವಾಗಬೇಕಿತ್ತು. ಮೊನ್ನೆ ಸತ್ತ. ಅವನಿಗೆ ಶ್ರವಣಬೆಳಗೊಳದಲ್ಲಿ ಯಕ್ಕಡದಲ್ಲಿ ಹೊಡೆದಿದ್ದೆವು. ಆ ಮಗ ಎಂಪಿ ಇದ್ದ. ನಾಗಮಂಗಲದಲ್ಲಿ ತಾನು ಹೇಳಿದ ಅಭ್ಯರ್ಥಿಗೆ ಟಿಕೆಟ್ ಕೊಡಬೇಕೆಂದು ಒಮ್ಮೆ ನರಸೇಗೌಡ ಎಂಬುವವನಿಗೆ ಟಿಕೆಟ್ ಕೊಡಿಸಿದ್ದ. ಅವನು ಕಾಂಗ್ರೆಸ್ ಪಕ್ಷದಲ್ಲಿ ಮೂರು ಸಾವಿರ ಮತ ಪಡೆದಿದ್ದ. ಆ ಮಗನೇ ನಮಗೆಲ್ಲಾ ವಿರೋಧ ಮಾಡಿದ್ದು' ಎಂದು ಶಿವರಾಮೇಗೌಡ ಮಾತನಾಡಿದ್ದಾರೆ.

'ಈಗ ನಾಗಮಂಗಲ ತಾಲ್ಲೂಕಿನಲ್ಲಿ ಮೂಲ ಜೆಡಿಎಸ್‌ನವರು ಮಣ್ಣು ತಿಂದು ಹೋಗಿದ್ದಾರೆ' ಎಂಬುದೂ ಆಡಿಯೊದಲ್ಲಿ ಇದೆ.

'ಶಿವರಾಮೇಗೌಡರ ಯೋಗ್ಯತೆ ಗೊತ್ತಿದೆ'

ಮೈಸೂರು/ಭಾರತೀನಗರ: 'ಶಿವರಾಮೇಗೌಡರ ಯೋಗ್ಯತೆ ಏನೆಂಬುದು ಮಂಡ್ಯ ಜಿಲ್ಲೆಯ ಜನರಿಗೆ ಗೊತ್ತಿದೆ. ಅವರ ವ್ಯಕ್ತಿತ್ವ ಏನೆಂಬುದನ್ನು ಅವರ ಮಾತಿನ ಮೂಲಕ ಜಗಜ್ಜಾಹೀರು ಮಾಡಿಕೊಳ್ಳುತ್ತಿದ್ದಾರೆ. ಮಾದೇಗೌಡರ ಬಗ್ಗೆ ಮಾತನಾಡುವುದಾಗಲಿ ಅವರ ಪಕ್ಕ ನಿಲ್ಲಲೂ ಶಿವರಾಮೇಗೌಡರಿಗೆ ಯೋಗ್ಯತೆ ಇಲ್ಲ' ಎಂದು ಕಾಂಗ್ರೆಸ್ ಮುಖಂಡ ಮಧು ಜಿ.ಮಾದೇಗೌಡ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿ, 'ಅವನ ಮಾತಿಗೆ ಹೆಚ್ಚಿನ ಮಹತ್ವ ಕೊಡುವ ಅಗತ್ಯವಿಲ್ಲ. ನಾಲಿಗೆ–ಕಚ್ಚೆಯೂ ಸರಿಯಿಲ್ಲ' ಎಂದು ಲೇವಡಿ ಮಾಡಿದರು.

'ಆತ ಟಿಕೆಟ್‌ಗಾಗಿ ತಂದೆಯ ಕಾಲು ಹಿಡಿದ ಸನ್ನಿವೇಶ ಕಂಡಿದ್ದೇನೆ. ತಂದೆಯವರ ಮೇಲೆ ಕೈ ಮಾಡಿರುವುದು ಗೊತ್ತಿಲ್ಲದ ವಿಚಾರ. ನನ್ನ ತಂದೆ ಯಾವತ್ತೂ ಪೊಲೀಸರ ರಕ್ಷಣೆ ಪಡೆದು ಓಡಾಡಿದವರಲ್ಲ. ಆದರೆ, ಶಿವರಾಮೇಗೌಡ ಪೊಲೀಸರ ರಕ್ಷಣೆ ಇಲ್ಲದೆ ಎಲ್ಲೂ ಹೋಗುವುದಿಲ್ಲ' ಎಂದರು.

ಶೃಂಗೇರಿ ತಹಶೀಲ್ದಾರ್ ವಾಹನ ಚಾಲಕ ನಿಗೂಢ ಸಾವು

ಪರಿಹಾರಕ್ಕೆ ಆಗ್ರಹಿಸಿ ಶವ ಇಟ್ಟು ಪ್ರತಿಭಟನೆ

ಚಿಕ್ಕಮಗಳೂರು: ಶೃಂಗೇರಿ ತಾಲ್ಲೂಕಿನ ಹೆಗ್ತೂರಿನಲ್ಲಿ ಶನಿವಾರ ನಿಗೂಢವಾಗಿ ಸಾವಿಗೀಡಾದ ಶೃಂಗೇರಿ ತಹಶೀಲ್ದಾರರ ವಾಹನ ಚಾಲಕ ವಿಜೇತ ಅವರ ಮೃತದೇಹವನ್ನು ಪಟ್ಟಣದ ವೀರಪ್ಪಗೌಡ ವೃತ್ತದಲ್ಲಿ (ಶಂಕರಾಚಾರ್ಯ ವೃತ್ತ) ಇಟ್ಟು ಪರಿಹಾರಕ್ಕೆ ಆಗ್ರಹಿಸಿ ಮೃತನ ಕುಟುಂಬದವರು, ಸ್ಥಳೀಯರು ಪ್ರತಿಭಟನೆ ನಡೆಸಿದರು.

ಮರಣೋತ್ತರ ಪರೀಕ್ಷೆ ಮುಗಿದ ನಂತರ ಮಧ್ಯಾಹ್ನ 1.30ರ ಹೊತ್ತಿಗೆ ಶವವನ್ನು ಒಯ್ದು ಪ್ರತಿಭಟನೆ ನಡೆಸಿದರು. ಸ್ಥಳಕ್ಕೆ ಜಿಲ್ಲಾಧಿಕಾರಿ ಬರಬೇಕು ಎಂದು ಪ್ರತಿಭಟನಕಾರರು ಪಟ್ಟುಹಿಡಿದರು. ಉಪವಿಭಾಗಾಧಿಕಾರಿ ಡಾ.ಎಚ್.ಎಲ್. ನಾಗರಾಜ್ ಅವರು ಪ್ರತಿಭಟನಕಾರರೊಂದಿಗೆ ಮಾತನಾಡಿದರು.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಡಿ.ಎನ್. ಜೀವರಾಜ್, ಜೆಡಿಎಸ್ ರಾಜ್ಯ ಘಟಕದ ಉಪಾಧ್ಯಕ್ಷ ಸುಧಾಕರ ಶೆಟ್ಟಿ, ಇತರ ಕೆಲ ಮುಖಂಡರು ಮೃತರ ಕುಟುಂಬದವರಿಗೆ ₹8 ಲಕ್ಷ ಪರಿಹಾರ ಕೊಡುವುದಾಗಿ ಭರವಸೆ ನೀಡಿದರು.

ಕೆಲಸ ಮುಗಿಸಿ ಶನಿವಾರ ಸಂಜೆ ತಮ್ಮೂರಿಗೆ ಹೋಗಿದ್ದ ವಿಜೇತ ಶವವಾಗಿ ಪತ್ತೆಯಾಗಿದ್ದರು. ಊರಿನ ಪಕ್ಕದ ಕಾಡಿನಲ್ಲಿ ನೇಣುಹಾಕಿದ ಸ್ಥಿತಿಯಲ್ಲಿ ಮೃತದೇಹ ಪತ್ತೆಯಾಗಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ರಾಘವೇಂದ್ರ ಕುರುಬಗೆರೆ, ತಾಲ್ಲೂಕು ಕಚೇರಿ ನೌಕರ ಶರತ್, ವ್ಯಾಪಾರಿ ನಾಗೇಂದ್ರ ಎಂಬವರನ್ನು ಬಂಧಿಸಲಾಗಿದೆ.

ಹಕ್ಕುಪತ್ರ ಅಕ್ರಮ ದೂರು: ಹಕ್ಕುಪತ್ರ (94 'ಸಿ', 94 'ಸಿಸಿ') ಅಕ್ರಮ ದೂರಿಗೆ ಸಂಬಂಧಿಸಿದಂತೆ ಶೃಂಗೇರಿಯ ತಹಶೀಲ್ದಾರ್ ಅಂಬುಜಾ, ಇತರ ಮೂವರು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ತಂಡದ ಬಲೆಗೆ ಬಿದ್ದಿದ್ದರು, ಅಮಾನತಾಗಿದ್ದರು. ತಹಶೀಲ್ದಾರ್ ಕೊಠಡಿಯ ಬೀರುವಿನ ಬೀಗವನ್ನು ಯಾರೋ ತೆಗೆದು ಬಾಗಿಲು ಹಾಗೆಯೇ ಬಿಟ್ಟಿದ್ದ ಘಟನೆ ಜ.27ರಂದು ಸಂಜೆ ನಡೆದಿತ್ತು. ಪ್ರಭಾರ ತಹಶೀಲ್ದಾರ್ ಬಸವರಾಜು ಈ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದರು. ಹಿಂದಿನ ತಹಶೀಲ್ದಾರ್ ಅಂಬುಜಾ ಅವರು ಬೀರು ಬೀಗ ಹಸ್ತಾಂತರಿಸಿಲ್ಲ ಎಂದು ದೂರಿನಲ್ಲಿ ತಿಳಿಸಿದ್ದರು.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಪಟ್ಟಣದಲ್ಲಿ ಭಾನುವಾರ ಶೃಂಗೇರಿ ತಹಶೀಲ್ದಾರ್ ವಾಹನ ಚಾಲಕ ವಿಜೇತ ಶವ ಇಟ್ಟು ಕುಟುಂಬದವರು, ಸ್ಥಳೀಯರು ಪ್ರತಿಭಟನೆ ನಡೆಸಿದರು

ಮೊಬೈಲ್‌ಗಾಗಿ ಬಾವಿಗಿಳಿದ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ: ತಾಲ್ಲೂಕು ಗುಡಿಹಳ್ಳಿಯಲ್ಲಿ ಬಾವಿಯಲ್ಲಿ ಬಿದ್ದಿದ್ದ ಮೊಬೈಲ್ ತೆಗೆದುಕೊಳ್ಳಲೆಂದು ಬಾವಿಗೆ ಇಳಿದಿದ್ದ ಅನಿಲ್ ಕುಮಾರ್ (35) ಮೃತಪಟ್ಟಿದ್ದಾರೆ. ಎನ್‌ಡಿಆರ್‌ಎಫ್ ಹಾಗೂ ಅಗ್ನಿಶಾಮಕ ತುರ್ತು ಸೇವೆಗಳ ಸಿಬ್ಬಂದಿಯು ಸತತ 12 ಗಂಟೆಗಳ ಕಾರ್ಯಾಚರಣೆ ನಡೆಸಿ ಶವವನ್ನು ಬಾವಿಯಿಂದ ಹೊರಗೆ ತೆಗೆದಿದ್ದಾರೆ.

ತಾಲ್ಲೂಕಿನ ಅಬ್ಲೂಡು ಗ್ರಾಮ ಪಂಚಾಯಿತಿಯ ಗುಡಿಹಳ್ಳಿಯ ಅನಿಲ್ ಕುಮಾರ್ ತನ್ನ ತೋಟದ ಮಿಷನ್ ಶೆಡ್‌ನ ಒಳಗಿನ ಕಿರುಬಾವಿಯಲ್ಲಿ ಬಿದ್ದಿದ್ದ ಮೊಬೈಲ್‌ನ್ನು ತೆಗೆದುಕೊಳ್ಳಲೆಂದು ಒಬ್ಬಂಟಿಯಾಗಿ ಶನಿವಾರ ಬಾವಿಗೆ ಇಳಿದಿದ್ದರು. ಸುಮಾರು 60 ಅಡಿಗಳಿಗೂ ಆಳದ ಕಿರು ಬಾವಿಗೆ ಹಗ್ಗದ ನೆರವಿನಿಂದ ಇಳಿದಿದ್ದ ಅನಿಲ್ ಕುಮಾರ್ ತನ್ನ ಬೇಸಿಕ್ ಸೆಟ್ ಮೊಬೈಲ್‌ನ್ನು ತೆಗೆದುಕೊಂಡು ಶರ್ಟಿನ ಜೇಬಿನಲ್ಲಿ ಇಟ್ಟುಕೊಂಡಿದ್ದಾರೆ. ಆದರೆ ಅಲ್ಲಿ ಗಾಳಿಯ ಕೊರತೆಯಿಂದ ಉಸಿರುಗಟ್ಟಿ ನಿತ್ರಾಣಗೊಂಡು ಮೇಲೆ ಬರಲಾಗದೆ ಅಲ್ಲೇ ಕುಸಿದು ಬಿದ್ದಿದ್ದಾರೆ.

ಅನಿಲ್ ಕುಮಾರ್

ಶನಿವಾರ ಬೆಳಗ್ಗೆ ಅನಿಲ್ ಕುಮಾರ್ ಬಾವಿಗೆ ಇಳಿದಿದ್ದು ಮಧ್ಯಾಹ್ನದ ವೇಳೆಗೆ ಸ್ಥಳೀಯ ಅಗ್ನಿಶಾಮಕ ತುರ್ತು ಸೇವೆಗಳ ಸಿಬ್ಬಂದಿಯು ಅನಿಲ್ ಕುಮಾರ್‌ನನ್ನು ಬಾವಿಯಿಂದ ಹೊರಗೆ ಎತ್ತುವ ಕಾರ್ಯಾಚರಣೆ ನಡೆಸಿದರೂ ಸಾಧ್ಯವಾಗಿರಲಿಲ್ಲ.

ರಾತ್ರಿವೇಳೆಗೆ ಎನ್‌ಡಿಆರ್‌ಎಫ್‌ನ 22 ಮಂದಿ ಸಿಬ್ಬಂದಿ ಹಾಗೂ ದೇವನಹಳ್ಳಿಯ ಅಗ್ನಿಶಾಮಕ ದಳದ ಸಿಬ್ಬಂದಿಯು ಆಗಮಿಸಿ ತಡರಾತ್ರಿಯವರೆಗೂ ಕಾರ್ಯಾಚರಣೆ ನಡೆಸಿ ಸೆನ್ಸಾರ್ ತಂತ್ರಜ್ಞಾನದ ಮೂಲಕ ಶೋಲ್ಡರ್ಸ್ ಲಾಕ್ ಮಾಡಿ ಮೇಲಕ್ಕೆತ್ತಲಾಯಿತು. ಆದರೆ ಅಷ್ಟರಲ್ಲಿ ಅನಿಲ್‌ಕುಮಾರ್‌ನ ಪ್ರಾಣ ಪಕ್ಷಿ ಹಾರಿಹೋಗಿತ್ತು.

ಉಪ ವಿಭಾಗಾಕಾರಿ ರಘುನಂದನ್, ತಹಶೀಲ್ದಾರ್ ಬಿ.ಎಸ್.ರಾಜೀವ್, ಸಿಪಿಐ ಧಮೇಗೌಡ, ಎಸ್‌ಐ ಸತೀಶ್ ಹಾಗೂ ಅಗ್ನಿಶಾಮಕ ಜಿಲ್ಲಾ ಘಟಕದ ನಾಗೇಶ್, ಶಿಡ್ಲಘಟ್ಟದ ರಾಮಕೃಷ್ಣಪ್ಪ ಹಾಗೂ ಸಿಬ್ಬಂದಿಯು ಸ್ಥಳದಲ್ಲೆ ಠಿಕಾಣಿಹೂಡಿದ್ದು ಸತತ ಆರೇಳು ಗಂಟೆಗಳ ಕಾಲ ಹರಸಾಹಸ ಕಾರ್ಯಾಚರಣೆ ನಡೆಸಿದರಾದರೂ ಅನಿಲ್ ಕುಮಾರ್ ಬದುಕುಳಿಯಲಿಲ್ಲ.

ಶಿಡ್ಲಘಟ್ಟದ ಸಾರ್ವಜನಿಕ ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿ ಶವವನ್ನು ಕುಟುಂಬದವರಿಗೆ ಹಸ್ತಾಂತರಿಸಿದರು. ಶಿಡ್ಲಘಟ್ಟ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಸುಳ್ಳು ವರದಿ: ಪ್ರಯಾಣಿಕರ ಆಕ್ರೋಶ

ದೇವನಹಳ್ಳಿ: ಕೋವಿಡ್ ಪರೀಕ್ಷೆ ಕುರಿತು ಸುಳ್ಳು ವರದಿ ನೀಡಲಾಗುತ್ತಿದೆ ಎಂದು ಆರೋಪಿಸಿ ಪ್ರಯಾಣಿಕರು ಶನಿವಾರ ಸಂಜೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಿಬ್ಬಂದಿ ಜೊತೆ ಗಲಾಟೆ ನಡೆಸಿದರು.

ಪರಿಸ್ಥಿತಿ ನಿಭಾಯಿಸಲು ವಿಮಾನ ನಿಲ್ದಾಣದ ಸಿಬ್ಬಂದಿ ಪರದಾಡಬೇಕಾಯಿತು. ಸಿಟ್ಟಿಗೆದ್ದ ಪ್ರಯಾಣಿಕರನ್ನು ನಿಯಂತ್ರಿಸಲು ಕೇಂದ್ರ ಕೈಗಾರಿಕಾ ರಕ್ಷಣಾ ಪಡೆ (ಸಿಐಎಸ್‌ಎಫ್)ಯನ್ನು ಸ್ಥಳಕ್ಕೆ ಕರೆಸಲಾಯಿತು.

ಐಸಿಎಂಆರ್, ಬೇರೆ ಆಸ್ಪತ್ರೆ ಮತ್ತು ಪ್ರಯೋಗಾಲಯಗಳಲ್ಲಿ ಕೋವಿಡ್ ಪರೀಕ್ಷೆ ವರದಿ ನೆಗೆಟಿವ್ ಇದ್ದರೂ ಕೂಡ, ವಿಮಾನ ನಿಲ್ದಾಣದ ಆರಿಗಾ ಲ್ಯಾಬ್ ಕೇವಲ ಪಾಸಿಟಿವ್ ವರದಿ ನೀಡುತ್ತಿದೆ. ಇಂಥ ವರದಿ ನೀಡಿದ ಕಾರಣ ವಿಮಾನ ತಪ್ಪಿಸಿಕೊಳ್ಳಬೇಕಾಯಿತು ಎಂದು ಅಂತರರಾಷ್ಟ್ರೀಯ ವಿಮಾನ ಪ್ರಯಾಣಿಕರು ಗಲಾಟೆ ಮಾಡಿದರು.

ತಹಶೀಲ್ದಾರ್ ಸೇರಿ ನಾಲ್ವರ ವಿರುದ್ಧ ಮುಳಬಾಗಿಲು ಠಾಣೆಯಲ್ಲಿ ಪ್ರಕರಣ

ಜೀವಂತವಾಗಿದ್ದಾಗಲೇ ಮರಣ ಪ್ರಮಾಣಪತ್ರ!

ಪ್ರಜಾವಾಣಿ ವಾರ್ತೆ

ಮುಳಬಾಗಿಲು: ಜಮೀನು ಕಬಳಿಸುವ ಉದ್ದೇಶದಿಂದ ವ್ಯಕ್ತಿ ಜೀವಂತವಾಗಿರುವಾಗಲೇ ಆತನ ಹೆಸರಿನಲ್ಲಿ ಅಕ್ರಮವಾಗಿ ಮರಣ ಪ್ರಮಾಣ ಪತ್ರ ಸೃಷ್ಟಿಸಿದ ಪ್ರಕರಣದಲ್ಲಿ ತಹಶೀಲ್ದಾರ್ ಸೇರಿದಂತೆ ನಾಲ್ವರು ಕಂದಾಯ ಸಿಬ್ಬಂದಿ ವಿರುದ್ಧ ಮುಳಬಾಗಿಲು ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುಳಬಾಗಿಲು ಜೆಎಂಎಫ್‌ಸಿ ನ್ಯಾಯಾಲಯದ ಆದೇಶದಂತೆ ಹಿಂದಿನ ತಹಶೀಲ್ದಾರ್ ಕೆ.ಎನ್. ರಾಜಶೇಖರ್, ಗ್ರಾಮಲೆಕ್ಕಿಗ ಕೆ.ಎನ್. ಅರವಿಂದ್ ಸೇರಿದಂತೆ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದೆ.

ತಾಲ್ಲೂಕಿನ ಕಸಬಾ ಹೋಬಳಿ ಎಂ.ಹೊಸಹಳ್ಳಿ ಗ್ರಾಮದ ವಿ.ಶಿವರಾಜ್ (40) ಎಂಬುವರು 2021ರ ಜುಲೈ 5ರಂದು ಮರಣ ಹೊಂದಿದ್ದಾರೆ ಎಂದು ಜುಲೈ 13ರಂದು ಕಾನೂನು ಬಾಹಿರವಾಗಿ ಮರಣ ಪ್ರಮಾಣ ಪತ್ರ ಸೃಷ್ಟಿಸಲಾಗಿದೆ.

'ನಾನಿನ್ನೂ ಬದುಕಿರುವಾಗಲೇ ನನ್ನ ಹೆಸರಿನಲ್ಲಿ ಮರಣ ಪ್ರಮಾಣಪತ್ರ ಸೃಷ್ಟಿಸಲಾಗಿದೆ. ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಜರುಗಿಸಿ ಕ್ರಮ ತೆಗೆದುಕೊಳ್ಳಬೇಕು ನನಗೆ ನ್ಯಾಯದೊರಕಿಸಿ ಕೊಡಬೇಕು' ಎಂದು ಒತ್ತಾಯಿಸಿ ಶಿವರಾಜ್ ಕಂದಾಯ ಇಲಾಖೆ, ಲೋಕಾಯುಕ್ತ, ಎಸಿಬಿಗೆ ಮೊರೆ ಹೋಗಿದ್ದರು.

ಅಲ್ಲಿ ನ್ಯಾಯ ಸಿಗಲಿಲ್ಲ ಎಂದು ಕೊನೆಗೆ ನ್ಯಾಯಾಲಯಕ್ಕೆ ಮೊರೆ ಹೋದ ಶಿವರಾಜ್, ಖಾಸಗಿ ದೂರು ದಾಖಲಿಸಿದ್ದರು.

ಈ ಸಂಬಂಧ ವಿಚಾರಣೆ ನಡೆಸಿದ ಪ್ರಧಾನ ಸಿವಿಲ್ ನ್ಯಾಯಾಧೀಶ ಹಾಜಿ ಹುಸೇನ್ ಸಾಬ್ ಯಾದವಾಡ ಅವರು ಆರೋಪಿಗಳ ವಿರುದ್ಧ ಪ್ರಕರಣ ದಾಖಲು ಮಾಡಲು ಆದೇಶಿಸಿದ್ದಾರೆ.

ಹಿಂದಿನ ತಹಶೀಲ್ದಾರ್ ಕೆ.ಎನ್. ರಾಜಶೇಖರ್, ಉಪ ತಹಶೀಲ್ದಾರ್ ಕೆ.ಎಲ್.ಜಯರಾಮ್, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷರೂ ಆಗಿರುವ ಗ್ರಾಮಲೆಕ್ಕಿಗ ಕೆ.ಎನ್. ಅರವಿಂದ್, ಕಂದಾಯ ನಿರೀಕ್ಷಕ ಸಾದತ್ ಉಲ್ಲಾಖಾನ್ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಎಂ.ಹೊಸಹಳ್ಳಿ ಗ್ರಾಮದ ರೈತ ಶಿವರಾಜ್ ಬದುಕಿದ್ದರೂ ಕಂದಾಯ ಇಲಾಖೆ ಅಧಿಕಾರಿಗಳು ಮರಣ ಪ್ರಮಾಣಪತ್ರ ವಿತರಣೆ ಮಾಡಿರುವ ಸಂಬಂಧ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದೆ. ನ್ಯಾಯಾಲಯದ ಆದೇಶದಂತೆ ನಾಲ್ಕು ಮಂದಿ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲು ಮಾಡಿದ್ದು ತನಿಖೆ ಮಾಡಲಾಗುತ್ತದೆ' ಎಂದು ನಗರಠಾಣೆ ಪಿಎಸ್ಐ ಸೀತಪ್ಪ ತಿಳಿಸಿದರು.

ಏನಿದು ವಿವಾದ?

ತಂದೆಯಿಂದ ತನಗೆ ಬಳುವಳಿಯಾಗಿ ಬಂದಿದ್ದ ಜಮೀನು ಕಬಳಿಸಲು ತಹಶೀಲ್ದಾರ್ ಕಚೇರಿ ಸಿಬ್ಬಂದಿಯೊಬ್ಬರ ನೇತೃತ್ವದಲ್ಲಿ ನಡೆದ ಷಡ್ಯಂತ್ರದ ಭಾಗವೇ ಮರಣ ಪ್ರಮಾಣ ಪತ್ರ ಎಂದು ಶಿವರಾಜ್ ದೂರಿನಲ್ಲಿ ತಿಳಿಸಿದ್ದಾರೆ.

ಮುಳಬಾಗಿಲು ತಹಶೀಲ್ದಾರ್ ಕಚೇರಿಯ ಸಿಬ್ಬಂದಿಯೂ ಈ ಷಡ್ಯಂತ್ರದಲ್ಲಿ ಭಾಗಿಯಾಗಿದ್ದಾರೆ ಎಂದು ಅವರು ದೂರಿನಲ್ಲಿ ತಿಳಿಸಿದ್ದರು.

ಪಡಿತರ ಚೀಟಿ ಸೇರಿದಂತೆ ಇನ್ನಿತರ ಸರ್ಕಾರಿ ದಾಖಲೆಗಳಲ್ಲೂ ಶಿವರಾಜ್ ಮೃತರಾಗಿದ್ದಾರೆ ಎಂದು ಆರೋಪಿಗಳು ತಿದ್ದುಪಡಿ ಮಾಡಿದ್ದರು ಎಂದು ದೂರಲಾಗಿದೆ.

ಬೆಳಗಾವಿ: ವಿಮಾನನಿಲ್ದಾಣದಲ್ಲಿ ಅಗ್ನಿಹೋತ್ರ ಕಾರ್ಯಕ್ರಮ!

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಸಾಂಬ್ರಾ ವಿಮಾನನಿಲ್ದಾಣದಲ್ಲಿ ಸಾಮೂಹಿಕ ಅಗ್ನಿಹೋತ್ರ ಕಾರ್ಯಕ್ರಮವನ್ನು ಶನಿವಾರ ನಡೆಸಲಾಗಿದೆ.

ನಿಲ್ದಾಣದ ನಿರ್ದೇಶಕ ರಾಜೇಶಕುಮಾರ್ ಮೌರ್ಯ ನೇತೃತ್ವದಲ್ಲಿ ಎಕ್ಸ್‌ಪರ್ಟ್ ವಾಲ್ವ್ಸ್ ಇಂಡಿಯಾ ಪ್ರೈ.ಲಿ. ಸಿಎಂಡಿ ವಿನಾಯಕ ಲೋಕೂರ ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮ ನೆರವೇರಿದೆ. ಮಹಿಳೆಯರೂ ಸೇರಿದಂತೆ 20ಕ್ಕೂ ಹೆಚ್ಚು ಮಂದಿ ಸಣ್ಣ ಸಣ್ಣ ಅಗ್ನಿಕುಂಡಗಳನ್ನು ಇಟ್ಟಕೊಂಡು ಅಗ್ನಿಹೋತ್ರದ ಹೋಮ–ಹವನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮದ ಫೋಟೊ ಹಾಗೂ ವಿಡಿಯೊಗಳನ್ನು ನಿಲ್ದಾಣದ ನಿರ್ದೇಶಕರೆ ನಿಲ್ದಾಣದ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

'ವಾತಾವರಣದ ಶುದ್ಧಿಗೆ ಅಗ್ನಿಹೋತ್ರ ಚಟುವಟಿಕೆ ಸಹಕಾರಿಯಾಗಿದೆ. ಇದು ದೇಶದ ಪ್ರಾಚೀನ ಸಂಪ್ರದಾಯವಾಗಿದೆ. ಅಧಿಕಾರಿಗಳು ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ವಿನಾಯಕ ಲೋಕೂರ ತಂಡದವರು ಪಾಲ್ಗೊಂಡಿದ್ದರು. ಮುಂದೆಯೂ ಆಗಾಗ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು' ಎಂದು ವಿಡಿಯೊದಲ್ಲಿ ತಿಳಿಸಿದ್ದಾರೆ.

ಬೆಳಗಾವಿಯ ಸಾಂಬ್ರಾ ವಿಮಾನನಿಲ್ದಾಣದಲ್ಲಿ ಶನಿವಾರ ನಡೆದ ಅಗ್ನಿಹೋತ್ರ ಕಾರ್ಯಕ್ರಮದ ನೋಟ

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ನಿರ್ದೇಶಕ ರಾಜೇಶ್‌ಕುಮಾರ್ ಮೌರ್ಯ, 'ಅ ಕಾರ್ಯಕ್ರಮ ವೈಯಕ್ತಿಕ ಹಿತಾಸಕ್ತಿಯದ್ದೇನಲ್ಲ. ವಿಮಾನನಿಲ್ದಾಣ ಪ್ರಾಧಿಕಾರದಿಂದ ನಿರ್ದೇಶನವೂ ಇರಲಿಲ್ಲ. ಅಗ್ನಿಹೋತ್ರದಿಂದ ವಾತಾವರಣ ಶುದ್ಧಿಯಾಗುತ್ತದೆ ಎನ್ನುವುದು ವೈಜ್ಞಾನಿಕವಾಗಿ ರುಜುವಾತಾಗಿದೆ. ನಮ್ಮ ಸಂಪ್ರದಾಯವೂ ಆಗಿರುವ ಅ ಕಾರ್ಯಕ್ರಮವನ್ನು ಸದುದ್ದೇಶದಿಂದ ನಡೆಸಿದ್ದೇವೆ. ಸ್ಥಳೀಯರನ್ನು ಒಳಗೊಳ್ಳುವ ಚಟುವಟಿಕೆಯ ಭಾಗವಾಗಿಯೂ ಮಾಡಿದ್ದೇವೆ' ಎಂದು ತಿಳಿಸಿದರು.

'ಇದನ್ನು ಇತರ ವಿಮಾನನಿಲ್ದಾಣದವರೂ ಅನುಸರಿಸಬಹುದು' ಎಂದರು.

ಮೃತ ವ್ಯಕ್ತಿಗೆ ಕೋವಿಡ್ ಲಸಿಕೆ!

ತುಮಕೂರು: ವ್ಯಕ್ತಿಯೊಬ್ಬ ಮೃತಪಟ್ಟ 7 ತಿಂಗಳ ನಂತರ, ಆ ವ್ಯಕ್ತಿ 2ನೇ ಡೋಸ್ ಕೋವಿಡ್ ಲಸಿಕೆ ಪಡೆದ ಬಗ್ಗೆ ಆರೋಗ್ಯ ಇಲಾಖೆಯಿಂದ ಕುಟುಂಬಸ್ಥರ ಮೊಬೈಲ್ ಸಂಖ್ಯೆಗೆ ಸಂದೇಶ ರವಾನೆಯಾಗಿದ್ದು, ಕುಟುಂಬ ಸದಸ್ಯರು ಸಂದೇಶ ನೋಡಿ ಕಂಗಾಲಾಗಿದ್ದಾರೆ.

ಸದಾಶಿವ ನಗರದ ನಿವಾಸಿ ಎಂ.ಎಲ್.ಬಸಪ್ಪ ಎಂಬುವವರು ಕಳೆದ ಜೂನ್ ತಿಂಗಳಿನಲ್ಲಿ ಮೃತಪಟ್ಟಿದ್ದರು. ಏಪ್ರಿಲ್ ತಿಂಗಳಿನಲ್ಲಿ ಮೊದಲ ಡೋಸ್ ಲಸಿಕೆ ಪಡೆದಿದ್ದರು. ಮೃತ ವ್ಯಕ್ತಿ ಜನವರಿ 29 ರಂದು ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಎರಡನೇ ಡೋಸ್ ಕೋವಿಶೀಲ್ಡ್ ಲಸಿಕೆ ಪಡೆದಿದ್ದಾರೆ ಎಂದು ಮೊಬೈಲ್ ಸಂಖ್ಯೆಗೆ ಸಂದೇಶ ಕಳುಹಿಸಲಾಗಿದೆ. ಮೃತರ ಜೊತೆಗೆ ಮೃತನ ಕುಟುಂಬದ ಮೂರು ಜನರ ಹೆಸರಲ್ಲಿ ಲಸಿಕೆ ಪಡೆದ ಸಂದೇಶ ಮತ್ತು ಪ್ರಮಾಣಪತ್ರ ರವಾನಿಸಿದ್ದು, ಇದನ್ನು ಕಂಡ ಸದಸ್ಯರು ಬೆರಗಾಗಿದ್ದಾರೆ.

ಮೃತನ ಕುಟುಂಬ ಸದಸ್ಯರು ಕಳೆದ ಮೂರು ತಿಂಗಳ ಹಿಂದೆಯೇ ಎರಡನೇ ಡೋಸ್ ಲಸಿಕೆ ಪಡೆದಿದ್ದರು. ಮೃತರ ಮಗ ಪಂಚಾಕ್ಷರಯ್ಯ ಮತ್ತು ಮಗಳು ಮತ್ತೊಮ್ಮೆ ಎರಡನೇ ಡೋಸ್ ಲಸಿಕೆ ಪಡೆದ ಕುರಿತು ಸಂದೇಶ ರವಾನಿಸಲಾಗಿದೆ. ಮೂರು ಜನ ಲಸಿಕೆ ಪಡೆದ ಬಗ್ಗೆ ಒಂದೇ ಮೊಬೈಲ್ ಸಂಖ್ಯೆ ಮೂರು ಸಂದೇಶಗಳು ಬಂದಿವೆ.

ರಾಜ್ಯದಲ್ಲಿ ಇಂತಹ ಪ್ರಕರಣಗಳು ಹಲವು ಬೆಳಕಿಗೆ ಬಂದಿದ್ದು, ಜಿಲ್ಲೆಯಲ್ಲಿ ಮೊದಲ ಬಾರಿಗೆ ಇಂತಹ ಘಟನೆ ಕಂಡು ಸಾರ್ವಜನಿಕರು ಬೆರಗಾಗಿದ್ದಾರೆ. ಇದೇ ರೀತಿ ಇನ್ನು ಎಷ್ಟು ಜನರಿಗೆ ಆರೋಗ್ಯ ಸಿಬ್ಬಂದಿ ಲಸಿಕೆ ನೀಡಲಾಗಿದೆ ಎಂದು ಸುಳ್ಳು ಸಂದೇಶ ಕಳುಹಿಸಿರಬಹುದು ಎನ್ನುವುದು ಜನ ಸಾಮಾನ್ಯರ ಪ್ರಶ್ನೆಯಾಗಿದೆ.

ಒಬ್ಬರಿಗೆ ಸಂದೇಶ ಕಳುಹಿಸಿದ್ದರೆ ಏನೋ ತಾಂತ್ರಿಕ ಸಮಸ್ಯೆಯಿಂದಾಗಿ ಬಂದಿರಬಹುದು ಅಂತ ಸುಮ್ಮನಿರಬಹುದು. ಆದರೆ, ಮನೆಯ ಮೂರು ಜನರಿಗೆ ಇದೇ ರೀತಿ ಸಂದೇಶ ಬಂದಿರುವುದು ಆರೋಗ್ಯ ಇಲಾಖೆಯ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಆರೋಗ್ಯ ಇಲಾಖೆಯ ಎಡವಟ್ಟು ಸಾರ್ವಜನಿಕರ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದ್ದು, ಇಲಾಖೆಯ ವಿರುದ್ಧ ನಗರದ ಜನರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಲಸಿಕೆ ಪಡೆಯದೇ ಇದ್ದವರಿಗೆ, ಸತ್ತವರಿಗೆ ಈ ರೀತಿ ಸಂದೇಶ ಕಳುಹಿಸಿ, ಸುಳ್ಳು ಲೆಕ್ಕ ಬರೆಯುವ ಕೆಲಸಕ್ಕೆ ಮುಂದಾಗಿರುವುದು ಸರಿಯಲ್ಲ. ಆರೋಗ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಬೇಕು ಎಂದು ಮೃತರ ಮಗ ಪಂಚಾಕ್ಷರಯ್ಯ ಬೇಸರದ ಮಾತಗಳನ್ನಾಡಿದರು.

'ಇಂತಹ ಸಂದೇಶ ಹೋಗಿರುವುದು ಇದೇ ಮೊದಲು. ಘಟನೆ ಕುರಿತಂತೆ ಸಂಪೂರ್ಣ ಮಾಹಿತಿ ನೀಡುವಂತೆ ತಾಲ್ಲೂಕು ವೈದ್ಯಾಧಿಕಾರಿಗೆ ಸೂಚಿಸಲಾಗಿದೆ' ಎಂದು ಡಿಎಚ್‌ಒ ಡಾ. ನಾಗೇಂದ್ರಪ್ಪ ತಿಳಿಸಿದ್ದಾರೆ.

'ಅಲಿಂಗ' ಸಮಾವೇಶ ಆಯೋಜನೆಗೆ ಒಲವು

ಇಬ್ರಾಹಿಂ- ಎಸ್.ಆರ್. ಪಾಟೀಲ ಚರ್ಚೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿಧಾನ ಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ಹಾಗೂ ಕಾಂಗ್ರೆಸ್ ಮುಖಂಡ ಎಸ್.ಆರ್. ಪಾಟೀಲ ಶನಿವಾರ ನಗರದಲ್ಲಿ ಭೇಟಿಯಾಗಿ ಚರ್ಚಿಸಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಎಸ್.ಆರ್. ಪಾಟೀಲ, ಇಬ್ರಾಹಿಂ ಅವರು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಸ್ಥಾನದ ಆಕಾಂಕ್ಷಿಯಾಗಿದ್ದರು. ಸಿಗದಿದ್ದಕ್ಕೆ ಬಹಳ ನೋವು ಮಾಡಿಕೊಂಡಿದ್ದಾರೆ. ಅವರಿಗೆ ಸಾಂತ್ವನ ಹೇಳಿದ್ದೇನೆ ಎಂದರು.

'ಪಕ್ಷದಲ್ಲಿ ಮುಂದುವರೆಯಲು ಮನವಿ ಮಾಡಿಕೊಂಡಿದ್ದೇನೆ. ರಾಜ್ಯದ ಉದ್ದಗಲಕ್ಕೂ ಪ್ರವಾಸ ಮಾಡಿ, ಅಭಿಪ್ರಾಯ ತಿಳಿದುಕೊಳ್ಳುತ್ತೇನೆ ಎಂದಿದ್ದಾರೆ' ಎಂದು ಹೇಳಿದರು.

'ವಿಧಾನ ಪರಿಷತ್‌ನಲ್ಲಿ ಜೊತೆಯಾಗಿ ಕೆಲಸ ಮಾಡಿದ್ದೇವೆ. ಮಾಧ್ಯಮದ ಮುಂದೆ ಎಲ್ಲ ವಿಷಯ ಹೇಳುವುದಿಲ್ಲ. ಪ್ರಸಂಗ ಬಂದಾಗ ಹೇಳುತ್ತೇನೆ. ಕಾಂಗ್ರೆಸ್‌ನಲ್ಲಿದ್ದೇನೆ. ಕಾಂಗ್ರೆಸ್ ಪರವಾಗಿ ಕೆಲಸ ಮಾಡುತ್ತೇನೆ. ಇಬ್ರಾಹಿಂ ದೊಡ್ಡ ನಾಯಕರು. ಅವರು ಪಕ್ಷ ಬಿಟ್ಟರೆ ತೊಂದರೆಯಾಗುತ್ತದೆ' ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಎಂ. ಇಬ್ರಾಹಿಂ ಮಾತನಾಡಿ, ಕೂಡಲಸಂಗಮದಿಂದ 'ಅಲಿಂಗ' (ಅಲ್ಪಸಂಖ್ಯಾತರು, ಲಿಂಗಾಯತ) ಸಮಾವೇಶ ಮಾಡಲಾಗುವುದು. ಅದು ಪಕ್ಷಾತೀತವಾಗಿ ನಡೆಯಲಿದ್ದು, ಸ್ವಾಮೀಜಿಗಳು, ಸೂಫಿ ಸಂತರು ಭಾಗವಹಿಸಲಿದ್ದಾರೆ ಎಂದರು

'ನನಗೆ ಅವಕಾಶ ಸಿಗದಿದ್ದಕ್ಕೆ ಪಾಟೀಲರು ವಿಷಾದ ವ್ಯಕ್ತಪಡಿಸಿದ್ದಾರೆ. ಉತ್ತರ ಕರ್ನಾಟಕ ಅಸಮಾನತೆ ನಿವಾರಣೆಗಾಗಿ ಹೋರಾಟ ಮಾಡುವ ಬಗ್ಗೆ ಚರ್ಚೆ ಮಾಡಿದ್ದೇವೆ' ಎಂದು ಹೇಳಿದರು.

'ಉತ್ತರ ಕರ್ನಾಟಕ ಪ್ರವಾಸ ಮಾಡುತ್ತೇನೆ. ನಿರೀಕ್ಷೆಗಿಂತ ಎರಡರಷ್ಟು ಬೆಂಬಲ ಸಿಗುತ್ತಿದೆ. ಜೆಡಿಎಸ್, ಸಮಾಜವಾದಿ ಪಾರ್ಟಿ, ತೃಣಮೂಲ ಕಾಂಗ್ರೆಸ್ ಪಕ್ಷಗಳ ಆಯ್ಕೆಯಿದೆ. ವಿಳಂಬ ಮಾಡುವುದಿಲ್ಲ. ಶೀಘ್ರವೇ ನಿರ್ಧಾರವನ್ನು ಪ್ರಕಟಿಸುತ್ತೇನೆ' ಎಂದರು.

'ಸಿದ್ದರಾಮಯ್ಯ ಅವರಿಂದ ಫೋನ್ ಬಂದಿಲ್ಲ. ನಿರೀಕ್ಷೆಯೂ ಮಾಡುವುದಿಲ್ಲ. ಆರ್‌ಎಸ್‌ಎಸ್‌ನವರು ಫೋನ್ ಮಾಡಿದರೂ ಸ್ಪಂದಿಸುತ್ತೇನೆ. ಇನ್ನು ಸಿದ್ದರಾಮಯ್ಯ ಅವರು ಫೋನ್ ಮಾಡಿದರೆ ಮಾತನಾಡುವುದಿಲ್ಲವೇ' ಎಂದು ಪ್ರಶ್ನಿಸಿದರು.

ಹುಬ್ಬಳ್ಳಿಯಲ್ಲಿ ಶನಿವಾರ ಕಾಂಗ್ರೆಸ್ ಮುಖಂಡ ಎಸ್.ಆರ್. ಪಾಟೀಲ ಹಾಗೂ ಸಿ.ಎಂ. ಇಬ್ರಾಹಿಂ ಚರ್ಚಿಸಿದರು



ಹೊಸ ಸರ್ಕಾರದ ಹೆಜ್ಜೆ: ಅಭಿವೃದ್ಧಿ ಪರ್ವದ ಗೆಜ್ಜೆನಾದ

ನಾಡಿನ ಪ್ರಗತಿಗೆ 'ಅಮೃತ' ಸಿಂಚನ



ಕೋವಿಡ್ ತಂದಿತ್ತ ಆರ್ಥಿಕ ಹಿಂಜರಿತ, ಕೋವಿಡ್ ದಾಳಿಯಿಂದಾಗಿ ಏಟುತಿಂದಂತಿದ್ದ ಆಡಳಿತ ವ್ಯವಸ್ಥೆ; ಈ ಕಾರಣದಿಂದಾಗಿ ಅಭಿವೃದ್ಧಿಯ ಚಹರೆಯನ್ನೇ ಕಳೆದುಕೊಂಡಂತಿದ್ದ ಕರ್ನಾಟಕದ ವಿಷಣ್ಣ–ಸಂದಿಗ್ದ ಪರಿಸ್ಥಿತಿಯಲ್ಲಿ ಆಡಳಿತದ ಚುಕ್ಕಾಣಿ ಹಿಡಿದ ಬಸವರಾಜ ಬೊಮ್ಮಾಯಿ, ಒಂದಿನಿತು ತಡಮಾಡದೇ ಹೊಸತನದ ಸ್ಪರ್ಶ ನೀಡಿದರು. ಅಧಿಕಾರಿ ಸಮೂಹಕ್ಕೆ ಪ್ರೇರಣೆ ನೀಡಿ, ಉತ್ತಮ ಆಡಳಿತ ಹೇಗಿರಬೇಕೆಂಬ ಪಾಠ ಮಾಡಿದ ಮುಖ್ಯಮಂತ್ರಿ ಬೊಮ್ಮಾಯಿ, ಹೊಸ ಘೋಷಣೆಗಳ ಮೂಲಕ ಜನರಲ್ಲಿ ವಿಶ್ವಾಸ ತುಂಬುವ ಯತ್ನಕ್ಕೆ ಕೈಹಾಕಿದರು.

ಬೊಮ್ಮಾಯಿ ಅವರ ಸಂಕಲ್ಪ ಬಲ– ಕನಸಿನ ಹಂಬಲದ ಆರುತಿಂಗಳ ಪುಟ್ಟಯಾತ್ರೆಯಲ್ಲಿಕನ್ನಡ ನಾಡಿನಲ್ಲಿ ಅಭಿವೃದ್ಧಿಯ ಹೆಜ್ಜೆಗಳ ಗೆಜ್ಜೆಯ ನಾದ ಕೇಳುವಂತೆ ಮಾಡಿದ್ದಾರೆ. ನೂತನ ಸಂಪುಟ ಅಸ್ತಿತ್ವಕ್ಕೆ ಬಂದು ಆರು ತಿಂಗಳು ಕಳೆಯುವಷ್ಟರಲ್ಲೇ ರಾಜ್ಯದಲ್ಲಿ ಹೊಸ ಹೊಸ ಯೋಜನೆಗಳು ಜಾರಿಗೆ ಬಂದಿವೆ. ಎಲ್ಲ ಜನರನ್ನೂ ಒಳಗೊಳ್ಳುವಂತಹ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಆರಂಭವಾಗಿದ್ದು, ನಾಡಿನ ಉದ್ದಗಲಕ್ಕೆ ಕ್ರಿಯಾಶೀಲ ಆಡಳಿತದ ಕಂಪು ಪಸರಿಸಿದೆ.

ಕೋವಿಡ್ ಸಂಕಷ್ಟ, ಅಕಾಲಿಕ ಮಳೆಯ ಅಬ್ಬರ, ಪ್ರವಾಹ ಮತ್ತಿತರ ಸವಾಲುಗಳ ನಡುವೆಯೇ ರಾಜ್ಯ ಅಭಿವೃದ್ಧಿಯ ರಥ ಸರಾಗವಾಗಿ ಮುನ್ನಡೆಯುವಂತೆ ಮುಖ್ಯಮಂತ್ರಿ ಎಚ್ಚರಿಕೆ ವಹಿಸಿದ್ದಾರೆ. ಜುಲೈನಿಂದ ನವೆಂಬರ್‌ವರೆಗೆ ಸುರಿದ ಮಳೆ ಮತ್ತು ನೆರೆ ಹಾವಳಿಯಿಂದ ಮನೆ, ಆಸ್ತಿ, ಬೆಳೆ ಕಳೆದುಕೊಂಡಿರುವ ಜನರಿಗೆ ₹ 3,326.86 ಕೋಟಿ ಪರಿಹಾರ ವಿತರಿಸಿರುವ ಸರ್ಕಾರ, ಅವರ ಕಣ್ಣೀರು ಒರೆಸುವ ಕೆಲಸ ಮಾಡಿದೆ.

2021ರ ಜುಲೈ 28ರಂದು ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂತು. 18 ದಿನಗಳು ಕಳೆಯುವಷ್ಟರಲ್ಲೇ ಸ್ವಾತಂತ್ರ್ಯ ದಿನಾಚರಣೆಯೂ ಬಂತು.

ಮುಖ್ಯಾಂಶಗಳು

- ಜನರ ಮನೆ ಬಾಗಿಲಿಗೆ 'ಜನಸೇವಕ'
- ಜನರ ಕಷ್ಟಕ್ಕೆ 'ಜನ ಸ್ಪಂದನ'
- ದಾಖಲೆಗಳ ಸಂಗ್ರಹಕ್ಕೆ 'ಇ–ಸಹಮತಿ'

ಸ್ವಾತಂತ್ರ್ಯದ ಅಮೃತ ಮಹೋತ್ಸವ ವರ್ಷ ಆಚರಣೆಗೆ ಚಾಲನೆ ದೊರೆತ ಆ ದಿನ ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ದೂರದೃಷ್ಟಿಯ 14 'ಅಮೃತ ಯೋಜನೆ'ಗಳನ್ನು ಘೋಷಿಸಿದ ಮುಖ್ಯಮಂತ್ರಿ, ಅವುಗಳ ಅನುಷ್ಠಾನಕ್ಕಾಗಿ 644.5 ಕೋಟಿ ಅನುದಾನವನ್ನೂ ಪ್ರಕಟಿಸಿದ್ದರು.

ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ 125ನೇ ಜನ್ಮದಿನಾಚರಣೆ ಸಂದರ್ಭದಲ್ಲಿ 75 ಹೊಸ ಎನ್‌ಸಿಸಿ ಘಟಕಗಳನ್ನು ಆರಂಭಿಸುವ ಘೋಷಣೆಯೊಂದಿಗೆ ಅಮೃತ ಮಹೋತ್ಸವವನ್ನು ಮತ್ತಷ್ಟು ಸ್ಮರಣೀಯವಾಗಿಸುವ ಪ್ರಯತ್ನ ಮುಂದುವರಿಸಿದ್ದಾರೆ. ಬಹುತೇಕ 'ಅಮೃತ ಯೋಜನೆ'ಗಳ ಅನುಷ್ಠಾನಕ್ಕೆ ಚಾಲನೆ ದೊರೆತಿದ್ದು, ಅಗತ್ಯ ಅನುದಾನವನ್ನೂ ಬಿಡುಗಡೆ ಮಾಡಲಾಗಿದೆ.

ಆಡಳಿತಕ್ಕೆ ಚುರುಕು: ತಂತ್ರಜ್ಞಾನ ಮತ್ತು ಮಾನವ ಸಂಪನ್ಮೂಲವನ್ನು ಸಮರ್ಪಕವಾಗಿ ಬಳಸಿಕೊಂಡು ಸಾರ್ವಜನಿಕರಿಗೆ ತ್ವರಿತವಾಗಿ ಸರ್ಕಾರದ ಸೇವೆಗಳನ್ನು ಒದಗಿಸುವ ಹಲವು ಮಹತ್ವಾಕಾಂಕ್ಷಿ ಯೋಜನೆಗಳನ್ನು ರೂಪಿಸಿರುವ ಸರ್ಕಾರ, ಅಷ್ಟೇ ಅಚ್ಚುಕಟ್ಟಾಗಿ ಅವುಗಳನ್ನು ಕಾರ್ಯರೂಪಕ್ಕೂ ತಂದಿದೆ. 'ಜನಸೇವಕ'ರ ಮೂಲಕ ಸರ್ಕಾರದ ಸೇವೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸುವ ಯೋಜನೆ ಬೆಂಗಳೂರಿನಲ್ಲಿ ಯಶಸ್ವಿಯಾಗಿ ಅನುಷ್ಠಾನಕ್ಕೆ ಬಂದಿದೆ. ಈಗ ಉಳಿದ ಜಿಲ್ಲೆಗಳಲ್ಲೂ ಈ ಯೋಜನೆ ಅನುಷ್ಠಾನ ಆರಂಭವಾಗಿದೆ. ಇದರಿಂದ ಒಂದೆಡೆ ಸರ್ಕಾರಿ ಕಚೇರಿಗಳ ಮೇಲಿನ ಒತ್ತಡ ತಗ್ಗಿದರೆ, ಜನರು ಸರ್ಕಾರಿ ಸೇವೆ ಪಡೆಯಲು ಅಲೆದಾಡುವುದೂ ತಪ್ಪುತ್ತಿದೆ. ಸರ್ಕಾರಿ ಸೇವೆಗಗಳಿಗೆ ಸಂಬಂಧಿಸಿದ ಸಾರ್ವಜನಿಕರ ಅಹವಾಲುಗಳನ್ನು ಆಲಿಸುವ ಜನಸ್ಪಂದನ ವ್ಯವಸ್ಥೆಗೆ ಮುಖ್ಯಮಂತ್ರಿ ಹೊಸ ಸ್ಪರ್ಶನ ನೀಡಿದ್ದಾರೆ. ಇದಕ್ಕಾಗಿಯೇ ಇ–ಜನಸ್ಪಂದನ ಎಂಬ ಹೊಸ ಯೋಜನೆಯನ್ನು ಅವರು ಜಾರಿಗೊಳಿಸಿದ್ದಾರೆ. ಸಾರ್ವಜನಿಕರ ದೂರು ಸಲ್ಲಿಸಿದ ಸಂದರ್ಭದಿಂದ ವಿಲೇವಾರಿಯವರೆಗೆ ಎಲ್ಲ ಹಂತಗಳಲ್ಲೂ ಆನ್‌ಲೈನ್ ಮೂಲಕವೇ ನಿಗಾ ಇಡುವ ವ್ಯವಸ್ಥೆ ಇದರಲಿಲ್ಲ. ಇದರಿಂದ ಸಾರ್ವಜನಿಕರ ಅಹವಾಲುಗಳ ಇತ್ಯರ್ಥಕ್ಕೆ ಸರ್ಕಾರದ ಖಾತರಿ ದೊರೆತಂತಾಗಿದೆ.

ರಾಜ್ಯದ ಜನರು ಮತ್ತು ವಿದ್ಯಾರ್ಥಿಗಳಿಗೆ ಸಂಬಂಧಿಸಿದ ದತ್ತಾಂಶಗಳು ಸರ್ಕಾರದ ಬಳಿ ಇವೆ. ಅವುಗಳನ್ನು ಸಹಮತಿಯ ಆಧಾರದಲ್ಲಿ ಬಳಕೆದಾರ ಸಂಸ್ಥೆಗಳಿಗೆ ಒದಗಿಸುವ ಇ–ಸಹಮತಿ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆ. ರೈತರು ಸಾಲ ಪಡೆಯಲು, ವಿದ್ಯಾರ್ಥಿಗಳು ಉದ್ಯೋಗ ಪಡೆಯಲು ಸರ್ಕಾರದ ಬಳಿ ಇರುವ ದತ್ತಾಂಶದಿಂದ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಸುಲಭವಾಗಿ ಒದಗಿಸಲು ಇದು ನೆರವಾಗಲಿದೆ. ದಾಖಲೆಗಳ ಹುಡುಕಾಟ ಮತ್ತು ಸಲ್ಲಿಕೆಗಾಗಿ ಜನರು ಸಮಯ ವ್ಯರ್ಥ ಮಾಡುವುದನ್ನು ತಪ್ಪಿಸುವುದಕ್ಕೆ ಈ ಯೋಜನೆ ಸಹಕಾರಿಯಾಗಲಿದೆ.

ಸಿದ್ಧಗಂಗಾಶ್ರೀಗೆ ಗೌರವ

ಅನ್ನ, ಆಶ್ರಯ ಮತ್ತು ಅಕ್ಷರ ದಾಸೋಹ ನೀಡುವ ಮೂಲಕ ರಾಜ್ಯದ ಲಕ್ಷಾಂತರ ಮಕ್ಕಳ ಭವಿಷ್ಯ ರೂಪಿಸಿದ್ದ ತುಮಕೂರು ಸಿದ್ಧಗಂಗಾ ಮಠದ ಹಿಂದಿನ ಪೀಠಾಧಿಪತಿ ಶಿವಕುಮಾರ ಸ್ವಾಮೀಜಿ ಅವರು ಲಿಂಗೈಕ್ಯರಾದ ಜನವರಿ 21 ಅನ್ನು 'ದಾಸೋಹ ದಿನ' ಎಂದು ಅಧಿಕೃತವಾಗಿ ಘೋಷಿಸುವ ಕೆಲಸವನ್ನು ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಮಾಡಿದೆ.

2021ರ ಸೆಪ್ಟೆಂಬರ್ 3ರಂದು ಈ ಸಂಬಂಧ ಅಧಿಕೃತ ಆದೇಶ ಹೊರಡಿಸಲಾಗಿತ್ತು. 2022ರ ಜನವರಿ 21ರಂದು ತುಮಕೂರು ಸಿದ್ಧಗಂಗಾ ಮಠದಲ್ಲಿ ನಡೆದ 'ದಾಸೋಹ ದಿನ'ಕ್ಕೆ ಚಾಲನೆ ನೀಡಿದ ಮುಖ್ಯಮಂತ್ರಿ, ತ್ರಿವಿಧ ದಾಸೋಹಿಗೆ ಗೌರವ ಸಲ್ಲಿಸುವ ಕೆಲಸ ಮಾಡಿದರು.

ಗ್ರಾಮಗಳಲ್ಲೇ ಸಿಗಲಿದೆ ಸರ್ಕಾರಿ ಸೇವೆ

ಸರ್ಕಾರದ ವಿವಿಧ ಸೇವೆಗಳನ್ನು 'ಗ್ರಾಮ ಒನ್' ನಾಗರಿಕ ಸೇವಾ ಕೇಂದ್ರಗಳ ಮೂಲಕ ಒದಗಿಸುವ ಯೋಜನೆಗೆ ಗಣರಾಜ್ಯೋತ್ಸವ ದಿನದಂದು ಮುಖ್ಯಮಂತ್ರಿ ಚಾಲನೆ ನೀಡಿದ್ದಾರೆ. ರೈತರು ಮತ್ತು ಸಾಮಾನ್ಯ ಜನರು ಸರ್ಕಾರಿ ಸೇವೆಗಳನ್ನು ಪಡೆಯಲು ತಾಲ್ಲೂಕು ಕೇಂದ್ರಗಳಿಗೆ ಅಲೆದಾಡುವುದನ್ನು ತಪ್ಪಿಸುವ ಉದ್ದೇಶದಿಂದ ಸರ್ಕಾರ ಈ ಯೋಜನೆಯನ್ನು ರೂಪಿಸಿದೆ. 'ಗ್ರಾಮ ಒನ್' ನಾಗರಿಕ ಸೇವಾ ಕೇಂದ್ರಗಳು ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಆಡಳಿತ ವ್ಯವಸ್ಥೆಗೆ ಮತ್ತಷ್ಟು ವೇಗ ನೀಡಲಿವೆ.

ಎನ್‌ಇಪಿ ಅನುಷ್ಠಾನದಲ್ಲೂ ಮುಂದೆ: ಈಗಿನ ಅಗತ್ಯಕ್ಕೆ ತಕ್ಕಂತೆ ದೇಶದ ಶಿಕ್ಷಣ ವ್ಯವಸ್ಥೆಯನ್ನು ರೂಪಿಸುವ ಮತ್ತು ಭಾರತೀಯ ಪರಂಪರೆಯ ತಳಹದಿಯ ಮೇಲೆ ಶಿಕ್ಷಣ ವ್ಯವಸ್ಥೆಯನ್ನು ಮರು ರೂಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ರೂಪಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅನುಷ್ಠಾನದಲ್ಲಿ ಕರ್ನಾಟಕವು ದೇಶದಲ್ಲೇ ಮುಂಚೂಣಿಯಲ್ಲಿದೆ.

ದೇಶದ ಇತರ ರಾಜ್ಯಗಳಲ್ಲಿ ಎನ್‌ಇಪಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಚರ್ಚೆಗಳು ನಡೆಯುತ್ತಿವೆ. ಆದರೆ,ಕರ್ನಾಟಕದಲ್ಲಿ ಮುಖ್ಯಮಂತ್ರಿ ಬವಸರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ 2021ರ ಆಗಸ್ಟ್ 23ರಂದೇ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನಕ್ಕೆ ಚಾಲನೆ ನೀಡಿದೆ. ಇದು ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಆಮೂಲಾಗ್ರ ಸುಧಾರಣೆ ತರುವ ನಿರೀಕ್ಷೆಯನ್ನು ಮೂಡಿಸಿದೆ.

ಆಡಂಬರಕ್ಕೆ ವಿದಾಯ ಹೇಳಿದ ಬೊಮ್ಮಾಯಿ

'ಸಿಎಂ ಎಂದರೆ ಕಾಮನ್ ಮ್ಯಾನ್' ಎಂದು ವ್ಯಾಖ್ಯಾನಿಸುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ನುಡಿದಂತೆ ನಡೆಯುವ ದಿಕ್ಕಿನಲ್ಲಿ ಹೆಜ್ಜೆ ಇರಿಸಿದ್ದಾರೆ. ಅದಕ್ಕಾಗಿಯೇ ಮುಖ್ಯಮಂತ್ರಿ ಹುದ್ದೆಯ ಕಾರಣಕ್ಕಾಗಿ ಸಂಪ್ರದಾಯದಂತೆ ದೊರಕುವ ಅನೇಕ ಆಡಂಬರದ ಸೌಲಭ್ಯಗಳನ್ನು ನಿರಾಕರಿಸಿದ್ದಾರೆ.

ಸಭೆ, ಸಮಾರಂಭಗಳಲ್ಲಿ ಹಾರ, ತುರಾಯಿ, ಪೇಟ ತೊಡಿಸಿ ಸನ್ಮಾನಿಸುವುದನ್ನು ನಿರ್ಬಂಧಿಸಿ ಮುಖ್ಯಮಂತ್ರಿಯವರ ಸೂಚನೆಯಂತೆ ಆದೇಶ ಹೊರಡಿಸಲಾಗಿದೆ. ಹಾರ, ತುರಾಯಿ, ಶಾಲು, ಸನ್ಮಾನಗಳ ಬದಲಿಗೆ ಪುಸ್ತಕ ಪಡೆಯುವ ನಿರ್ಧಾರದ ಮೂಲಕ ಓದುವ ಸಂಸ್ಕೃತಿ ಬೆಳೆಸುವ ಪ್ರಯತ್ನಕ್ಕೆ ಈ ಸರ್ಕಾರ ನಾಂದಿಹಾಡಿದೆ.

ಎಲ್ಲೆಡೆಯೂ 'ಝೀರೋ ಟ್ರಾಫಿಕ್' ಸೌಲಭ್ಯ ಬೇಡ, ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಈ ವ್ಯವಸ್ಥೆ ಇರಲಿ ಎಂಬ ನಿಲುವು ತಳೆದ ಬೊಮ್ಮಾಯಿ, ಮುಖ್ಯಮಂತ್ರಿಯವರ ಪ್ರಯಾಣದ ವೇಳೆ ಸಂಚಾರ ನಿರ್ಬಂಧದಿಂದ ಸಾಮಾನ್ಯ ನಾಗರಿಕರು ಅನುಭವಿಸುತ್ತಿದ್ದ ತೊಂದರೆಯನ್ನು ಪರಿಹರಿಸಿದ್ದಾರೆ.

ಮುಖ್ಯಮಂತ್ರಿ ಪ್ರವಾಸದ ವೇಳೆ ಪ್ರತಿ ಬಾರಿಯೂ ಗೌರವ ವಂದನೆ ಸಲ್ಲಿಸುವ ಸಂಪ್ರದಾಯ ಇದೆ. ಅದು ಕೂಡ ಕಡ್ಡಾಯವಲ್ಲ ಎನ್ನುವ ಮೂಲಕ ಬೊಮ್ಮಾಯಿ ಅವರು ಆಡಂಬರದಿಂದ ದೂರುವುಳಿದು ಕೆಲಸ ಮಾಡುತ್ತಿದ್ದಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಅಮೃತ ಯೋಜನೆಗಳಿಗೆ ಅನುದಾನ

- ₹ 225 ಕೋಟಿ — 750 ಅಮೃತ ರೈತ ಉತ್ಪಾದಕ ಸಂಸ್ಥೆಗಳ ಆರಂಭಕ್ಕೆ
- ₹ 75 ಕೋಟಿ — 'ಅಮೃತ ನಿರ್ಮಲ ನಗರ ಯೋಜನೆ'ಯಡಿ ನಗರ ಸ್ಥಳೀಯ ಸಂಸ್ಥೆಗಳಿಗೆ
- ₹ 75 ಕೋಟಿ — 750 ಶಾಲೆಗಳ ಅಭಿವೃದ್ಧಿಗೆ
- ₹ 150 ಕೋಟಿ — 750 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಭಿವೃದ್ಧಿಗೆ
- ₹ 112 ಕೋಟಿ — ಅಮೃತ ಕೌಶಲ್ಯ ತರಬೇತಿ ಯೋಜನೆಗೆ

ರಾಜ್ಯದಲ್ಲಿ 15 ರಿಂದ 18 ವರ್ಷದೊಳಗಿನವರು 31.75 ಲಕ್ಷ ಮಂದಿ ಇದ್ದು ಅವರಲ್ಲಿ 22.42 ಲಕ್ಷ ಮಂದಿಗೆ ಮೊದಲ ಡೋಸ್ ಲಸಿಕೆ ನೀಡಲಾಗಿದೆ.

ಅಭಿವೃದ್ಧಿಯ ದೂರದರ್ಶಿತ್ವ: ಹೊಸ ಭರವಸೆಯ ಮುನ್ನುಡಿ

ಸ್ವರಾಜ್ಯದಿಂದ 'ಸುರಾಜ್ಯ' ದತ್ತ

ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಗದ್ದುಗೆಯ ಚುಕ್ಕಾಣಿ ಹಿಡಿದ ಮರುಕ್ಷಣವೇ, ತಮ್ಮ ಆಡಳಿತದ ದಿಕ್ಸೂಚಿ ಹಾಗೂ ಜನಪರ ಕಳಕಳಿಯನ್ನು ನಾಡಿನ ಮುಂದಿಟ್ಟಿದ್ದರು. ಪ್ರಮಾಣ ವಚನ ಸ್ವೀಕರಿಸಿದ ಬೆನ್ನಲ್ಲೆ ಏಕಾಂಗಿಯಾಗಿ ನಡೆಸಿದ ಚೊಚ್ಚಲ ಸಂಪುಟ ಸಭೆಯಲ್ಲಿ ರೈತರು, ಹಿರಿಯರು, ವಿಧವೆಯರು, ಅಂಗವಿಕಲರು, ದೀನದಲಿತರ ಕಲ್ಯಾಣಕ್ಕೆ ಆದ್ಯತೆ ನೀಡುವ ನಿರ್ಣಯಗಳನ್ನು ಕೈಗೊಂಡಿದ್ದರು.

ಆ ಮೂಲಕ, ಮುಂದಿನ ದಿನಗಳಲ್ಲಿ ಜನಕಲ್ಯಾಣ, ಜನಪರ ಯೋಜನೆಗಳನ್ನು ಕೈಗೊಳ್ಳುವ ಭರವಸೆಯ ಮುನ್ನುಡಿ ಬರೆದಿದ್ದರು. ಸಾಗಿ ಬಂದ ಆರು ತಿಂಗಳ ಅವಧಿಯ ಅವರ ದಿಟ್ಟ ಹೆಜ್ಜೆಗಳು ರಾಜ್ಯದ ಜನರಲ್ಲಿ ಹೊಸ ಬೆಳಕು ತಂದಿದೆ. ಹೊಸತನ್ನು ನಿರೀಕ್ಷಿಸುವ ಆಶಾಭಾವ ಮೂಡಿಸಿದೆ. ಸಾಧನೆಯ ಹಿನ್ನಲೆಯತ್ತ ನೋಟ ಬೀರಿದಾಗ, ಭವಿಷ್ಯದ ದಿನಗಳ ದಿಕ್ಕಿನ ಕಡೆಗಿನ ಅವರ ಕನಸು ಸ್ಪಷ್ಟವಾಗಿ ಕಾಣಿಸುತ್ತಿದೆ. ಹೊಸ ಹೊಸ ಘೋಷಣೆಗಳು, ತೀರ್ಮಾನಗಳಲ್ಲಿನ ಅವರ ಕಾಳಜಿ, ಬದ್ಧತೆ ರಾಜ್ಯದ ಅಭಿವೃದ್ಧಿಗೆ ಪೂರಕವಾದ ದೂರದರ್ಶಿತ್ವ ಹೊಂದಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ.

ಮೊದಲ ಸಂಪುಟ ಸಭೆಯಲ್ಲಿ ಸಂಧ್ಯಾ ಸುರಕ್ಷಾ, ವಿಧವಾ ವೇತನ, ಅಂಗವಿಕಲರ ಮಾಸಾಶನ ಹೆಚ್ಚಿಸುವ ಮೂಲಕ ಈ ವರ್ಗಗಳಿಗೆ ಇನ್ನಷ್ಟು ಸಾಮಾಜಿಕ ಭದ್ರತೆ ನೀಡಲು ಬೊಮ್ಮಾಯಿ ತೀರ್ಮಾನ ತೆಗೆದುಕೊಂಡಿದ್ದರು. ಸುಮಾರು 50 ಲಕ್ಷದಷ್ಟಿರುವ ಪರಿಶಿಷ್ಟ ಪಂಗಡದ ಜನರ ಕಲ್ಯಾಣ ಯೋಜನೆಗಳನ್ನು (ಎಸ್‌ಟಿಪಿ) ಸಮರ್ಪಕವಾಗಿ ಅನುಷ್ಠಾನಗೊಳ್ಳಬೇಕೆಂಬ ಕಾರಣಕ್ಕೆ ಅವರು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವಾಲಯ ಘೋಷಿಸಿದ್ದರು. ದೀನದಲಿತರ, ಹಿಂದುಳಿದ ವರ್ಗಗಳ, ಮಹಿಳೆಯರ ಸಬಲೀಕರಣಕ್ಕೆ ತಮ್ಮ ಬದ್ಧತೆಯನ್ನು ತೋರಿಸಿದ್ದರು. ನೀಡಿದ ಮಾತಿನಂತೆ ತೆಗೆದುಕೊಂಡ ಕ್ರಮದಿಂದ ಲಕ್ಷಾಂತರ ಹಿರಿಯ ನಾಗರಿಕರು, ವಿಧವೆಯರು ಮತ್ತು ಅಂಗವಿಕಲರು ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದಾರೆ. ಕೋವಿಡ್ ಸಂಕಷ್ಟದ ನಂತರದ ಬದುಕು ದುಬಾರಿಯಾಗುತ್ತಿದೆ. ಅಶಕ್ತರು ಬದುಕು ನಡೆಸುವುದು ದುಸ್ತರವಾಗಿರುವ ಸಂದರ್ಭದಲ್ಲಿ, ಅವರು ಕೈಗೊಂಡ ಹೊಸ ಉಪಕ್ರಮಗಳು ಮಹಿಳೆಯರು, ಹಿರಿಯ ನಾಗರಿಕರು, ಅಶಕ್ತರಲ್ಲಿ ಸಮಾಧಾನ– ಸಂತಸದ ಅಲೆ ಎಬ್ಬಿಸಿದೆ.

ಕೋವಿಡ್‌ನಿಂದ ರಾಜ್ಯದಲ್ಲಿ ಆರ್ಥಿಕ ಸಂಕಷ್ಟ ಎದುರಾಗಿದೆ. ಆರ್ಥಿಕ ಶಿಸ್ತು ತರುವ ಅಗತ್ಯವಿದೆ ಎನ್ನುವುದನ್ನು ಆರಂಭದಲ್ಲೇ ಅರಿತ ಬೊಮ್ಮಾಯಿ, 'ಅನಗತ್ಯ ಖರ್ಚು ಕಡಿಮೆ ಮಾಡಬೇಕು, ಮುಂದಿನ ಮಾರ್ಚ್ ಅಂತ್ಯದ ಒಳಗೆ ಕನಿಷ್ಠ ಶೇಕಡ 5ರಷ್ಟು ಖರ್ಚು ಕಡಿಮೆ ಆಗಬೇಕು' ಎಂದು ಅಧಿಕಾರಿಗಳಿಗೆ ಸಲಹೆ ನೀಡಿದ್ದರು. ಯಾವುದೇ ಯೋಜನೆಗಳಿಗೆ ಕತ್ತರಿ ಹಾಕದೆ ವೆಚ್ಚ ಕಡಿಮೆ ಮಾಡುವಂತೆ ಸೂಚಿಸಿದ್ದರು.

'ಎಲ್ಲರಿಗೂ ಸರ್ಕಾರ ಇದೆ ಅನ್ನುವ ಭಾವನೆ ಕೇವಲ ಆದೇಶ ಹೊರಡಿಸಿರುವುದರಿಂದ ಗೊತ್ತಾಗುವುದಲ್ಲ. ಆದೇಶದ ಅನುಷ್ಠಾನವಾದಾಗ ಮಾತ್ರ ಅದು ಸಾಧ್ಯವಾಗುತ್ತದೆ. ನಮ್ಮದು ಮೈಕ್ರೋ ಲೆವೆಲ್ ಮೇನೇಜ್‌ಮೆಂಟ್. ಇಲಾಖೆಗಳ ನಡುವೆ ಸಮನ್ವಯತೆ ಇರಬೇಕು. ಸಮಯಕ್ಕೆ ಸರಿಯಾಗಿ ಕೆಲಸ ಅನುಷ್ಠಾನ ಆಗಬೇಕು. ಏನೇ ಮಾಡಿದರೂ ನಡೆಯುತ್ತದೆ ಎನ್ನುವ ಮನೋಭಾವವನ್ನು ಅಧಿಕಾರಿಗಳು ಬಿಡಬೇಕು. ಚಲ್ತಾ ಹೈ ಮನೋಭಾವ ಸಹಿಸುವುದಿಲ್ಲ' ಎನ್ನುತ್ತಲೇ ಅಧಿಕಾರಿಗಳಿಗೆ ಎಚ್ಚರಿಕೆ, ಆಡಳಿತಕ್ಕೆ ಚುರುಕು ನೀಡಿದ್ದರು.

ವಿದ್ಯೆ, ಉನ್ನತ ಶಿಕ್ಷಣದಿಂದ ಈ ನೆಲದ ಮಕ್ಕಳು ವಂಚಿತರಾಗಬಾರದು. ಅವರು ಜ್ಞಾನವಂತರಾಗಿ ಮುಖ್ಯವಾಹಿನಿಗೆ ಬರಬೇಕು ಎಂಬ ಕಾರಣಕ್ಕೆ ಹೊಸದಾಗಿ ಶಿಷ್ಯ ವೇತನ ನೀಡಲು ತೀರ್ಮಾನಿಸಿದ ಬೊಮ್ಮಾಯಿ, ಅದಕ್ಕಾಗಿ ₹ 1,000 ಕೋಟಿಯನ್ನು ಹೆಚ್ಚುವರಿ ಮೀಸಲಿಟ್ಟರು.ಈ ಯೋಜನೆಯಡಿ ರೈತ ಮಕ್ಕಳಿಗೆ ಕನಿಷ್ಠ ₹ 2,500 ರಿಂದ ಗರಿಷ್ಠ ₹ 11,000ದವರೆಗೆ ಶಿಷ್ಯವೇತನ ಸಿಗಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ರಾಜ್ಯದ ರೈತರ ಮಕ್ಕಳು ಉನ್ನತ ಶಿಕ್ಷಣ ಪಡೆಯಬೇಕೆಂಬ ಉದ್ದೇಶದಿಂದ ಪ್ರೋತ್ಸಾಹ ನೀಡಲು ಆರಂಭಿಸಿದ ಈ ಯೋಜನೆ ಫಲ ನೀಡುವುದು ಖಚಿತ. ಸುಮಾರು 18 ಲಕ್ಷ ರೈತ ಮಕ್ಕಳಿಗೆ ಇದರಿಂದ ಪ್ರಯೋಜನ ಸಿಗಲಿದೆ. ಗ್ರಾಮೀಣ ಕರ್ನಾಟಕದಲ್ಲಿ ಹೆಣ್ಣು ಮಕ್ಕಳ ವಿದ್ಯೆ ಪ್ರೋತ್ಸಾಹಕ್ಕೆ ಈ ವಿದ್ಯಾನಿಧಿ ಯೋಜನೆಯನ್ನು 8, 9, 10ನೇ ತರಗತಿಯ ಹೆಣ್ಣು ಮಕ್ಕಳಿಗೂ ವಿಸ್ತರಣೆ ಆಗಲಿದೆ. ಈವರೆಗೆ ತಲಾ ₹ 2000ದಂತೆ 1,82,302 ವಿದ್ಯಾರ್ಥಿನಿಯರಿಗೆ ವಿದ್ಯಾನಿಧಿಯ ನೆರವು ನೀಡಲಾಗಿದೆ.



ರೈತ ವಿದ್ಯಾ ನಿಧಿ ಮಕ್ಕಳ ಶಿಕ್ಷಣಕ್ಕೆ ಗರಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೋಲಾರ ತಾಲ್ಲೂಕಿನ ಚೌಡದೇನಹಳ್ಳಿಯಲ್ಲಿ ಮಳೆಯಿಂದ ಆಗಿರುವ ಬೆಳೆ ನಷ್ಟದ ಬಗ್ಗೆ ಪರಿಶೀಲನೆ ನಡೆಸಿದರು

ಮಾಸಾಶನ ಹೆಚ್ಚಳ ಯಾರಿಗೆ ಎಷ್ಟು?

ಸಂಧ್ಯಾ ಸುರಕ್ಷಾ– ₹ 1,000 ದಿಂದ ₹ 1,200ಕ್ಕೆ ಹೆಚ್ಚಳ– ₹ 863.52 ಕೋಟಿ ವೆಚ್ಚ– 35.98 ಲಕ್ಷ ಫಲಾನುಭವಿಗಳು

ವಿಧವಾ ವೇತನ– ₹ 600ರಿಂದ ₹ 800ಕ್ಕೆ ಹೆಚ್ಚಳ– ₹ 414 ಕೋಟಿ ವೆಚ್ಚ–17.25 ಲಕ್ಷ ಫಲಾನುಭವಿಗಳು

ಅಂಗವಿಕಲರ ವೇತನ (ಶೇ 40 ರಿಂದ 75ರಷ್ಟು ಅಂಗವಿಕಲತೆ)– ₹ 600 ರಿಂದ ₹ 800ಕ್ಕೆ ಹೆಚ್ಚಳ– ₹ 90 ಕೋಟಿ ವೆಚ್ಚ– 3.66 ಲಕ್ಷ ಫಲಾನುಭವಿಗಳು

- 18.2 ಲಕ್ಷ ರೈತರಿಗೆ ₹ 1, 252.81 ಕೋಟಿ ಪರಿಹಾರ
- ಈಗಿರುವ ಎನ್‌ಡಿಆರ್‌ಎಫ್ ಮಾರ್ಗಸೂಚಿಗಿಂತ ಹೆಚ್ಚು ಪರಿಹಾರ
- ಪ್ರವಾಹ ಪರಿಹಾರಕ್ಕೆ ₹ 1,795.77 ಕೋಟಿ ಬಿಡುಗಡೆ

ಅತಿವೃಷ್ಟಿಗೆ ಪರಿಹಾರ; ಅಭಿವೃದ್ಧಿಗೆ ಸಹಕಾರ

ಅತಿವೃಷ್ಟಿ, ಪ್ರವಾಹದಿಂದ ಸಂಕಷ್ಟಕ್ಕೆ ತುತ್ತಾಗಿರುವ ರೈತರ ನೆರವಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಧಾವಿಸಿದ್ದಾರೆ. ನಮ್ಮದು ರೈತ ಪರ ಸರ್ಕಾರ ಎನ್ನುವುದು ಮಾತಿಗೆ ಸೀಮಿತವಾಗಿಲ್ಲ; ಅದನ್ನು ಮಾಡಿ ತೋರಿಸಿದ್ದಾರೆ ಬೊಮ್ಮಾಯಿ. ಕೋವಿಡ್‌ನ ಸಂಕಷ್ಟ ಕಾಲದಲ್ಲೂ ಪರಿಹಾರ ಮೊತ್ತವನ್ನು ಹೆಚ್ಚಿಸುವ ಸಂಕಲ್ಪ ಮಾಡಿದ್ದಾರೆ. ಹಾನಿಗೊಳಗಾದ ಬೆಳೆಗಳಿಗೆ ಪರಿಹಾರ ನೀಡಲು ಒಂದೇ ತಿಂಗಳಲ್ಲಿ ₹ 900 ಕೋಟಿ ಬಿಡುಗಡೆ ಮಾಡಿದ ಕೀರ್ತಿ ಮುಖ್ಯಮಂತ್ರಿ ಅವರದ್ದು. ಕೇಂದ್ರ ಸರ್ಕಾರ ನೀಡುವ ಪರಿಹಾರದ ಮೊತ್ತದ ಜೊತೆಗೆ ಪ್ರತಿ ಹೆಕ್ಟೇರ್ ಮಳೆಯಾಶ್ರಿತ, ನೀರಾವರಿ ಮತ್ತು ತೋಟಗಾರಿಕಾ ಬೆಳೆಗಳಿಗೆ ರಾಜ್ಯ ಸರ್ಕಾರದಿಂದ ಹೆಚ್ಚುವರಿ ಪರಿಹಾರ ನೀಡುವ ಐತಿಹಾಸಿಕ ತೀರ್ಮಾನವನ್ನು ಅವರು ಪ್ರಕಟಿಸಿದ್ದಾರೆ. ಇದರಿಂದ 12.69 ಲಕ್ಷ ರೈತರಿಗೆ ಅನುಕೂಲ ಆಗಲಿದೆ. ರಾಜ್ಯ ಸರ್ಕಾರದ ಬೊಕ್ಕಸಕ್ಕೆ ₹ 1,200 ಕೋಟಿ ಹೆಚ್ಚುವರಿ ಹೊರೆ ಆಗಲಿದೆ. ಬೆಳೆ ಪರಿಹಾರಕ್ಕೆ ಸಂಬಂಧಿಸಿದಂತೆ ದೇಶದಲ್ಲಿ ಇದೇ ಮೊದಲ ಬಾರಿಗೆ ಸಮೀಕ್ಷೆ ಮಾಡಿ ಆ್ಯಪ್ ಮೂಲಕ ಮಾಹಿತಿ ಪಡೆದ 48 ಗಂಟೆಗಳಲ್ಲಿ ರೈತರ ಖಾತೆಗೇ ಪರಿಹಾರ ಮೊತ್ತ ಜಮೆ ಮಾಡಿರುವುದು ಸಾಧನೆಯೇ ಸರಿ.

ರಾಜ್ಯದಲ್ಲಿ 2021ರ ಜುಲೈನಿಂದ ನವಂಬರ್‌ವರೆಗೆ ಉಂಟಾದ ನೆರೆ ಹಾವಳಿಯಿಂದ 12.52 ಲಕ್ಷ ಹೆಕ್ಟೇರ್ ಬೆಳೆ ಹಾನಿ ಆಗಿದೆ. ಬೆಳೆ ಹಾನಿಯ ಜಂಟಿ ಸಮೀಕ್ಷೆಯ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ನಮೂದಿಸಿದ ಒಂದು ವಾರದೊಳಗೆ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಬೆಳೆ ಹಾನಿ ಪರಿಹಾರ ಜಮೆ ಮಾಡಲಾಗಿದೆ. ಈವರೆಗೆ ರೈತರಿಗೆ ಬೆಳೆ ಹಾನಿಗೆ 14.42 ಲಕ್ಷ ರೈತರ ಖಾತೆಗಳಿಗೆ ₹ 926.47 ಕೋಟಿ ಪರಿಹಾರ ಮೊತ್ತ ಪಾವತಿಸಲಾಗಿದೆ. ಮನೆಗಳ ಹಾನಿಯ ಪ್ರಮಾಣಕ್ಕೆ ಅನುಗುಣವಾಗಿ ₹ 50 ಸಾವಿರದಿಂದ ₹ 5 ಲಕ್ಷದವರೆಗೆ ಪರಿಹಾರ ನೀಡಲಾಗಿದೆ. ಪ್ರವಾಹದಿಂದ ಬಾಧಿತರಾದ ಸಂತ್ರಸ್ತರ ನೆರವಿಗೆ ಪರಿಷ್ಕತ ದರದಲ್ಲಿ ಪರಿಹಾರ ಪಾವತಿಸಲು ಸರ್ಕಾರದಿಂದ ₹3,326.86 ಕೋಟಿ ವೆಚ್ಚ ಆಗಲಿದೆ.

ಬೆಳೆಹಾನಿ ಪರಿಹಾರ ಯಾರಿಗೆ ಎಷ್ಟು? (ಪ್ರತಿ ಹೆಕ್ಟೇರ್‌ಗೆ ₹ಗಳಲ್ಲಿ)

ಬೆಳೆವಿಧ	ಎನ್‌ಡಿಆರ್‌ಎಫ್ ಮಾರ್ಗಸೂಚಿ ದರ	ರಾಜ್ಯ ಸರ್ಕಾರ ಹೆಚ್ಚುವರಿ ದರ	ಪರಿಷ್ಕೃತ ದರ
ಮಳೆಯಾಶ್ರಿತ	6,800	6,800	13,600
ನೀರಾವರಿ	13,500	11,500	25,000
ತೋಟಗಾರಿಕೆ	18,000	10,000	28,000

ರೈತ ನಿಧಿ; ನೆಲದ ಮಕ್ಕಳ ಶಿಕ್ಷಣಕ್ಕೆ ಗರಿ

ರೈತರ ಮಕ್ಕಳ ಶೈಕ್ಷಣಿಕ ಪ್ರಗತಿಗಾಗಿ ರೈತ ವಿದ್ಯಾನಿಧಿ ಹೆಸರಿನಲ್ಲಿ ಹೊಸ ಶಿಷ್ಯ ವೇತನ ಯೋಜನೆಯನ್ನು ಮುಖ್ಯಮಂತ್ರಿ ಜಾರಿ ಮಾಡಿದ್ದಾರೆ. ಸುಮಾರು ₹ 1,000 ಕೋಟಿ ಹೆಚ್ಚುವರಿ ವೆಚ್ಚದಲ್ಲಿ ಈ ಹೊಸ ಶಿಷ್ಯವೇತನ ಯೋಜನೆ ಜಾರಿಗೆ ತರಲಾಗಿದೆ. ಪಿಯುಸಿ, ಐಟಿಐ ಮತ್ತು ಡಿಪ್ಲೊಮಾ ಪ್ರವೇಶ ಪಡೆಯುವ ಹುಡುಗರಿಗೆ ₹ 2,500 ಮತ್ತು ಹುಡುಗಿಯರು ಸೇರಿದಂತೆ ಲೈಂಗಿಕ ಅಲ್ಪಸಂಖ್ಯಾತರಿಗೆ ₹ 3,000 ಶಿಷ್ಯ ವೇತನ ಸಿಗಲಿದೆ. ಬಿ.ಎ, ಬಿ.ಎಸ್‌ಸಿ, ಬಿ.ಕಾಂ ಸೇರಿದಂತೆ ಇತರೆ ಪದವಿ ಪಡೆಯುವ ಹುಡುಗರಿಗೆ ₹ 5,000 ಮತ್ತು ಹುಡುಗಿಯರಿಗೆ ₹ 5,500 ಶಿಷ್ಯ ವೇತನ ಸಿಗಲಿದೆ. ಎಲ್‌ಎಲ್‌ಬಿ, ಪ್ಯಾರಾ ಮೆಡಿಕಲ್, ಬಿ-ಫಾರ್ಮ್, ನರ್ಸಿಂಗ್ ಇತ್ಯಾದಿ ವೃತ್ತಿಪರ ಕೋರ್ಸ್ ಮಾಡುವ ಹುಡುಗರಿಗೆ ₹ 7,500 ಮತ್ತು ಹುಡುಗಿಯರಿಗೆ ₹ 8,000 ಶಿಷ್ಯ ವೇತನ ಹಾಗೂ ಎಂಬಿಬಿಎಸ್, ಬಿಇ, ಬಿ.ಟೆಕ್ ಮತ್ತು ಎಲ್ಲಾ ಸ್ನಾತಕೋತ್ತರ ಕೋರ್ಸ್ ಮಾಡುವ ವಿದ್ಯಾರ್ಥಿಗಳಿಗೆ ₹ 10,000 ಮತ್ತು ವಿದ್ಯಾರ್ಥಿನಿಯರಿಗೆ ₹ 11,000 ಶಿಷ್ಯವೇತನ ನೇರ ನಗದು ವರ್ಗಾವಣೆ ಮೂಲಕ ಅವರ ಬ್ಯಾಂಕ್ ಖಾತೆಗೆ ಜಮ ಆಗಲಿದೆ. 10ನೇ ತರಗತಿ ಪೂರ್ಣಗೊಳಿಸಿದ, ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳವರೆಗೆ ಪ್ರವೇಶವನ್ನು ಪಡೆದಿರುವ ರೈತರ ಎಲ್ಲಾ ಮಕ್ಕಳ ಬ್ಯಾಂಕ್‌ಗಳ ಖಾತೆಗಳಿಗೆ ನೇರ ನಗದು ವರ್ಗಾವಣೆ ಮೂಲಕ ಶಿಷ್ಯ ವೇತನ ಜಮೆ ಆಗಲಿದೆ. ಮುಂದಿನ ಶೈಕ್ಷಣಿಕ ಸಾಲಿನಿಂದ ಗ್ರಾಮೀಣ ಭಾಗದ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೂ ಯೋಜನೆ ವಿಸ್ತರಿಸಲು ಮುಖ್ಯಮಂತ್ರಿ ನಿರ್ಧರಿಸಿದ್ದಾರೆ. ಗ್ರಾಮೀಣ ಭಾಗದಲ್ಲಿ ರೈತ ಕುಟುಂಬದ ಹೆಣ್ಣು ಮಕ್ಕಳು ಪ್ರಾಥಮಿಕ, ಪ್ರೌಢಶಾಲಾ ಹಂತದಲ್ಲೇ ಕಲಿಕೆ ಅರ್ಧದಲ್ಲಿಯೇ ಬಿಡುತ್ತಿರುವವರ ಸಂಖ್ಯೆ ಹೆಚ್ಚಿದೆ. ಅವರ ಹಾಜರಾತಿ ಹೆಚ್ಚಿಸುವ ಉದ್ದೇಶದಿಂದ ಈ ಕ್ರಮಕ್ಕೆ ಮುಖ್ಯಮಂತ್ರಿ ಮುಂದಾಗಿದ್ದಾರೆ.

ರೈತ ವಿದ್ಯಾನಿಧಿ

- 1000 ಕೋಟಿ ಮೀಸಲು
- 18 ಲಕ್ಷ ವಿದ್ಯಾರ್ಥಿಗಳಿಗೆ ಲಾಭ

'ಅತಿಥಿ'ಗಳಿಗೂ ಆದ್ಯತೆ; ನೇಮಕಕ್ಕೂ ಅಸ್ತು

ಗೌರವ ಧನ ದುಪ್ಪಟ್ಟು ಪ್ರಮಾಣದಲ್ಲಿ ಹೆಚ್ಚಿಸುವ ಮೂಲಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸುದೀರ್ಘ ಅವಧಿಯ ಬೇಡಿಕೆಗಳಿಗೆ ಸಹಾನುಭೂತಿ ಮತ್ತು ಮಾನವೀಯ ನೆಲೆಯಲ್ಲಿ ಕ್ಷಿಪ್ರಗತಿಯಲ್ಲಿ ಮುಖ್ಯಮಂತ್ರಿ ಸ್ಪಂದಿಸಿದ್ದಾರೆ. ಅಲ್ಲದೆ, ಪದವಿ ಕಾಲೇಜುಗಳಿಗೆ ಬೋಧಕ ಸಿಬ್ಬಂದಿ ಮತ್ತು ಶಾಲೆಗಳಿಗೆ ಶಿಕ್ಷರನ್ನು ಹಸೊತಾಗಿ ನೇಮಿಸಿಕೊಳ್ಳಲು ಕೂಡಾ ಅವರು ಅನುಮೋದನೆ ನೀಡಿದ್ದಾರೆ.

2002ರಿಂದಲೂ ಅತಿಥಿ ಉಪನ್ಯಾಸಕರ ಸಮಸ್ಯೆ ಕಗ್ಗಂಟಾಗಿ ಉಳಿದಿತ್ತು. ಇದೀಗ, ಅತಿಥಿ ಉಪನ್ಯಾಸಕರ ಕಾರ್ಯಭಾರವನ್ನು ವಾರಕ್ಕೆ 8–10 ಗಂಟೆಯಿಂದ 15 ಗಂಟೆಗಳಿಗೆ ಹೆಚ್ಚಿಸಲಾಗಿದೆ. ಸೆಮಿಸ್ಟರ್ ಆಧಾರದಲ್ಲಿ ನೇಮಕಾತಿ ಕೈಬಿಟ್ಟು, ಇಡೀ ಶೈಕ್ಷಣಿಕ ವರ್ಷಕ್ಕೆ (10 ತಿಂಗಳಿಗೆ) ನೇಮಿಸಲು ಸರ್ಕಾರ ತೀರ್ಮಾನಿಸಿದೆ. ಈ ತೀರ್ಮಾನದಿಂದಾಗಿ 430 ಸರ್ಕಾರಿ ಪದವಿ ಕಾಲೇಜುಗಳ 14,564 ಅತಿಥಿ ಉಪನ್ಯಾಸಕರಿಗೆ ಪ್ರಯೋಜನ ಸಿಗಲಿದೆ. ತಿಂಗಳಿಗೆ ₹ 13 ಸಾವಿರ ಪಡೆಯುತ್ತಿದ್ದವರಿಗೆ ₹ 32 ಸಾವಿರ, ₹ 11 ಸಾವಿರ ಪಡೆಯುತ್ತಿದ್ದವರಿಗೆ ₹ 28 ಸಾವಿರಕ್ಕೆ ಏರಿಕೆ ಮಾಡಿದ್ದು, ಪ್ರತಿ ತಿಂಗಳ 10 ನೇ ತಾರೀಕಿನೊಳಗೆ ಗೌರವಧನ ಪಾವತಿ ಆಗಲಿದೆ. ಅತಿಥಿ ಉಪನ್ಯಾಸಕರ ಸುಗಮ ನೇಮಕಾತಿಗೆ ಆನ್‌ಲೈನ್ ಪೋರ್ಟಲ್ ಅನ್ನು ಸಹ ಅಭಿವೃದ್ಧಿಪಡಿಸಲಾಗಿದೆ. ಅಲ್ಲದೆ, ಇದೀಗ ಹೊಸತಾಗಿ ಉಪನ್ಯಾಸಕರ ಮತ್ತು ಶಿಕ್ಷಕರ ನೇಮಕಾತಿಗೂ ಮುಖ್ಯಮಂತ್ರಿ ಅನುಮೋದನೆ ನೀಡಿದ್ದಾರೆ. ನೇಮಕಾತಿ ಪ್ರಕ್ರಿಯೆ ಈಗಾಗಲೇ ಆರಂಭವಾಗಿದೆ.

ಯಾರಿಗೆ ಎಷ್ಟು ವೇತನ?

ಅನುಭವ	ಯುಜಿಸಿ ಅರ್ಹತೆ	ವೇತನ (₹ಗಳಲ್ಲಿ)
5 ವರ್ಷಕ್ಕಿಂತ ಹೆಚ್ಚು	ಇದ್ದರೆ	32,000
5 ವರ್ಷಕ್ಕಿಂತ ಕಡಿಮೆ	ಇದ್ದರೆ	30,000
5 ವರ್ಷಕ್ಕಿಂತ ಹೆಚ್ಚು	ಇಲ್ಲದಿದ್ದರೆ	28,000
5 ವರ್ಷಕ್ಕಿಂತ ಕಡಿಮೆ	ಇಲ್ಲದಿದ್ದರೆ	26,000

ಹೊಸ ನೇಮಕಕ್ಕೆ ಅನುಮೋದನೆ

- 1,242 ಉಪನ್ಯಾಸಕರು
- 15,000 ಶಾಲಾ ಶಿಕ್ಷಕರು



ಕರ್ನಾಟಕದಲ್ಲಿ ರಸ್ತೆ ಕ್ರಾಂತಿ

ಪ್ರಗತಿಯ ಹೊಸ ಗತಿ

ರಸ್ತೆಗಳೆಂದರೆ ಕೇವಲ ದಾರಿಗಳಲ್ಲ, ಅವು ರಾಜ್ಯದ ನರನಾಡಿಗಳು ಮತ್ತು ನಾಡನ್ನು ಪ್ರಗತಿಯತ್ತ ಕೊಂಡೊಯ್ಯುವ ಪಥಗಳೂ ಹೌದು. ಗುಂಡಿಗೊಟರುಗಳಿಲ್ಲದ, ಅಪಘಾತಕ್ಕೀಡಾಗದಂತೆ ಸುಗಮವಾಗಿ ಸಂಚರಿಸಬಲ್ಲ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸುವಲ್ಲಿ ಲೋಕೋಪಯೋಗಿ ಇಲಾಖೆ ದಿಟ್ಟ ಹೆಜ್ಜೆ ಇಟ್ಟಿದೆ.

ರಾಜ್ಯದೆಲ್ಲೆಡೆ ರಸ್ತೆಗಳನ್ನು ಪ್ರಯಾಣಿಕ ಸ್ನೇಹಿಯಾಗಿಸುವ ರಸ್ತೆ ಕ್ರಾಂತಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮತ್ತು ಲೋಕೋಪಯೋಗಿ ಇಲಾಖೆಯ ಸಚಿವರಾದ ಸಿ.ಸಿ. ಪಾಟೀಲ ಅವರು ಮುಂದಡಿ ಇಟ್ಟಿದ್ದಾರೆ.

ನಾಡಿನ ಅಭಿವೃದ್ಧಿಗೆ ಪೂರಕವಾಗಿ ರಸ್ತೆಗಳನ್ನು ನಿರ್ಮಿಸಬೇಕೆಂಬ ಮಹಾಸಂಕಲ್ಪ ಹೊತ್ತಿದ್ದ ಸರ್ಕಾರಕ್ಕೆ, ಮಳೆಹಾನಿ ಕಂಟಕವಾಗಿ ಕಾಡಿತು. ಸುಮಾರು 6 ಸಾವಿರಾರು ಕಿಲೋ ಮೀಟರ್ ರಸ್ತೆಗಳು ಹಾನಿಗೀಡಾದವು. ₹3,367 ಕೋಟಿಗೂ ಅಧಿಕ ಮೌಲ್ಯದ ರಸ್ತೆಗಳು ಅಕ್ಷರಶಃ ಕಣ್ಮರೆಯೇ ಆಗಿಬಿಟ್ಟವು. ಜನರ ಓಡಾಟಕ್ಕೆ ಕಿಂಚಿತ್ತೂ ತೊಂದರೆಯಾಗದಂತೆ ನೋಡಿಕೊಳ್ಳುವ ಕಾಳಜಿ ಇರುವ ಸರ್ಕಾರ ಈ ಹಾನಿಗೆ ಎದೆಗುಂದದೆ ಈ ರಸ್ತೆಗಳ ಮರು ನಿರ್ಮಾಣಕ್ಕೆ ಮುಂದಾಗಿದೆ. ಆ ಮೂಲಕ ರಾಜ್ಯದ ಸಂಪರ್ಕ ಕೊಂಡಿಗಳನ್ನು ಮರು ಜೋಡಣೆ ಮಾಡುವ ಕೈಂಕರ್ಯದಲ್ಲಿ ತೊಡಗಿಕೊಂಡಿದೆ.

ಈ ರಸ್ತೆಗಳ ಮರು ನಿರ್ಮಾಣಕ್ಕೆ ಮುಖ್ಯಮಂತ್ರಿ ಬೊಮ್ಮಾಯಿ ಮತ್ತು ಲೋಕೋಪಯೋಗಿ ಇಲಾಖೆಯ ಸಚಿವರಾದ ಸಿ.ಸಿ. ಪಾಟೀಲ ಟೊಂಕಕಟ್ಟಿ ನಿಂತಿದ್ದಾರೆ. ಕೋವಿಡ್ ತಂದಿತ್ತ ಆರ್ಥಿಕ ಹೊಡೆತ ಬಾಧಿಸುತ್ತಲೇ ಇದ್ದರೂ ರಸ್ತೆ ಪುನನಿರ್ಮಾಣಕ್ಕಾಗಿ ಮೊದಲ ಕಂತಿನಲ್ಲೇ ₹610 ಕೋಟಿ ವೆಚ್ಚದಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಂಡರು. ಮಳೆಯಿಂದ ರಸ್ತೆಗಳು ಕೊಚ್ಚಿ ಹೋಗಿ ಸಂಪರ್ಕ ಕಡಿತಗೊಂಡಿದ್ದ ಹಳ್ಳಿಗಳಿಗೆ ಮರು ಸಂಪರ್ಕ ಕಲ್ಪಿಸುವ ಸರ್ಕಾರದ ಇಚ್ಛಾಶಕ್ತಿ ಈಗ ಕ್ರಿಯಾಶಕ್ತಿಯಾಗಿ ಪರಿವರ್ತನೆಯಾಗಿದೆ.

ರಾಜ್ಯದ ಪ್ರವಾಸಿ ತಾಣಗಳ ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿಪಡಿಸಲೂ ಲೋಕೋಪಯೋಗಿ ಇಲಾಖೆ ಆದ್ಯತೆ ಮೇರೆಗೆ ಕೆಲಸ ಮಾಡುತ್ತಿದೆ. ಮೈಸೂರಿನ ಚಾಮುಂಡಿಬೆಟ್ಟ ಮತ್ತು ಬೆಂಗಳೂರಿನ ಹೊರ ವಲಯದಲ್ಲಿರುವ ನಂದಿಬೆಟ್ಟ ಪ್ರವಾಸಿಧಾಮಗಳಲ್ಲಿ ಭೂಕುಸಿತದಿಂದ ಹಾನಿಗೀಡಾಗಿದ್ದ ರಸ್ತೆಗಳ ಅಭಿವೃದ್ಧಿಗೂ ವಿಶೇಷ ಯೋಜನೆ ರೂಪಿಸಿತು. ನಂದಿಬೆಟ್ಟದ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಸಮರೋಪಾದಿಯಲ್ಲಿ ನಿರ್ವಹಿಸಿ ಪೂರ್ಣಗೊಳಿಸಿರುವುದು ಲೋಕೋಪಯೋಗಿ ಇಲಾಖೆಯ ಹೆಗ್ಗಳಿಕೆಗೆ ಹಚ್ಚಿಕೊಂಡ ಚಿನ್ನದ ಗರಿಯಂತಹ ಸಾಧನೆ.

ರಸ್ತೆ ಸಂಪರ್ಕವನ್ನು ಉತ್ತಮಗೊಳಿಸುವುದಷ್ಟೇ ಸರ್ಕಾರದ ಆದ್ಯತೆಯಾಗಿಲ್ಲ. ಪ್ರಯಾಣದ ಅವಧಿಯನ್ನು ಕಡಿಮೆ ಮಾಡುವ ವಿಮಾನ ಸೌಲಭ್ಯಗಳನ್ನು ಗ್ರಾಮೀಣ ಜಿಲ್ಲೆಗಳಿಗೂ ವಿಸ್ತರಿಸುವ ನಿಟ್ಟಿನಲ್ಲಿ ಸರ್ಕಾರ ಭರವಸೆಯ ಹೆಜ್ಜೆ ಇಟ್ಟಿದೆ. ಶಿವಮೊಗ್ಗ ಹಾಗೂ ವಿಜಯಪುರದಲ್ಲಿ ವಿಮಾನ ನಿಲ್ದಾಣ ಕಾಮಗಾರಿ ಭರದಿಂದ ಸಾಗಿದೆ. ಹಾಸನ ವಿಮಾನ ನಿಲ್ದಾಣ ಯೋಜನೆಗೂ ಚಾಲನೆ ನೀಡುವ ಕೆಲಸ ಆರಂಭವಾಗಿದೆ. ಹೀಗೆ, ಎರಡನೇ ಹಂತದ ನಗರಗಳಲ್ಲಿ ವಿಮಾನಸೌಕರ್ಯ ಕಲ್ಪಿಸಿದರೆ ಕೈಗಾರಿಕೆಗಳಿಗೆ ಬಂಡವಾಳ ಹೂಡಿಕೆ ಹೆಚ್ಚಿ, ಉದ್ಯೋಗ ಸೃಷ್ಟಿಯ ಜತೆಗೆ ಆರ್ಥಿಕತೆಗೂ ಬಲ ಬರಲಿದೆ ಎಂಬುದು ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ಸಚಿವ ಪಾಟೀಲರ ದೂರದೃಷ್ಟಿ.

ಗ್ರಾಮ ಬಂಧು: ಗ್ರಾಮ ಮಟ್ಟದಿಂದ ರಾಷ್ಟ್ರೀಯ ಹೆದ್ದಾರಿ ತನಕ ಸಂಪರ್ಕ ಕೊಂಡಿಗಳನ್ನು ಬೆಸೆಯುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಜಾರಿಗೆ ತಂದ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ 'ಗ್ರಾಮ ಬಂಧು' ಕಾಲು ಸೇತುವೆ ಯೋಜನೆಯೂ ಒಂದು. ಕರಾವಳಿ ಭಾಗದ ಹಳ್ಳಿಗಾಡು ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲು ₹200 ಕೋಟಿ ಮೊತ್ತದ ಯೋಜನೆ ಕೈಗೆತ್ತಿಕೊಂಡಿದೆ.

ಅದೇ ರೀತಿ ರಾಷ್ಟ್ರೀಯ ಹೆದ್ದಾರಿಗಳ ನಿರ್ವಹಣೆ, ದುರಸ್ತಿ, ಅಗತ್ಯ ಇರುವ ಕಡೆ ಸರ್ವೀಸ್ ರಸ್ತೆ ನಿರ್ಮಾಣ ಸೇರಿ ಅನೇಕ ಕಾರ್ಯಕ್ರಮಗಳಿಗೆ ಆದ್ಯತೆ ನೀಡಿದೆ. ಪ್ರಮುಖ ನಾಲ್ಕು ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸಬೇಕು ಎಂಬ ಪ್ರಕ್ರಿಯೆ ಜಾರಿಯಲ್ಲಿದೆ.

ರಾಷ್ಟ್ರೀಯ ಹೆದ್ದಾರಿ ಭಾಗ್ಯ



ಕೇಂದ್ರ ಸರ್ಕಾರವು ತಾತ್ವಿಕವಾಗಿ ಅನುಮೋದನೆ ನೀಡಿರುವ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳೆಂದು ಘೋಷಣೆ ಮಾಡಲು ರಾಜ್ಯ ಸರ್ಕಾರ ಮನವಿ ಸಲ್ಲಿಸಿದೆ.

- ನರಗುಂದ ಬೆಳವಂಕಿ ಗಜೇಂದ್ರಘಡ– ಕುಷ್ಟಗಿ– ತಾವರೆಗೆರೆ–ಸಿಂಧನೂರು ಹೆದ್ದಾರಿ-141 ಕಿಲೋ ಮೀಟರ್.
- ಸಂಕೇಶ್ವರ– ಗೋಕಾಕ– ಯರಗಟ್ಟಿ– ಮುನವಳ್ಳಿ– ನರಗುಂದ ಹೆದ್ದಾರಿ-127 ಕಿಲೋ ಮೀಟರ್.
- ನರಗುಂದ– ಗದಗ– ಮುಂಡರಗಿ- ಇಟಗಿ- ಜಗಳೂರು ಹೆದ್ದಾರಿ- 260 ಕಿಲೋ ಮೀಟರ್.
- ರಾಷ್ಟ್ರೀಯ ಹೆದ್ದಾರಿ 4ರಿಂದ ತಡಸ– ಕಲಘಟಗಿ– ಧಾರವಾಡ– ಹಬಣೂರು– ನವಲಗುಂದ– ಅಣ್ಣಿಗೇರಿ ರಾಷ್ಟ್ರೀಯ ಹೆದ್ದಾರಿ– 63ನ್ನು ಸಂಪರ್ಕಿಸುವ ಹೆದ್ದಾರಿ– 118 ಕಿಲೋ ಮೀಟರ್.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಅವರು ಭೇಟಿಯಾದ ಸಂದರ್ಭ

ರಾಜ್ಯ ಹೆದ್ದಾರಿಗಳಿಗೆ ಅಭಿವೃದ್ಧಿಯ ಸುಯೋಗ

ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ(ಎಸ್‌ಎಚ್‌ಡಿಪಿ) ಹಂತ 4, ಘಟ್ಟ 2ರ ಅಡಿ ₹3,500 ಕೋಟಿ ಮೊತ್ತದಲ್ಲಿ ರಸ್ತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವ ಪ್ರಸ್ತಾವನೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಶೇಷ ಕಾಳಜಿಯೊಂದಿಗೆ ಅನುಮೋದನೆ ನೀಡಿದ್ದಾರೆ.

ಸುಮಾರು 2,277 ಕಿಲೋ ಮೀಟರ್ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ ಕೈಗೊಳ್ಳಲು ಸಮಗ್ರ ಯೋಜನಾ ವರದಿ(ಡಿ.ಪಿ.ಆರ್) ಸಿದ್ಧಪಡಿಸಲಾಗಿದೆ. ಈ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಪ್ರಸಕ್ತ ಸಾಲಿನಲ್ಲಿ ಕಾಮಗಾರಿಗಳ ಅನುಷ್ಠಾನ ಆಗಲಿದೆ.

ರಸ್ತೆ ಎಂದರೆ ಅಭಿವೃದ್ಧಿ ರಹದಾರಿ

ಅತ್ಯುತ್ತಮ ರಸ್ತೆ ಜಾಲ ಆರ್ಥಿಕ ವ್ಯವಸ್ಥೆಯ ನರ-ನಾಡಿ ಇದ್ದಂತೆ. ರಾಜ್ಯದ ಸರ್ವತೋಮುಖ ಅಭಿವೃದ್ಧಿಯಲ್ಲಿ ರಸ್ತೆ, ಹೆದ್ದಾರಿ, ಸಂಪರ್ಕ ಸೇತುವೆ, ಸರ್ಕಾರಿ ಕಟ್ಟಡಗಳು ಸೇರಿ ಸಂಪರ್ಕ ಕಲ್ಪಿಸುವ ಮೂಲ ಸೌಕರ್ಯಗಳ ಕೊಡುಗೆ ಅಪಾರವಾದದ್ದು. ರಾಜ್ಯ ಅಷ್ಟ ದಿಕ್ಕುಗಳಲ್ಲಿಯೂ ಬೆಳೆಯಬೇಕು. ಅಭಿವೃದ್ಧಿ ಹೊಂದಬೇಕು. ಅದಕ್ಕಾಗಿ ಸರಾಗ, ಸುಸೂತ್ರ ಮತ್ತು ಸುರಕ್ಷಿತವಾದ ಸಂಪರ್ಕ ಜಾಲವನ್ನು ನಿರ್ಮಿಸಲಾಗುತ್ತಿದೆ. ಈ ಗುರಿ ತಲುಪಲು ಅಗತ್ಯ ಪ್ರೋತ್ಸಾಹ ನಮ್ಮ ಸರ್ಕಾರದ ವತಿಯಿಂದ ನೀಡಲಾಗುತ್ತಿದೆ.

ಅತ್ಯುತ್ತಮ ರಸ್ತೆ ಜಾಲ ವ್ಯಾಪಾರ - ವಹಿವಾಟು ಅಭಿವೃದ್ಧಿಗೆ ಪೂರಕವಾಗಿದೆ. ಇಂತಹ ಜನಸ್ನೇಹಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಲೋಕೋಪಯೋಗಿ ಇಲಾಖೆಗೆ ಅಗತ್ಯ ಅನುದಾನವನ್ನು ಆದ್ಯತೆ ಮೇರೆಗೆ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಷ್ಟ್ರೀಯ ಹೆದ್ದಾರಿ ನಿರ್ಮಾಣ, ನಿರ್ವಹಣೆ ಕೆಲಸಗಳು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ನಡೆಯಬೇಕು. ಹೀಗಾಗಿ ಕೇಂದ್ರದ ಭೂಸಾರಿಗೆ ಮತ್ತು ಹೆದ್ದಾರಿ ಸಚಿವರಾದ ನಿತಿನ್ ಗಡ್ಕರಿ ಅವರ ಸೂಕ್ತ ಮಾರ್ಗದರ್ಶನ ಮತ್ತು ಸಹಕಾರದಿಂದಾಗಿ ಗುಣಮಟ್ಟದ ಮತ್ತು ಆಧುನಿಕ ಸೌಲಭ್ಯದ ರಾಷ್ಟ್ರೀಯ ಹೆದ್ದಾರಿಗಳನ್ನು ಒದಗಿಸುವುದು ನಮ್ಮಿಂದ ಸಾಧ್ಯವಾಗಿದೆ. ಸಿ.ಸಿ. ಪಾಟೀಲ ಅವರಂತಹ ಹಿರಿಯ ಮತ್ತು ಅನುಭವಿ ಸಚಿವರು ಲೋಕೋಪಯೋಗಿ ಇಲಾಖೆಯ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ. ಅವರ ದೂರದೃಷ್ಟಿಯ ಯೋಜನೆಗಳಿಂದಾಗಿ ಇಲಾಖೆಗೆ ಮತ್ತಷ್ಟು ಬಲ ಬಂದಂತಾಗಿದೆ. ಒಟ್ಟಾರೆ ನಮ್ಮ ರಾಜ್ಯದ ಪ್ರಗತಿಯ ತೇರು ನಾಗಾಲೋಟದಿಂದ ಸಾಗುವುದಕ್ಕೆ ನಮ್ಮ ರಸ್ತೆ, ಹೆದ್ದಾರಿಗಳೇ ವರದಾನ.

– ಬಸವರಾಜ ಬೊಮ್ಮಾಯಿ,
ಮುಖ್ಯಮಂತ್ರಿ

ಕೇಂದ್ರ ಸಚಿವರಿಂದ ಅಭಯ

ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಮಕ್ಷಮದಲ್ಲಿ ಭೇಟಿಯಾಗಿ ರಾಜ್ಯದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗೆ ಹಾಗೂ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಮೇಲ್ದರ್ಜೆಗೆ ಏರಿಸುವ ಬಗ್ಗೆ ಸಚಿವ ಸಿ.ಸಿ. ಪಾಟೀಲ ಪ್ರಸ್ತಾವನೆ ಸಲ್ಲಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡುವಂತೆಯೂ ಕೋರಿದರು.

ರಾಜ್ಯದ ಮನವಿಗೆ ಕೇಂದ್ರ ಸಚಿವರು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿ ಅಭಯವನ್ನೂ ನೀಡಿದ್ದಾರೆ.

ರಸ್ತೆಗಳೆಂದರೆ ಪ್ರಗತಿಯ ಪಥ: ಸಚಿವ ಸಿ.ಸಿ.ಪಾಟೀಲ

ರಾಜ್ಯದಲ್ಲಿ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಕುರಿತು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಅವರೊಂದಿಗೆ ನಡೆಸಿದ ಸಂದರ್ಶನ ಇಲ್ಲಿದೆ.

● *ಸರ್ ನಿಮ್ಮರ್ಥದಲ್ಲಿ ರಸ್ತೆಗಳೆಂದರೆ ಏನು, ಅವುಗಳ ಅಭಿವೃದ್ಧಿಗೆ ನಿಮ್ಮ ಆದ್ಯತೆ ಏನು?*

ಸಿ.ಸಿ. ಪಾಟೀಲ: ಎಲ್ಲಾ ಚಟುವಟಿಕೆಗಳಿಗೂ ರಸ್ತೆಗಳು ಮತ್ತು ಹೆದ್ದಾರಿಗಳೇ ಪ್ರಮುಖ ಮಾಧ್ಯಮವಾಗಿವೆ. ಒಂದರ್ಥದಲ್ಲಿ ರಸ್ತೆಗಳೆಂದರೆ ಅವು ಕೇವಲ ದಾರಿಗಳಲ್ಲ, ಅವು ಪ್ರಗತಿಯ ಪಥ. ಆದ್ದರಿಂದ ನಮ್ಮ ಸರ್ಕಾರವು ಲೋಕೋಪಯೋಗಿ ಇಲಾಖೆ ಮೂಲಕ ರಸ್ತೆ ಮತ್ತು ಹೆದ್ದಾರಿಗಳ ದುರಸ್ತಿ, ವಿಸ್ತರಣೆ ಮತ್ತು ಪುನರ್ ನಿರ್ಮಾಣದ ಕೆಲಸಕ್ಕೆ ಆದ್ಯತೆ ನೀಡಿದೆ.

● *ಈ ವರ್ಷ ಮಳೆಹಾನಿಯಿಂದ ಹಾನಿಗೀಡಾದ ರಸ್ತೆಗಳ ದುರಸ್ತಿ ಆಗುತ್ತಿದೆಯೇ?*

ಸಿ.ಸಿ. ಪಾಟೀಲ: 2021ರ ಸುಮಾರು 4 ತಿಂಗಳುಗಳ ಕಾಲ ರಾಜ್ಯದ ವಿವಿಧ ಕಡೆಗಳಲ್ಲಿ ಸುರಿದ ಭಾರಿ ಮಳೆಯಿಂದಾಗಿ ಅನೇಕ ರಸ್ತೆಗಳು ಮತ್ತು ಸೇತುವೆಗಳು ಶಿಥಿಲಗೊಂಡಿವೆ. ಹಲವು ಸರ್ಕಾರಿ ಕಟ್ಟಡಗಳು ಹಾನಿಗೀಡಾಗಿವೆ. ಹೀಗಾಗಿ ಅವುಗಳ ದುರಸ್ತಿ ಮತ್ತು ಪುನರ್ ನಿರ್ಮಾಣಕ್ಕೆ ಸನ್ಮಾನ್ಯ ಮುಖ್ಯಮಂತ್ರಿಯವರಾದ ಬಸವರಾಜ ಬೊಮ್ಮಾಯಿ ಅವರ ಮಾರ್ಗದರ್ಶನದಲ್ಲಿ ನಮ್ಮ ಇಲಾಖೆಯು ಸಮರೋಪಾದಿಯಲ್ಲಿ ಕ್ರಮ ಕೈಗೊಳ್ಳುತ್ತಿದೆ. ಅಷ್ಟೇ ಅಲ್ಲ ಇದರ ಜೊತೆಗೆ ಜನರ ಮತ್ತು ಜನಪ್ರತಿನಿಧಿಗಳ ಒತ್ತಾಸೆಯ ಮೇರೆಗೆ ಹಲವು ಹೊಸ ಕಾಮಗಾರಿಗಳನ್ನೂ ಕೈಗೆತ್ತಿಕೊಳ್ಳಲಾಗಿದೆ. ಈ ನಡುವೆ ಕೋವಿಡ್ ಸಂಕಷ್ಟದಿಂದಾಗಿ ರಾಜ್ಯದ ಹಣಕಾಸು ಪರಿಸ್ಥಿತಿಯ ಮೇಲೆ ತೀವ್ರ ಪೆಟ್ಟು ಬಿದ್ದರೂ ಸಹ ನಮ್ಮ ಗುರಿ ವಿಚಲಿತವಾಗಿಲ್ಲ. ಮೂಲಭೂತ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಅನೇಕ ಸರ್ಕಾರಿ ಕಟ್ಟಡಗಳನ್ನು, ಶಾಲಾ ಕಾಲೇಜು, ಅಂಗನವಾಡಿ ಕಟ್ಟಡಗಳನ್ನು, ನ್ಯಾಯಾಲಯಗಳ ಕಟ್ಟಡಗಳನ್ನು ನಿರ್ಮಿಸುವ ಜವಾಬ್ದಾರಿಯೂ ನಮ್ಮ ಲೋಕೋಪಯೋಗಿ ಇಲಾಖೆಯದ್ದಾಗಿದೆ.



● *ಹೆದ್ದಾರಿಗಳ ಗುಣಮಟ್ಟ ಸುಧಾರಣೆಗೆ ಏನು ಕ್ರಮ ಕೈಗೊಳ್ಳಲಾಗಿದೆ?*

ಸಿ.ಸಿ. ಪಾಟೀಲ: ನಮ್ಮ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಯು 7,589 ಕಿಲೋ ಮೀಟರ್‌ಗಳಷ್ಟಿದೆ. ರಾಜ್ಯ ಹೆದ್ದಾರಿಯು 27,811 ಕಿಲೋ ಮೀಟರ್ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳು 56,131 ಕಿಲೋ ಮೀಟರ್‌ಗಳಷ್ಟಿವೆ. ಇವುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ಜವಾಬ್ದಾರಿ ನಮ್ಮ ಲೋಕೋಪಯೋಗಿ ಇಲಾಖೆ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ್ದಾಗಿದೆ. ಅಷ್ಟೇ ಅಲ್ಲ ನಮ್ಮ ಹೆದ್ದಾರಿಗಳು ಸಕಲ ಸೌಲಭ್ಯಗಳೊಂದಿಗೆ ಅಂತರಾಷ್ಟ್ರೀಯ ಗುಣಮಟ್ಟವನ್ನು ಕಾಪಾಡಿಕೊಂಡು ಹೋಗಬೇಕೆಂಬ ನಿಟ್ಟಿನಲ್ಲಿ ಈ ಕೆಳಕಂಡ ಹಲವಾರು ಪೂರಕ ಕ್ರಮಗಳನ್ನು ಕೈಗೊಳ್ಳಲಾಗಿದೆ.

● *ಕೇಂದ್ರ ಸರ್ಕಾರದಿಂದ ಸೂಕ್ತ ಸಹಕಾರ ದೊರೆಯುತ್ತಿದೆಯೇ?*

ಸಿ.ಸಿ. ಪಾಟೀಲ: ಇನ್ನೂ ಕೆಲವು ಪ್ರಮುಖ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಪ್ರಕ್ರಿಯೆ ಪ್ರಾರಂಭಿಸಿವೆ. ಒಟ್ಟಾರೆ ನಮ್ಮ ನೆಚ್ಚಿನ ಮಾಜಿ ಪ್ರಧಾನಿಗಳಾಗಿದ್ದ ಅಟಲ್ ಬಿಹಾರಿ ವಾಜಪೇಯಿ ಅವರು ಕನಸು ಕಂಡಂತೆ ರಸ್ತೆ ಯೋಜನೆ ಮೂಲಕ ದೇಶದ ನಾಲ್ಕು ದಿಕ್ಕುಗಳಿಗೂ ಉತ್ತಮ ಹೆದ್ದಾರಿ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ವೇಗವರ್ಧಕವಾಗಿ ನಮ್ಮ ಸರ್ಕಾರ ಮುಂದುವರಿಯುತ್ತಿದೆ. ಇದಕ್ಕೆ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವರಾದ ನಿತಿನ್ ಗಡ್ಕರಿಜೀ ಅವರ ಪ್ರೋತ್ಸಾಹವೂ ದೊರೆಯುತ್ತಿರುವುದು ನಮ್ಮ ನಾಡಿಗೆ ವರದಾನವಾಗಿದೆ. ಇವೆಲ್ಲವುಗಳ ಫಲಶ್ರುತಿಯಾಗಿ ಉತ್ತಮ ಗುಣಮಟ್ಟದ ಹೆದ್ದಾರಿ ಮತ್ತು ಅಪಘಾತ ರಹಿತ ಸಂಚಾರ ವ್ಯವಸ್ಥೆ ಜನತೆಗೆ ಸಿಗುವಂತಾದರೆ ನಮ್ಮ ಪ್ರಯತ್ನ ಸಾರ್ಥಕ.

● *ರಸ್ತೆ, ಕಟ್ಟಡ ನಿರ್ಮಾಣವಷ್ಟೇ ಅಲ್ಲದೆ ಪರಿಸರಕ್ಕೆ ನಿಮ್ಮ ಇಲಾಖೆಯ ಕೊಡುಗೆ ಏನು?*

ಸಿ.ಸಿ. ಪಾಟೀಲ: ಅವೈಜ್ಞಾನಿಕ ರಸ್ತೆ ತಡೆಗಳ ನಿರ್ಮೂಲನೆ, ರಸ್ತೆ ಸುರಕ್ಷತೆ ಮತ್ತು ಮಾರ್ಗದರ್ಶಿ ಫಲಕಗಳ ಅಳವಡಿಕೆ ಈ ಮುಂತಾದ ಹಲವು ಜನೋಪಯೋಗಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇಲಾಖೆ ನಿರ್ಮಿಸುತ್ತಿರುವ ಕಟ್ಟಡಗಳ ಸುತ್ತಲೂ ಗಿಡಮರಗಳನ್ನು ನೆಡುವ ಬಗ್ಗೆ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ.

ಹಿಂದುಳಿದ ಪ್ರದೇಶಗಳಿಗೆ ಆದ್ಯತೆ

- ಡಾ.ನಂಜುಂಡಪ್ಪ ವರದಿ ಆಧಾರಿತ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಎಸ್.ಡಿ.ಪಿ. ಯೋಜನೆಯಡಿ ರಸ್ತೆ ಅಭಿವೃದ್ಧಿ ಕೈಗೊಳ್ಳಲು ₹290 ಕೋಟಿ ಮೊತ್ತಕ್ಕೆ ಅನುದಾನ ಹಂಚಿಕೆ ಮಾಡಲಾಗಿದೆ. ಕ್ರಿಯಾ ಯೋಜನೆ ತಯಾರಿಸುವ ಹಂತದಲ್ಲಿದ್ದು, ಆರ್ಥಿಕ ವರ್ಷದ ಅಂತ್ಯದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವ ವಿಶ್ವಾಸ ಇಲಾಖೆಯದ್ದಾಗಿದೆ.
- ಲೋಕೋಪಯೋಗಿ ಇಲಾಖೆಯ ರಸ್ತೆಗಳ ವಾರ್ಷಿಕ ನಿರ್ವಹಣೆ ಕಾಮಗಾರಿಗಳನ್ನು ರಾಜ್ಯಾದ್ಯಂತ ಕೈಗೊಳ್ಳಲಾಗಿದೆ. ರಸ್ತೆಗಳ ಗುಂಡಿ ಮುಚ್ಚುವ ಕಾರ್ಯವನ್ನು ಫೆಬ್ರುವರಿ-22ರ ಅಂತ್ಯಕ್ಕೆ ಪೂರ್ಣಗೊಳಿಸಲು ಲೋಕೋಪಯೋಗಿ ಇಲಾಖೆ ಉದ್ದೇಶಿಸಿದೆ.

ಪ್ರವಾಸಿ ಧಾಮಗಳಿಗೆ ಸಂಪರ್ಕ

ಮೈಸೂರಿನ ಚಾಮುಂಡಿ ಬೆಟ್ಟ ಮತ್ತು ಬೆಂಗಳೂರು ಹೊರ ವಲಯದಲ್ಲಿರುವ ನಂದಿ ಬೆಟ್ಟ ಪ್ರವಾಸಿ ಧಾಮಗಳಲ್ಲಿ ಭೂಕುಸಿತ ಉಂಟಾಗಿ ಹಾನಿಗೊಳಗಾದ ರಸ್ತೆ ಸಂಪರ್ಕಕ್ಕೆ ವಿಶೇಷ ಯೋಜನೆ. ಇವುಗಳಲ್ಲಿ ನಂದಿ ಬೆಟ್ಟದ ರಸ್ತೆ ನಿರ್ಮಾಣ ಪೂರ್ಣಗೊಂಡಿದೆ.

ಹೊಸ ವಿಮಾನ ನಿಲ್ದಾಣಗಳ ನಿರ್ಮಾಣ

ರಾಜ್ಯದ ಪ್ರವಾಸಿ ತಾಣಗಳಿಗೆ ಮತ್ತು ವಾಣಿಜ್ಯ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸಲು ಅನುಕೂಲ ಆಗುವಂತೆ ಶಿವಮೊಗ್ಗ ಮತ್ತು ವಿಜಯಪುರಗಳಲ್ಲಿ ವಿಮಾನ ನಿಲ್ದಾಣಗಳ ನಿರ್ಮಾಣ.

ಕೆ–ಶಿಪ್ ಯೋಜನೆಯಡಿ ಹೆದ್ದಾರಿ

- ಕೆಶಿಪ್ ಯೋಜನೆಯಡಿ ಗದಗ-ಹೊನ್ನಾಳಿ ಹೆದ್ದಾರಿ ಅಭಿವೃದ್ಧಿಗೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿತ್ತು. ಕಾರಣಾಂತರದಿಂದ ಈ ಸ್ಥಗಿತಗೊಂಡಿತ್ತು. ಲೋಕೋಪಯೋಗಿ ಇಲಾಖೆ ಇಲಾಖೆ ಉಸ್ತುವಾರಿ ವಹಿಸಿಕೊಂಡ ಸಚಿವ ಸಿ.ಸಿ. ಪಾಟೀಲ ಅವರು ಈ ಕಾಮಗಾರಿಗೆ ಪುನರ್ ಚಾಲನೆ ನೀಡಿದ್ದಾರೆ. ಹೀಗಾಗಿ, ಕಾಮಗಾರಿ ಶರವೇಗ ಪಡೆದಿದ್ದು, ಈ ಪ್ರದೇಶಗಳ ಜನರಿಗೆ ಉತ್ತಮವಾದ ಸರ್ವ ಋತು ರಸ್ತೆಯ ಸೌಲಭ್ಯ ಸಿಗಲಿದೆ.
- ಈಗ ಕೆಶಿಪ್ 4 ಯೋಜನೆಯಡಿ ₹2,943 ಕಿಲೋ ಮೀಟ ರ ರಾಜ್ಯ ಹೆದ್ದಾರಿ ಅಭಿವ್ರದ್ಧಿ ಯೋಜನೆ ಕೈಗೆತ್ತಿಕೊಳ್ಳಲು ಕಾರ್ಯ ಸಾಧ್ಯತಾ ವರದಿ ಸಿದ್ಧವಾಗುತ್ತಿದೆ.
- ನಬಾರ್ಡ್ ಸಂಸ್ಥೆಯಿಂದ ಆರ್‌ಐಡಿಎಫ್-27ರಡಿ ₹143 ಕೋಟಿ ಮೊತ್ತದಲ್ಲಿ 23 ಬೃಹತ್ ಮತ್ತು ಮಧ್ಯಮ ಸೇತುವೆಗಳಿಗೆ ಅನುಮೋದನೆಯನ್ನು ಲೋಕೋಪಯೋಗಿ ಇಲಾಖೆ ಪಡೆದುಕೊಂಡಿದೆ.

ಎಸ್‌ಸಿಪಿ, ಟಿಎಸ್‌ಪಿ ಯೋಜನೆ

ಬಡವರು, ಪರಿಶಿಷ್ಟ ಸಮುದಾಯವರ ಮೇಲೆ ಅಪಾರ ಕಳಕಳಿ ಹೊಂದಿರುವ ಸರ್ಕಾರ, ನಿರ್ಲಕ್ಷ್ಯಕ್ಕೆ ತುತ್ತಾಗಿರುವ ಸಮುದಾಯದವರು ವಾಸಿಸುವ ಪ್ರದೇಶಗಳಲ್ಲಿ ಉತ್ತಮ ರಸ್ತೆಗಳನ್ನು ನಿರ್ಮಿಸುವುದಕ್ಕೆ ಆದ್ಯತೆ ನೀಡಿದೆ.

ಎಸ್‌ಸಿಪಿ (ಪರಿಶಿಷ್ಟ ಜಾತಿಗಳ ಉಪಯೋಜನೆ) ಮತ್ತು ಟಿಎಸ್‌ಪಿ(ಪರಿಶಿಷ್ಟ ಪಂಗಡಗಳ ಉಪ ಯೋಜನೆ) ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರು ವಾಸಿಸುವ ಕಾಲನಿಗಳಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆಗಳ ನಿರ್ಮಾಣವನ್ನು ₹985 ಕೋಟಿ ಮೊತ್ತದಲ್ಲಿ ಅನುಷ್ಠಾನಗೊಳಿಸಲು ಜನಸಂಖ್ಯೆಯ ಆಧಾರದ ಮೇಲೆ ಕ್ಷೇತ್ರವಾರು ಅನುದಾನ ಹಂಚಿಕೆಯನ್ನು ಲೋಕೋಪಯೋಗಿ ಇಲಾಖೆ ಮಾಡಿದೆ.

ಕಾಮಗಾರಿಗಳ ಬಗ್ಗೆ ಮಾಹಿತಿ ಪಡೆಯುತ್ತಿರುವ ಸಚಿವರಾದ ಸಿ.ಸಿ. ಪಾಟೀಲ

ಶಾಲೆ, ಅಂಗನವಾಡಿ ಕಟ್ಟಡಗಳಿಗೆ ಕಾಯಕಲ್ಪ

ದೇಶದ ಭವಿಷ್ಯದ ಪ್ರಜೆಗಳನ್ನು ರೂಪಿಸುವ ನಿಟ್ಟಿನಲ್ಲೂ ಮೂಲಸೌಕರ್ಯ ಅಭಿವೃದ್ಧಿಯತ್ತ ದೊಡ್ಡ ಹೆಜ್ಜೆಯನ್ನೇ ಸರ್ಕಾರ ಇಟ್ಟಿದೆ. ಶಾಲೆ ಮತ್ತು ಅಂಗನವಾಡಿ ಕಟ್ಟಡಗಳ ನಿರ್ಮಾಣ ವಿಷಯದಲ್ಲಿ ಹೊಸ ದಾಖಲೆಯನ್ನೇ ಬರೆದಿದೆ.

₹756 ಕೋಟಿ ಮೊತ್ತದ ಯೋಜನೆಯನ್ನು ಈ ಕಟ್ಟಡಗಳ ನಿರ್ಮಾಣಕ್ಕೆ ಸರ್ಕಾರ ದಿಟ್ಟ ಕ್ರಮ ಕೈಗೊಂಡಿದೆ.

ಎಸ್.ಆರ್ ದರ ಪರಿಷ್ಕರಣೆ

ರಾಜ್ಯ ವ್ಯಾಪಿ ವಿವಿಧ ಎಂಜಿನಿಯರಿಂಗ್ ಇಲಾಖೆಗಳ ಏಕರೂಪ ದರಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯಡಿ ಜಾರಿಗೆ ತರಲಾಗಿದೆ.

ಈ ಕಾರ್ಯವು ಅಂತಿಮ ಹಂತದಲ್ಲಿದ್ದು, ಅತೀ ಶೀಘ್ರವಾಗಿ ಏಕರೂಪ ದರಪಟ್ಟಿ ಜಾರಿಗೆ ತರಲು ಲೋಕೋಪಯೋಗಿ ಇಲಾಖೆ ಉದ್ದೇಶಿಸಿದೆ.

ರಸ್ತೆ ಸಂಪರ್ಕದಲ್ಲಿ ಕರ್ನಾಟಕ ಮಾದರಿ: ಬಿಹಾರ ಸರ್ಕಾರದಿಂದ ಪ್ರಶಂಸೆ

ಬಿಹಾರದ ರಸ್ತೆ ನಿರ್ಮಾಣ ಇಲಾಖೆ ಸಚಿವ ನಿತಿನ್ ನಬಿನ್ ಅವರನ್ನು ರಾಜ್ಯದ ಲೋಕೋಪಯೋಗಿ ಸಚಿವರಾದ ಸಿ.ಸಿ. ಪಾಟೀಲ ಅವರು ಗೌರವಿಸುತ್ತಿರುವುದು. ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಕೃಷ್ಣ ರೆಡ್ಡಿ ಇದ್ದರು

ಕರ್ನಾಟಕವು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಅಭಿವೃದ್ಧಿಗೆ ಇಲ್ಲಿಯ ಸುಸಜ್ಜಿತ ಹೆದ್ದಾರಿಗಳು ಮತ್ತು ಮೂಲಸೌಲಭ್ಯಗಳು ಸಾಕ್ಷಿಯಾಗಿವೆ. ಇದು ಬಿಹಾರದ ರಸ್ತೆ ನಿರ್ಮಾಣ ಇಲಾಖೆಯ ಸಚಿವ ನಿತಿನ್ ನಬಿನ್ ಅವರ ಪ್ರಶಂಸೆಗೂ ಕಾರಣವಾಗಿದೆ.

ವಿಕಾಸಸೌಧದಲ್ಲಿ ಲೋಕೋ ಪಯೋಗಿ ಸಚಿವರಾದ ಸಿ.ಸಿ. ಪಾಟೀಲ ಅವರನ್ನು ಭೇಟಿಯಾಗಿದ್ದ ನಿತಿನ್ ನಬಿನ್ ಅವರು, ಕರ್ನಾಟಕದಲ್ಲಿ ಕೈಗೊಳ್ಳುತ್ತಿರುವ ಹೆದ್ದಾರಿ ಮತ್ತು ರಸ್ತೆ ನಿರ್ಮಾಣಗಳ ಯೋಜನೆಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಂಡರು

ಕವಿ ಸಿದ್ಧಲಿಂಗಯ್ಯ ಹೆಸರಲ್ಲಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಸಿದ್ಧಲಿಂಗಯ್ಯ

ಬೆಂಗಳೂರು: ರಾಜ್ಯ ಸರ್ಕಾರವು ಕವಿ ಡಾ. ಸಿದ್ಧಲಿಂಗಯ್ಯ ಅವರ ಹೆಸರಿನಲ್ಲಿ 'ಡಾ. ಸಿದ್ಧಲಿಂಗಯ್ಯ ಕಾವ್ಯ ಪ್ರಶಸ್ತಿ'ಯನ್ನು ಸ್ಥಾಪಿಸಿ, ಆದೇಶ ಹೊರಡಿಸಿದೆ. ಈ ಪ್ರಶಸ್ತಿಯನ್ನು ಅವರ ಜನ್ಮದಿನದಂದು ಯುವ ಕಾವ್ಯ ಬರಹಗಾರರೊಬ್ಬರಿಗೆ ನೀಡಲಾಗುತ್ತದೆ.

ಪ್ರಶಸ್ತಿಯು ₹ 5 ಲಕ್ಷ ನಗದು ಒಳಗೊಂಡಿರಲಿದೆ. ಶೋಷಿತ, ತಳ ಸಮುದಾಯಗಳ ಧ್ವನಿಯಾಗಿ, ಸಾಮಾಜಿಕ ನ್ಯಾಯದ ಆಶಯಗಳಿಗೆ ವಿಸ್ತಾರವಾದ ನೆಲೆ ತಂದುಕೊಡಲು ಶ್ರಮಿಸಿದ ಸೃಜನಶೀಲ ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಬೇಕು. ಒಂದು ವರ್ಷ ಕನ್ನಡ ಲೇಖಕರು, ಮತ್ತೊಂದು ವರ್ಷ ಅನ್ಯ ಭಾಷೆಯ ಲೇಖಕರಿಗೆ ಪ್ರಶಸ್ತಿ ಕೊಡಬೇಕು. ಪತ್ರಪುರಸ್ಕೃತ, ಸಂಶೋಧನಾ ಪ್ರಬಂಧ, ಪುಸ್ತಕ ಲೇಖಕರು ಹಾಗೂ ಸಹ ಲೇಖಕರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಬಾರದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ ಇತರೆ ವಾರ್ಷಿಕ ಪ್ರಶಸ್ತಿಗಳ ಸಾಮಾನ್ಯ ನಿಯಮಾವಳಿಗಳು ಈ ಪ್ರಶಸ್ತಿಗೂ ಅನ್ವಯವಾಗುತ್ತವೆ ಎಂದು ತಿಳಿಸಲಾಗಿದೆ.

ಸಾಮಾಜಿಕ ನ್ಯಾಯ ಆಶಯಗಳಿಗೆ ಸ್ಪಂದಿಸುವ ಲೇಖಕರನ್ನು ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕು. ಒಬ್ಬರು ಪ್ರಾಧ್ಯಾಪಕರು, ಒಬ್ಬರು ಕವಿ ಅಥವಾ ಲೇಖಕರು ಸಮಿತಿಯ ಸದಸ್ಯರಾಗಿರಬೇಕು. ಶೋಷಿತ ಸಮುದಾಯದ ನಡುವೆ ಸಾಮಾಜಿಕ ನೆಲೆಯಲ್ಲಿ ಕೆಲಸ ಮಾಡುವ ಸಾಧಕರೊಬ್ಬರು ಸಮಿತಿಯಲ್ಲಿ ಸದಸ್ಯರಾಗಿ ಇರಬೇಕು ಎಂದು ಹೇಳಲಾಗಿದೆ.

ಕಾವ್ಯ, ನಾಟಕ, ಪ್ರಬಂಧ, ವಿಮರ್ಶೆ, ಸಂಶೋಧನೆ, ಆತ್ಮಕಥನ ಮುಂತಾದ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ್ದ ಡಾ. ಸಿದ್ಧಲಿಂಗಯ್ಯ ಅವರು, 2021ರ ಜೂನ್ ತಿಂಗಳಲ್ಲಿ ಹೃದಯಾಘಾತದಿಂದ ಮೃತಪಟ್ಟಿದ್ದರು. ಇದೇ ತಿಂಗಳು ಅವರಿಗೆ 'ಪದ್ಮಶ್ರೀ ಪ್ರಶಸ್ತಿ'ಯನ್ನು ಮರಣೋತ್ತರವಾಗಿ ಘೋಷಿಸಲಾಗಿತ್ತು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯಗೆ ಸಿ.ಎಂ ತಿರುಗೇಟು

'ಮೊಸರಲ್ಲಿ ಕಲ್ಲು ಹುಡುಕಬೇಡಿ'

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: 'ನಮಗೆ ನಮ್ಮ ಜವಾಬ್ದಾರಿಯ ಅರಿವಿದೆ. ಜನರ ಹಿತಕ್ಕಾಗಿ ನಾವು ಹಲವಾರು ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಸಿದ್ದರಾಮಯ್ಯ ಅವರು ಮೊಸರಲ್ಲಿ ಕಲ್ಲು ಹುಡುಕುವ ಪ್ರಯತ್ನ ಮಾಡಬಾರದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'2018ರ ಚುನಾವಣಾ ಪ್ರಣಾಳಿಕೆಯಲ್ಲಿ ಬಿಜೆಪಿ ನೀಡಿದ್ದ ಭರವಸೆಗಳ ಪೈಕಿ ಒಂದನ್ನೂ ಈಡೇರಿಸಿಲ್ಲ' ಎಂಬ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪದ ಕುರಿತು ಭಾನುವಾರ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ಅವರಿಂದ ಹೆಚ್ಚಿನದೇನನ್ನೂ ನಿರೀಕ್ಷಿಸುವಂತಿಲ್ಲ. ಜನರ ಹಿತದ ದೃಷ್ಟಿಯಿಂದ ಏನಾಗಿದೆ ಎಂಬುದು ಮುಖ್ಯ. ಕಾರ್ಯಕ್ರಮ ಘೋಷಿಸುವುದು ಮುಖ್ಯವಲ್ಲ. ಅನುಷ್ಠಾನವೂ ಆಗಬೇಕು. ನಮಗೆ ಜವಾಬ್ದಾರಿಯ ಅರಿವಿದೆ. ಎಲ್ಲರಿಗೂ ಒಳಿತಾಗುವ ಕೆಲಸ ಹೇಗೆ ಮಾಡಬೇಕು ಎನ್ನುವುದು ಗೊತ್ತಿದೆ' ಎಂದರು.

ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳಲ್ಲಿ ಶೇಕಡ 96 ರಷ್ಟನ್ನು ಈಡೇರಿಸಿರುವುದಾಗಿ ಸಿದ್ದರಾಮಯ್ಯ ಹೇಳಿಕೊಳ್ಳುತ್ತಿದ್ದರು. ಆದರೂ, ಅವರನ್ನು ಜನರು ತಿರಸ್ಕಾರ ಮಾಡಿದರು ಎಂದು ಹೇಳಿದರು.

ಕಾಂಗ್ರೆಸ್‌ನಲ್ಲಿ ಒಳಜಗಳ ಇದೆ. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನಡುವೆ ಇರುವ ಒಳಜಗಳ ವಿಡಿಯೊ ಮೂಲಕ ಬಹಿರಂಗವಾಗಿದೆ. ಅದು ಅವರ ಪಕ್ಷದ ಆಂತರಿಕ ವಿಚಾರ. ಆದರೂ, ಇಬ್ಬರ ನಡುವೆ ಜಗಳ ಇರುವುದು ಎಲ್ಲರಿಗೂ ಗೊತ್ತಾಗಿದೆ. ಕಾಂಗ್ರೆಸ್ ಪಕ್ಷದ ನಾಯಕತ್ವವನ್ನು ಯಾರೇ ವಹಿಸಿದರೂ ಅವರು ಸ್ವಾರ್ಥ ಬಿಟ್ಟು ಯೋಚಿಸುವುದಿಲ್ಲ ಎಂದು ವ್ಯಾಖ್ಯಾನಿಸಿದರು.

ಮೈಸೂರಿನಲ್ಲಿ ಬಿಜೆಪಿ ಸಂಸದರು ಮತ್ತು ಶಾಸಕರ ನಡುವಿನ ಸಂಘರ್ಷದ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಅದು ಜಗಳ ಅಲ್ಲ. ಅಭಿವೃದ್ಧಿ ವಿಚಾರಕ್ಕೆ ಸಂಬಂಧಿಸಿದ ವಿಭಿನ್ನ ದೃಷ್ಟಿಕೋನವಷ್ಟೆ. ಸಂಸದರು ಮತ್ತು ಶಾಸಕರನ್ನು ಕರೆದು ಮಾತನಾಡುತ್ತೇನೆ' ಎಂದರು.

ನೆರವಿಗೆ ಕ್ರಮ: ಬೆನ್ನು ಮೂಳೆಯ ಸಮಸ್ಯೆಯಿಂದ ಬಳಲುತ್ತಿರುವ ಜನಿಶ್ ಎಂಬ ಮಗುವಿನ ಚಿಕಿತ್ಸೆಗೆ ₹ 18 ಕೋಟಿ ಅಗತ್ಯವಿರುವ ಕುರಿತು ಕೇಳಿದಾಗ, 'ಇಂತಹ ಪ್ರಕರಣಗಳಲ್ಲಿ ಸರ್ಕಾರ ಹೇಗೆ ನೆರವು ನೀಡಬಹುದು ಎನ್ನುವುದರ ಕುರಿತು ಚರ್ಚಿಸಲಾಗುವುದು. ಇಂತಹ ಪ್ರಕರಣಗಳಿಗೆ ನೆರವಿನ ಸಾಧ್ಯತೆ ಕುರಿತು ತಜ್ಞರ ಜತೆ ಚರ್ಚಿಸಿ, ತೀರ್ಮಾನಿಸಲಾಗುವುದು' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಚಿತ್ರಮಂದಿರ ನಿರ್ಬಂಧ: ಸಿ.ಎಂ ಜತೆ ಚರ್ಚಿಸುವೆ- ಶಿವರಾಜ್‌ಕುಮಾರ್

ಮೈಸೂರು: 'ಎಲ್ಲಾ ಕ್ಷೇತ್ರಗಳಿಗೂ ಕೋವಿಡ್ ಕಠಿಣ ನಿಯಮಗಳಿಂದ ವಿನಾಯಿತಿ ನೀಡಿ ಚಿತ್ರಮಂದಿರಗಳಿಗೆ ಮಾತ್ರ ನೀಡಿಲ್ಲ. ನಿರ್ಬಂಧ ತೆರವುಗೊಳಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಲ್ಲಿ ಮನವಿ ಮಾಡುವೆ' ಎಂದು ನಟ ಶಿವರಾಜ್‌ಕುಮಾರ್ ತಿಳಿಸಿದರು.

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಈ ಹಿಂದೆ ಸಾಕಷ್ಟು ಬಾರಿ ಚಿತ್ರೋದ್ಯಮಕ್ಕೆ ಮುಖ್ಯಮಂತ್ರಿ ಅನುಕೂಲ ಮಾಡಿಕೊಟ್ಟಿದ್ದಾರೆ. ಈ ಬಾರಿಯೂ ನಮ್ಮ ಮನವಿ ಪುರಸ್ಕರಿಸುತ್ತಾರೆ ಎಂಬ ವಿಶ್ವಾಸವಿದೆ' ಎಂದರು.

'ಕೋವಿಡ್ ಜತೆಯಲ್ಲೇ ಬದುಕಬೇಕಾದ ಅನಿವಾರ್ಯ ಈಗ ಎದುರಾಗಿದೆ. ಅದಕ್ಕೆ ತಕ್ಕ ರೀತಿಯ ವ್ಯವಸ್ಥೆಯನ್ನು ಎಲ್ಲ ಕ್ಷೇತ್ರಗಳಲ್ಲಿಯೂ ರೂಪಿಸಿಕೊಳ್ಳಬೇಕಿದೆ' ಎಂದು ನುಡಿದರು.

'ಇಲ್ಲಿನ ಶಕ್ತಿಧಾಮದ ಜವಾಬ್ದಾರಿ ನಮ್ಮ ಮೇಲಿದೆ. ಅಲ್ಲಿಗೆ ಬಂದು ಮಕ್ಕಳೊಡನೆ ಬೆರೆತರೆ ಖುಷಿಯಾಗುತ್ತದೆ. ಅಲ್ಲೊಂದು ಶಾಲೆ ತೆರೆಯಲು ಅನುಮತಿ ಸಿಗುವ ವಿಶ್ವಾಸ ಇದೆ' ಎಂದು ಶಿವರಾಜ್‌ಕುಮಾರ್ ಹೇಳಿದರು.

ನೀಟ್: ಮೊದಲ ಸುತ್ತಿನ ಸೀಟು ಹಂಚಿಕೆ–ವೇಳಾಪಟ್ಟಿ ಪ್ರಕಟ

ಬೆಂಗಳೂರು: 2021ರಲ್ಲಿ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸುಗಳ ಪ್ರವೇಶಕ್ಕೆ ನಡೆಸಿದ್ದ ನೀಟ್ ಪರೀಕ್ಷೆ ಅನುಸಾರ ಮೊದಲನೇ ಸುತ್ತಿನ ಸೀಟು ಹಂಚಿಕೆ ಕೌನ್ಸೆಲಿಂಗ್ ವೇಳಾಪಟ್ಟಿ ಪ್ರಕಟಿಸಲಾಗಿದೆ.

ಶನಿವಾರ ಸೀಟ್ ಮ್ಯಾಟ್ರಿಕ್ಸ್ ಮತ್ತು ಶುಲ್ಕ ವಿವರ ಪ್ರಕಟಿಸಲಾಗಿದ್ದು, ದೃಢೀಕರಣ ಚೀಟಿಯನ್ನು ಡೌನ್-ಲೋಡ್ ಮಾಡಿಕೊಳ್ಳುವ ಪ್ರಕ್ರಿಯೆಯೂ ಆರಂಭವಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತಿಳಿಸಿದೆ.

ಫೆ.4 ರಂದು ಈ ಮೂರೂ ಕೋರ್ಸುಗಳಿಗೆ ಮೊದಲ ಸುತ್ತಿನ ಸೀಟು ಹಂಚಿಕೆಯನ್ನು ಪ್ರಕಟಿಸಲಾಗುವುದು ಎಂದು ಕೆಇಎ ಪ್ರಕಟಣೆ ತಿಳಿಸಿದೆ.

ಇದಕ್ಕೂ ಮೊದಲು ಫೆ.1 ರ ಬೆಳಿಗ್ಗೆ 10 ಗಂಟೆಯವರೆಗೆ ವಿದ್ಯಾರ್ಥಿಗಳಿಗೆ ತಮ್ಮ ಇಷ್ಟದ ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಮತ್ತು ಫೆ.1 ರಿಂದ 3ರ ಬೆಳಿಗ್ಗೆ 10 ಗಂಟೆಯವರೆಗೆ ತಮ್ಮ ಐಚ್ಛಿಕ ವಿಷಯಗಳಲ್ಲಿ ಅಗತ್ಯವೆನಿಸಿದರೆ ಬದಲಾವಣೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ ಎಂದು ಹೇಳಿದೆ. ಬಳಿಕ 'ಚಾಯ್ಸ್-1' ಮತ್ತು 'ಚಾಯ್ಸ್-2' ಸ್ತರದ ವಿದ್ಯಾರ್ಥಿಗಳು ನಿಗದಿತ ಶುಲ್ಕ ತುಂಬಿ, ಪ್ರವೇಶ ದಾಖಲಾತಿಯನ್ನು ಡೌನ್-ಲೋಡ್ ಮಾಡಿಕೊಳ್ಳಲು ಫೆ.4 ರ ಮಧ್ಯಾಹ್ನ 2 ಗಂಟೆಯಿಂದ ಫೆ.7 ರ ಮಧ್ಯಾಹ್ನ 1 ಗಂಟೆಯವರೆಗೆ ಅವಕಾಶವಿರುತ್ತದೆ. ನಂತರ, ವಿದ್ಯಾರ್ಥಿಗಳು ದೃಢೀಕೃತ ಪ್ರಮಾಣಪತ್ರಗಳೊಂದಿಗೆ ಮೂಲ ದಾಖಲೆಗಳನ್ನು ಫೆ.5 ರಿಂದ 7ರ ಒಳಗೆ ಬೆಂಗಳೂರಿನಲ್ಲಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ಪರಿಶೀಲನೆಗೆ ಸಲ್ಲಿಸಬೇಕು ಎಂದು ಪ್ರಕಟಣೆ ವಿವರಿಸಿದೆ.

ನರ್ಸಿಂಗ್ 'ಸೀಟು ಬ್ಲಾಕಿಂಗ್'?

ಒಂದನೇ ಪುಟದಿಂದ

'ವಿಕ್ಟೋರಿಯಾ ಹಾಸ್ಪಿಟಲ್ ಸ್ಕೂಲ್ ಆಫ್ ನರ್ಸಿಂಗ್, ಬೆಂಗಳೂರಿನ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿರುವ ಸ್ಕೂಲ್ ಆಫ್ ನರ್ಸಿಂಗ್, ತುಮಕೂರು ಮತ್ತು ಚಾಮರಾಜನಗರದಲ್ಲಿರುವ ಸರ್ಕಾರಿ ಸ್ಕೂಲ್ ಆಫ್ ನರ್ಸಿಂಗ್ ಸಂಸ್ಥೆಗಳಲ್ಲಿ 5,281ರಿಂದ 8,268 ರ‍್ಯಾಂಕ್ ನಡುವಿನ ವಿದ್ಯಾರ್ಥಿಗಳಿಗೆ ಸೀಟು ಸಿಕ್ಕಿದೆ. ಆದರೆ, ಅದಕ್ಕಿಂತ ಕಡಿಮೆ ರ‍್ಯಾಂಕ್ ಪಡೆದಿದ್ದ ಹಲವರಿಗೆ ಸೀಟು ಸಿಕ್ಕಿಲ್ಲ' ಎಂದು ಮಾಪ್ ಸುತ್ತಿನ ಬಳಿಕ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದ ಪಟ್ಟಿ (ಆ ಪಟ್ಟಿಯನ್ನು ವೆಬ್‌ಸೈಟ್‌ನಿಂದ ತೆಗೆಯಲಾಗಿದೆ) ಸಹಿತ ದೂರಿನಲ್ಲಿ ಆರೋಪಿಸಿದ್ದಾರೆ.

ವೆಬ್‌ಸೈಟ್‌ನಲ್ಲಿ ಪ್ರಕಟವಾಗದ ಪಟ್ಟಿ: 'ರಾಜ್ಯದಲ್ಲಿ ಸರ್ಕಾರಿ ಅರೆ ವೈದ್ಯಕೀಯ 32 ಸಂಸ್ಥೆಗಳಿವೆ. ಡಿಸೆಂಬರ್ 27ರಿಂದ 31ರವರೆಗೆ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ನಡೆದ ಕೌನ್ಸೆಲಿಂಗ್‌ನಲ್ಲಿ ಅರೆ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಸೀಟು ಹಂಚಿಕೆ ಮಾಡಲಾಗಿದೆ. ಆದರೆ, ಆಯ್ಕೆಯಾದ ಸೀಟುಗಳ ಮಾಹಿತಿ ಯನ್ನೇ ವೆಬ್‌ಸೈಟ್‌ನಲ್ಲಿ ಪ್ರಕಟಿಸಿಲ್ಲ. ಇಲ್ಲೂ ಸೀಟುಗಳನ್ನು ಬ್ಲಾಕ್ ಮಾಡಿ ಹಂಚಿದ ಅನುಮಾನಗಳಿವೆ. ಪಾರದರ್ಶಕತೆಯಿಂದ ಕೌನ್ಸೆಲಿಂಗ್ ನಡೆಸದೆ ಇಷ್ಟ ಬಂದಂತೆ, ಹಣ ನೀಡಿದ ವಿದ್ಯಾರ್ಥಿಗಳಿಗೆ ಸೀಟು ಹಂಚಿಕೆ ಮಾಡಿದ್ದಾರೆ. ಅಕ್ರಮ ಬಯಲಾಗಬಹುದೆಂಬ ಕಾರಣಕ್ಕೆ ಸೀಟು ಹಂಚಿಕೆಯ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿಲ್ಲ' ಎಂದು ವಿದ್ಯಾರ್ಥಿಗಳು ದೂರಿದ್ದಾರೆ.

ಸಂಸದ ಪ್ರತಾಪಸಿಂಹ ವಿರುದ್ಧ ಬಿಜೆಪಿ ಶಾಸಕ ಎಲ್‌.ನಾಗೇಂದ್ರ ಕಿಡಿ

'ಚಾಮುಂಡಿ ಆಣೆ ಪರ್ಸೆಂಟೇಜ್ ಅಲ್ಲ'

ಪ್ರಜಾವಾಣಿ ವಾರ್ತೆ

ಎಲ್‌.ನಾಗೇಂದ್ರ

ಮೈಸೂರು: 'ಪರ್ಸೆಂಟೇಜ್ ಪ್ರಶ್ನೆಯೇ ಇಲ್ಲ. ಬೇಕಾದರೆ ಚಾಮುಂಡೇಶ್ವರಿ ಮೇಲೆ ಆಣೆ ಹಾಕುತ್ತೇನೆ. ಜನರ ಹಿತಾಸಕ್ತಿ ರಕ್ಷಣೆಗಾಗಿಯೇ ಅಡುಗೆ ಅನಿಲ ಪೈಪ್‌ಲೈನ್ ಯೋಜನೆ ವಿರುದ್ಧ ದನಿ ಎತ್ತಿದ್ದೇನೆ' ಎಂದು ಚಾಮರಾಜ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಶಾಸಕ ಎಲ್. ನಾಗೇಂದ್ರ ತಿಳಿಸಿದರು.

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ನಗರದಲ್ಲಿ ಅಡುಗೆ ಅನಿಲ ಪೈಪ್‌ಲೈನ್ ಯೋಜನೆಯ ಗುತ್ತಿಗೆ ಪಡೆದಿರುವ ಕಂಪನಿ ಮೇಲೆ ಸಂಸದ ಪ್ರತಾಪಸಿಂಹ ಅವರಿಗೆ ಏಕೆ ಅಷ್ಟೊಂದು ಆಸಕ್ತಿ? ಅವರು ಕಂಪನಿ ಪರ ವಕಾಲತ್ತು ವಹಿಸುವ ಅವಶ್ಯವಿಲ್ಲ. ಆ ಕಂಪನಿಯ ಅಧಿಕಾರಿಗಳು ಪಾಲಿಕೆ ಅಧಿಕಾರಿಗಳ ಬಳಿ ಚರ್ಚಿಸಲಿ. 500 ಕಿ.ಮೀ. ರಸ್ತೆ ದುರಸ್ತಿಗೆ ₹ 98 ಕೋಟಿ ಕೊಡ್ತಾರಂತೆ. ಈ ವಿಷಯವನ್ನು ಪ್ರಧಾನಿ ಮೋದಿ ಬಳಿ ಪ್ರಸ್ತಾಪಿಸಿದರೆ ₹ 500 ಕೋಟಿ ಕೊಡ್ತಾರೆ. ಬೀದಿಯಲ್ಲಿ ಮಾತನಾಡುವ ಅಗತ್ಯವಿಲ್ಲ' ಎಂದು ತಿರುಗೇಟು ನೀಡಿದರು.

'ಗುತ್ತಿಗೆದಾರರು ರಸ್ತೆ ಅಗೆದು ಹೋಗುತ್ತಾರೆ. ಕೆಲವೇ ತಿಂಗಳಲ್ಲಿ ಚುನಾವಣೆ ಬರಲಿದೆ. ಆಗ ಜನರಿಗೆ ನಾನು ಏನೆಂದು ಉತ್ತರ ಕೊಡಲಿ, ಏನೆಂದು ವೋಟ್ ಕೇಳಲಿ' ಎಂದು ಪ್ರಶ್ನಿಸಿದರು.

'ನಾನು ಮೈಸೂರಿನಲ್ಲಿ 25 ವರ್ಷಗಳಿಂದ ಜನರ ನಡುವೆ ಬೆಳೆದಿದ್ದೇನೆ. ಎಲ್ಲಿಂದಲೋ ಬಂದು ರಾಜಕಾರಣ ಮಾಡುತ್ತಿಲ್ಲ. ಪ್ರತಾಪಸಿಂಹ ತಮ್ಮೂರಿಗೆ ಹೋಗಿ ಒಂದು ತಾಲ್ಲೂಕು, ಜಿಲ್ಲಾ ಪಂಚಾಯಿತಿಯಲ್ಲಿ ಸ್ಪರ್ಧಿಸಿ ಗೆದ್ದು ತೋರಿಸಲಿ' ಎಂದು ಸವಾಲು ಹಾಕಿದರು.

ತುಮಕೂರು, ಹುಬ್ಬಳ್ಳಿಗಿಂತ ಕಡೆನಾ?: 'ಮಹಾರಾಜರು ಯೋಜನಾಬದ್ಧವಾಗಿ ಮೈಸೂರು ನಗರ ನಿರ್ಮಿಸಿದ್ದಾರೆ. ತುಮಕೂರು, ಹುಬ್ಬಳ್ಳಿಯಂತಹ ನಗರಗಳು ಸ್ಮಾರ್ಟ್ ಸಿಟಿ ಯೋಜನೆಗೆ ಆಯ್ಕೆಯಾದವು. ಆದರೆ, ಮೈಸೂರು ಈ ನಗರಗಳಿಗಿಂತ ಕಡೆನಾ?' ಎಂದು ಸ್ವಪಕ್ಷೀಯ ಸಂಸದ ಪ್ರತಾಪಸಿಂಹ ವಿರುದ್ಧ ಕಿಡಿಕಾರಿದರು.

'ಮೈಸೂರು ಸ್ಮಾರ್ಟ್ ಸಿಟಿ ಯೋಜನೆಗೆ ಸೇರ್ಪಡೆಯಾಗಿದ್ದರೆ ಇಂತಹ ಸಮಸ್ಯೆಯೇ ಉದ್ಭವವಾಗುತ್ತಿರಲಿಲ್ಲ. ಸಮರ್ಪಕವಾಗಿ ಅಡುಗೆ ಅನಿಲ ಪೈಪ್‌ಲೈನ್ ಅಳವಡಿಸದಿದ್ದರೆ ಆಗುವ ದುರಂತಕ್ಕೆ ಹೊಣೆ ಯಾರು? ಅಗೆದ ರಸ್ತೆ ದುರಸ್ತಿಗೊಳಿಸುವ ವೆಚ್ಚದ ಹೊರೆ ಭರಿಸೋರು ಯಾರು ಎಂಬುದನ್ನು ಮೊದಲು ಸ್ಪಷ್ಟಪಡಿಸಲಿ' ಎಂದರು.

ದಾಂಡೇಲಿ: ರಾಜ್ಯದ ಮೊದಲ ಮೊಸಳೆ ಉದ್ಯಾನ ಮುಕ್ತ

ಪ್ರಜಾವಾಣಿ ವಾರ್ತೆ

ದಾಂಡೇಲಿ: ರಾಜ್ಯದ ಮೊದಲ ಹಾಗೂ ದೇಶದ ಎರಡನೇ ಮೊಸಳೆ ಉದ್ಯಾನವು ನಗರದಲ್ಲಿ ಭಾನುವಾರ ಪ್ರವಾಸಿಗರಿಗೆ ತೆರೆದುಕೊಂಡಿದೆ. ನಗರದ ಹಾಲಮಡ್ಡಿಯ ದಾಂಡೇಲಪ್ಪ ದೇವಸ್ಥಾನದ ಬಳಿ ₹ 3 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ ಉದ್ಯಾನವನ್ನು ಶಾಸಕ ಆರ್.ವಿ.ದೇಶಪಾಂಡೆ ಉದ್ಘಾಟಿಸಿದರು.



ದಾಂಡೇಲಿಯ ಮೊಸಳೆ ಉದ್ಯಾನದ ನೋಟ

ಪ್ರವಾಸೋದ್ಯಮ ಮತ್ತು ಲೋಕೋಪಯೋಗಿ ಇಲಾಖೆಗಳ ಸಹಯೋಗದಲ್ಲಿ ನಿರ್ಮಿಸಲಾಗಿದೆ. ಕಾಳಿ ನದಿಯ ತಟದಲ್ಲಿರುವ ಈ ತಾಣದಲ್ಲಿ ಮೊಸಳೆ ವೀಕ್ಷಣೆಯೊಂದಿಗೇ ಪ್ರವಾಸಿಗರ ಮನ ರಂಜನೆಗೆ ಅಗತ್ಯ ವ್ಯವಸ್ಥೆಯನ್ನೂ ಮಾಡಲಾಗಿದೆ. ಉದ್ಯಾನದ ಆರಂಭದಲ್ಲಿ ಹಸಿರು ಹುಲ್ಲಿನ ಹಾಸು ಸ್ವಾಗತಿಸುತ್ತದೆ. ಮೊಸಳೆಯ ಬೃಹತ್ ಪ್ರತಿಕೃತಿ, ಜಿಂಕೆ, ಜಿರಾಫೆಗಳ ಪ್ರತಿಮೆಗಳು, ಆಸನ ವ್ಯವಸ್ಥೆಯಿರುವ ಪ್ಯಾರಾಗೋಲಾ, ಕಾರಂಜಿ, ಮಕ್ಕಳ ಆಟಿಕೆಗಳು, ಮರಳಿನ ಹೊಂಡಗಳೂ ಇವೆ. ಮರಳಿನ ದಿಬ್ಬಗಳಲ್ಲಿ ವಿಶ್ರಾಂತಿ ಪಡೆಯುತ್ತಿರುವ, ನದಿಯಲ್ಲಿ ವಿಹರಿಸುತ್ತಿರುವ ಮೊಸಳೆಗಳನ್ನು ನೋಡಲು ವೀಕ್ಷಣಾ ಗೋಪುರ ಅಳವಡಿಸಲಾಗಿದೆ. ಮೂರು ಕಡೆಗಳಲ್ಲಿ ವೀಕ್ಷಣಾ ಸ್ಥಳಗಳನ್ನು ನಿರ್ಮಿಸಲಾಗಿದೆ. ನೂರಾರು ಜನ ನಿಂತು ಮೊಸಳೆಗಳನ್ನು ನೋಡಲು ಸಾಧ್ಯವಿದೆ.

ಉದ್ಯಾನದ ಮುಂಭಾಗಕ್ಕೆ ಪ್ರವೇಶ ಉಚಿತವಾಗಿದ್ದು, ಮೊಸಳೆ ವೀಕ್ಷಣೆಯ ಗೋಪುರಕ್ಕೆ ತೆರಳಲು ಕನಿಷ್ಠ ಪ್ರವೇಶ ದರ ವಿಧಿಸುವ ಸಾಧ್ಯತೆಯಿದೆ. ಪ್ರವೇಶ ದ್ವಾರದಿಂದ ಒಳಗೆ ಎರಡು ಎಕರೆ ಪ್ರದೇಶದಲ್ಲಿ ಉದ್ಯಾನವಿದೆ. ಅದರ ಆಚೆಗೆ ಕಾಳಿ ನದಿಯಲ್ಲಿ ಮೊಸಳೆಗಳು ಇರುತ್ತವೆ. ಉದ್ಯಾನಕ್ಕೆ ಸಾರ್ವಜನಿಕರ ಪ್ರವೇಶಕ್ಕೆ ಸಮಯ ಸದ್ಯದಲ್ಲೇ ನಿರ್ಧಾರವಾಗಲಿದೆ. ಉದ್ಯಾನ ನಿರ್ಮಾಣಕ್ಕೆ 2019ರಲ್ಲಿ ಚಾಲನೆ ನೀಡಲಾಗಿತ್ತು. ಕೋವಿಡ್ ಕಾರಣ ದಿಂದ ವಿಳಂಬವಾದ ಕಾಮಗಾರಿಯು, 2021ರ ಜೂನ್‌ನಲ್ಲಿ ಪೂರ್ಣಗೊಂಡಿತ್ತು.

ಚಳಿಗೆ ನಡುಗಿದ ಬೀದರ್ ಜನ

ಬೀದರ್: ಜಿಲ್ಲೆಯಲ್ಲಿ ಒಂದು ತಿಂಗಳಿನಿಂದ ಚಳಿ ನಿರಂತರವಾಗಿ ಮುಂದುವರಿದಿದೆ. ವಾರದಿಂದ 10 ಡಿಗ್ರಿ ಸೆಲ್ಸಿಯಸ್ ಇದ್ದ ಕನಿಷ್ಠ ಉಷ್ಣಾಂಶ ಭಾನುವಾರ 8.6 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದು, ಜನರನ್ನು ಇನ್ನಷ್ಟು ನಡುಗಿಸಿತು. ಬೆಳಿಗ್ಗೆ 10 ರವರೆಗೆ ಚಳಿ ಇತ್ತು.

ಹಾಲು,ಪತ್ರಿಕೆ ವಿತರಕರು ಚಳಿಯಿಂದ ಹೆಚ್ಚು ನಲುಗಿದರು. ಚಳಿ ಕಾರಣ ಬಹಳ ಹೊತ್ತಿನ ವರೆಗೂ ಜನರು ಮನೆಗಳ ಬಾಗಿಲು ತೆರೆಯಲಿಲ್ಲ ಮತ್ತು ವಾಯುವಿಹಾರಕ್ಕೂ ತೆರಳಲಿಲ್ಲ.

ದಾಖಲೆಯ ಕನಿಷ್ಠ ಉಷ್ಣಾಂಶ: '8.6 ಡಿಗ್ರಿ ಸೆಲ್ಸಿಯಸ್ ಕನಿಷ್ಠ ಉಷ್ಣಾಂಶ ಈ ವರ್ಷದ ದಾಖಲೆಯಾಗಿದೆ. ಜಿಲ್ಲೆಯಲ್ಲಿ ಫೆ. 10ರವರೆಗೂ ಚಳಿ ಇರಲಿದ್ದು, ನಂತರ ನಿಧಾನವಾಗಿ ಕಡಿಮೆಯಾಗಲಿದೆ' ಎಂದು ಕೃಷಿ ವಿಜ್ಞಾನ ಕೇಂದ್ರದ ಹವಾಮಾನ ವಿಭಾಗದ ತಾಂತ್ರಿಕ ಅಧಿಕಾರಿ ಬಸವರಾಜ ಬಿರಾದಾರ ತಿಳಿಸಿದ್ದಾರೆ.

ಕರ್ತವ್ಯ ಲೋಪ: ಸಿಪಿಐ ಅಮಾನತು



ನಂದೀಶ್ವರ ಕುಂಬಾರ

ನರಗುಂದ/ಗದಗ: ನರಗುಂದ ಪಟ್ಟಣದಲ್ಲಿ ನಡೆದ ಮುಸ್ಲಿಂ ಯುವಕನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಸಿಪಿಐ ನಂದೀಶ್ವರ ಕುಂಬಾರ ಅವರನ್ನು ಅಮಾನತು ಮಾಡಲಾಗಿದೆ.

'ಜ. 17ರಂದು ಹಿಂದೂ ಯುವಕರಿಂದ ಮುಸ್ಲಿಂ ಯುವಕನ ಕೊಲೆಯಾಗಿತ್ತು. ಇಡೀ ಪ್ರಕರಣವನ್ನು ಸರಿಯಾಗಿ ನಿಭಾಯಿಸುವಲ್ಲಿ ಕರ್ತವ್ಯ ಲೋಪವಾಗಿದೆ ಎಂದು ಬೆಳಗಾವಿ ಉತ್ತರ ವಲಯ ಐಜಿಪಿ ಎನ್.ಸತೀಶ್ ಕುಮಾರ್ ಅವರು ಸಿಪಿಐ ನಂದೀಶ್ವರ ಕುಂಬಾರ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಪ್ರಕಾಶ್ ದೇವರಾಜು ತಿಳಿಸಿದ್ದಾರೆ.

ನರಗುಂದ ಪಟ್ಟಣದಲ್ಲಿ ನ. 27, 2021ರಿಂದ ಕ್ಷುಲ್ಲಕ ಕಾರಣಕ್ಕಾಗಿ ಜಗಳ, ಹಿಂಸಾತ್ಮಕ ಘಟನೆಗಳು ನಡೆಯುತ್ತಿದ್ದವು. ಜ.17ರಂದು ರಾತ್ರಿ ಮುಸ್ಲಿಂ ಯುವಕ ಸಮೀರ್ ಶಹಪೂರ (20) ಕೊಲೆಯಾಗಿದ್ದರು. ಘಟನೆಯಲ್ಲಿ ಶಂಸೀರ್ ಖಾನ್ ಪಠಾಣ (22) ಗಾಯಗೊಂಡಿದ್ದಾರೆ. ಆದರೆ, ಈ ಘಟನೆ ತಡೆಯುವಲ್ಲಿ ಹಾಗೂ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಎಡವಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು. ಇದಕ್ಕೆ ಸಂಬಂಧಿಸಿದಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪಟ್ಟಣಕ್ಕೆ ಭೇಟಿ ನೀಡಿ ಪೊಲೀಸರ ವೈಫಲ್ಯ ಖಂಡಿಸಿದ್ದರು. ಎಲ್ಲ ಆರೋಪಿಗಳ ಬಂಧನಕ್ಕೆ ಆಗ್ರಹಿಸಿದ್ದರು.

ವಿವಿಧ ಸಂಘಟನೆಗಳು ಘಟನೆಯನ್ನು ಖಂಡಿಸಿದ್ದವು.

ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in
Azadi Ka Amrit Mahotsav

10 ಮತ್ತು 12 ವರ್ಷ ಪರಿಪಕ್ವತಾ ಅವಧಿಯ ಕರ್ನಾಟಕ ಸರ್ಕಾರ ಭದ್ರತಾ ಪತ್ರಗಳ ಹರಾಜು

ಕರ್ನಾಟಕ ರಾಜ್ಯ ಸರ್ಕಾರವು ಒಟ್ಟು ₹5,000.00 **ಕೋಟಿ ರೂಪಾಯಿಗಳ** (ಮುಖ ಬೆಲೆ) ಭದ್ರತಾ ಪತ್ರಗಳನ್ನು ಹರಾಜು ಮೂಲಕ ಮಾರಾಟ ಮಾಡಲು ಉದ್ದೇಶಿಸಿದೆ.

ಬಹುದರ ನಮೂನೆಯ ಅಡಿಯಲ್ಲಿ, ಹುಟ್ಟುವಳಿ ಆಧಾರಿತ ಹರಾಜನ್ನು ಭಾರತೀಯ ರಿಸರ್ವ್ ಬ್ಯಾಂಕ್ ಕೋರ್ ಬ್ಯಾಂಕಿಂಗ್ ಸಲ್ಯೂಷನ್ **(ಈ-ಕುಬೇರ್)** ವ್ಯವಸ್ಥೆಯ ಮೂಲಕ **01 ಫೆಬ್ರವರಿ 2022 (ಮಂಗಳವಾರ)** ರಂದು ನಡೆಸಲಾಗುವುದು. ರಿಟೇಲ್ ಡೈರೆಕ್ಟ್ ಪೋರ್ಟಲ್ ಮೂಲಕ **(https://rbiretaildirect.org.in)** ನಾನ್-ಕಾಂಪಿಟೆಟಿವ್ ಸ್ಕೀಮ್ ಅನುಸಾರ ವೈಯಕ್ತಿಕ ವಿನಿಯೋಜಕರು ಕೂಡಾ ಬಿಡ್ ಮಾಡಬಲ್ಲರು.

ಹೆಚ್ಚಿನ ವಿವರಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ **28 ಜನವರಿ 2022 (ಶುಕ್ರವಾರ)** ದಿನಾಂಕದ ಪತ್ರಿಕಾ ಪ್ರಕಟಣೆ **ಆರ್‌ಬಿಐ** ವೆಬ್ ತಾಣ **(www.rbi.org.in)** ವನ್ನು ನೋಡಿ.

"ಹಣ ನೀಡುವ ಭರವಸೆ ಕೊಡುವ ಇ-ಮೇಲ್/ಎಸ್ ಎಂ ಎಸ್/ ದೂರವಾಣಿ ಕರೆಗಳಿಂದ ಮೋಸ ಹೋಗಬೇಡಿ"

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಚೇರಿ (ವಿನ್ಯಾಸ),
9ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009

ಸಂಖ್ಯೆ: ಬೆಂಜಮಂ/ಸಿಇಡಿಟಿಇ/ಆಮುಅ(ಎಂಐಎಸ್ & ಐಟಿ)/ತಾಂಸ(ವಿ)/1981/2021–22 ದಿನಾಂಕ: 28.01.2022

ಟೆಂಡರ್‌ಗಾಗಿ ಆಹ್ವಾನ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಟೆಂಡರ್‌ದಾರರಿಂದ ಗುತ್ತಿಗೆದಾರರ ಬಿಲ್ಲಿಂಗ್ ಸ್ವಯಂ ಚಾಲನೆ ಒಳಗೊಂಡಂತೆ ಗುತ್ತಿಗೆ ನಿರ್ವಹಣೆಗಾಗಿ ಸಾಫ್ಟ್‌ವೇರ್ ವೆಬ್ ಪೋರ್ಟಲ್‌ನ ವಿನ್ಯಾಸ, ಅಭಿವೃದ್ಧಿ ಹಾಗೂ ನಿಯೋಜಿಸುವ ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಿದೆ.

ಟೆಂಡರ್‌ಗಿಟ್ಟ ಮೊತ್ತ: ₹ 124.23 ಲಕ್ಷಗಳು ಇಎಂಡಿ: ₹ 2.0 ಲಕ್ಷಗಳು

ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **17.02.2022**ರ ಸಂಜೆ **4:00** ಗಂಟೆಯವರೆಗೆ. ಟೆಂಡರ್‌ಗಳನ್ನು ದಿನಾಂಕ: **19.02.2022**ರ ಮಧ್ಯಾಹ್ನ **12:00** ಗಂಟೆಗೆ ತೆರೆಯಲಾಗುವುದು. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಮಾಹಿತಿಯನ್ನು ವೆಬ್‌ಸೈಟ್ **https://eproc.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು (ವಿನ್ಯಾಸ)
ವಾ.ಸಾ.ಸಂ.ಇ/3112/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕೋವಿಡ್: ಸೋಂಕಿತರ ಸಂಖ್ಯೆ 28,264ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳು ಇಳಿಮುಖವಾಗಿದ್ದು, ಭಾನುವಾರ 28,264 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಈ ತಿಂಗಳು ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ 50 ಸಾವಿರದ ಗಡಿ ದಾಟಿತ್ತು. ವಾರದಿಂದ ಆ ಸಂಖ್ಯೆ ಇಳಿಕೆ ಕಾಣುತ್ತಿದೆ. ಒಂದು ದಿನದ ಅವಧಿಯಲ್ಲಿ 1.72 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 16.38 ರಷ್ಟಿದೆ. ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 37.85 ಲಕ್ಷಕ್ಕೆ ಏರಿಕೆಯಾಗಿದೆ.

ಮೂರು ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ನಾಲ್ಕು ಅಂಕಿ, 26 ಜಿಲ್ಲೆಗಳಲ್ಲಿ ಮೂರು ಅಂಕಿಯಲ್ಲಿದೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆ ಕಂಡಿದ್ದು, 11,938 ಮಂದಿ ಸೋಂಕಿತರಾಗಿದ್ದಾರೆ. ಮೈಸೂರಿನಲ್ಲಿ 2,322, ಧಾರವಾಡದಲ್ಲಿ 1,356 ಹಾಗೂ ತುಮಕೂರಿನಲ್ಲಿ 1,165 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ಸಾವಿರಕ್ಕಿಂತ ಕಡಿಮೆ ಇವೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 10,454 ಮಂದಿ ಸೇರಿದಂತೆ ರಾಜ್ಯದಲ್ಲಿ 29,244 ಮಂದಿ ಚೇತರಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 34.95 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 2.10 ಲಕ್ಷಕ್ಕೆ ಇಳಿದಿದೆ. ಬೆಂಗಳೂರಿನಲ್ಲಿ 1.32 ಲಕ್ಷ ಸಕ್ರಿಯ ಪ್ರಕರಣಗಳಿವೆ.

ಸೋಂಕಿತರಲ್ಲಿ 68 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 14 ಮಂದಿ, ಮೈಸೂರಿನಲ್ಲಿ 10 ಮಂದಿ, ದಕ್ಷಿಣ ಕನ್ನಡ, ಬಳ್ಳಾರಿಯಲ್ಲಿ ತಲಾ ಏಳು ಮಂದಿ, ತುಮಕೂರು, ಬಾಗಲಕೋಟೆಯಲ್ಲಿ ತಲಾ ನಾಲ್ವರು, ಚಿತ್ರದುರ್ಗದಲ್ಲಿ ಮೂವರು, ಉತ್ತರ ಕನ್ನಡ, ರಾಮನಗರ, ಕಲಬುರಗಿ, ಹಾವೇರಿ, ಚಾಮರಾಜನಗರ ಹಾಗೂ ಬೆಳಗಾವಿಯಲ್ಲಿ ತಲಾ ಇಬ್ಬರು ಮೃತಪಟ್ಟಿದ್ದಾರೆ.



ನಿಧನ ವಾರ್ತೆ

ಶಾಂತಾದೇವಿ ಹಿರೇಮಠ

ಕೊಪ್ಪಳ: ಸಾಹಿತಿ, ನಿವೃತ್ತ ಶಿಕ್ಷಕಿ ಶಾಂತಾದೇವಿ ಹಿರೇಮಠ (82) ಭಾನುವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಇದ್ದಾರೆ.

ಶಾಂತಾದೇವಿ ಅವರ ವಾಗ್ದಾನದಂತೆ ಅವರ ದೇಹವನ್ನು ಜಿಲ್ಲಾ ಸರ್ಕಾರಿ ಆಸ್ಪತ್ರೆಗೆ ದಾನ ಮಾಡಲಾಯಿತು.

ಸಾಹಿತಿ ಶಾಂತರಸ ಅವರ ಸೊಸೆಯಾಗಿದ್ದ ಅವರು 'ನಾನು, ನೀನು' ಸೇರಿದಂತೆ ಹಲವು ಕೃತಿಗಳನ್ನು ರಚಿಸಿದ್ದರು. ಕೊಪ್ಪಳ ತಾಲ್ಲೂಕಿನ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷೆಯಾಗಿದ್ದರು.

ಜಿಲ್ಲೆಯ ವಿವಿಧೆಡೆ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದ್ದ ಅವರು ಮಹಿಳಾ ಸಂವೇದನೆಯ ಧ್ವನಿಯಾಗಿದ್ದರು. ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲು ಮಹಿಳೆಯರು ಹಿಂಜರಿಯುತ್ತಿದ್ದ ಕಾಲದಲ್ಲಿ ಅವರು ಸಾಹಿತ್ಯದ ಮೂಲಕ ಹೆಸರು ಮಾಡಿದ್ದರು.

ಡಿ.ವಿ. ಮುತಾಲಿಕ ದೇಸಾಯಿ

ಹುಬ್ಬಳ್ಳಿ: ಶ್ರೀನಗರ ನಿವಾಸಿ, ಪತ್ರಕರ್ತ ಡಿ.ವಿ. ಮುತಾಲಿಕ ದೇಸಾಯಿ (94) ಭಾನುವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಮೂಲತಃ ವಕೀಲರಾಗಿದ್ದ ಅವರು ಆರು ದಶಕಗಳ ಪತ್ರಿಕೋದ್ಯಮದಲ್ಲಿ ಸಂಯುಕ್ತ ಕರ್ನಾಟಕ, ಉದಯವಾಣಿ, ವಿಶಾಲ ಕರ್ನಾಟಕ ಸೇರಿದಂತೆ ವಿವಿಧ ಪತ್ರಿಕೆಗಳಲ್ಲಿ ವರದಿಗಾರರಾಗಿ ಕೆಲಸ ಮಾಡಿದ್ದರು. ಧಾರವಾಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರೂ ಆಗಿದ್ದರು.

ದೇಸಾಯಿ ಅವರಿಗೆ ಟಿಎಸ್‌ಆರ್, ಬೆಂಗಳೂರು ಪ್ರೆಸ್ ಕ್ಲಬ್ ಹಾಗೂ ಮಾಧ್ಯಮ ಅಕಾಡೆಮಿ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಒಳನೋಟ

ಬಾನಾಡಿಗಳ ಬವಣೆ

ಬೆಂಗಳೂರು: 'ಬಾರದ ವಲಸೆ ಪಕ್ಷಿಗಳು' ಶೀರ್ಷಿಕೆಯಡಿ 'ಪ್ರಜಾವಾಣಿ'ಯಲ್ಲಿ ಭಾನುವಾರ (ಜ.30) ಪ್ರಕಟವಾದ 'ಒಳನೋಟ' ವರದಿಗೆ ರಾಜ್ಯದಾದ್ಯಂತ ಓದುಗರು ಪ್ರತಿಕ್ರಿಯಿಸಿದ್ದಾರೆ. ಆಯ್ದ ಪ್ರತಿಕ್ರಿಯೆಗಳು ಇಲ್ಲಿವೆ.

ಪೂರಕ ಆಹಾರ ನೀಡಬೇಕು

ವಲಸೆ ಬಂದ ಹಕ್ಕಿಗಳು ತಿನ್ನುವಂತಹ ಆಹಾರ ಧಾನ್ಯಗಳನ್ನು ಕೆರೆ, ಬಾವಿ ಸೇರಿದಂತೆ ಅಲ್ಲಲ್ಲಿ ಇಡಬೇಕು. ಆಹಾರ ಅರಸಿಯೇ ವಲಸೆ ಬರುವ ಪಕ್ಷಿಗಳಿಗೆ ಆಹಾರ ಒದಗಿಸುವ ಕೆಲಸವನ್ನು ನಾವೆಲ್ಲ ಮಾಡಬೇಕು. ಮನೆಯ ಬಳಿಯೂ ಪಕ್ಷಿಗಳಿಗಾಗಿ ಆಹಾರ ಧಾನ್ಯಗಳನ್ನು ಮೀಸಲಿಡುವ ಗುಣ ಬೆಳೆಸಿಕೊಳ್ಳಬೇಕು.

ರಿಯಾಜ ಪಾಷ, ಬೀದರ್

ವಿನಾಶದತ್ತ ಬಾನಾಡಿಗಳು

ಜೀವಿಗಳು ವಿನಾಶದತ್ತ ಸಾಗುತ್ತಿವೆ ಎಂದು ವರದಿಗಳು ಎಚ್ಚರಿಸುತ್ತಿವೆ. ಬಾನಾಡಿಗಳ ಈಗಿನ ಬಿಕ್ಕಟ್ಟಿಗೆ ಜನರೇ ಕಾರಣ. ತಮ್ಮ ಸ್ವಾರ್ಥದ ಬದುಕಿಗಾಗಿ ಪರಿಸರದ ಮೇಲೆ ಮಾಡುತ್ತಿರುವ ದಬ್ಬಾಳಿಕೆಯನ್ನು ನಿಲ್ಲಿಸಬೇಕು. ಜನರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಇಲ್ಲದಿದ್ದರೆ, ಮನುಷ್ಯನೂ ಕಣ್ಮರೆಯಾಗಿ ಹೋಗುವುದರಲ್ಲಿ ಅನುಮಾನವಿಲ್ಲ.

ಶರತ್ ಕುಮಾರ್, ಬೆಂಗಳೂರು ಗ್ರಾಮಾಂತರ

ಭವಿಷ್ಯದ ಕತ್ತಲೆಗೆ ಆಹ್ವಾನ

ಮರದ ಪೊಟರೆಗಳಲ್ಲಿ ಕುಳಿತು ಶಬ್ದ ಮಾಡುತ್ತಿದ್ದ ಹಕ್ಕಿಗಳನ್ನು ಇಂದು ಟಿ.ವಿ.ಗಳಲ್ಲಿ ಕಾಣುವ ಪರಿಸ್ಥಿತಿ ನಿರ್ಮಾಣವಾಗಿದೆ. ಅತಿಯಾಗಿರುವ ಮೊಬೈಲ್ ಟವರ್ ಹಾಗೂ ತಂತ್ರಜ್ಞಾನಗಳ ಬಳಕೆಯಿಂದ ಪಕ್ಷಿ ಸಂತತಿ ಕ್ಷೀಣಿಸುತ್ತಿದೆ. ಆಹಾರ ಸರಪಳಿಯಲ್ಲಿ ಒಂದು ಕೊಂಡಿ ಕಳಚಿದರೂ ವಿನಾಶ ಕಟ್ಟಿಟ್ಟಬುತ್ತಿ. ಇದರಲ್ಲಿ ಪ್ರಮುಖ ಪಾತ್ರ ವಹಿಸುವ ಪಕ್ಷಿಗಳು ಮನುಷ್ಯನ ದುರಾಸೆಗೆ ಬಲಿಯಾಗುತ್ತಿದ್ದು, ಭವಿಷ್ಯದ ಕತ್ತಲೆಯನ್ನು ಆಹ್ವಾನಿಸುತ್ತಿದ್ದೇವೆ.

ಬಾತಿಷ, ಮಂಗಳೂರು

ಜೀವಸಂಕುಲದ ಹನನ

ಸರ್ಕಾರ ಅಭಿವೃದ್ಧಿಯ ಹೆಸರಿನಲ್ಲಿ ಅನೇಕ ಯೋಜನೆಗಳನ್ನು ಜಾರಿಗೆ ತರುವುದರಲ್ಲಿ ಸಕ್ರಿಯವಾಗಿದೆ. ಹೆದ್ದಾರಿ ನಿರ್ಮಾಣಕ್ಕಾಗಿ ಸಾವಿರಾರು ಮರಗಳ ಮಾರಣಹೋಮ ನಡೆಯುತ್ತಿದೆ. ಇದರಿಂದ ಅಲ್ಲಿ ವಾಸಿಸುತ್ತಿದ್ದ ಪಕ್ಷಿಗಳು ನೆಲೆ ಕಳೆದುಕೊಳ್ಳುತ್ತವೆ. ಕಲುಷಿತಗೊಳ್ಳುತ್ತಿರುವ ಜಲಮೂಲಗಳಿಂದಲೂ ಪಕ್ಷಿಗಳಿಗೆ ಅಪಾಯ ತಪ್ಪಿದ್ದಲ್ಲ. ಪಕ್ಷಿಧಾಮಗಳನ್ನು ಸೃಷ್ಟಿಸಿ, ಪಕ್ಷಿಗಳಿಗೂ ನೆಲೆ ಕಲ್ಪಿಸಬೇಕು.

ರವಿಕುಮಾರ್, ಚಾಮರಾಜನಗರ

'ಪಕ್ಷಿಗಳ ದಿನ'ವೆಂದು ಸ್ಮರಣೆ ಬೇಡ

ಪಕ್ಷಿಗಳು ಸ್ವತಂತ್ರ ಹಾಗೂ ಭವಿಷ್ಯದ ಉಳಿವಿನ ಸಂಕೇತ. ಮೊಬೈಲ್ ಟವರ್‌ಗಳ ನಿರ್ಮಾಣ, ತೋಟಗಳಿಗೆ ಬೇಲಿ ನಿರ್ಮಾಣ ಹಾಗೂ ರಾಸಾಯನಿಕ ಸಿಂಪಡಣೆ ಸೇರಿದಂತೆ ಮನುಷ್ಯನ ಸ್ವಾರ್ಥದಿಂದ ಪಕ್ಷಿಸಂಕುಲ ಕಣ್ಮರೆಯಾಗುತ್ತಿದೆ. ಜಾಗತೀಕರಣದ ಹೆಸರಿನಲ್ಲಿ ಇಡೀ ವಿಶ್ವವೇ ವಿನಾಶದ ಅಂಚಿನೆಡೆಗೆ ಸಾಗುತ್ತಿದೆ. ಭವಿಷ್ಯದಲ್ಲಿ 'ಪಕ್ಷಿಗಳ ದಿನ' ಆಚರಿಸುವ ಬದಲು ಪಕ್ಷಿಗಳನ್ನು ಉಳಿಸುವ ಕೆಲಸ ಮಾಡಬೇಕಾಗಿದೆ.

ದೇವರಾಜ್, ಹೊಸದುರ್ಗ

ಪಕ್ಷಿಗಳ ಕಲರವ ಉಳಿಸಿ

ಬಾಗಲಕೋಟೆ ಭಾಗದ ಹಿನ್ನೀರು ಪ್ರದೇಶದಲ್ಲಿ ಕಳೆದ ಕೆಲ ವರ್ಷಗಳಿಂದ ಸಾವಿರಾರು ಸಂಖ್ಯೆಯ ವಲಸೆ ಹಕ್ಕಿಗಳನ್ನು ನೋಡುತ್ತಿದ್ದೆವು. ಆದರೆ, ಹವಾಮಾನದ ವೈಪರೀತ್ಯದಿಂದಾಗಿ ಇವುಗಳ ಸಂಖ್ಯೆ ಕುಸಿದಿರುವುದು ತುಂಬಾ ನೋವಿನ ಸಂಗತಿ. ಪಕ್ಷಿಧಾಮವಾಗಿ ನಮ್ಮ ಬಾಗಲಕೋಟೆ ಪ್ರದೇಶ ಗುರುತಿಸಿಕೊಳ್ಳುತ್ತಿದೆ. ಪಕ್ಷಿಗಳ ಸುರಕ್ಷತೆ, ಮುಕ್ತತೆಗೆ ಸಂಬಂಧಿಸಿದ ಇಲಾಖೆಯವರು ಮತ್ತೆ ಈ ಭಾಗದಲ್ಲಿ ಪಕ್ಷಿಗಳ ಕಲರವ ಮರುಕಳಿಸುವಂತೆ ಮಾಡಬೇಕು.

ಪ್ರಕಾಶ ಗ. ಖಾಡೆ, ಬಾಗಲಕೋಟೆ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79
ಫ್ಯಾಕ್ಸ್: 080–22268667, ಇ-ಮೇಲ್: kerc-ka@nic.in ವೆಬ್‌ಸೈಟ್: www.karunadu.karnataka.gov.in/kerc

ಸಂಖ್ಯೆ: ಕವಿನಿಆ/ಬಿ/01/2022/1391 ದಿನಾಂಕ: 28–01–2022

ಸಾರ್ವಜನಿಕ ವಿಚಾರಣೆಯ ಪ್ರಕಟಣೆ

ವಿಷಯ: ಆರ್ಥಿಕ ವರ್ಷ 2023 ರಿಂದ 2025 ರ ಅವಧಿಗೆ ವಿದ್ಯುತ್ ಪ್ರಸರಣ ಮತ್ತು ವಿದ್ಯುತ್ ಸರಬರಾಜು ಕಂಪನಿಗಳು ಸಲ್ಲಿಸಿದ ಎಆರ್‌ಆರ್ ಮತ್ತು ವಿದ್ಯುತ್ ದರ ಪರಿಷ್ಕರಣೆ ಅರ್ಜಿಯ ಬಗ್ಗೆ ಸಾರ್ವಜನಿಕ ವಿಚಾರಣೆಯ ಕುರಿತು.

ಕರ್ನಾಟಕ ರಾಜ್ಯದಲ್ಲಿನ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವೂ ಆರ್ಥಿಕ ವರ್ಷ 2020–21ನೇ ಸಾಲಿನ ವಾರ್ಷಿಕ ಕಾರ್ಯನಿರ್ವಹಣಾ ಪರಿಶೀಲನೆ (ಎ.ಪಿ.ಆರ್.) ಮತ್ತು ಆರ್ಥಿಕ ವರ್ಷ 2022–23, 2023–24, ಮತ್ತು 2024–25ನೇ ಸಾಲುಗಳಿಗೆ ವಿದ್ಯುತ್ ಪ್ರಸರಣ ದರ ನಿಗದಿಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸಿವೆ ಮತ್ತು ವಿದ್ಯುಚ್ಛಕ್ತಿ ಸರಬರಾಜು ಕಂಪನಿಗಳು (ಬೆಸ್ಕಾಂ, ಮೆಸ್ಕಾಂ, ಸೆಸ್ಕ್, ಹೆಸ್ಕಾಂ, ಜೆಸ್ಕಾಂ ಮತ್ತು ಹುಕ್ಕೇರಿ ಆರ್.ಇ.ಸಿ.ಎಸ್.) ಆರ್ಥಿಕ ವರ್ಷ 2020–21ನೇ ಸಾಲಿನ ವಾರ್ಷಿಕ ಕಾರ್ಯನಿರ್ವಹಣಾ ಪರಿಶೀಲನೆ (ಎ.ಪಿ.ಆರ್.) ಹಾಗೂ ಆರ್ಥಿಕ ವರ್ಷ 2022–23, 2023–24 ಮತ್ತು 2024–25ನೇ ಸಾಲಿನ ವಾರ್ಷಿಕ ಕಂದಾಯ ಅಗತ್ಯತೆ (ಎ.ಆರ್.ಆರ್.) ಮತ್ತು ಆರ್ಥಿಕ ವರ್ಷ 2022–23ನೇ ಸಾಲಿಗೆ ವಿದ್ಯುತ್ ದರ ನಿಗದಿಗಾಗಿ ಅನುಮೋದನೆ ಪಡೆಯಲು ಅರ್ಜಿಗಳನ್ನು ಆಯೋಗಕ್ಕೆ ಸಲ್ಲಿಸಿವೆ. ಇದಲ್ಲದೆ, ಮಂಗಳೂರು ಎಸ್‌ಇಝೆಡ್ ಮತ್ತು ಎಇಕ್ಯೂಯುಎಸ್, ಎಸ್‌ಇಝೆಡ್ ಆರ್ಥಿಕ ವರ್ಷ 2020–21 ರ ವಾರ್ಷಿಕ ಕಾರ್ಯ ಪರಿಶೀಲನೆ ಹಾಗೂ ಆರ್ಥಿಕ ವರ್ಷ 2022–23, 2023–24 ಮತ್ತು 2024–25ನೇ ಸಾಲಿನ ವಾರ್ಷಿಕ ಕಂದಾಯ ಅಗತ್ಯತೆ ಹಾಗೂ 2022–23ನೇ ಸಾಲಿನ ವಿದ್ಯುತ್ ದರ ನಿಗದಿಗಾಗಿ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿವೆ. ಸದರಿ ವಿದ್ಯುತ್ ಪ್ರಸರಣ ಮತ್ತು ಸರಬರಾಜು ಪರವಾನಿಗೆದಾರರು ತಮ್ಮ ಪ್ರಸ್ತಾವನೆಗಳ ಸಂಕ್ಷಿಪ್ತ ವಿವರಗಳನ್ನು ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟಿಸಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿವೆ. ಈ ಪ್ರಸ್ತಾವನೆಗಳ ವಿವರಗಳು ಸದರಿ ಕಂಪನಿಗಳ ವೆಬ್‌ಸೈಟ್ ಮತ್ತು ಆಯೋಗದ ವೆಬ್‌ಸೈಟ್: www.karunadu.karnataka.gov.in/kerc ನಲ್ಲಿ ಲಭ್ಯ ಇರುತ್ತದೆ.

ಈ ಬಗ್ಗೆ ಸಲಹೆ / ಆಕ್ಷೇಪಣೆ / ಪ್ರತಿಕ್ರಿಯೆಗಳನ್ನು ಆಲಿಸಲು ಆಯೋಗವು ಈ ಕೆಳಗೆ ಸೂಚಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ "ಸಾರ್ವಜನಿಕ ವಿಚಾರಣೆ" ಯನ್ನು ಏರ್ಪಡಿಸಿದೆ.

ಕ್ರ. ಸಂ.	ಕಂಪನಿಯ ಹೆಸರು	ದಿನಾಂಕ	ಸಮಯ	ಸ್ಥಳ
1	ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು.	14–02–2022 ಸೋಮವಾರ	ಬೆಳಿಗ್ಗೆ 10.30 ಗಂಟೆಗೆ	ನ್ಯಾಯಾಂಗಣ ಸಭಾಂಗಣ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಸಂಖ್ಯೆ. 16 ಸಿ–1, ಮೊದಲನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052.
2	ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಬೆಂಗಳೂರು.	15–02–2022 ಮಂಗಳವಾರ	ಬೆಳಿಗ್ಗೆ 10.30 ಗಂಟೆಗೆ	
3	ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.	17–02–2022 ಗುರುವಾರ	ಬೆಳಿಗ್ಗೆ 10.30 ಗಂಟೆಗೆ	ನ್ಯಾಯಾಂಗಣ ಸಭಾಂಗಣ, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು.
4	ಮಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಮಂಗಳೂರು.	21–02–2022 ಸೋಮವಾರ	ಬೆಳಿಗ್ಗೆ 10.30 ಗಂಟೆಗೆ	ನ್ಯಾಯಾಂಗಣ ಸಭಾಂಗಣ, ಜಿಲ್ಲಾಧಿಕಾರಿಗಳ ಕಛೇರಿ, ದಕ್ಷಿಣ ಕನ್ನಡ, ಮಂಗಳೂರು.
5	ಮಂಗಳೂರು ವಿಶೇಷ ಆರ್ಥಿಕ ವಲಯ (ಎಂ.ಎಸ್.ಇ.ಝಡ್)		ಮಧ್ಯಾಹ್ನ 3.00 ಗಂಟೆಗೆ	
6	ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿ.	24–02–2022 ಗುರುವಾರ	ಬೆಳಿಗ್ಗೆ 10.30 ಗಂಟೆಗೆ	ನೂತನ ಸಭಾಂಗಣ, ಜಿಲ್ಲಾಧಿಕಾರಿಗಳ ಕಛೇರಿ, ಧಾರವಾಡ.
7	ಹುಕ್ಕೇರಿ ಗ್ರಾಮೀಣ ವಿದ್ಯುತ್ ಕೋ–ಆಪರೇಟೀವ್ ಸೊಸೈಟಿ (HRECS)	25–02–2022 ಶುಕ್ರವಾರ	ಬೆಳಿಗ್ಗೆ 10.30 ಗಂಟೆಗೆ	ಹುಕ್ಕೇರಿ ಗ್ರಾಮೀಣ ವಿದ್ಯುತ್ ಕೋ–ಆಪರೇಟೀವ್ ಸೊಸೈಟಿ (HRECS) ಕಛೇರಿ, ಹುಕ್ಕೇರಿ.
8	AEQUS ವಿಶೇಷ ಆರ್ಥಿಕ ವಲಯ (ಎಇಕ್ಯೂಯುಎಸ್ ಎಸ್‌ಇಝಡ್)		ಮಧ್ಯಾಹ್ನ 1.00 ಗಂಟೆಗೆ	ಎ.ಇ.ಕ್ಯು.ಯು.ಎಸ್. ಕಛೇರಿ, ಹತ್ತರಗಿ, ಹುಕ್ಕೇರಿ ತಾಲ್ಲೂಕು.
9	ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಕಲಬುರಗಿ.	28–02–2022 ಸೋಮವಾರ	ಬೆಳಿಗ್ಗೆ 10.00 ಗಂಟೆಗೆ	ನ್ಯಾಯಾಂಗಣ ಸಭಾಂಗಣ, ಜಿಲ್ಲಾಧಿಕಾರಿಗಳ ಕಛೇರಿ, ಕಲಬುರಗಿ.

ತಾವು "ಸಾರ್ವಜನಿಕ ವಿಚಾರಣೆ" ಯಲ್ಲಿ ಭಾಗವಹಿಸಿ, ತಮ್ಮ ಸಲಹೆಗಳನ್ನು ಮೌಖಿಕ/ಲಿಖಿತ ರೂಪದಲ್ಲಿ ಆಯೋಗಕ್ಕೆ ಸಲ್ಲಿಸಬಹುದಾಗಿದೆ ಎಂದು ತಿಳಿಸಲು ಆಯೋಗದಿಂದ ನಿರ್ದೇಶಿಸಲ್ಪಟ್ಟಿರುತ್ತೇನೆ.

ಸಹಿ/–
ಕಾರ್ಯದರ್ಶಿ
ವಾಸಾಸಂಇ/ಬೆಂ.ನ/3120/2021–22

ಯುವ ಸಮೂಹವನ್ನು ವೈಜ್ಞಾನಿಕ ಸಂಶೋಧನೆಯತ್ತ ಸೆಳೆಯುವುದಕ್ಕಾಗಿ ಕೇಂದ್ರ ಸರ್ಕಾರ ಎರಡು ದಶಕಗಳ ಹಿಂದೆ ‘ಕಿಶೋರ್ ವೈಜ್ಞಾನಿಕ್ ಪ್ರೋತ್ಸಾಹನ್ ಯೋಜನ’ ಎಂಬ ಫೆಲೋಶಿಪ್ ಆರಂಭಿಸಿದೆ. ಈ ಕುರಿತ ವಿವರ ಇಲ್ಲಿದೆ.

ವೈಜ್ಞಾನಿಕ ಸಂಶೋಧನೆಗೆ ‘ಕೆವಿಪಿವೈ’ ಪ್ರೋತ್ಸಾಹ

ಗುರುರಾಜ್ ಎಸ್. ದಾವಣಗೆರೆ

ಶುದ್ಧ ಹಾಗೂ ಮೂಲ ವಿಜ್ಞಾನದ (Pure and Fundamental Science) ಓದಿನೆಡೆಗೆ ವಿದ್ಯಾರ್ಥಿಗಳನ್ನು ಆಕರ್ಷಿಸಿ ಶಿಕ್ಷಣದ ಜೊತೆಗೆ ಸಂಶೋಧನಾ ಪ್ರವೃತ್ತಿಯನ್ನೂ ಪ್ರೋತ್ಸಾಹಿಸಿ ದೇಶದ ಸಂಶೋಧನಾ ರಂಗಕ್ಕೆ ಕಸುವು ತುಂಬಲು ಮಾಡಿದ ವಿನೂತನ ಪ್ರಯತ್ನವೇ ‘ಕಿಶೋರ್ ವೈಜ್ಞಾನಿಕ್ ಪ್ರೋತ್ಸಾಹನ್’(ಕೆವಿಪಿವೈ) ಯೋಜನೆ.

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ 1999 ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್‌ಸಿ) ಮೇಲ್ವಿಚಾರಣೆಯಲ್ಲಿ ಈ ಯೋಜನೆ ಪ್ರಾರಂಭಿಸಿತು. ಕಳೆದ ದಶಕದಿಂದ ಈ ಕೋರ್ಸ್ ಬಗ್ಗೆ ವಿದ್ಯಾರ್ಥಿ-ಪೋಷಕರಲ್ಲಿ ಆಸಕ್ತಿ ಹೆಚ್ಚಿದೆ.

ಕೆವಿಪಿವೈ ಪರೀಕ್ಷೆ ಪಾಸಾದ ಪ್ರಥಮ / ದ್ವಿತೀಯ ಪಿಯುಸಿ, ಪ್ರಥಮ ವರ್ಷದ ಬಿ.ಎಸ್ಸಿ/ ಎಂ.ಎಸ್ಸಿ ವಿದ್ಯಾರ್ಥಿಗಳು ಕೆವಿಪಿವೈ ಫೆಲೋಶಿಪ್ ಪಡೆಯಲು ಅರ್ಹರಾಗುತ್ತಾರೆ. ಮೂರು ವಿಭಾಗಗಳಲ್ಲಿ ಆನ್‌ಲೈನ್ ಪರೀಕ್ಷೆ ನಡೆಸುವ ಮೂಲಕ ದೇಶದಾದ್ಯಂತ ವಿದ್ಯಾರ್ಥಿಗಳನ್ನು ಫೆಲೋಶಿಪ್‌ಗೆ ಆಯ್ಕೆ ಮಾಡಲಾಗುತ್ತದೆ. ಪರೀಕ್ಷೆ ಪಾಸಾದ ವಿದ್ಯಾರ್ಥಿಗಳು ತಮ್ಮ ಆಯ್ಕೆಯ ಅನುಸಾರ ಬೆಂಗಳೂರಿನ ಐಐಎಸ್‌ಸಿಯಲ್ಲಿ ನಾಲ್ಕು ವರ್ಷಗಳ ಅವಧಿಯ ಬಿ.ಎಸ್‌ಗೆ(ಬ್ಯಾಚುಲರ್ ಆಫ್ ಸೈನ್ಸ್) ಸೇರಬಹುದು ಅಥವಾ ದೇಶದಾದ್ಯಂತವಿರುವ ಐಐಎಸ್‌ಇಆರ್ (ISER- ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಶನ್ ಅಂಡ್ ರಿಸರ್ಚ್) ಅಥವಾ ದೇಶದ ಅಂಗೀಕೃತ ವಿಶ್ವವಿದ್ಯಾಲಯದ ಕಾಲೇಜುಗಳಲ್ಲಿ ಮೂಲ ವಿಜ್ಞಾನ ವಿಷಯಗಳ ಪದವಿ ಶಿಕ್ಷಣಕ್ಕೆ ಸೇರಿ ಫೆಲೋಶಿಪ್ ಪಡೆಯಬಹುದು.

1. ಎಸ್‌ಎ ವಿಭಾಗ (SA - Stream)

ಎಸ್ಸೆಸ್ಸೆಲ್ಸಿ / 10ನೇ ತರಗತಿಯಲ್ಲಿ ಗಣಿತ ಮತ್ತು ವಿಜ್ಞಾನದ ವಿಷಯಗಳಲ್ಲಿ ಸರಾಸರಿ ಶೇ 75 ಅಂಕಗಳಿಸಿದ (ಪ.ಜಾ / ಪ.ಪಂ / ಅಂಗವಿಕಲರು, ದೃಷ್ಟಿ ದೋಷವುಳ್ಳವರು ಶೇ 65) ಹಾಗೂ ಆಯಾ ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಪಿಯುಸಿ ಅಥವಾ 11ನೇ ತರಗತಿಯ ವಿಜ್ಞಾನ ವಿಭಾಗದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಈ ಪರೀಕ್ಷೆ ಬರೆಯಲು ಅರ್ಹರಾಗಿರುತ್ತಾರೆ.

ತೇರ್ಗಡೆಯಾದ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಗಣಿತ ಮತ್ತು ವಿಜ್ಞಾನದಲ್ಲಿ ಶೇ 60 ಅಂಕ (ಪ.ಜಾ / ಪ.ಪಂ / ಅಂಗ, ದೃಷ್ಟಿ ದೋಷವುಳ್ಳವರು ಶೇ 50) ಪಡೆದು ಮೂಲ ವಿಜ್ಞಾನದಲ್ಲಿ (B.Sc / B.S / B.Stat / B.Math / Int. M.Sc / Int. M.S) ಪ್ರವೇಶ ಪಡೆದು ಅಧ್ಯಯನ ಮುಂದುವರಿಸಿದರೆ, ಕೋರ್ಸ್ ಮುಗಿಯುವವರೆಗೆ ಫೆಲೋಶಿಪ್ ದೊರಕುತ್ತದೆ. ದ್ವಿತೀಯ ಪಿಯುಸಿ ಓದುತ್ತಿರುವಾಗ ಯಾವುದೇ ವಿದ್ಯಾರ್ಥಿವೇತನ ಇರುವುದಿಲ್ಲ.

2. ಎಸ್‌ಎಕ್ಸ್ ವಿಭಾಗ (SX Stream)

ಎಸ್‌ಎಸ್‌ಎಲ್‌ಸಿ / 10ನೇ ತರಗತಿಯಲ್ಲಿ ಗಣಿತ ಮತ್ತು ವಿಜ್ಞಾನದಲ್ಲಿ ಶೇ 75 ಅಂಕ ಪಡೆದು 2ನೇ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಪ್ರವೇಶ ಪಡೆದವರು ಈ ಪರೀಕ್ಷೆ ಬರೆಯಬಹುದು. ದ್ವಿತೀಯ ಪಿಯುಸಿ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ (ಫಿಸಿಕ್ಸ್, ಕೆಮಿಸ್ಟ್ರಿ, ಬಯಾಲಜಿ) ಸರಾಸರಿ ಶೇ 60 ಅಂಕ (ಪ.ಜಾ / ಪ.ಪಂ / ಅಂಗವಿಕಲರಿಗೆ ಶೇ 50) ಪಡೆದಿರಬೇಕು ಮತ್ತು ಅಂಗೀಕೃತ ವಿವಿಯ ಕಾಲೇಜುಗಳಲ್ಲಿ ಮೂಲ ವಿಜ್ಞಾನದ ಕೋರ್ಸ್‌ಗಳಾದ B.Sc / B.S / B.Stat / B.Math / Int. M.Sc / Int. M.S ಗಳಲ್ಲಿ ಪ್ರವೇಶ ಪಡೆದು ಅಧ್ಯಯನ ಮುಂದುವರಿಸಬೇಕು.

3. ಎಸ್‌ಬಿ ವಿಭಾಗ (SB Stream)

12ನೇ ತರಗತಿ / ದ್ವಿತೀಯ ಪಿಯುಸಿ ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಶೇ 60 ಅಂಕ ಪಡೆದು ಈಗಾಗಲೇ ಅಂಗೀಕೃತ ವಿವಿಗಳ ಕಾಲೇಜುಗಳಲ್ಲಿ ಮೂಲ ವಿಜ್ಞಾನದ ವಿಷಯಗಳಲ್ಲಿ ಪ್ರಥಮ ಪದವಿ ಅಥವಾ ಸ್ನಾತಕೋತ್ತರ ಪದವಿ(ಪಿ.ಜಿ) ಅಧ್ಯಯನ ಮಾಡುತ್ತಿರುವವರು ಈ ಪರೀಕ್ಷೆ ಬರೆಯಲು ಅರ್ಹರಾಗಿರುತ್ತಾರೆ. ಪ್ರಥಮ ವರ್ಷದ ಪದವಿಯಲ್ಲಿ ಆಯ್ದುಕೊಂಡಿರುವ ವಿಷಯಗಳಲ್ಲಿ ಸರಾಸರಿ ಶೇ 60 ಅಂಕ (ಪ.ಜಾ / ಪ.ಪಂ /ಅಂಗವಿಕಲರಿಗೆ ಶೇ 50) ಪಡೆದವರು ಫೆಲೋಶಿಪ್ ಪಡೆಯಬಹುದು.

ಫೆಲೋಶಿಪ್‌ನ ವಿವರಗಳು

ಮೇಲೆ ತಿಳಿಸಿರುವ ಪರೀಕ್ಷೆಗಳನ್ನು ಪಾಸು ಮಾಡಿ, ಪ್ರಥಮ ವರ್ಷದ ಪದವಿಗೆ ಸೇರಿರುವ ವಿದ್ಯಾರ್ಥಿಗಳಿಗೆ ಮೂರು ವರ್ಷಗಳವರೆಗೆ ತಿಂಗಳಿಗೆ ₹5 ಸಾವಿರ ಮತ್ತು ವಾರ್ಷಿಕ ಸಾದಿಲ್ವಾರು ಅನುದಾನ(ಕಾಂಟಿನ್‌ಜೆನ್ಸಿ) ವಾಗಿ ₹ 20 ಸಾವಿರದಂತೆ ಒಟ್ಟು ಮೂರು ವರ್ಷಗಳಿಗೆ ₹2.40 ಲಕ್ಷ ಫೆಲೋಶಿಪ್ ನೀಡಲಾಗುತ್ತದೆ. ಪಿ.ಜಿ ಸೇರಿರುವ ವಿದ್ಯಾರ್ಥಿಗಳಿಗೆ ಎರಡು ವರ್ಷಗಳ ಕಾಲ ತಿಂಗಳಿಗೆ ₹7ಸಾವಿರ ಮತ್ತು ವಾರ್ಷಿಕ ಸಾದಿಲ್ವಾರು ಅನುದಾನ ₹28 ಸಾವಿರ ಒಟ್ಟು ₹ 2.24ಲಕ್ಷ ನೀಡಲಾಗುತ್ತದೆ.

ಕೋರ್ಸ್ ಕುರಿತ ಹೆಚ್ಚಿನ ಮಾಹಿತಿಗೆ www.kvpy.iisc.ernet.in ಜಾಲತಾಣ ನೋಡಬಹುದು.

(ಲೇಖಕರು: ಪ್ರಾಚಾರ್ಯರು, ವಿದ್ಯಾ ಪೂರ್ಣ ಪ್ರಜ್ಞ ಪದವಿ ಪೂರ್ವ ಕಾಲೇಜು, ಬೆಂಗಳೂರು)

ಕೆವಿಪಿವೈ ಪ್ರಮುಖಾಂಶಗಳು...

- ದೇಶದಾದ್ಯಂತ ಏಕಕಾಲಕ್ಕೆ ನಡೆಯುವ 3 ಗಂಟೆಯ ಪರೀಕ್ಷೆ
- ಅರ್ಜಿ ಪ್ರಾರಂಭದ ದಿನಾಂಕ: ಜುಲೈ 2 ಅಥವಾ 3ನೇ ವಾರ
- ಅರ್ಜಿ ಸಲ್ಲಿಸಲು ಕೊನೆ ದಿನಾಂಕ: ಆಗಸ್ಟ್ 4ನೇ ವಾರ
- ಪರೀಕ್ಷಾ ದಿನಾಂಕ: ನವೆಂಬರ್ ಮೊದಲ ವಾರ
- ಫಲಿತಾಂಶದ ದಿನಾಂಕ: ಡಿಸೆಂಬರ್ 3ನೇ ವಾರ
- ಪರೀಕ್ಷಾ ಶುಲ್ಕ: ಸಾಮಾನ್ಯ / ಒಬಿಸಿಗೆ ₹1250
- ಎಸ್‌ಸಿ / ಎಸ್‌ಟಿ / ಅಂಗವಿಕಲರಿಗೆ ₹ 625

2021ರ ಪರೀಕ್ಷೆ ನ.7ಕ್ಕೆ ನಿಗದಿಯಾಗಿತ್ತು. ಕೋವಿಡ್ ಕಾರಣದಿಂದಾಗಿ ಜ.9ಕ್ಕೆ ಮುಂದೂಡಲ್ಪಟ್ಟಿತ್ತು. ಕೆಲವು ರಾಜ್ಯಗಳಲ್ಲಿ ವಾರಾಂತ್ಯದ ಕರ್ಫ್ಯೂ ಇದ್ದುದ್ದರಿಂದ ಪರೀಕ್ಷೆ ಮತ್ತೆ ಮುಂದೂಡಲ್ಪಟ್ಟಿದೆ.

ನಿಬಂಧನೆ / ಅನುಕೂಲಗಳು:

1. ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಭಾರತೀಯ ಪ್ರಜೆಯಾಗಿದ್ದು ಎಸ್‌ಎ ಗೆ 16 ವರ್ಷ, ಎಸ್‌ಎಕ್ಸ್‌ಗೆ 17 ವರ್ಷ ಮತ್ತು ಎಸ್‌ಬಿ ವಿಭಾಗಕ್ಕೆ ಸೇರಲು 18 ವರ್ಷ ತುಂಬಿರಬೇಕು.
2. ಪ್ರಥಮ ಪಿಯುಸಿ ಓದುವಾಗ ಎಸ್‌ಎ ಪರೀಕ್ಷೆ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ದ್ವಿತೀಯ ಪಿಯು ಹಂತದಲ್ಲಿ ಯಾವುದೇ ಫೆಲೋಶಿಪ್ ಇರುವುದಿಲ್ಲ. ಆ ವರ್ಷದಲ್ಲಿ ವಿದ್ಯಾರ್ಥಿಗಳನ್ನು ಸರ್ಕಾರದ ಖರ್ಚಿನಲ್ಲಿ ದೇಶದ ಆಯ್ದ ಸ್ಥಳದಲ್ಲಿ ನಡೆಯುವ ನ್ಯಾಷನಲ್ ಸೈನ್ಸ್ ಕ್ಯಾಂಪ್‌ಗೆ ಹಾಜರಾಗಲು ಅವಕಾಶ ಕಲ್ಪಿಸಿಕೊಡಲಾಗುತ್ತದೆ.
3. ಕಾರಣಾಂತರಗಳಿಂದ ಓದು ನಿಲ್ಲಿಸುವ ವಿದ್ಯಾರ್ಥಿಗಳಿಗೆ ಫೆಲೋಶಿಪ್ ನೀಡಲಾಗುವುದಿಲ್ಲ.
4. ಫೆಲೋಶಿಪ್ ವಿದ್ಯಾರ್ಥಿಗಳಿಗೆ ವಿಶೇಷ ಗುರುತಿನ ಚೀಟಿ ನೀಡಲಾಗುತ್ತದೆ. ವಿದ್ಯಾರ್ಥಿಗಳು ಇದನ್ನು ಬಳಸಿಕೊಂಡು ದೇಶದ ಪ್ರಸಿದ್ಧ ಪ್ರಯೋಗಾಲಯಗಳು, ವಿವಿಧ ವಿವಿಗಳ ಗ್ರಂಥಾಲಯಗಳನ್ನು ಸಂದರ್ಶಿಸಿ ಅಧ್ಯಯನ ಕೈಗೊಳ್ಳಬಹುದು.
5. ಪ್ರವೇಶ ಪರೀಕ್ಷೆಯನ್ನು ಇಂಗ್ಲಿಷ್ ಅಥವಾ ಹಿಂದಿ ಭಾಷೆಯಲ್ಲಿ ತೆಗೆದುಕೊಳ್ಳಬಹುದು. (ಪ್ರಾದೇಶಿಕ ಭಾಷೆಗಳಲ್ಲೂ ಪರೀಕ್ಷೆ ನಡೆಸಬೇಕೆಂಬ ಒತ್ತಾಯ ಕೇಳಿಬಂದಿದ್ದು, ಈ ವಿಚಾರ ನ್ಯಾಯಾಲಯದಲ್ಲಿದೆ)
6. ಕೆವಿಪಿವೈ ಫೆಲೋಶಿಪ್ ಪಡೆಯುವ ವಿದ್ಯಾರ್ಥಿಗಳು ಬೇರೆ ವಿದ್ಯಾರ್ಥಿ ವೇತನಗಳನ್ನು ಪಡೆಯುವಂತಿಲ್ಲ.
7. ಪರೀಕ್ಷಾ ಅರ್ಜಿಯನ್ನು ಪ್ರತಿ ವರ್ಷ ಜುಲೈ ಎರಡನೇ ಭಾನುವಾರ ಕೆವಿಪಿವೈ ವೆಬ್‌ಸೈಟ್‌ನಲ್ಲಿ ಪಡೆಯಬಹುದು.
9. ಪರೀಕ್ಷೆಗೆ ಯಾವುದೇ ನಿಗದಿತ ಪಠ್ಯಕ್ರಮವಿಲ್ಲ. ವಿದ್ಯಾರ್ಥಿ ತಾನು ಕಲಿಯುತ್ತಿರುವ ಓದಿನ ಪಠ್ಯಕ್ರಮ ಅಭ್ಯಸಿಸಿದರೆ ಸಾಕು.
10. ಎಂಜಿನಿಯರಿಂಗ್ ಮತ್ತು ಮೆಡಿಕಲ್ ಕೋರ್ಸ್ ಸೇರುವ ವಿದ್ಯಾರ್ಥಿಗಳಿಗೆ ಫೆಲೋಶಿಪ್ ಸಿಗುವುದಿಲ್ಲ.

ಕ್ರೀಡಾ ಪ್ರತಿಭೆಗೆ ‘ಖಾಸಗಿ’ ಬಲ

ವಿದ್ಯಾರ್ಥಿ ವೇತನ ಕೈಪಿಡಿ

ಬಸವರಾಜ ದಳವಾಯಿ

ಕುಟುಂಬದ ಆರ್ಥಿಕ ಸಂಕಷ್ಟದ ಕಾರಣದಿಂದಾಗಿ ವಿದ್ಯಾರ್ಥಿಗಳಲ್ಲಿನ ಕ್ರೀಡಾ ಪ್ರತಿಭೆ ಕಮರಿಹೋಗಬಾರದು ಎಂಬ ಉದ್ದೇಶದಿಂದ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು ಕೂಡ ವಿದ್ಯಾರ್ಥಿವೇತನ, ಪ್ರೋತ್ಸಾಹಧನ ಯೋಜನೆಗಳನ್ನು ಜಾರಿಗೊಳಿಸಿವೆ. ಉದಯೋನ್ಮುಖ ಕ್ರೀಡಾಪಟುಗಳಿಗೆ ಸಾಮರ್ಥ್ಯದ ಆಧಾರದ ಮೇಲೆ ಶಿಕ್ಷಣ ಶುಲ್ಕ ವಿನಾಯಿತಿ, ವೈಜ್ಞಾನಿಕ ತರಬೇತಿ, ಪ್ರತ್ಯೇಕ ವಸತಿ ನಿಲಯದ ಸೌಲಭ್ಯಗಳು ಇಂಥ ಸಂಸ್ಥೆಗಳಲ್ಲಿ ಲಭ್ಯ. ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಮತ್ತು ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ಇಂತಹ ಸಂಸ್ಥೆಗಳಲ್ಲಿ ಮುಂಚೂಣಿಯಲ್ಲಿವೆ.

‘ಕ್ರೀಡಾ ಪ್ರೋತ್ಸಾಹ ಎಂಬುದು ಅನೇಕರಿಗೆ ಕೇವಲ ವೇದಿಕೆಯ ಮಾತಾಗಿ ಮಾತ್ರ ಉಳಿದಿದೆ. ಆದರೆ, ಆಳ್ವಾಸ್ ಸಂಸ್ಥೆ ದಶಕಗಳಿಂದಲೂ ಅದನ್ನು ಕೃತಿ ರೂಪಕ್ಕಿಳಿಸುತ್ತಾ ಬಂದಿದೆ’ ಎನ್ನುತ್ತಾರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಎಂ. ಮೋಹನ ಆಳ್ವ.

ಆಳ್ವಾಸ್‌ನಲ್ಲಿ ಪ್ರಾಥಮಿಕ ಶಾಲಾ ಹಂತದಿಂದ ಪಿಯುಸಿವರೆಗಿನ ರಾಜ್ಯದ ವಿದ್ಯಾರ್ಥಿಗಳಿಗೆ ಕ್ರೀಡಾ ಪ್ರೋತ್ಸಾಹದ ಭಾಗವಾಗಿ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಪ್ರತಿ ವರ್ಷ 700 ಕ್ರೀಡಾಪಟುಗಳು ಇದರ ಅನುಕೂಲ ಪಡೆದುಕೊಳ್ಳುತ್ತಿದ್ದರು. ಅವರಿಗೆ ಊಟದ ವ್ಯವಸ್ಥೆ, ವಿಶೇಷ ತರಬೇತಿ, ತಿಂಗಳಿಗೆ ಗರಿಷ್ಠ ₹ 30 ಸಾವಿರದವರೆಗೆ ವಿದ್ಯಾರ್ಥಿವೇತನವನ್ನೂ ನೀಡಲಾಗುತ್ತದೆ. ಎರಡು ವರ್ಷಗಳಿಂದ ಕೊರೊನಾದಿಂದಾಗಿ ಈ ಸೌಲಭ್ಯಕ್ಕೆ ಅರ್ಹರಾಗುತ್ತಿರುವವರ ಸಂಖ್ಯೆ ಕಡಿಮೆಯಾಗಿದೆ. ಸದ್ಯ 550 ಮಂದಿಗೆ ಇದರ ಪ್ರಯೋಜನ ಸಿಗುತ್ತಿದೆ. ಪದವಿಯ ನಂತರ ಹೊರರಾಜ್ಯದ ಕ್ರೀಡಾಪಟುಗಳನ್ನು ಕೂಡ ಪರಿಗಣಿಸಲಾಗುತ್ತಿದೆ.

‘ಆಳ್ವಾಸ್‌ನಲ್ಲಿ ಸ್ನಾತಕೋತ್ತರ ಪದವಿ ಅಧ್ಯಯನ ಮಾಡುತ್ತಿರುವೆ. ತಿಂಗಳಿಗೆ ₹ 20 ಸಾವಿರ ವಿದ್ಯಾರ್ಥಿವೇತನ ನೀಡುತ್ತಿದ್ದಾರೆ. ಕಾಮನ್‌ವೆಲ್ತ್ ಗೇಮ್ಸ್ ಪದಕ ವಿಜೇತ ಕಾಶೀನಾಥ್ ನಾಯ್ಕ ಅವರಲ್ಲಿ ಆನ್‌ಲೈನ್ ಮೂಲಕ ತರಬೇತಿ ಪಡೆಯಲು ಅನುಕೂಲ ಮಾಡಿಕೊಟ್ಟಿದ್ದಾರೆ’ ಎಂದು ಉಡುಪಿ ಜಿಲ್ಲೆ ಬ್ರಹ್ಮಾವರದ ಜಾವೆಲಿನ್ ಥ್ರೊ ಪಟು ಕರೀಷ್ಮಾ ಹೇಳುತ್ತಾರೆ. ಅವರಿಗೆ ರಾಷ್ಟ್ರಮಟ್ಟದಲ್ಲಿ ಎರಡು ಚಿನ್ನ ಸೇರಿದಂತೆ ಆರು ಪದಕಗಳು ಒಲಿದಿವೆ.

‘ನಾನು ಆಳ್ವಾಸ್‌ನ ಹಳೆಯ ವಿದ್ಯಾರ್ಥಿ. ಉಚಿತ ಶಿಕ್ಷಣ ಸೇರಿದಂತೆ ಹಲವು ಪ್ರಯೋಜನಗಳು ದೊರೆತಿವೆ. ಶಿಕ್ಷಣ ಸಂಸ್ಥೆಯು ನೀಡಿದ ಸೌಲಭ್ಯಗಳಿಂದಾಗಿ ರಾಷ್ಟ್ರಮಟ್ಟದಲ್ಲಿ 12 ಪದಕಗಳ ಸಾಧನೆ ಮಾಡುವಂತಾಯಿತು’ ಎಂಬುದು ರಾಜಸ್ಥಾನದ ಷಾಟ್‌ಪಟ್ ಪಟು ವನಂ ಶರ್ಮಾ ಅಭಿಪ್ರಾಯ.

ಜೈನ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ ಹಲವು ಕ್ರೀಡಾಪಟುಗಳು ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದಾರೆ. ಟೆನಿಸ್ ಪಟು ರೋಹನ್ ಬೋಪಣ್ಣ, ಈಜುಪಟುಗಳಾದ ಶ್ರೀಹರಿ ನಟರಾಜ್, ರೆಹಾನ್ ಪೂಂಚಾ, ಶಿಖಾ ಟಂಡನ್, ಗಾಲ್ಫ್ ಆಟಗಾರ್ತಿ ಅದಿತಿ ಅಶೋಕ್ ಹೀಗೆ ಬೆಳೆಯುತ್ತದೆ ಆ ಪಟ್ಟಿ. ಕ್ರಿಕೆಟಿಗರಾದ ಕೆ.ಎಲ್.ರಾಹುಲ್, ಮಯಂಕ್ ಅಗರವಾಲ್, ಕರುಣ್ ನಾಯರ್ ಕೂಡ ಇದೇ ವಿವಿಯಲ್ಲಿ ಓದಿದವರು.

‘ಅಂತರರಾಷ್ಟ್ರೀಯ, ರಾಷ್ಟ್ರೀಯ ಮಟ್ಟದಲ್ಲಿ ತೋರಿದ ಸಾಮರ್ಥ್ಯ ಆಧರಿಸಿ ಕ್ರೀಡಾಪಟುಗಳಿಗೆ ಶಿಕ್ಷಣ ಶುಲ್ಕದಲ್ಲಿ ಬಹಳಷ್ಟು ವಿನಾಯಿತಿ, ಪ್ರೋತ್ಸಾಹಧನದ ಸೌಲಭ್ಯಗಳನ್ನು ಜೈನ್ ವಿವಿ ಒದಗಿಸುತ್ತಿದೆ. 2021-22ರ ಶೈಕ್ಷಣಿಕ ವರ್ಷದಲ್ಲಿ ಒಟ್ಟು 200 ವಿದ್ಯಾರ್ಥಿಗಳು ಪ್ರೋತ್ಸಾಹಧನ, ಶುಲ್ಕ ವಿನಾಯಿತಿ ಸೌಲಭ್ಯ ಪಡೆದುಕೊಂಡಿದ್ದಾರೆ’ ಎಂದು ವಿವಿಯ ಕ್ರೀಡಾ ವಿಭಾಗದ ಸಹಾಯಕ ನಿರ್ದೇಶಕ ಗೋಪಾಲ್ ನಾಯ್ಕ ಹೇಳುತ್ತಾರೆ.

(ಸರಣಿ ಮುಗಿಯಿತು)

ಎಲ್‌ಎಲ್‌ಬಿ: ಕಾಲೇಜು ಕಡ್ಡಾಯವೇ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿ. ಪ್ರದೀಪ್ ಕುಮಾರ್

1. ನಾನು ಬಿಕಾಂ ಮುಗಿಸಿ ಉದ್ಯೋಗ ಮಾಡುತ್ತಿದ್ದೇನೆ. ನನಗೆ ಎಲ್‌ಎಲ್‌ಬಿಯಲ್ಲಿ ಆಸಕ್ತಿ ಇದೆ. ಆದರೆ ಮೂರು ವರ್ಷ ಕಾಲೇಜಿಗೆ ಹೋಗುವುದು ಸಾಧ್ಯವಿಲ್ಲ. ನನಗೆ ಆರ್ಥಿಕ ಸಮಸ್ಯೆ ಇರುವ ಕಾರಣಕ್ಕೆ ಓದಿನೊಂದಿಗೆ ಕೆಲಸ ಮಾಡುವುದು ಅನಿವಾರ್ಯವಾಗಿದೆ. ನಿಮ್ಮ ಸಲಹೆ ನೀಡಿ.

ಪೂರ್ವಿಕ್, ಚಿಕ್ಕಮಗಳೂರು.

ನಿಮಗೆ ವಕೀಲಿ ವೃತ್ತಿಯನ್ನು ಮಾಡುವ ಆಸಕ್ತಿಯಿದ್ದರೆ, ಮೂರು ವರ್ಷದ ಪೂರ್ಣಾವಧಿ ಎಲ್‌ಎಲ್‌ಬಿ ಕೋರ್ಸ್ ಅನ್ನು ಮಾಡಬೇಕು. ಸಂಜೆ ಕಾಲೇಜು/ದೂರ ಶಿಕ್ಷಣದ ಎಲ್‌ಎಲ್‌ಬಿ ಕೋರ್ಸ್‌ಗಳಿಗೆ ಬಾರ್ ಕೌನ್ಸಿಲ್ ಮಾನ್ಯತೆ ಇರುವುದಿಲ್ಲ. ಹೆಚ್ಚಿನ ತಜ್ಞತೆಗಾಗಿ, ಎಲ್‌ಎಲ್‌ಬಿ ಕೋರ್ಸ್ ನಂತರ ಎರಡು ವರ್ಷದ ಎಲ್‌ಎಲ್‌ಎಮ್ ಕೋರ್ಸ್ ಮಾಡಬಹುದು.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣ ತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಕೋರ್ಸ್ ಕಾರ್ನರ್ : ಆರ್. ಬಿ. ಗುರುಬಸವರಾಜ ಅವರ ‘ಫುಟ್‌ವೇರ್ ಡಿಸೈನರ್ ಕೋರ್ಸ್’ ಕುರಿತ ಲೇಖನಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

Prose-3 Gentleman of Reo en Medio

English

ಎಸ್ಸೆಸ್ಸೆಲ್ಸಿ

1. ‘Don Anselmo’s appearance and manners were quite unusual.’ Support this statement.

Don Anselmo wore the old, long, and faded coat. He wore torn gloves through which his finger tips showed. He carried a worn-out umbrella’s skeleton as a stick. Though he was an old man, he bowed to all and removed his hat and gloves slowly and carefully. The manner of him removing the hat is resembled like Charles Chaplin. He was very much passionate about the nature, so he used to plant a tree when a child was born in the village. By all these factors, we could say that his appearance and mannerisms were quite unusual.

2. How can you say that Don Anselmo was generous in his own way? What makes you feel that Don Anselmo was a man of principles?

Don Anselmo was not only generous but also a man of principles. He stuck to his words and action. He refused to accept more money for his property even Americans were ready to pay double for it. He sold only the land but not the trees because he loved the children and planted a tree for every child.

3. ‘Don Anselmo said that Americans were really good people.’ If you agree with his statement, give reasons. OR How can you say that Americans were generous in their own way?

When Americans complained that children were playing, dancing under the trees, Don Anselmo replied that he sold only the land but not the trees. He thought that the children were the real owners of the trees. After hearing Anselmo, they did not quarrel with the old man though they had the legal right to own the trees. Therefore Americans were generous and good people.

4. How was the problem of ownership resolved by the Americans?

Americans could do nothing because they owned the trees legally. The narrator or Americans convinced the persons individually. It was a long process to convince everyone. At last Americans bought the trees individually from the descendants in the most of the following winter. In this way the problem was resolved.

5. “You will get almost twice as much, and the money is here for you.”

a) Who said this? The narrator.

b) Whom does ‘You’ refer here? ‘You’ refers to Don Anselmo.

c) Why did they offer twice of the amount? They discovered, Anselmo’s land was more than eight acres.

6. “Friend, I don’t like to have you speak to me in that manner.”

a) Who said these words? Don Anselmo.

b) Why didn’t the old man like it? The old man already agreed to sell the land for 12 hundred dollars only.

c) What does the statement show about the character of the speaker? Don Anselmo was a man of principles, and he was subjected to his words and determination.



Picture Credit: Karnataka Govt. 10th Class English Text book

Annappa Shetty MA,M.Ed, **SRP in English,Hassan**

ವಿದ್ಯುದಾವೇಶಗಳು ಮತ್ತು ಕ್ಷೇತ್ರಗಳು

ಭೌತಶಾಸ್ತ್ರ

ಪಿಯುಸಿ

(.........ಹಿಂದಿನ ಸಂಚಿಕೆಯಿಂದ)

$$F_G = -G\frac{m_p \quad m_e}{r^2}$$

ಇಲ್ಲಿ mp ಮತ್ತು me ಗಳು ಕ್ರಮವಾಗಿ ಪ್ರೋಟಾನ್ ಮತ್ತು ಇಲೆಕ್ಟ್ರಾನ್‌ಗಳ ರಾಶಿಗಳಾಗಿವೆ

$$\left|\frac{F_e}{F_G}\right| = \frac{e^2}{4\pi\varepsilon_0 G m_p m_e} = 2.4\times10^{39}$$

(ii) ಅದೇ ರೀತಿ r ದೂರದ ಅಂತರದಲ್ಲಿರುವ ಎರಡು ಪ್ರೋಟಾನ್‌ಗಳ ನಡುವಿನ ವಿದ್ಯುತ್ ಬಲದಿಂದ ಗುರುತ್ವಾಕರ್ಷಣಾ ಬಲದ ಪ್ರಮಾಣಕ್ಕೆ ಇರುವ ಅನುಪಾತ

$$\left|\frac{F_e}{F_G}\right| = \frac{e^2}{4\pi\varepsilon_0 G m_p m_e} = 1.3\times10^{36}$$

ಆದಾಗ್ಯೂ ಇಲ್ಲಿ ಎರಡು ಬಲಗಳ ಚಿಹ್ನೆಗಳು ಭಿನ್ನವಾಗಿದೆ ಎಂದು ಉಲ್ಲೇಖಿಸಬಹುದು. ಎರಡು ಪ್ರೋಟಾನ್‌ಗಳಿಗೆ, ಗುರುತ್ವಾಕರ್ಷಣಾ ಬಲವು ಆಕರ್ಷಿತವಾಗಿದೆ ಮತ್ತು ಕೂಲಂಬ್‌ನ ಬಲವು ವಿಕರ್ಷಿತವಾಗಿದೆ. ಒಂದು ಬೀಜ ಕೇಂದ್ರದ ಒಳಬಾಗದಲ್ಲಿರುವ ಎರಡು ಪ್ರೋಟಾನ್‌ಗಳ ನಡುವಿನ ಈ ಬಲಗಳ ನೈಜ ಬೆಲೆಗಳು (ಬೀಜ ಕೇಂದ್ರದಲ್ಲಿರುವ ಎರಡು ಪ್ರೋಟಾನ್‌ಗಳ ನಡುವಿನ ದೂರ $\sim 10^{-15}$ m) Fe ~ 230 N ಆದರೆ FG ~ 1.9 * 10^{-34} N ಎರಡು ಬಲಗಳ ಅನುಪಾತ (ಆಯಾಮವಿಲ್ಲದ) ತೋರಿಸುವುದೇನೆಂದರೆ ವಿದ್ಯುತ್ ಬಲವು ಗುರುತ್ವಾಕರ್ಷಣಾ ಬಲಕ್ಕಿಂತ ಹೆಚ್ಚು ಅಗಾಧವಾಗಿದೆ.

ಬಹು ಆವೇಶಗಳ ನಡುವಿನ ಬಲಗಳು

ಎರಡು ಆವೇಶಗಳ ನಡುವಿನ ಪರಸ್ಪರ ವಿದ್ಯುತ್ ಬಲವನ್ನು ಕೂಲಂಬ್‌ನ ನಿಯಮದ ಮೂಲಕ ನೀಡಲಾಗುವುದು. ಒಂದು ಆವೇಶದ ಮೇಲೆ ಅಲ್ಲಿರುವ ಇನ್ನೊಂದು ಆವೇಶ ಒಂದಲ್ಲದೇ ಸುತ್ತಲೂ ಇರುವ ಅನೇಕ ಆವೇಶಗಳ ಬಲವನ್ನು ಹೇಗೆ ಲೆಕ್ಕ ಮಾಡಬಹುದು? q1, q2, q3, ..., qn ಗಳು ನಿರ್ವಾತದಲ್ಲಿ ಒಂದು ವ್ಯವಸ್ಥೆಯ n ಸ್ಥಿರ ಆವೇಶಗಳೆಂದು ಪರಿಗಣಿಸಿ q1, ನ ಮೇಲೆ q2, q3, ..., qn ನಿಂದಾದ ಬಲವೇನು? ಈ ಪ್ರಶ್ನೆಯನ್ನು ಉತ್ತರಿಸಲು ಕೂಲಂಬ್‌ನ ನಿಯಮ ಸಾಕಾಗುವುದಿಲ್ಲ. ಯಾಂತ್ರಿಕ ಬಲಗಳ ಸಂಕಲನದ ಸಮಾಂತರ ಚತುರ್ಭುಜ ನಿಯಮವನ್ನು ಸ್ಥಾಯಿ ವಿದ್ಯುತ್ ಬಲದಂತೆ ನಿಜವಾಗಲು ಸಾಧ್ಯವೇ?

ಪ್ರಾಯೋಗಿಕವಾಗಿ ಇದನ್ನು ಪರಿಶೀಲಿಸಿದಾಗ ಯಾವುದೇ ಆವೇಶದ ಮೇಲೆ ಬೇರೆ ಇತರ ಆವೇಶಗಳ ಬಲವನ್ನು ಒಂದೊಂದಾಗಿ ತೆಗೆದುಕೊಂಡಾಗ ಒಂದರ ಮೇಲೆ ಇನ್ನೊಂದರಿಂದಾದ ಎಲ್ಲ ಬಲಗಳ ಸದಿಶ ಮೊತ್ತವಾಗಿದೆ. ಬೇರೆ ಆವೇಶಗಳ ಇರುವಿಕೆಯಿಂದಾಗಿ ವೈಯಕ್ತಿಕ ಆವೇಶಗಳು ಬದಲಾಗುವುದಿಲ್ಲ. ಇದನ್ನು ಅಧ್ಯಾರೋಪಣ ಸಿದ್ಧಾಂತ ಎಂದು ಕರೆಯಲಾಗುತ್ತದೆ.



(a)



(b)

ಈ ಪರಿಕಲ್ಪನೆಯನ್ನು ಚೆನ್ನಾಗಿ ತಿಳಿದುಕೊಳ್ಳಲು ಮೇಲಿನ ಚಿತ್ರದಲ್ಲಿ ತೋರಿಸಿರುವಂತೆ q_1, q_2 ಮತ್ತು q_3 ಗಳು ಒಂದು ವ್ಯವಸ್ಥೆ ಮೂರು ಆವೇಶಗಳು ಎಂದುಕೊಳ್ಳಿ . q_1 ಆವೇಶದ ಮೇಲೆ ಪ್ರತಿಯೊಂದು q_2 ಮತ್ತು q_3 ಆವೇಶಗಳ ಬಲವು ಸದಿಶಗಳ ಸಂಕಲನವನ್ನು ಪ್ರತಿಪಾದಿಸುತ್ತದೆ. ಹಾಗಾಗಿ q_1 ಮೇಲೆ q_2 ನಿಂದಾದ ಬಲ F_{12} ನಿಂದ ಸೂಚಿಸಿದೆ. ಸಮೀಕರಣ 3ರಲ್ಲಿ F_{12} ನ್ನು ಬೇರೆ ಆವೇಶಗಳು ಇದ್ದರೂ ಸಹ ನೀಡಿದೆ.

ಹಾಗಾಗಿ,

$$\mathbf{F}_{12} = \frac{1}{4\pi\varepsilon_0}\frac{q_1 q_2}{r_{12}^2}\hat{\mathbf{r}}_{12}$$

ಇದೇ ರೀತಿ q_1 ಮೇಲೆ q_3 ನಿಂದಾದ ಬಲ F_{13} ನಿಂದ ಸೂಚಿಸಿದಾಗ

$$\mathbf{F}_{13} = \frac{1}{4\pi\varepsilon_0}\frac{q_1 q_3}{r_{13}^2}\hat{\mathbf{r}}_{13}$$

ಅದು ಪುನಃ q_3 ನಿಂದಾಗಿ q_1ನ ಮೇಲೆ ಇದ್ದರೂ ಸಹ ಬೇರೆ ಆವೇಶ q_2 ಇರುತ್ತದೆ.

ಹಾಗಾಗಿ q_2 ಮತ್ತು q_3 ಯಿಂದಾಗಿ q_1ನ ಮೇಲೆ ಇರುವ ಒಟ್ಟು ಬಲ F_1 ಇದು,

..........(4)

$$\mathbf{F}_1 = \mathbf{F}_{12} + \mathbf{F}_{13} = \frac{1}{4\pi\varepsilon_0}\frac{q_1 q_2}{r_{12}^2}\hat{\mathbf{r}}_{12} + \frac{1}{4\pi\varepsilon_0}\frac{q_1 q_3}{r_{13}^2}\hat{\mathbf{r}}_{13} \ldots$$

ಕೆಳಗಿನ ಚಿತ್ರದಲ್ಲಿ ತೋರಿಸಿರುವಂತೆ ಒಂದು ವ್ಯವಸ್ಥೆಯ ಮೂರಕ್ಕಿಂತ ಹೆಚ್ಚು ಆವೇಶದ ಬಲವು ಲೆಕ್ಕಾಚಾರದಿಂದ ಸಾಮಾನ್ಯೀಕರಿಸಬಹುದು.

ಅಧ್ಯಾರೋಪಣ ಸಿದ್ಧಾಂತದಂತೆ q_1, q_2, q_3..., q_n, ಆವೇಶಗಳಿರುವ ವ್ಯವಸ್ಥೆಯಲ್ಲಿ q_2 ನಿಂದಾಗಿ q_1 ನ ಮೇಲಿರುವ ಬಲ ಕೂಲಂಬ್ ನಿಯಮದಲ್ಲಿರುವ ಬಲವೇ ಆಗಿದೆ. ಇದು ಬೇರೆ ಆವೇಶಗಳಾದ q_3, q_4, ..., q_n ಇರುವಿಕೆಯಿಂದ ಪರಿಣಾಮ ಉಂಟುಮಾಡುವುದಿಲ್ಲ. q1 ಆವೇಶದ ಮೇಲೆ ಬೇರೆ ಎಲ್ಲಾ ಆವೇಶದಿಂದಾದ ಒಟ್ಟು ಬಲ F_1 ಇದು F_{12}, F_{13}, ..., F_{1n} ಬಲಗಳ ಸದಿಶ ಮೊತ್ತವಾಗಿದೆ.

(ಮುಂದುವರಿಯುವುದು)

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ ‘ಎಲೆಕ್ಟ್ರಿಕ್ ಚಾರ್ಜ್‌ಸ್ ಅಂಡ್ ಫೀಲ್ಡ್ಸ್’ ಅಧ್ಯಾಯದ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

❦ ಸುಭಾಷಿತ ❦

ದೊಡ್ಡ ಮನುಷ್ಯ ತನ್ನನ್ನು ತಾನೇ ನಿಂದಿಸಿಕೊಂಡರೆ, ಸಾಮಾನ್ಯ ಮನುಷ್ಯ ಪರರನ್ನು ನಿಂದಿಸುತ್ತಾನೆ.

-ಕನ್‌ಫ್ಯೂಷಿಯಸ್

ಪದ್ಮ ಪ್ರಶಸ್ತಿಗಳಿಗೆ ಆಯ್ಕೆ ರಾಜಕೀಯ ಲೆಕ್ಕಾಚಾರದ ನೆರಳು

ಕೇಂದ್ರ ಸರ್ಕಾರ ನೀಡುವ ಪದ್ಮ ಪ್ರಶಸ್ತಿಗಳು ಹಲವು ಸಂದರ್ಭಗಳಲ್ಲಿ ವಿವಾದವನ್ನು ಹುಟ್ಟುಹಾಕಿವೆ. ಅದರಲ್ಲೂ, ಈಚಿನ ವರ್ಷಗಳಲ್ಲಿ ವಿವಾದಗಳು ಜಾಸ್ತಿ ಆಗಿವೆ. ಈ ಪ್ರಶಸ್ತಿಗಳನ್ನು ಅರ್ಹರಲ್ಲದವರಿಗೆ ನೀಡಲಾಗಿದೆ, ಅರ್ಹರಾದ ವ್ಯಕ್ತಿಗಳಿಗೆ ಪ್ರಶಸ್ತಿಗಳು ಸಿಕ್ಕಿಲ್ಲ ಎಂಬುದು ಪದ್ಮ ಪ್ರಶಸ್ತಿಗಳ ವಿಚಾರವಾಗಿ ಇರುವ ಮುಖ್ಯ ಟೀಕೆಗಳು. ಈ ಟೀಕೆಗಳು ಆಧಾರರಹಿತ ಅಲ್ಲ. ಸರ್ಕಾರಗಳು ಪ್ರಶಸ್ತಿಗಳಿಗೆ ವ್ಯಕ್ತಿಗಳನ್ನು ಆಯ್ಕೆ ಮಾಡುವಾಗ ವೈಯಕ್ತಿಕ ಪರಿಗಣನೆಗಳು, ರಾಜಕೀಯ ಲೆಕ್ಕಾಚಾರಗಳು ಮತ್ತು ಇತರ ಕೆಲವು ಲೆಕ್ಕಾಚಾರಗಳು ಕೆಲಸ ಮಾಡಿವೆ. ಕೆಲವು ಪ್ರಲೋಭನೆಗಳನ್ನು ಮೀರಲು ಯಾವ ಸರ್ಕಾರಕ್ಕೂ ಸಾಧ್ಯವಾಗಿಲ್ಲ ಎಂಬುದು ನಿಜ. ಕಲೆಯಂತಹ ಕ್ಷೇತ್ರಗಳಿಂದ ಪದ್ಮ ಪ್ರಶಸ್ತಿಗೆ ವ್ಯಕ್ತಿಗಳನ್ನು ಆಯ್ಕೆ ಮಾಡುವಾಗ ಕೂಡ ರಾಜಕೀಯ ಪ್ರಭಾವವು ಕೆಲಸ ಮಾಡಿದ ನಿದರ್ಶನಗಳು ಇವೆ. ಪದ್ಮ ಪ್ರಶಸ್ತಿಗಳ ಪಟ್ಟಿಯಲ್ಲಿ ರಾಜಕಾರಣಿಗಳು ನ್ಯಾಯಸಮ್ಮತವಲ್ಲದ ರೀತಿಯಲ್ಲಿ, ಇತರರಿಗಿಂತ ತುಸು ಹೆಚ್ಚಿನ ಪ್ರಾತಿನಿಧ್ಯವನ್ನು ಪಡೆದುಕೊಂಡಿದ್ದೂ ಇದೆ. ಉನ್ನತ ಪ್ರಶಸ್ತಿಗಳು ಅವರಿಗೆ ಲಭಿಸಿವೆ. ಇಬ್ಬರು ಹಿರಿಯ ಕಲಾವಿದರು – ಅನಿಂದ್ಯ ಚಟರ್ಜಿ ಮತ್ತು ಸಂಧ್ಯಾ ಮುಖರ್ಜಿ – ಈ ವರ್ಷದ ಪದ್ಮ ಪ್ರಶಸ್ತಿಗಳನ್ನು ತಿರಸ್ಕರಿಸಿದ್ದಾರೆ. ತಮಗೆ ಈ ಪ್ರಶಸ್ತಿಗಳು ಇದಕ್ಕೂ ಮೊದಲೇ ಬರಬೇಕಿತ್ತು ಎಂಬುದು ಅವರ ವಾದ. ಯಾವುದೇ ವರ್ಷದ, ಯಾವುದೇ ಪದ್ಮ ಪ್ರಶಸ್ತಿ ಪಟ್ಟಿಯೂ ಟೀಕೆಗಳಿಂದ ಪೂರ್ಣ ಪ್ರಮಾಣದಲ್ಲಿ ಹೊರತಾಗಿ ಇರಲಿಲ್ಲ. ಹಾಗೆಯೇ, ಸರ್ಕಾರಗಳ ಹಲವು ಆಯ್ಕೆಗಳನ್ನು ಸಾರ್ವಜನಿಕರು ಮುಕ್ತ ಮನಸ್ಸಿನಿಂದ ಪ್ರಶಂಸಿಸಿದ್ದೂ ಇದೆ.



ಕೆಲವು ರಾಜಕೀಯ ಮುಖಂಡರಿಗೆ ಪ್ರಶಸ್ತಿ ಘೋಷಿಸಿರುವುದರ ಹಿಂದೆ ರಾಜಕೀಯ ಉದ್ದೇಶಗಳು ಸ್ಪಷ್ಟವಾಗಿ ಕಾಣುತ್ತವೆ

ಈ ವರ್ಷದ ಪದ್ಮ ಪ್ರಶಸ್ತಿಗಳ ಪಟ್ಟಿಯಲ್ಲಿ 128 ಸಾಧಕರ ಹೆಸರುಗಳು ಇವೆ. ಹಲವರು ಈ ಪ್ರಶಸ್ತಿಗೆ ಅರ್ಹರು. ಅವರ ಆಯ್ಕೆಯಲ್ಲಿ ಲೋಪ ಹುಡುಕಲಾಗದು. ವಿಜ್ಞಾನಿಗಳು, ವೈದ್ಯರು, ಸಾಮಾಜಿಕ ಕಾರ್ಯಕರ್ತರು, ಕಲಾವಿದರು, ಕ್ರೀಡಾಪಟುಗಳು ಮತ್ತು ಉದ್ಯಮಿಗಳು ಈ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಕೋವಿಡ್ ವಿರುದ್ಧ ದೇಶ ನಡೆಸಿದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದ್ದವರೂ ಪ್ರಶಸ್ತಿಗಳಿಗೆ ಆಯ್ಕೆ ಆಗಿದ್ದಾರೆ. ಈ ಆಯ್ಕೆಗಳಲ್ಲಿ ರಾಜಕೀಯ ಲಾಭದ ಮೇಲೆ ಒಂದು ಕಣ್ಣಿತ್ತು ಎಂಬುದು ಸ್ಪಷ್ಟ. ಗೂಗಲ್ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಸುಂದರ್ ಪಿಚೈ, ಮೈಕ್ರೊಸಾಫ್ಟ್ ಕಂಪನಿಯ ಸಿಇಒ ಸತ್ಯ ನಾದೆಲ್ಲ ಅವರ ಹೆಸರು ಪಟ್ಟಿಯಲ್ಲಿ ಇರುವುದಕ್ಕೆ ಕಾರಣವೇನು ಎಂಬ ಪ್ರಶ್ನೆಗಳು ಮೂಡಿವೆ. ಇವರು ದೇಶಕ್ಕೆ ನೇರವಾಗಿ ಯಾವುದೇ ಕೊಡುಗೆ ನೀಡಿದವರಲ್ಲ. ಆದರೆ, ವಿಶ್ವದರ್ಜೆಯ ಕಂಪನಿಗಳ ನಾಯಕತ್ವ ಸ್ಥಾನದಲ್ಲಿ ಇವರು ಇರುವುದು ಭಾರತದಲ್ಲಿನ ಆಡಳಿತ ನಿರ್ವಹಣಾ ಪ್ರತಿಭೆಗೆ ಒಂದು ಗರಿ ಎಂಬ ಸಮರ್ಥನೆ ಇವರ ಆಯ್ಕೆಗೆ ಇದೆ. ಆದರೆ, ಬಾಬರಿ ಮಸೀದಿಯನ್ನು ಧ್ವಂಸಗೊಳಿಸಿದಾಗ ಉತ್ತರಪ್ರದೇಶದ ಮುಖ್ಯಮಂತ್ರಿ ಆಗಿದ್ದ, ಬಿಜೆಪಿಯ ನಾಯಕರಾಗಿದ್ದ ಕಲ್ಯಾಣ್ ಸಿಂಗ್ ಅವರಿಗೆ ಮರಣೋತ್ತರವಾಗಿ ಪದ್ಮ ಪ್ರಶಸ್ತಿ ಘೋಷಿಸಿರುವುದು ರಾಜಕೀಯ ಸಂದೇಶವನ್ನು ರವಾನಿಸುತ್ತದೆ. ಉತ್ತರಪ್ರದೇಶದ ವಿಧಾನಸಭೆಗೆ ಚುನಾವಣೆ ಹತ್ತಿರವಾಗುತ್ತಿದೆ ಎಂಬುದು ಇಲ್ಲಿ ಉಲ್ಲೇಖಾರ್ಹ.

ಆದರೆ, ಕಾಂಗ್ರೆಸ್ ನಾಯಕ ಗುಲಾಂ ನಬಿ ಆಜಾದ್ ಮತ್ತು ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯ ಅವರಿಗೆ ಪ್ರಶಸ್ತಿ ಪ್ರಕಟಿಸಿರುವುದು ಬಹಳ ವಿವಾದಾತ್ಮಕ. ಸಿಪಿಎಂ ಪಕ್ಷದ ನೀತಿ ಹಾಗೂ ಪೂರ್ವನಿದರ್ಶನಗಳನ್ನು ಗಮನದಲ್ಲಿ ಇರಿಸಿಕೊಂಡು, ಭಟ್ಟಾಚಾರ್ಯ ಅವರು ಪ್ರಶಸ್ತಿಯನ್ನು ಸ್ವೀಕರಿಸುವುದಿಲ್ಲ ಎಂದಿದ್ದಾರೆ. ಆಜಾದ್ ಅವರಿಗೆ ಪ್ರಶಸ್ತಿ ಘೋಷಿಸಿರುವುದರ ಹಿಂದೆ ರಾಜಕೀಯ ಉದ್ದೇಶ ಇರುವಂತಿದೆ. ಅವರು ಕಾಂಗ್ರೆಸ್ಸಿನಲ್ಲಿ ಭಿನ್ನಮತೀಯ ನಾಯಕರಾಗಿ ಗುರುತಿಸಿಕೊಂಡಿದ್ದಾರೆ, ಅವರು ಪ್ರಶಸ್ತಿಯನ್ನು ನಿರಾಕರಿಸಿಲ್ಲ. ಕಾಂಗ್ರೆಸ್ಸಿನಲ್ಲಿ ಅತೃಪ್ತಿಯನ್ನು ಸೃಷ್ಟಿಸಿ, ಆಜಾದ್ ಅವರನ್ನು ಪಕ್ಷದಿಂದ ದೂರ ಮಾಡುವ ಉದ್ದೇಶದಿಂದ ಪ್ರಶಸ್ತಿ ಘೋಷಣೆ ಆಗಿರಬಹುದು. ಸರ್ಕಾರಗಳು, ವಿರೋಧ ಪಕ್ಷಗಳ ನಾಯಕರಿಗೆ ಪದ್ಮ ಪ್ರಶಸ್ತಿಯನ್ನು ಈ ಹಿಂದೆಯೂ ಪ್ರಕಟಿಸಿವೆ. ಅದಕ್ಕಾಗಿ ಪ್ರಶಂಸೆಗೂ ಪಾತ್ರವಾಗಿವೆ. ಆದರೆ ಆಜಾದ್ ಅವರಿಗೆ ಪ್ರಶಸ್ತಿ ಘೋಷಿಸಿರುವುದರ ಹಿಂದೆ ಗೌರವ ಸಲ್ಲಿಸುವುದಕ್ಕಿಂತಲೂ ಹೆಚ್ಚಾಗಿ, ಒಂದಿಷ್ಟು ರಾಜಕೀಯ ಸಮಸ್ಯೆ ಸೃಷ್ಟಿಸುವ ಉದ್ದೇಶ ಇರುವಂತಿದೆ.

ದಿನದ ಟ್ವೀಟ್

ಎಂದಿಗೂ ಬೆಂಬಲಿಸುವುದಿಲ್ಲ

ತಂತ್ರಜ್ಞಾನವನ್ನು ಯಾವಾಗಲೂ ನಾನು ಪ್ರಶಂಸಿಸುತ್ತೇನೆ. ಆದರೆ 'ಆನ್‌ಲೈನ್ ಕಲಿಕೆ'ಯ ಹೆಸರಿನಲ್ಲಿ ವಿದ್ಯಾರ್ಥಿಗಳು ತಾಂತ್ರಿಕ ಪರದೆಯ ಮುಂದೆ ಹೆಚ್ಚು ಸಮಯ ಕಳೆಯುವುದನ್ನು ಎಂದಿಗೂ ಬೆಂಬಲಿಸುವುದಿಲ್ಲ. ಇಲ್ಲ, ಎಂದಿಗೂ ಬೆಂಬಲಿಸುವುದಿಲ್ಲ.

ರಾಹುಲ್ ಶೋನಕ್, ಉದ್ಯಮಿ

ಕಿಡಿನುಡಿ

ಅಕ್ರಮ ಕಣ್ಗಾವಲು ನಡೆದಿದೆ ಎಂಬುದು ಸಾಬೀತಾಗುವುದಾದಲ್ಲಿ, ಪೆಗಾಸಸ್‌ನಂತಹ ಪ್ರಕರಣಗಳು ಯಾವುದೇ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸರ್ಕಾರದ ಪತನಕ್ಕೆ ಕಾರಣವಾಗುತ್ತವೆ. ಆದರೆ, ಬೇಸರದ ಸಂಗತಿಯೆಂದರೆ, ಭಾರತವು ಹಲವು ವರ್ಷಗಳಿಂದ ಕ್ರಿಯಾಶೀಲ ಪ್ರಜಾತಂತ್ರವಾಗಿ ಉಳಿದಿಲ್ಲ. ಚುನಾಯಿತ ಸರ್ವಾಧಿಕಾರದ ವ್ಯವಸ್ಥೆಯಲ್ಲಿ ಮಾತ್ರ ಇಂತಹ ವಿಷಯಗಳ ವಿಚಾರವಾಗಿ ನಾಚಿಕೆಯಿಲ್ಲದೆ ಇರಬಹುದು. ನಾವು ಈಗ ಇಂತಹ ಪರಿಸ್ಥಿತಿಯಲ್ಲಿ ಇದ್ದೇವೆ.

ಸುಮಂತ್ ರಾಮನ್, ಟಿ.ವಿ. ನಿರೂಪಕ, ರಾಜಕೀಯ ವಿಶ್ಲೇಷಕ

25 ವರ್ಷಗಳ ಹಿಂದೆ

ಶುಕ್ರವಾರ, 31-1-1997

• ಕೇಂದ್ರ ನೌಕರರ ವೇತನ, ನಿವೃತ್ತಿ ವಯಸ್ಸು ಏರಿಕೆಗೆ ಶಿಫಾರಸು

ನವದೆಹಲಿ, ಜ. 30 (ಯುಎನ್‌ಐ)– ಕೇಂದ್ರ ಸರ್ಕಾರಿ ನೌಕರರ ಮೂಲವೇತನ ಶ್ರೇಣಿಗಳ ಏರಿಕೆ, ವಾರಕ್ಕೆ ಆರು ದಿನಗಳ ಕೆಲಸದ ಮರುಜಾರಿ, ಮನೆ ಬಾಡಿಗೆ ಭತ್ಯೆ ಏರಿಕೆ ಹಾಗೂ 58ರಿಂದ 60ಕ್ಕೆ ನಿವೃತ್ತಿ ವಯಸ್ಸು ಏರಿಕೆ (ಸಶಸ್ತ್ರ ಪಡೆ ಹಾಗೂ ಕೇಂದ್ರೀಯ ಪೊಲೀಸ್ ಅಧಿಕಾರಿಗಳನ್ನು ಹೊರತುಪಡಿಸಿ)– ಇವು ತನ್ನ ಸಮಗ್ರ ವರದಿಯಲ್ಲಿ ಐದನೇ ವೇತನ ಆಯೋಗ ಮಾಡಿರುವ ಶಿಫಾರಸುಗಳು.

ಆಯೋಗದ ಎಲ್ಲ ಶಿಫಾರಸುಗಳನ್ನೂ ಅಂಗೀಕರಿಸಿದಲ್ಲಿ ಬೊಕ್ಕಸಕ್ಕೆ ವಾರ್ಷಿಕ 7,300 ಕೋಟಿ ರೂಪಾಯಿಗಳ ಹೊರೆ ಬೀಳಲಿದೆ. ಆಯೋಗದ ಶಿಫಾರಸುಗಳ ಪೂರ್ವಾನ್ವಯ ಜಾರಿಯ ಪರಿಣಾಮವನ್ನೂ ಗಣನೆಗೆ ತೆಗೆದುಕೊಂಡಲ್ಲಿ 1997–98ರ ಹಣಕಾಸು ವರ್ಷದಲ್ಲಿ 1,15,000 ಕೋಟಿ ರೂಪಾಯಿಗಳ ಹೊರೆ ಬೀಳಲಿದೆ.

• ರೇವಣಸಿದ್ಧಯ್ಯ ನೇತೃತ್ವದಲ್ಲಿ ಬೊಫೋರ್ಸ್ ತನಿಖೆಗೆ ತಂಡ

ನವದೆಹಲಿ, ಜ. 30 (ಯುಎನ್‌ಐ)– ಬೊಫೋರ್ಸ್ ಹಗರಣಕ್ಕೆ ಸಂಬಂಧಿಸಿದಂತೆ ಈಚೆಗೆ ಸ್ವಿಸ್ ಬ್ಯಾಂಕ್‌ನಿಂದ ಪಡೆದ ರಹಸ್ಯ ದಾಖಲೆ ಪರಿಶೀಲನೆಯೂ ಸೇರಿದಂತೆ ಹಗರಣದ ಬಗ್ಗೆ ಸಮಗ್ರ ತನಿಖೆ ನಡೆಸಲು ಸಿಬಿಐನ ಹೆಚ್ಚುವರಿ ನಿರ್ದೇಶಕ ಎನ್. ರೇವಣಸಿದ್ಧಯ್ಯ ನೇತೃತ್ವದ 12 ಮಂದಿ ಸದಸ್ಯರ ವಿಶೇಷ ತನಿಖಾ ತಂಡವನ್ನು ನೇಮಿಸಲಾಗಿದೆ.

ಒಬ್ಬರು ಜಂಟಿ ನಿರ್ದೇಶಕರು, ಇಬ್ಬರು ಡಿಎಸ್ಪಿಗಳು ಕೂಡಾ ವಿಶೇಷ ತನಿಖಾ ತಂಡದಲ್ಲಿರುತ್ತಾರೆ ಎಂದು ಸಿಬಿಐನ ವಕ್ತಾರ ಎಸ್.ಎಂ. ಖಾನ್ ಇಂದು ಇಲ್ಲಿ ಪ್ರಕಟಿಸಿದರು. ಆದರೆ, ತಂಡದಲ್ಲಿರುವ ಇತರ ಸದಸ್ಯರ ಹೆಸರುಗಳನ್ನು ಬಹಿರಂಗಪಡಿಸಲು ಅವರು ನಿರಾಕರಿಸಿದರು. ಜೊತೆಗೆ ತನಿಖಾ ತಂಡಕ್ಕೆ ವರದಿ ಸಲ್ಲಿಸಲು ಗಡುವು ನೀಡಲಾಗಿದೆಯೇ ಎಂಬ ಪ್ರಶ್ನೆಗೂ ಅವರು ಉತ್ತರಿಸಲಿಲ್ಲ.

50 ವರ್ಷಗಳ ಹಿಂದೆ

ಸೋಮವಾರ, 31-1-1972

• ಅಭ್ಯರ್ಥಿಗಳ ಆಯ್ಕೆಪಟ್ಟಿ ಬಗ್ಗೆ ರಾಜ್ಯದ 15 ಮಂದಿ ಎಂ.ಪಿ.ಗಳ ತೀವ್ರ ಅಸಮಾಧಾನ

ನವದೆಹಲಿ, ಜ. 30– ವಿಧಾನಸಭೆ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ವಿಷಯ ಕುರಿತು ಚರ್ಚಿಸಲು ಮೈಸೂರು ರಾಜ್ಯದ 15 ಮಂದಿ ಸಂಸತ್ ಕಾಂಗ್ರೆಸ್ ಸದಸ್ಯರು, ಕೇಂದ್ರ ಸಂಸತ್ ವ್ಯವಹಾರ ಖಾತೆ ಉಪಮಂತ್ರಿ ಶ್ರೀ ಬಿ. ಶಂಕರಾನಂದ ಅವರ ನಿವಾಸದಲ್ಲಿ ಇಂದು ಬೆಳಿಗ್ಗೆ ಸಭೆ ಸೇರಿದ್ದರು.

ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಪ್ರದೇಶ ಚುನಾವಣಾ ಸಮಿತಿಯು ತಮ್ಮ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂದು ಅವರು ಆಪಾದಿಸಿದರು.

ಮನವಿ ಸಲ್ಲಿಸಲು ನಿರ್ಧಾರ: ರಾಜ್ಯ ವಿಧಾನಸಭೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಅನುಸರಿಸಬೇಕಾದ ತತ್ವಗಳನ್ನು ಸೂಚಿಸಿದ ಮನವಿ ಪತ್ರವೊಂದನ್ನು ಅವರು ಕೇಂದ್ರ ಚುನಾವಣಾ ಸಮಿತಿ ಅಧ್ಯಕ್ಷರಿಗೆ ಸಲ್ಲಿಸುವರು.

ಆ ತತ್ವಗಳು ಈ ರೀತಿ ಇವೆ:

1. ಸ್ಥಳೀಯ ಅಭ್ಯರ್ಥಿಗಳನ್ನೇ ನಿಲ್ಲಿಸಬೇಕು. ಅಲ್ಲದೆ, ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡು ಸಮಾಜದ ಎಲ್ಲ ವರ್ಗಗಳಿಂದ ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕು. 2. ಇತ್ತೀಚೆಗೆ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಸ್ಪರ್ಧಿಸಿದ್ದವರನ್ನೆಲ್ಲಾ ಆಯ್ಕೆಯಿಂದ ಕೈಬಿಡಬೇಕಾಗುತ್ತದೆ.

ಬಡತನವನ್ನೇ ಹೆಚ್ಚಿಸಿ ಅತಿ ಶ್ರೀಮಂತರಿಗೆ ಅನುಕೂಲ ಮಾಡುವೆಡೆಗೆ ನವ ಆರ್ಥಿಕತೆಯ ಗುಟ್ಟಿನ ನಡೆಯಿದೆ

ಶ್ರಮಿಕರ ಬಡತನವ ಹಂಚಿಕೊಳ್ಳುವುದೆಂದು?

ವಿಶ್ಲೇಷಣೆ

ಸಬಿತಾ ಬನ್ನಾಡಿ

ಕುದುರೆ ಸತ್ತಿಗೆಯವರ ಕಂಡಡೆ
ಹೊರಳಿಬಿದ್ದು ಕಾಲ ಹಿಡಿವರು
ಬಡ ಭಕ್ತರು ಬಂದಡೆ ಎಡೆಯಿಲ್ಲ, 'ಅತ್ತ ಸನ್ನಿ' ಎಂಬರು
ಎನ್ನೊಡೆಯ ಕೂಡಲಸಂಗಯ್ಯನವರ
ತಡೆಗೆಡಹಿ ಮೂಗ ಕೊಯ್ಯದೆ ಮಾಬನೆ?
(ಸಂ: ಎಂ.ಎಂ.ಕಲಬುರ್ಗಿ; ಸಮಗ್ರ ವಚನ ಸಂಪುಟ; 2001)

ಬಸವಣ್ಣನವರ ಈ ವಚನ ಹೇಳುವ ಸತ್ಯಗಳು ಹಲವು. ಇದು ವ್ಯಕ್ತಿಗಳ ಸಂಪತ್ತು ಹೆಚ್ಚುತ್ತಾ ದೇಶದ ಸಂಪತ್ತು ಕುಸಿಯುತ್ತಾ ಹೋದಾಗ ಸಂಭವಿಸುವ ಒಂದು ಸಂಗತಿಯೂ ಹೌದು. ಭಕ್ತರಲ್ಲೂ ಬಡವ, ಬಲ್ಲಿದ ಎಂಬ ಭೇದವನ್ನು ಮಾಡುತ್ತಾ, ಶ್ರೀಮಂತಿಕೆಯನ್ನು ಸಹಜ ಎಂಬಂತೆ ಒಪ್ಪಿಸುವ, ಬಿಂಬಿಸುವ, ವಿಜೃಂಭಿಸುವ, ಮೌಲ್ಯವಾಗಿಸುವ, ಆ ಮೂಲಕ ಬಡವರಿಗಾಗುವ ಅಪಮಾನವನ್ನು ಪುರಸ್ಕರಿಸುವ ಎಲ್ಲ ನಡೆಗಳು ಇಲ್ಲಿವೆ. ಹಾಗೆ ಅಪಮಾನಿಸಿದವರ ಮೂಗು ಕೊಯ್ದು ಅವರಿಗೂ ಅಪಮಾನದ ಅನುಭವ ಆಗುವಂತೆ ಸಂಗಯ್ಯ ಮಾಡುತ್ತಾನೆ ಎನ್ನುವ ಆಶಯ ಇಲ್ಲಿದೆ.

ಎಲ್ಲ ಶ್ರೀಮಂತಿಕೆಗಳನ್ನು ನಿರಾಕರಿಸುವ, ಸಾಮುದಾಯಿಕ ಬದುಕಿನ ಮೂಲಕ ಸಮಾನತೆಯನ್ನು ಬಾಳುವ ನಿಲುವಿನಿಂದ ಹೊರಟವರು ಶರಣರು. ಇಂದಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲೂ ಈ ಆಶಯ ಈಡೇರದೆ, ಜನರಿಗಾಗಿ ಚುನಾಯಿತವಾದ ಸರ್ಕಾರಗಳ ಹಣವೂ ಉಳ್ಳವರ ಪಾಲಾಗುವುದನ್ನು ತಪ್ಪಿಸಲಾಗದ ದುರಂತವು ಮುಂದುವರಿದಿದೆ. ಈ ಹಣವೆಂಬ ಮಧ್ಯವರ್ತಿಯು ಆರ್ಥಿಕ ನೆಲೆಯಲ್ಲಷ್ಟೇ ಬಡವರನ್ನು ಹುಟ್ಟಿಸಿರುವುದಲ್ಲ, ಸಾಮಾಜಿಕ ನೆಲೆಯಲ್ಲೂ ಬಡವರನ್ನು ಹುಟ್ಟಿಸಿದೆ. ಬೇರೆ ಬೇರೆ ಕಸುಬುಗಳೇ ಒಬ್ಬರಿಗೊಬ್ಬರ ಅವಲಂಬನೆಯ ನಂಟನ್ನು ಹಣವೆಂಬ ಮಧ್ಯವರ್ತಿಯು ಕಡಿದುಹಾಕಿದೆ. ಹೀಗಾಗಿ, ಮನುಷ್ಯರ ನಡುವೆ ಒಡಕು ತರುವುದು ಸಲೀಸಾಗಿ, ಸ್ವಲಾಭದ ಮೆಟ್ಟಿಲುಗಳನ್ನಾಗಿಸುವ ಕಾರ್ಯಸೂಚಿಯನ್ನೇ ಪ್ರವಚನಗಳನ್ನಾಗಿಸಿ- ಜನರ ಜುಟ್ಟು ಹಿಡಿಯುವುದನ್ನು ಕರಗತವಾಗಿಸಿಕೊಳ್ಳುವುದನ್ನೂ ಅಪೂರ್ವ ತಂತ್ರಗಾರಿಕೆ ಎಂದು ಬಿಂಬಿಸುವ ಹಣದೆಂಜಲಿನ ಹಪಹಪಿಯ ಮಾಧ್ಯಮಗಳನ್ನು ಸಾಕಿಕೊಂಡು ಹುಸಿಯ ಆಹಾರವನ್ನೇ ಮೆಂದು, ಇಂದು ಮಾನವತೆಯು ಮಸಿ ಹಿಡಿಸಿಕೊಂಡಿದೆ.

ಯಂತ್ರವು ಹುಟ್ಟುಹಾಕುವ ಯಾಂತ್ರಿಕ ಆಧುನಿಕತೆಯು ಹಸಿದವರನ್ನು ಕ್ರಿಮಿನಲ್‌ಗಳು ಎಂದು ಬಿಂಬಿಸುವ ದುರಂತವನ್ನು ಚಾರ್ಲಿ ಚಾಪ್ಲಿನ್ 'ಮಾಡರ್ನ್ ಟೈಮ್ಸ್' ಸಿನಿಮಾದಲ್ಲಿ ತೋರಿಸುತ್ತಾನೆ. ಕಾರ್ಪೊರೇಟೀಕರಣ, ಮಾರುಕಟ್ಟೆ ಆರ್ಥಿಕತೆಗಳು ಇದನ್ನು ಇನ್ನಷ್ಟು ಬಿಗಡಾಯಿಸಿ ಜಾತಿ, ಧರ್ಮ, ರಾಷ್ಟ್ರೀಯತೆ ಹೀಗೆ ಎಲ್ಲವನ್ನೂ ಸರಕುಗಳಾಗಿಸಿವೆ. ಇದಾಗದ ಸ್ವರಾಜ್ಯವನ್ನು ಗಾಂಧಿ ಬಯಸಿದ್ದರು. ಇದರಾಚೆಯ ಸಮಾನತೆಯನ್ನು ಅಂಬೇಡ್ಕರ್ ಸಂವಿಧಾನವಾಗಿಸಿದ್ದರು. ಆದರೆ ಇವರೆಲ್ಲರನ್ನೂ ಮೀರಿ ಸುಳ್ಳುಬುರುಕರು ಬಾಯಿಗೆ ಬಂದಿದ್ದು ಬಡಬಡಿಸುವುದನ್ನು- ಹಣವನ್ನು ದುಡಿಯುವುದಕ್ಕಾಗಿಯೇ ಕೊಡುತ್ತಿರುವ ಶಿಕ್ಷಣವನ್ನು ಪಡೆದ ಇಂದಿನ 'ವಿದ್ಯಾವಂತ'ರು ಕಣ್ಣಿಗೊತ್ತಿಕೊಳ್ಳುವಾಗ, ಇಂತಹ ಶಿಕ್ಷಣ ಪಡೆಯದವರಲ್ಲಿ ಮಾತ್ರ ಮಾನವೀಯತೆಯ ಸೆಲೆ ಚೂರುಪಾರು ಉಳಿದಿರುವ ವಿದ್ಯಮಾನಗಳು ಗೋಚರವಾಗತೊಡಗಿವೆ.

ಕೋವಿಡ್ ಸಂದರ್ಭ ಇವುಗಳನ್ನೆಲ್ಲ ತೆರೆದು ತೋರುವ ನೆಪಗಳೂ ಆಗಿವೆ. ಮೊದಲ ಲಾಕ್‌ಡೌನ್‌ನ ಅನಿರೀಕ್ಷಿತ ಸನ್ನಿವೇಶದಲ್ಲಿ ಕೂಲಿ ಕಾರ್ಮಿಕರು ನಗರದಲ್ಲಿ ಬದುಕುವುದು ದುಸ್ತರವಾಯಿತು. ಆ ಬಗ್ಗೆ ಯಾರಿಗೂ ಮುನ್ನೋಟವೂ ಇರಲಿಲ್ಲ. ಅವರು ತಮ್ಮ ಹಳ್ಳಿಯೆಡೆಗೆ ಕಾಲ್ನಡಿಗೆಯಲ್ಲೇ ವಲಸೆ ಹೊರಟರು. ದೆಹಲಿಯಿಂದ ಸಾವಿರಕ್ಕೂ ಹೆಚ್ಚು ಕಿಲೊಮೀಟರ್ ದೂರದ ಬಿಹಾರಕ್ಕೆ ಹೀಗೆ ಸೆಕೆಂಡ್‌ಹ್ಯಾಂಡ್ ಸೈಕಲ್‌ನಲ್ಲಿ ಹೊರಟ ಏಳು ಜನರಿಗೆ ಹಲವು ಸವಾಲುಗಳು ಎದುರಾಗುತ್ತವೆ. ಇದನ್ನು ಡಾಕ್ಯುಮೆಂಟರಿ ಮಾಡಿರುವ ವಿನೋದ್ ಕಾಪ್ರಿ, ಆ ಅನುಭವಗಳನ್ನು, '1232 ಕಿ.ಮೀ.' ಎಂಬ ಹೆಸರಿನಲ್ಲಿ ಪುಸ್ತಕವನ್ನಾಗಿಯೂ ತಂದರು (ಕನ್ನಡಾನುವಾದ: ಸತೀಶ್ ಜಿ.ಟಿ.).

ಈ ಏಳು ಜನ ನೂರಾರು ಕಿ.ಮೀ. ಕ್ರಮಿಸಿದ ನಂತರ ಯಾವುದೋ ಒಂದು ಹಳ್ಳಿಯಲ್ಲಿ ಕತ್ತಲು ಆವರಿಸಿದ ಹೊತ್ತಿನಲ್ಲಿ ಇವರ ಸೈಕಲ್ಲಿಗೆ ಪಂಕ್ಚರ್ ಹಾಕಿಸಬೇಕಿರುತ್ತದೆ. ಕೆಲವು ಕಿಲೊಮೀಟರ್ ಹುಡುಕಿ ಒಬ್ಬಾತನ ಮನೆಗೆ ಹೋಗಿ ಕೇಳುತ್ತಾರೆ. ಮನೆ ಮಕ್ಕಳಿಗೆ ಹುಷಾರಿಲ್ಲದ ಆ ಬಡವ್ಯಕ್ತಿ ಮೊದಲು ನಿರಾಕರಿಸುತ್ತಾನೆ. ಆದರೂ ದೂರದ ಬಿಹಾರಕ್ಕೆ ಸೈಕಲ್‌ನಲ್ಲಿ ಹೊರಟಿದ್ದು ಕೇಳಿ ಒಂದು ಸೈಕಲ್ ಮಾತ್ರವಲ್ಲ, ಏಳೂ ಸೈಕಲ್‌ಗಳನ್ನು ಸಿದ್ಧಪಡಿಸಿ, 'ಇನ್ನು ನೂರು ಕಿಲೊಮೀಟರ್‌ವರೆಗೆ ನಿಮಗೆ ತೊಂದರೆ ಇಲ್ಲ' ಎನ್ನುತ್ತಾನೆ. ಇವರು ಕಾಸು ಕೊಡಲು ಹೋದಾಗ ನಿರಾಕರಿಸುತ್ತಾನೆ. ಸ್ವತಃ ತಾನೇ ಅಂಗಡಿ ಮುಚ್ಚಿ ದುಡಿಮೆ ಕಳೆದುಕೊಂಡ ಆತನ ಹೆಸರು ಇರ್ಷಾದ್. ಈ ಪಂಕ್ಚರ್‌ವಾಲಾನ ಮಾನವೀಯತೆ ಓದುಗರನ್ನೂ ಸೇರಿಸಿ ಎಲ್ಲರ ಕಣ್ಣುಗಳನ್ನು ಹನಿಗೂಡಿಸುತ್ತದೆ.

ಅಲ್ಲಲ್ಲಿ ಕೆಲವೆಡೆ ನೀರೂ ಸಿಗದ ನವ ಅಸ್ಪೃಶ್ಯತೆ

(ಕೋವಿಡ್ ಹೊತ್ತು ತರುತ್ತಿದ್ದಾರೆ ಎಂಬ ಭಯ), ಅಲ್ಲಲ್ಲಿ ವಿಶೇಷ ಅನುಕಂಪದ ಆದರಗಳ ನಡುವೆ ಮನೆ ತಲುಪುವ ಒಂದೇ ಆಸೆ ಹೊತ್ತು, ಹಸಿದ ಹೊಟ್ಟೆಯಲ್ಲಿ ಸೈಕಲ್ ತುಳಿವ ಇವರನ್ನು– ಆಳುವ ವ್ಯವಸ್ಥೆಗಳು ನಡೆಸಿಕೊಂಡಿದ್ದು ಹೇಗೆ? ಇವರು ಹೆದ್ದಾರಿಗಳಲ್ಲಿ ಹಾದು ಹೋಗುವಾಗ ಪೊಲೀಸ್ ದೌರ್ಜನ್ಯಕ್ಕೆ ಈಡಾಗುತ್ತಾರೆ. ಇವರ್‍ಯಾರಿಗೂ ಢಾಬಾದವರು ಊಟ ಕೊಡಬಾರದು, ಕೊಟ್ಟಲ್ಲಿ ಶಿಕ್ಷೆ ವಿಧಿಸಲಾಗುವುದು ಎಂದು ತಾಕೀತು ಮಾಡಲಾಗುತ್ತದೆ! (ಒಂದು ಅನುಮಾನ- ಇವರು ಶ್ರಮದಿಂದ ದುಡಿದು ತಿನ್ನುವವರಾಗಿರದೆ ಕಾವಿ ಧರಿಸಿದ್ದರೆ ಊಟ ಸಿಗುತ್ತಿತ್ತೋ ಏನೋ?) ಅಷ್ಟೇ ಅಲ್ಲ, ನಿರಂತರ 32 ಗಂಟೆಗಳ ಕಾಲ ಹಸಿವಿನಿಂದ ಬಳಲಿದ ಇವರಂತಹ ಹಲವರನ್ನು ಪ್ರಾಣಿಗಳಂತೆ ಬಸ್ಸಿನಲ್ಲಿ ತುರುಕಿ, 'ನಿಮಗೆಂದೇ ಕ್ಯಾಂಪ್ ಇದೆ, ಅಲ್ಲಿ ಊಟವಿದೆ' ಎಂದು ಹಸಿ ಹಸಿ ಸುಳ್ಳು ಹೇಳಿ, ಸಾವಿರಾರು ಜನರಿರುವ ಸ್ಟೇಡಿಯಂನಲ್ಲಿ ಕುರಿ ಮಂದೆಯಂತೆ ಇರಿಸಲಾಗುತ್ತದೆ. ಈ ಸನ್ನಿವೇಶಗಳನ್ನು ಕಲ್ಪಿಸಿಕೊಳ್ಳುವಾಗಲೇ ಕರುಳು ಚುರುಕ್ ಎನ್ನುತ್ತದೆ. ಪಂಕ್ಚರ್‌ವಾಲಾರನ್ನು ಅಡಿಕೊಳ್ಳುವ ನಮ್ಮ ಯೋಗ್ಯತೆ ಈ ಮಟ್ಟಕ್ಕೆ ಕುಸಿದು ಹೋಯಿತಲ್ಲವೇ? ಈ ಮದ ಎಲ್ಲಿಂದ ಹುಟ್ಟಿಕೊಂಡಿತು? ಇವರನ್ನೆಲ್ಲಾ ಬಡವರನ್ನಾಗಿಸಿ, ಕೆಲವರನ್ನೇ ಶ್ರೀಮಂತರಾಗಿಸಿದ ನಮ್ಮ ಆರ್ಥಿಕತೆಯ ಹುಸಿಯಲ್ಲಿ ಹುಟ್ಟಿಕೊಂಡಿತಲ್ಲವೇ?

'ಆಕ್ಸ್‌ಫ್ಯಾಮ್' ಸಮೀಕ್ಷಾ ವರದಿಯ ಪ್ರಕಾರ, ಎರಡು ವರ್ಷದ ಕೋವಿಡ್ ಅವಧಿಯಲ್ಲಿ ಶತಕೋಟ್ಯಧಿಪತಿಗಳ ಸಂಪತ್ತು ಎರಡು ಪಟ್ಟಿಗಿಂತ ಹೆಚ್ಚಾಗಿದೆ. ಅದೇ ಹೊತ್ತಿನಲ್ಲಿ ಜನಸಾಮಾನ್ಯರ ಬಡತನವೂ ಹೆಚ್ಚಾಗಿದೆ. 10% ಜನರ ಬಳಿ ದೇಶದ ಒಟ್ಟು ಸಂಪತ್ತಿನ 45% ಸೇರಿಕೊಂಡರೆ, 50% ಜನರ ಬಳಿ ಕೇವಲ 6% ಸಂಪತ್ತಿದೆ. ದೇಶದ 55.5 ಕೋಟಿ ಜನರ ಆದಾಯವನ್ನು ಒಟ್ಟುಗೂಡಿಸಿದರೆ ಸಿಗುವ ಸಂಪತ್ತು, ನಮ್ಮ ದೇಶದ ಕೇವಲ 98 ಜನ ಶ್ರೀಮಂತರ ಹತ್ತಿರ ಇದೆ! ಈ ಬೆಳವಣಿಗೆಯು ಮರಳಿ ಪ್ರಭುಗಳ ಪ್ರಭುತ್ವದೆಡೆಗೆ ಒಯ್ಯುವುದರ ಸಂಕೇತ.

ಹೀಗಾಗಿ, ಈಗ ಬಡತನದ ಹಂಚಿಕೆ ಆಗಬೇಕಿದೆ. ಜನರ ಶ್ರಮದ ಸಂಪತ್ತು ಕೆಲವೇ ವ್ಯಕ್ತಿಗಳಲ್ಲಿ ಅಡಗಿ ಕುಳಿತು ಕೊಳ್ಳುವುದಲ್ಲ, ಅದು ದೇಶದೆಲ್ಲೆಡೆ ಜನರೆಲ್ಲರ ಮೂಲ ಸೌಲಭ್ಯಗಳಲ್ಲಿ ಹಂಚಿಹೋಗಬೇಕು. ಸಿರಿವಂತಿಕೆಯು ಬಡತನದಲ್ಲೂ ಬಡತನವು ಸಿರಿವಂತಿಕೆಯಲ್ಲೂ ಕರಗಿ ಸಮತೆ ಬೆಳೆಯಬೇಕು. ಹಾಗಿದ್ದಲ್ಲಿ ಮಾತ್ರ ಅದು ಬಲವಾಗಿ ದೇಶದ ಭದ್ರನೆಲೆಯಾಗಬಲ್ಲದು. ಇದು ಕೂಡಾ ನಮ್ಮ ನೆಲದಲ್ಲೇ ಇರುವ ತತ್ವ. ಆದರೆ ಕ್ವಚಿತ್ತಾಗಿ ಆಚರಣೆಯಲ್ಲಿರುವ ತತ್ವ. ಸಿಖ್ ಪಂಥವು ಆದಾಯದ ಒಂದು ಭಾಗವನ್ನು ಇಲ್ಲದವರಿಗೆ ಹಂಚಲು ಹೇಳುತ್ತದೆ. ಇದರ ವ್ಯಕ್ತರೂಪ ಅವರ ಸಾಮೂಹಿಕ ಅಡುಗೆಮನೆಯಾದ ಲಂಗರ್‌ಗಳು. ಶರಣರ ದಾಸೋಹದಂತೆ ಇದು. ಈಚಿನ ರೈತ ಚಳವಳಿಯಲ್ಲಿ ಇದು ವಹಿಸಿದ ಅಮೋಘ ಪಾತ್ರ ಎಚ್.ಆರ್. ನವೀನ್ ಕುಮಾರ್ ಅವರ 'ಕದನ ಕಣ' ಪುಸ್ತಕದಲ್ಲಿ ದಾಖಲಾಗಿದೆ. ಜಾತಿ, ಧರ್ಮದ ಭೇದವಿಲ್ಲದೆ, ಪ್ರೀತಿ, ಸಹನೆ, ಸೌಹಾರ್ದವನ್ನು ಊಟದಂತೆಯೇ ಹಂಚಿದ ಅವರು, ಚಳವಳಿಯನ್ನು ಸುವ್ಯವಸ್ಥಿತ ಪ್ರೀತಿಯ ಹಕ್ಕೊತ್ತಾಯವಾಗಿಸಿದರು. ಇದು ಸಾಧ್ಯತೆಯ ಒಂದು ಮಾದರಿ.

ಮನಸ್ಸುಗಳನ್ನು ಬರಡಾಗಿಸಿಕೊಂಡು, ಬಡವರ ತುತ್ತು ಕಿತ್ತುಕೊಂಡು ಮೆರೆವವರಿಗೂ, ಅವರನ್ನು ಮಾದರಿಯಾಗಿಸುವವರಿಗೂ, ಕನಿಷ್ಠ ನಾಚಿಕೆಯನ್ನಾದರೂ ಹುಟ್ಟಿಸುವನೇ ಸಂಗಯ್ಯ?

ಚುರುಮುರಿ

ಎಂಟನೇ ಅದ್ಭುತ

• ಸುಮಂಗಲಾ

'ಖಾನಾಪುರದಾಗೆ ಮರಾಠಿವಳಗೂ ಬೋರ್ಡು ಎಲ್ಲ ಬರುಸ್ರೀ, ಇಲ್ಲೀ ಮಂದಿ ಕನ್ನಡ ಕಲಿಯೂತನಾ ಎಲ್ಲಾನೂ ಮರಾಠಿವಳಗನೂ ಇರಲಿ ಅಂತ ಅಲ್ಲೀ ಶಾಸಕಿ ಹೇಳ್ಯಾರಂತ. ಬರೋಬ್ಬರಿ ಅದ. ಹಂಗಾರೆ ಇನ್ನು ಬೆಂಗಳೂರಿನಾಗೆ ಎಲ್ಲ ಫಲಕನೂ ಹಿಂದಿ, ತಮಿಳು, ತೆಲುಗಿನಾಗೂ ಬರೆಸಬೇಕಾಗತೈತಿ, ಹೌದಿಲ್ಲೋ?' ಬೆಕ್ಕಣ್ಣ ಬಲು ಗಂಭೀರವಾಗಿ ಕೇಳಿತು.

'ನಮ್ಮ ದೇಶದಾಗಿರೋ 4,000ಕ್ಕೂ ಹೆಚ್ಚು ಭಾಷೆಗಳಿಗೆ ಸಂಸ್ಕೃತವೇ ಮಾತೃಸ್ಥಾನದಲ್ಲಿದೆ ಅಂತ ಉನ್ನತ ಶಿಕ್ಷಣ ಸಚಿವರು ಹೇಳ್ಯಾರೆ, ಹಿಂಗಾಗಿ ಬೋರ್ಡಿನಾಗೆ ಸಂಸ್ಕೃತಕ್ಕೂ ಜಾಗ ಬೇಕು' ಎಂದು ನಾನು ನಕ್ಕೆ.

'ಅಹಾ... ಅದ್ಭುತ ಆಲೋಚನೆ' ಎಂದು ತಿವಿದ ಬೆಕ್ಕಣ್ಣ, 'ಅದ್ಸರಿ, ಪ್ರಪಂಚದಾಗೆ ಒಟ್ ಎಷ್ಟು ಅದ್ಭುತ ಅದಾವು' ಎಂದು ಕೇಳಿತು. ನನಗೆ ಬಾಯಿ ತೆರೆಯುವುದಕ್ಕೂ ಬಿಡದೆ ಮುಂದುವರಿಸಿತು, 'ಏಳೇ ಹೌದಿಲ್ಲೋ... ಈಗ ಹೇಳು, ಎಂಟನೇ ಅದ್ಭುತ ಯಾವುದು?'

'ಬೆಳಗಾವಿ ಕರ್ನಾಟಕದಾಗೆ ಇರಲಿ, ನಾವ್ವೂ-ನೀವ್ವೂ ಭಾಯಿಭಾಯಿ ಅಂತ ಎಂಇಎಸ್ ಹೇಳಿದ್ರ ಅದ್ ಎಂಟನೇ ಅದ್ಭುತ ಆಗತೈತಿ'.

'ಅದ್ ಎಂದೂ ಆಗಂಗಿಲ್ಲ. ಬ್ಯಾರೇದು ಹೇಳು'.

'ಜಿಗಿತಶೂರ ರಾಜಕಾರಣಿಗಳು ಟಿಕೆಟ್ ಕೊಡಲಿಲ್ಲ ಅಂತಲೋ ಇನ್ನೇನೋ ಕ್ಯಾತೆ ತೆಗೆದು, ಬ್ಯಾರೆ ಪಕ್ಷಕ್ಕೆ ಹಾರದೇ ಅವರವರ ಪಕ್ಷದಲ್ಲೇ ಉಳಿದರೆ, ಅದು ಎಂಟನೇ ಅದ್ಭುತ'.

'ಪಕ್ಷದಿಂದ ಪಕ್ಷಕ್ಕೆ ಹಾರಲಿಲ್ಲ ಅಂದ್ರ ಅವ್ರು ಅದ್ಹೆಂಗ ರಾಜಕಾರಣಿ ಆಗತಾರ? ಎಂಟನೇ ಅದ್ಭುತ ಆಗಲಿಕ್ಕೆ ಯೋಗ್ಯ ಇಲ್ಲ ಇದು... ಬ್ಯಾರೆ ಹೇಳು' ಮತ್ತೆ ಛೇಡಿಸಿತು.

'ಗೋದಿ ಮೀಡಿಯಾಗಳು ಗುರುಭಜನೆ ನಿಲ್ಲಿಸಿದರೆ ಅದೇ ಎಂಟನೇ ಅದ್ಭುತ'.

'ಗುರುಭಜನೆ ನಿಲ್ಲಿಸಿದರೆ ಗೋದಿ ಮೀಡಿಯಾಗಳಿಗೆ ಉಸಿರು ನಿಲ್ಲತದ. ನೀ ಸೋತೆ ಬಿಡು. ಕೇಳಿಲ್ಲಿ... ಕಮಲಕ್ಕನ ಮನಿವಳಗಿರೋ ಜಾರಕಿಹೊಳಿ ಸಹೋದರ ವಾಪಸು ಕೈಪಕ್ಷಕ್ಕೆ ಬಂದ್ರೆ ಅದೇ ಎಂಟನೇ ಅದ್ಭುತ ಅಂತೆ. ಇವ್ಯಾವೂ ಆಗಂಗಿಲ್ಲ, ಹಂಗಾಗಿ ವಿಶ್ವದಾಗೆ ಏಳೇ ಅದ್ಭುತ ಉಳಿದಾವು' ಬೆಕ್ಕಣ್ಣ ಪಕಪಕನೆ ನಕ್ಕಿತು.

ಸಂಗತ

ನೆಟ್‌ವರ್ಕ್ ಗಲಿಬಿಲಿಗೊಂಡೀತು!

ಈಗ ಕಾಲಿಟ್ಟ ಕಡೆಯಲ್ಲೆಲ್ಲ ಉದಾತ್ತ ಚಿಂತನೆಗಳೇ. ಆದರೆ ಅದರಂತೆ ನಡೆಯುವವರು ಯಾರು, ಎಷ್ಟು ಮಂದಿ?

• ಸದಾಶಿವ್ ಸೊರಟೂರು

'ಸರಳತೆ ಎಂಬುದು ಎಷ್ಟೊಂದು ಸುಂದರ! ಅದೇ ನಮ್ಮ ಪಾಲಿನ ಆಭರಣವೂ ಹೌದು' ಎಂದು ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ ಬರೆದುಕೊಂಡಿದ್ದ, ನನಗೆ ಅಗ್ದಿ ಗೊತ್ತಿರುವ ಗೆಳತಿಯ ಆ ಸಾಲುಗಳನ್ನು ಓದಿ ಒಂದು ಕ್ಷಣ ದಂಗಾದೆ. ಅವರ ಬಳಿ ಎರಡು ಕಾರುಗಳಿವೆ, ದೆವ್ವದಂಥ ಮನೆಯಿದೆ, ಸಮಾರಂಭಕ್ಕೆ ಹೊರಟು ನಿಂತರೆ ಅವರು ತೊಡುವ ಬೆಲೆಬಾಳುವ ಬಟ್ಟೆ ಮತ್ತು ಆಭರಣಗಳು ಕಣ್ಣುಕುಕ್ಕುವಂತಿರುತ್ತವೆ. ಬಿಡಿ, ಅದು ಅವರ ಶ್ರೀಮಂತಿಕೆ. ನನ್ನ ಪ್ರಶ್ನೆ ಅದಲ್ಲ, ಅವರು ಹಾಕಿಕೊಂಡ ಸ್ಟೇಟಸ್‌ಗೂ ಬದುಕುತ್ತಿರುವ ರೀತಿಗೂ ಒಂದಿಂಚಾದರೂ ಸಂಬಂಧ ಬೇಡವೇ?

ಕೈಯಲ್ಲೊಂದು ಮೊಬೈಲ್, ಅದಕ್ಕೆ ಇಂಟರ್ನೆಟ್, ಒಂದು ವಾಟ್ಸ್‌ಆ್ಯಪ್ ಖಾತೆ, ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಂ ಇದ್ದರೆ ಮುಗಿಯಿತು, ಕ್ಷಣಮಾತ್ರದಲ್ಲಿ ಅವನೊಬ್ಬ ಜ್ಞಾನಿಯಾಗಿ ರೂಪುಗೊಳ್ಳುತ್ತಾನೆ, ಅನುಭವಿಯಾಗುತ್ತಾನೆ, ಸಮಾಜ ಸುಧಾರಕನಾಗುತ್ತಾನೆ, ಪರಿಸರಪ್ರೇಮಿ ಆಗುತ್ತಾನೆ, ಸಲಹೆ ಕೊಡುವ ಮಾರ್ಗದರ್ಶಕನೂ ತತ್ವಜ್ಞಾನಿಯೂ ಆಗುತ್ತಾನೆ. ದೊಡ್ಡ ದೊಡ್ಡ ಹೇಳಿಕೆಗಳಿಂದ, ಸಮಾಜ ಸುಧಾರಣೆಯ ಸಲಹೆಗಳಿಂದ, ತಾತ್ವಿಕ ಮಾತುಗಳಿಂದ, ಘೋಷಣೆಗಳಿಂದ ಸ್ಟೇಟಸ್‌ಗಳು, ಟೈಮ್‌ಲೈನ್‌ಗಳು ತುಂಬಿ ತುಳುಕುತ್ತವೆ. ಇಂತಹ ವಿಚಾರಗಳ ನೂಕುನುಗ್ಗಲಿಗೆ ನೆಟ್‌ವರ್ಕ್ ಕೂಡ ಗಲಿಬಿಲಿಗೊಳ್ಳುತ್ತದೆ.

'ಹಸಿರೇ ಉಸಿರು' ಎಂದು ಬರೆದುಕೊಂಡವನು ಒಂದೂ ಗಿಡ ನೆಟ್ಟಿರುವುದಿಲ್ಲ, ತಂದೆ-ತಾಯಿ ದೇವರು ಎನ್ನುವ ಭಾವನಾತ್ಮಕ ವಿಡಿಯೊ ಹಾಕಿಕೊಂಡವನು ವರ್ಷವಾದರೂ ಅವರನ್ನು ನೋಡಲು ಹೋಗಿರುವುದಿಲ್ಲ, ಪ್ರಾಮಾಣಿಕತೆಯ ಬಗ್ಗೆ ಕವನ ಬರೆದುಕೊಂಡು ಲೈಕು ಎಣಿಸುವವನು ಮಹಾನ್ ಸುಳ್ಳುಗಾರ, 'ಸರ್ಕಾರಿ ಶಾಲೆ ನಮ್ಮ ಹೆಮ್ಮೆ' ಎಂದವನ ಮಕ್ಕಳು ಖಾಸಗಿ ಶಾಲೆಯ ವಿದ್ಯಾರ್ಥಿಗಳು, ಮಹಿಳೆಯರ ಬಗ್ಗೆ ಗೌರವದ ಪೋಸ್ಟ್ ಬರೆದುಕೊಂಡವ ಹೆಂಡತಿಯನ್ನು ಮನೆಯೊಳಗೆ ಕೂಡಿಹಾಕಿ ಕೆಲಸಕ್ಕೆ ಹೋಗುತ್ತಾನೆ, 'ಸೂಪರ್ ಸಿಸ್ಟರ್' ಅಂತ ಕಮೆಂಟು ಹಾಕಿದವನೇ ಇನ್‌ಬಾಕ್ಸಿನಲ್ಲಿ ಬಂದು 'ಐ ಲವ್ ಯೂ' ಅಂತಾನೆ, ರುಚಿಯ ಬಗ್ಗೆ ವ್ಯಾಖ್ಯಾನ ಬರೆಯುವ ಹುಡುಗಿಗೆ ಅಸಲಿಗೆ ಅನ್ನ ಕೂಡ ಮಾಡಲು ಬರುವುದಿಲ್ಲ... ಇವು ಹೊಸ ಬದುಕು ತಂದೊಡ್ಡಿರುವ ಬದುಕಿನ ವಿರೋಧಾಭಾಸಗಳು. ಯಾರು ಹೇಗೆ ಎಂಬುದನ್ನು ಅರ್ಥ ಮಾಡಿಕೊಳ್ಳಲಾಗದಷ್ಟು ಜಟಿಲವಾಗುತ್ತಿದೆ ಜಗತ್ತು ಈಗ.

'ಬೇಸಿಗೆಕಾಲ ಬಂದಾಗ ಬಾಲ್ಕನಿಗಳಲ್ಲಿ ಪಕ್ಷಿಗಳಿಗೆ ನೀರಿಡಿ' ಎಂಬುದೊಂದು ಉತ್ತಮ ಸಲಹೆ. ವಾಟ್ಸ್‌ಆ್ಯಪ್‌ನಲ್ಲಿ ಬರುವ ಇಂತಹ ಸಂದೇಶವನ್ನು ಓದಿ 'ವಾಹ್ ಎಷ್ಟೊಂದು ಒಳ್ಳೆಯ ವಿಚಾರ' ಎಂದುಕೊಂಡು ನೂರು ಜನಕ್ಕೆ ಕಳುಹಿಸುತ್ತೇವೆ. ಅವರು ಇನ್ನೂ ನೂರು ಜನಕ್ಕೆ ಕಳುಹಿಸುತ್ತಾರೆ. ಅರ್ಧ ಗಂಟೆಯಲ್ಲಿ ಆ ಸಂದೇಶ ಲಕ್ಷಾಂತರ ಜನರನ್ನು ಮುಟ್ಟುತ್ತದೆ. ಅವರಲ್ಲಿ ಒಬ್ಬನೇ ಒಬ್ಬ ಪಕ್ಷಿಗಳಿಗೆ ನೀರಿಟ್ಟರೆ ಪುಣ್ಯ. ಹಾಗೆ ಸಂದೇಶವನ್ನು ಹಂಚಿದ ಆ ಸಾವಿರಾರು ಜನ 'ನಾನೊಂದು ಮಹಾನ್ ಕೆಲಸ ಮಾಡಿದೆ, ಈ ಪಕ್ಷಿಗಳಿಗೆ ಮಹಾನ್ ಉಪಕಾರ ಮಾಡಿದೆ' ಎಂದುಕೊಂಡು ಬೀಗುತ್ತಾರೆ. ಸಂದೇಶ ಕಳುಹಿಸಿದ್ದೇ ಅವರ ಮಹಾನ್ ಕೆಲಸ' ಎಂದು ಕೆಲವು ದಿನಗಳ ಹಿಂದಷ್ಟೇ ಜಯಂತ ಕಾಯ್ಕಿಣಿ ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು.

ಸಮಸ್ಯೆ ಇರುವುದು ಚಿಂತನೆಗಳಲ್ಲಿ ಅಲ್ಲ, ಒಳ್ಳೆಯ ವಿಚಾರಗಳಲ್ಲಿ ಅಲ್ಲ, ಅತ್ಯುತ್ತಮ ಸಲಹೆಗಳಲ್ಲೂ ಅಲ್ಲ, ಉತ್ತಮ ಭಾಷಣಗಳಲ್ಲೂ ಅಲ್ಲ, ಅನುಭವದ ಮಾತುಗಳಲ್ಲೂ ಅಲ್ಲ. ಅವೆಲ್ಲವೂ ಧಾರಾಳವಾಗಿಯೇ ಸಿಗುತ್ತವೆ. ಮೊಬೈಲ್ ತೆರೆದರೆ ರಾಶಿಗಟ್ಟಲೆ ನಿಮಗೆ ಎದುರಾಗುತ್ತವೆ. ನಿಜವಾದ ಸಮಸ್ಯೆ ಇರುವುದು ಅದರ ಅನುಷ್ಠಾನದಲ್ಲಿ. 'ಜಗತ್ತಿನ ಎಲ್ಲಾ ಒಳ್ಳೆಯ ವಿಚಾರಗಳನ್ನು ಈಗಾಗಲೇ ಹೇಳಿ ಆಗಿದೆ, ಉಳಿದಿರುವುದು ಅದನ್ನು ಅನುಸರಿಸುವ ವಿಚಾರ ಮಾತ್ರ' ಎಂದು ದಾರ್ಶನಿಕರೊಬ್ಬರು ಹೇಳಿದ ಮಾತು ಇಲ್ಲಿ ನೆನಪಾಗುತ್ತಿದೆ.

ಎಲ್ಲರೂ ಹೇಳುವವರೇ ಆದರೆ ಅದರಂತೆ ನಡೆಯುವವರು ಯಾರು? 'ಉದಾತ್ತ ಚಿಂತನೆಗಳು ನಮಗೆ ಎಲ್ಲಾ ಕಡೆಯಿಂದ ಬರಲಿ' ಎಂಬ ಮಾತಿದೆ. ಈಗ ಕಾಲಿಟ್ಟ ಕಡೆಯಲ್ಲೆಲ್ಲ ಉದಾತ್ತ ಚಿಂತನೆಗಳೇ. ಅವುಗಳಿಗೆ ಬರವೆಂಬುದೇ ಇಲ್ಲ. ಹಾಗಿದ್ದಮೇಲೆ ಸಮಾಜ ಈಗ ಹೆಚ್ಚು ಸುಧಾರಿಸಬೇಕಿತ್ತು. ಆದರೆ ಮೊದಲಿಗಿಂತ ಹೆಚ್ಚು ದಾರಿ ತಪ್ಪಿರುವುದು ಕಣ್ಣ ಮುಂದೆ ಸ್ಪಷ್ಟವಿದೆ.

ಒಳ್ಳೆಯ ವಿಚಾರವೊಂದು ಮೊಬೈಲ್ ಸ್ಕ್ರೀನಿನ ಮೇಲೆ ಕಾಣಿಸಿದಾಗ ಅದನ್ನು ಮೆಚ್ಚಿ ಒಂದು ಲೈಕು, ಇಲ್ಲವೆ ಕಮೆಂಟು ಬರೆದು, ಹೆಚ್ಚೆಂದರೆ ಒಂದು ಶೇರ್ ಮಾಡಿ ಆ ವಿಚಾರಕ್ಕೆ ಅಲ್ಲಿಯೇ ತಿಲಾಂಜಲಿ ಬಿಟ್ಟು ಮುಂದೆ ಹೋಗುತ್ತೇವೆ. ಇಂತಹ ವಿಚಾರಗಳಿಗೆ ಲಕ್ಷಲಕ್ಷ ಲೈಕುಗಳು ಸಿಗಬಹುದು, ಸಾವಿರಾರು ಜನ ಅದನ್ನು ಶೇರ್ ಮಾಡಬಹುದು, ಲೆಕ್ಕವಿಲ್ಲದಷ್ಟು ಕಮೆಂಟುಗಳು ಸಿಗಬಹುದು. ಅದು ಮುಖ್ಯವಲ್ಲ. ಒಬ್ಬನೇ ಒಬ್ಬನ ಮನಸ್ಸಿನಲ್ಲಿ ಒಂದು ಅರಿವಿನ ಬೀಜ ಮೊಳೆತರೆ ಅದಲ್ಲವೇ ಸಾರ್ಥಕತೆ? ಅಂತಹ ಒಂದು ಮನಃಸ್ಥಿತಿಯನ್ನು ಸಜ್ಜುಗೊಳಿಸುವುದು ಹೇಗೆ? ಬರೀ ತೋರ್ಪಡಿಕೆಯನ್ನೇ ಹಾಸಿ ಹೊದ್ದು ಮಲಗಿರುವಾಗ ನೈಜತೆಯೊಂದು ಜೊತೆಯಾಗುವುದು ಯಾವಾಗ?

ವಾಚಕರ ವಾಣಿ

ರಂಗೋಲಿಗಿಂತ ಶ್ರಮದಾನ ಲೇಸು

ಬೆಂಗಳೂರಿನ ವಿವಿಧ ವಾರ್ಡ್‌ಗಳಲ್ಲಿ ರಸ್ತೆ ಗುಂಡಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸುವ ಸಲುವಾಗಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಗುಂಡಿಗಳ ಸುತ್ತ ರಂಗೋಲಿ ಬಿಡಿಸುವ ಮೂಲಕ ಪ್ರತಿಭಟಿಸಿದ್ದಾರೆ (ಪ್ರ.ವಾ., ಜ. 30). ರಸ್ತೆ ಸುಸ್ಥಿರತೆಗೆ ಬಿಬಿಎಂಪಿ ಶೀಘ್ರ ಕ್ರಮ ಕೈಗೊಳ್ಳಲಿ. ಆದರೆ ಹೀಗೊಂದು ಅನಿಸಿಕೆ. ಗುಂಡಿಗಳ ಸುತ್ತ ರಂಗೋಲಿ ಬಿಡಿಸಲು ಪಟ್ಟ ಶ್ರಮವನ್ನು ಗುಂಡಿಗಳನ್ನೇ ಅಷ್ಟಿಷ್ಟು ಕಲ್ಲು, ಮಣ್ಣಿನಿಂದ ಮುಚ್ಚಲು ವಿನಿಯೋಗಿಸಬಹುದಿತ್ತು. ಕಾಮಗಾರಿ ಆರಂಭಿಸುವ ತನಕವಾದರೂ ತತ್ಕಾಲಕ್ಕೆ ಆಕ್ರೋಶ ಜನೋಪಯುಕ್ತವಾಗುತ್ತಿತ್ತು ಹಾಗೂ ಸಾತ್ವಿಕವಾಗುತ್ತಿತ್ತು. ಮಾನವ ಸಂಪನ್ಮೂಲ ರಚನಾತ್ಮಕವಾಗಿ ಬಳಕೆಯಾಯಿತಲ್ಲ ಎನ್ನುವ ಸಮಾಧಾನವೂ ಪ್ರತಿಭಟಿಸುವವರಿಗೆ ಆಗುತ್ತಿತ್ತು.

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಪ್ರಚೋದನಕಾರಿ ಹೇಳಿಕೆ ಸಾಕುಮಾಡಿ

ನರಗುಂದದಲ್ಲಿ ಕೋಮು ದ್ವೇಷಕ್ಕೆ ಮುಸ್ಲಿಂ ಯುವಕನ ಹತ್ಯೆಯಾಗಿದೆ. ಇದರ ಸಂಬಂಧ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ. ಇತ್ತ ಶ್ರೀರಾಮಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಅವರು 'ಈ ಘಟನೆ ಆಕಸ್ಮಿಕವಾದುದು, ಇನ್ನು ಮುಂದೆ ಯಾರನ್ನಾದರೂ ಬಂಧಿಸಿದರೆ ನರಗುಂದ ಹೊತ್ತಿ ಉರಿಯುತ್ತದೆ' ಎಂದು ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ. ಒಬ್ಬ ಹಿಂದೂವಿನ ಕೊಲೆಯಾಗಿದ್ದರೆ ಮುತಾಲಿಕ್ ಇದೇ ರೀತಿ ಹೇಳಿಕೆ ನೀಡುತ್ತಿದ್ದರೇ? ಕೊಲೆ ಹೇಗೆ ಮಾಡಿದರೂ ಅದು ಅಪರಾಧವಾಗುತ್ತದೆ. ಅದು ಆಕಸ್ಮಿಕವೋ ಉದ್ದೇಶ ಪೂರ್ವಕವೋ ಆಗಿರಬಹುದು. ಅಪರಾಧ ಮಾಡಿದವರಿಗೆ ಶಿಕ್ಷೆಯಾಗಲೇಬೇಕು. ಅದನ್ನು ಪೊಲೀಸರು ನಿಷ್ಠೆಯಿಂದ ಮಾಡಲಿ. ಪೊಲೀಸರಿಗೆ ಗೊಡ್ಡು ಬೆದರಿಕೆ ಹಾಕುವುದನ್ನು ಮುತಾಲಿಕ್ ಅವರು ಬಿಡಬೇಕು. ಮೊದಲೇ ನರಗುಂದ ನರಮೇಧದಿಂದ ಬಳಲಿ ಬೂದಿ ಮುಚ್ಚಿದ ಕೆಂಡದಂತಾಗಿದೆ. ಅದಕ್ಕೆ ತುಪ್ಪ ಸುರಿಯುವ ಕೆಲಸವನ್ನು ಮಾಡುವವರು ಆತ್ಮಾವಲೋಕನ ಮಾಡಿಕೊಳ್ಳಲಿ. ಭಾವನೆ ಕೆರಳಿಸಿ, ದ್ವೇಷ ಮೂಡಿಸುವಂತಹ ಹೇಳಿಕೆಯನ್ನು ಯಾರೇ ನೀಡಲಿ ಅವರಿಗೂ ಶಿಕ್ಷೆ ವಿಧಿಸಬೇಕು.`

ರಾಜು ಬಿ. ಲಕ್ಕಂಪುರ, ಜಗಳೂರು

ಗೋಶಾಲೆಗೆ ಸಿಗಲಿ ಆದ್ಯತೆ

ಮುಖ್ಯಮಂತ್ರಿ ತಮ್ಮ ಹುಟ್ಟುಹಬ್ಬದ ಅಂಗವಾಗಿ 11 ಗೋವುಗಳನ್ನು ದತ್ತು ಪಡೆದ ವಿಷಯ ಬಹಳ ಸಂತಸದಾಯಕವಾದದ್ದು. ನಮ್ಮಲ್ಲಿ ಬರಗಾಲ ಬಂದರೆ ಮಾತ್ರ ಅದೂ ತಾತ್ಕಾಲಿಕವಾಗಿ ಗೋಶಾಲೆಗಳನ್ನು ತೆರೆಯಲಾಗುತ್ತದೆ. ಆದರೆ ಗೋವುಗಳ ಬಗ್ಗೆ ಮುಖ್ಯಮಂತ್ರಿ ವಹಿಸುತ್ತಿರುವ ಕಾಳಜಿಯನ್ನು ಗಮನಿಸಿದರೆ, ಶಾಶ್ವತವಾಗಿ ಗೋಶಾಲೆಗಳನ್ನು ತೆರೆಯುವ ಮೂಲಕ ಅವುಗಳ ರಕ್ಷಣೆಗೆ ಮುಂದಾಗುತ್ತಾರೆ ಎಂಬ ಆಶಾಭಾವನೆ ನಮ್ಮಲ್ಲಿ ಮೂಡಿದೆ. ಗೋಶಾಲೆಗಳು ಹೆಸರಿಗಷ್ಟೇ ಎಂಬಂತೆ ಆಗಬಾರದು. ಪ್ರತೀ ತಾಲ್ಲೂಕಿನಲ್ಲಿ ಗೋಶಾಲೆ ತೆರೆದು, ಮೇವು, ನೀರು ಒಳಗೊಂಡಂತೆ ಅಗತ್ಯ ಸೌಲಭ್ಯ ಕಲ್ಪಿಸಬೇಕು. ನಗರ ಪ್ರದೇಶಗಳಲ್ಲಿ ರಸ್ತೆಯಲ್ಲಿ ಗೋವುಗಳು ಅಡ್ಡಾದಿಡ್ಡಿ ಓಡಾಡುವುದನ್ನು ಕಂಡಾಗ ಮನಸ್ಸಿಗೆ ಪಿಚ್ಚೆನಿಸುತ್ತದೆ. ಮೇವು, ನೀರಿನ ಕೊರತೆಯಿಂದ ಗೋವುಗಳು ಬಳಲುವಂತಾಗಬಾರದು.

ಶ್ರೀಕಾಂತ ಸುತಾರ್, ವಿಜಯಪುರ

ಕಸಾಪ: ಬೇಕಿರುವುದು ಜನಪ್ರಿಯ ಘೋಷಣೆಗಳಲ್ಲ

'ಕಸಾಪ: ನಿರೀಕ್ಷೆಗಳ ಭಾರಕ್ಕೆ ಕುಸಿದೀತು!' ಎಂಬ ರಾ.ನಂ.ಚಂದ್ರಶೇಖರ ಅವರ ಲೇಖನದಲ್ಲಿ ಇರುವ ಕಳಕಳಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಗಮನಿಸಿದ್ದಾರೆಂದು ಭಾವಿಸಿದ್ದೇನೆ. ಹಾಗೆಯೇ ನನಗೆ ಬಂದಿರುವ ಅಧ್ಯಕ್ಷರ ಚುನಾವಣಾ ಗೆಲುವಿನ ಮುದ್ರಿತ ಪತ್ರವನ್ನು (ಬಹುಶಃ ಆ ಪತ್ರ ಬಹಳ ಜನರಿಗೆ ಹೋಗಿರಬಹುದು) ಗಮನಿಸಿದಾಗ, ರಾ.ನಂ.ಚಂದ್ರಶೇಖರ ಅವರ ಕಳಕಳಿಯು ಕನ್ನಡ ಸಾಹಿತ್ಯ ಪರಿಷತ್ತಿನ ಜೊತೆ ಸಂಬಂಧವಿರುವ ಎಲ್ಲರ ಕಳಕಳಿಯಾಗಿದೆ ಎನಿಸಿತು.

ಪರಿಷತ್ತಿನ ಅಧ್ಯಕ್ಷ ಸ್ಥಾನ ರಾಜಕೀಯ ವ್ಯವಸ್ಥೆಯದಲ್ಲ. ಅದು ಪೂರ್ಣ ಸಾಹಿತ್ಯ, ಸಂಸ್ಕೃತಿ ಸಂರಕ್ಷಣೆ ಮತ್ತು ಸಂವರ್ಧನೆಯ ಸ್ಥಾನ. ಅದಕ್ಕೆ ಮುಖ್ಯವಾಗಿ ಬೇಕಾದದ್ದು ಅವಸರದ ಜನಪ್ರಿಯ ಘೋಷಣೆಗಳಲ್ಲ, ಪರಿಷತ್ತಿನ ನಿಬಂಧನೆಗೆ ಅನುಗುಣವಾಗಿ ಅದರ ಧ್ಯೇಯೋದ್ದೇಶಗಳ ಸಾರ್ಥಕತೆಗೆ ಬೇಕಾದ ಸಮರ್ಪಣಾಭಾವದ ಸೇವೆ. ಪರಿಷತ್ತಿನ ಘನತೆ- ಗೌರವಗಳಿಗೆ ಭಂಗವುಂಟಾಗದಂತೆ ನೋಡಿಕೊಳ್ಳುವ ಎಚ್ಚರ. ಈ ಹಿನ್ನೆಲೆಯಲ್ಲಿ ರಾ.ನಂ.ಚಂದ್ರಶೇಖರ ಅವರ ಅಭಿಮತವನ್ನು ನಾನು ಒಪ್ಪುತ್ತೇನೆ. ರಾಜಕೀಯದಲ್ಲಿ ಏನೇನೋ ಮಾಡುವುದಾಗಿ ಘೋಷಿಸಿ, ಎಷ್ಟೋ ಜನ ಏನೂ ಮಾಡದೇ ಹೋಗಿದ್ದಾರೆ. ಈಗಿನ ಅಧ್ಯಕ್ಷರು ಹಾಗಾಗದಿರಲಿ.

ಗೊ.ರು.ಚನ್ನಬಸಪ್ಪ, ಬೆಂಗಳೂರು

ರಾಜಕೀಯ ಪಕ್ಷಗಳು ಮಾಡಬೇಕಾದುದು...

ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಕುರಿತು ಚರ್ಚೆ ಆಗಬೇಕು ಎಂದು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಹೇಳಿರುವುದರಲ್ಲಿ ತಪ್ಪಿಲ್ಲ. ಆದರೆ ಅದು ಎಲ್ಲಿ ತಪ್ಪುತ್ತಿದೆ ಎಂಬ ಅವರ ಹೇಳಿಕೆಯಲ್ಲಿ ಗಟ್ಟಿತನ ಇಲ್ಲ. ಚುನಾವಣೆಯಲ್ಲಿ ಗೆಲ್ಲಲು ಎಲ್ಲ ರಾಜಕೀಯ ಪಕ್ಷಗಳು ತಮ್ಮ ತಮ್ಮ ಅಭ್ಯರ್ಥಿಗಳನ್ನು ಜಾತಿ, ತೋಳ್ಬಲ, ಹಣಬಲಗಳ ಹಿನ್ನೆಲೆಯಿಂದಲೇ ಆಯ್ಕೆ ಮಾಡುತ್ತವೆ ವಿನಾ ಪಕ್ಷನಿಷ್ಠೆ, ಸಮಾಜ ಸೇವೆಯನ್ನು ಪರಿಗಣಿಸುವುದಿಲ್ಲ. ಉದಾಹರಣೆಗೆ, ಬೇರೆ ರಾಜ್ಯದ ಉದ್ದಿಮೆದಾರರನ್ನು ರಾಜ್ಯಸಭಾ ಚುನಾವಣೆಗೆ ರಾಜ್ಯದಿಂದ ಸ್ಪರ್ಧಿಸುವಂತೆ ಮಾಡಿದ ಉದಾಹರಣೆ ನಮ್ಮ ಕಣ್ಣಮುಂದೆ ಇರುವಾಗ, ಚುನಾವಣಾ ಸುಧಾರಣೆ ಬಗ್ಗೆ ಮಾತನಾಡುವುದು ಹಾಸ್ಯಾಸ್ಪದವಾದೀತು.

ರಾಜಕೀಯ ಲಾಭಕ್ಕಾಗಿ ಯಾವುದೇ ತತ್ವ, ಸಿದ್ಧಾಂತವಿಲ್ಲದ ವ್ಯಕ್ತಿಗಳನ್ನು ಪಕ್ಷಗಳಿಗೆ ಆಹ್ವಾನಿಸಿ ಇಡೀ ರಾಜಕೀಯ ವ್ಯವಸ್ಥೆ ಜೊತೆಗೆ ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡುವ ಪ್ರವೃತ್ತಿಯನ್ನು ಮೊದಲು ಕೈಬಿಡಬೇಕು. ಚುನಾವಣೆ ಬಂದಾಗ ನಿರ್ದಿಷ್ಟ ಪಕ್ಷವು ಅಧಿಕಾರಕ್ಕೆ ಬರುವ ಮುನ್ಸೂಚನೆ ಪಡೆದು ಪಕ್ಷಾಂತರ ಮಾಡುವ ವ್ಯಕ್ತಿಗಳನ್ನು ಚುನಾವಣೆ ಪ್ರಕ್ರಿಯೆಯಿಂದ ದೂರವಿಡಬೇಕು. ಎಲ್ಲ ರಾಜಕೀಯ ಪಕ್ಷಗಳೂ ಸ್ವಯಂಪ್ರೇರಿತವಾಗಿ ಇಂತಹ ಕ್ರಮಗಳನ್ನು ಕೈಗೊಂಡರೆ ಚುನಾವಣಾ ಸುಧಾರಣೆ ತನ್ನಿಂದ ತಾನೇ ಆಗುತ್ತದೆ. ಅದಿಲ್ಲದೆ ಮತದಾರರ ಆಸೆ ಆಮಿಷಗಳನ್ನೇ ಮುಂದೆಮಾಡಿ, ಚುನಾವಣಾ ವ್ಯವಸ್ಥೆ ಕೆಟ್ಟಿದೆ ಎಂದು ಹೇಳಿದರೆ ಅದಕ್ಕೆ ಅರ್ಥವಿಲ್ಲ.

ವಿ.ಜಿ.ಇನಾಮದಾರ, ಸಾರವಾಡ, ವಿಜಯಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಅಭಿವೃದ್ಧಿಪಡಿಸಿರುವ ಪೆಗಾಸಸ್ ಎಂಬ ಕುತಂತ್ರಾಂಶವು ಕಳೆದ ಒಂದು ವರ್ಷದಿಂದ ಬಾರಿ ಸದ್ದು ಮಾಡುತ್ತಿದೆ. ಭಾರತದಲ್ಲಿಯೂ ಈ ಕುತಂತ್ರಾಂಶ ಬಳಸಿ ರಾಜಕಾರಣಿಗಳು, ಪತ್ರಕರ್ತರು, ಮಾನವ ಹಕ್ಕುಗಳ ಕಾರ್ಯಕರ್ತರು ಮತ್ತು ಇತರರ ಮೇಲೆ ಬೇಹುಗಾರಿಕೆ ನಡೆಸಲಾಗಿದೆ ಎಂಬ ಆರೋಪ ಕಳೆದ ವರ್ಷ ಕೇಳಿ ಬಂದಿತ್ತು. ಪೆಗಾಸಸ್ ಕುತಂತ್ರಾಂಶವನ್ನು ಖರೀದಿಸಿಲ್ಲ ಎಂದು ಕೇಂದ್ರ ಸರ್ಕಾರ ದೃಢವಾಗಿ ಹೇಳಿತ್ತು. ‘ದ ನ್ಯೂಯಾರ್ಕ್ ಟೈಮ್ಸ್’ನಲ್ಲಿ ಇತ್ತೀಚೆಗೆ ಪ್ರಕಟವಾದ ತನಿಖಾ ವರದಿಯು ಭಾರತವು ಕುತಂತ್ರಾಂಶ ಖರೀದಿಸಿದೆ ಎಂದು ಹೇಳಿದೆ. ಹೀಗಾಗಿ, ಪೆಗಾಸಸ್ ಮತ್ತೆ ಮುನ್ನೆಲೆಗೆ ಬಂದಿದೆ

ಪೆಗಾಸಸ್ ಕುತಂತ್ರಾಂಶ

ಇಸ್ರೇಲ್‌ನ ರಾಜತಾಂತ್ರಿಕ ಅಸ್ತ್ರ

ಪ್ರಜಾವಾಣಿ ವಾರ್ತೆ

ಇಸ್ರೇಲ್‌ನ ಪೆಗಾಸಸ್ ಕುತಂತ್ರಾಂಶವು ವಿಶ್ವದ ಅತ್ಯಂತ ಪ್ರಬಲ ಸ್ಪೈವೇರ್ (ಬೇಹುಗಾರಿಕೆ ತಂತ್ರಾಂಶ) ಎಂದು ಪರಿಗಣಿಸಲ್ಪಟ್ಟಿದೆ. ಐಫೋನ್ ಮತ್ತು ಆ್ಯಂಡ್ರಾಯ್ಡ್ ಸ್ಮಾರ್ಟ್‌ಫೋನ್‌ಗಳ ಎನ್‌ಕ್ರಿಪ್ಟ್ ಮಾಡಲಾದ ಸಂವಹನಗಳನ್ನು ಅತ್ಯಂತ ಸಮರ್ಥವಾಗಿ ಭೇದಿಸುವ ಸಾಮರ್ಥ್ಯವನ್ನು ಇದು ಹೊಂದಿದೆ. ಇಸ್ರೇಲ್ ಕಂಪನಿ ಎನ್‌ಎಸ್‌ಒ ಗ್ರೂಪ್ ಇದನ್ನು ಅಭಿವೃದ್ಧಿಪಡಿಸಿದೆ. ಭಯೋತ್ಪಾದಕರು ಮತ್ತು ಮಾದಕವಸ್ತು ಜಾಲದವರನ್ನು ಪತ್ತೆಹಚ್ಚಲು ಪೆಗಾಸಸ್ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿ ಮಾಡಲಾಗಿತ್ತು. ನಂತರ ಮಾನವ ಹಕ್ಕುಗಳ ಕಾರ್ಯಕರ್ತರು, ಪತ್ರಕರ್ತರು ಮತ್ತು ಭಿನ್ನಮತೀಯರ ವಿರುದ್ಧ ಬೇಹುಗಾರಿಕೆಗೆ ಇದನ್ನು ಬಳಸಲಾಯಿತು. ಇದೀಗ ಇಸ್ರೇಲ್ ದೇಶವು ತನ್ನ ರಾಜತಾಂತ್ರಿಕ ಸಂಬಂಧಗಳನ್ನು ಬೆಳೆಸುವ ನಿಟ್ಟಿನಲ್ಲಿ ಈ ಕುತಂತ್ರಾಂಶವನ್ನು ಮುಖ್ಯವಾಗಿ ಬಳಕೆ ಮಾಡಿಕೊಳ್ಳುತ್ತಿದೆ. ಜಾಗತಿಕವಾಗಿ ತನ್ನ ರಾಜತಾಂತ್ರಿಕ ಕೆಲಸಗಳನ್ನು ಸುಲಭ ಮಾಡಿಕೊಳ್ಳಲು ಇಸ್ರೇಲ್ ಇದನ್ನು ಬಳಸುತ್ತಿದೆ.

ಮೊಬೈಲ್ ಸಾಧನಗಳಿಂದ ಮಹತ್ವದ ದತ್ತಾಂಶಗಳನ್ನು ಹೊರತೆಗೆಯುವ ಮತ್ತು ಮೇಲ್ವಿಚಾರಣೆ ಮಾಡುವ ಮೂಲಕ ಇದು ಬೇಹುಗಾರಿಕೆಗೆ ನೆರವಾಗುತ್ತದೆ. ಇದೊಂದು ಸ್ವತಂತ್ರ ಕಾರ್ಯಾಚರಣೆಯಾಗಿದ್ದು, ಗೂಗಲ್ ಅಥವಾ ಆ್ಯಪಲ್‌ನಿಂದ ಪೂರ್ವಾನುಮತಿ ಅನಗತ್ಯ. ಇಸ್ರೇಲ್‌ನ ರಾಷ್ಟ್ರೀಯ ಭದ್ರತಾ ಏಜೆನ್ಸಿಗೆ ಸಮಾನವಾದ ‘ಯುನಿಟ್ 8200’ ಘಟಕದ ತಂತ್ರಜ್ಞರು ಸೇರಿಕೊಂಡು ಖಾಸಗಿ ವಲಯದಲ್ಲಿ ರಹಸ್ಯ ನವೋದ್ಯಮ ಶುರು ಮಾಡಿದರು.

ತನಿಖಾ ಸಂಸ್ಥೆಗಳು ಮಾತ್ರ ಕೋಡಿಂಗ್ ರೂಪದ ಸಂವಹನಗಳನ್ನು ನಿರ್ವಹಿಸುತ್ತಿದ್ದವು. ಆದರೆ ಎನ್‌ಕ್ರಿಪ್ಶನ್ ವ್ಯಾಪಕವಾಗಿ ಲಭ್ಯವಾದ ಬಳಿಕ ಕೋಡಿಂಗ್ ಸಂವಹನವನ್ನು ಪ್ರತಿಬಂಧಿಸಬಹುದಾಗಿತ್ತೇ ವಿನಾ, ಅದು ಏನು ಹೇಳುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಅದು ಸಾಧ್ಯವಾಗಬೇಕಾದರೆ, ಎನ್‌ಕ್ರಿಪ್ಟ್ ಮಾಡುವ ಮೊದಲು ದತ್ತಾಂಶವನ್ನು ಸಂಗ್ರಹಿಸಬೇಕಿತ್ತು. ಈ ಅವಕಾಶವನ್ನು ಬಳಸಿಕೊಂಡು ಹುಟ್ಟಿದ್ದೇ ಎನ್‌ಎಸ್‌ಒ.

ಶಾಲೆವ್ ಹುಲಿಯೊ ಹಾಗೂ ಆತನ ಸ್ನೇಹಿತ ಒಮ್ರಿ ಲವೀ ಪಾಲುದಾರಿಕೆಯಲ್ಲಿ ಕೋಡಿಂಗ್ ನವೋದ್ಯಮ ತೆರೆದರು. ಇಸ್ರೇಲ್ ಸೇನೆ ಹಾಗೂ ಗುಪ್ತಚರ ಸಂಸ್ಥೆಯಾದ ಮೊಸ್ಸಾದ್‌ನಲ್ಲಿ ಕೆಲಸ ಮಾಡುತ್ತಿದ್ದ ನಿವ್ ಕರ್ಮಿ ಗುತ್ತಿಗೆ ತಂದುಕೊಡುವ ಕೆಲಸವನ್ನು ಮಾಡಿದರು. ಈ ಮೂವರ ಹೆಸರಿನ ಮೊದಲ ಅಕ್ಷರಗಳನ್ನು ಸೇರಿಸಿ ‘ಎನ್‌ಎಸ್‌ಒ’ (ನಿವ್, ಶಾಲೆವ್, ಒಮ್ರಿ) ಕಂಪನಿ ಹುಟ್ಟಿತು. 2011ರಲ್ಲಿ ಪೆಗಾಸಸ್‌ನ ಮೊದಲ ಕೋಡಿಂಗ್ ಯಶಸ್ವಿಯಾಯಿತು.

ಕಂಪನಿಯ ವಿವಿಧ ದೇಶಗಳ ಶಾಖೆಗಳಲ್ಲಿ ಈಗ 700 ಜನ ಕೆಲಸ ಮಾಡುತ್ತಿದ್ದಾರೆ. ಹರ್ಜಿಲಿಯಾದಲ್ಲಿ ಕೇಂದ್ರ ಕಚೇರಿಯಿದೆ. ಇಸ್ರೇಲ್‌ನ ಸೇನಾ ಗುಪ್ತಚರ ನಿರ್ದೇಶನಾಲಯ ‘ಎಎಂಎಎನ್’ 8200 ಹೆಸರಿನ ಘಟಕದಲ್ಲಿ ಕೆಲಸ ಮಾಡಿದ ಬಹುತೇಕ ಹಿರಿಯರೇ ಈ ಸಂಸ್ಥೆಯ ತಂತ್ರಜ್ಞರಾಗಿದ್ದಾರೆ. ಇವರಿಗೆ ಸೈಬರ್‌ವೆಪನ್ಸ್ ಪ್ರೋಗ್ರಾಮಿಂಗ್‌ನ ಅತ್ಯಾಧುನಿಕ ವಿಧಾನಗಳಲ್ಲಿ ತರಬೇತಿ ನೀಡಲಾಗುತ್ತದೆ. ಫೋನ್ ಸಾಫ್ಟ್‌ವೇರ್‌ನಲ್ಲಿನ ದೋಷಗಳನ್ನು ಪತ್ತೆಹಚ್ಚಿ, ಅದರಲ್ಲಿ ಪೆಗಾಸಸ್ ಅಳವಡಿಸುವ ವಿಧಾನವನ್ನು ಅವರು ನಿರಂತರವಾಗಿ ಶೋಧಿಸುತ್ತಾರೆ.

ಆರಂಭದಲ್ಲಿ ಪೆಗಾಸಸ್ ಖರೀದಿಗೆ ಹಲವು ದೇಶಗಳು ಹಿಂದೆ ಮುಂದೆ ನೋಡಿದವು. ಹುಲಿಯೊ ಅವರು ಸರ್ಕಾರಗಳ ಈ ಆತಂಕವನ್ನು ದೂರ ಮಾಡಿದರು. ಸರ್ಕಾರಗಳಿಗೆ ಮಾತ್ರವಲ್ಲದೇ, ಕಂಪನಿಗಳು ಹಾಗೂ ವ್ಯಕ್ತಿಗಳಿಗೆ ಅದನ್ನು ಮಾರುವುದಿಲ್ಲ ಎಂಬುದನ್ನು ಅವರು ಮನವರಿಕೆ ಮಾಡಿಕೊಟ್ಟರು.

ಅಮೆರಿಕದ ಫ್ಯಾಂಟಮ್

ದೇಶದ ಜನರ ದೂರವಾಣಿಗಳನ್ನು ಕದ್ದಾಲಿಸುವ ಉದ್ದೇಶದಿಂದ ಅಮೆರಿಕದ ತನಿಖಾ ಸಂಸ್ಥೆಯಾದ ಎಫ್‌ಬಿಐ ಸಾಧಕ ಬಾಧಕಗಳನ್ನು ಪರಿಶೀಲಿಸಿ, 2019ರಲ್ಲಿ ಕುತಂತ್ರಾಂಶವನ್ನು ಖರೀದಿಸಿತು. ಆದರೆ, ಅದನ್ನು ಸ್ಥಳೀಯವಾಗಿ ಬಳಸಿಕೊಳ್ಳಲು ನಿರ್ಧರಿಸಿತು. ಅಮೆರಿಕಕ್ಕಾಗಿ ಫ್ಯಾಂಟಮ್ ಹೆಸರಿನ ಪ್ರತ್ಯೇಕ ಕುತಂತ್ರಾಂಶವನ್ನು ಸೈಬರ್ ಕಂಪನಿ ರೂಪಿಸಿಕೊಟ್ಟಿತು. ಅಮೆರಿಕದ ಯಾವುದೇ ದೂರವಾಣಿಯನ್ನು ಗುರಿಯಾಗಿಸಲು ಎಫ್‌ಬಿಐ ನಿರ್ಧರಿಸಿದರೆ, ಅದನ್ನು ಕ್ಷಣಾರ್ಧದಲ್ಲಿ ಫ್ಯಾಂಟಮ್ ಸಾಧ್ಯವಾಗಿಸಲಿದೆ. ಬೇಹುಗಾರಿಕೆಗೆ ಒಳಪಡುವ ವ್ಯಕ್ತಿಯ ಸ್ಮಾರ್ಟ್‌ಫೋನ್, ಗೂಢಚರ್ಯೆ ನಡೆಸುವ ಅಧಿಕಾರಿಗಳಿಗೆ ಮಾಹಿತಿಯ ಚಿನ್ನದ ಗಣಿಯಾಗಿ ಮಾರ್ಪಾಡಾಗುತ್ತದೆ.

ಸರ್ಕಾರ–ಎನ್‌ಎಸ್‌ಒ ಜುಗಲ್‌ಬಂದಿ

ಇಸ್ರೇಲ್‌ನ ವಿದೇಶಾಂಗ ನೀತಿಯಲ್ಲಿ ಎನ್‌ಎಸ್‌ಒ ಗ್ರೂಪ್ ಮತ್ತು ಅದು ಅಭಿವೃದ್ಧಿಪಡಿಸಿರುವ ಪೆಗಾಸಸ್ ಕುತಂತ್ರಾಂಶಕ್ಕೆ ಮಹತ್ವದ ಪಾತ್ರ ಇದೆ ಎಂಬುದಕ್ಕೆ ಹಲವು ಪುರಾವೆಗಳು ಸಿಗುತ್ತವೆ. ಇಸ್ರೇಲ್ ಸರ್ಕಾರ ಮತ್ತು ಎನ್‌ಎಸ್‌ಒ ಮಧ್ಯೆ ಯಾವ ರೀತಿಯ ಸಂಬಂಧ ಇರಬೇಕು ಎಂಬುದನ್ನು ಬಹಳ ಮೊದಲೇ ಅತ್ಯಂತ ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿತ್ತು. ಪೆಗಾಸಸ್ ಒಂದು ಅಸ್ತ್ರವಾಗಿ ಅಲ್ಲದಿದ್ದರೂ ಇಸ್ರೇಲ್ ವಿದೇಶಾಂಗ ನೀತಿಯ ಆಪ್ತಮಿತ್ರನ ರೀತಿಯಲ್ಲಿ ಇರಬೇಕು ಎಂದು ಮೊದಲೇ ನಿರ್ಧರಿಸಲಾಗಿತ್ತು ಎಂಬುದನ್ನು ‘ದ ನ್ಯೂಯಾರ್ಕ್ ಟೈಮ್ಸ್’ನ (ಎನ್‌ವೈಟಿ) ತನಿಖಾ ವರದಿ ಸ್ಪಷ್ಟವಾಗಿ ಹೇಳುತ್ತದೆ.

ಹಾಲೊಕಾಸ್ಟ್‌ನಲ್ಲಿ ಬದುಕುಳಿದ, ಇಸ್ರೇಲ್‌ನ ಅತ್ಯಂತ ಗೌರವಾನ್ವಿತ ಸೇನಾ ಅಧಿಕಾರಿ ಮೇ. ಜ. ಅವಿಗ್ದರ್ ಬೆನ್ ಗಾಲ್ ಅವರನ್ನು ಎನ್‌ಎಸ್‌ಒ ಗ್ರೂಪ್‌ನ ಅಧ್ಯಕ್ಷನನ್ನಾಗಿ ಮಾಡುವುದರ ಹಿಂದೆಯೂ ಹಲವು ಲೆಕ್ಕಾಚಾರಗಳು ಇದ್ದವು. ಸರ್ಕಾರದ ಜತೆಗೆ ನಿಕಟವಾಗಿ ಕೆಲಸ ಮಾಡುವುದು ಎನ್‌ಎಸ್‌ಒ ಪ್ರಗತಿಗೆ ನಿರ್ಣಾಯಕ ಎಂಬುದು ಬೆನ್ ಗಾಲ್ ಅವರ ನಿಲುವು ಕೂಡ ಆಗಿತ್ತು. ಸರ್ಕಾರದ ಜತೆಗೆ ನಿಕಟವಾಗಿ ಕೆಲಸ ಮಾಡುವುದರಿಂದ ಪೆಗಾಸಸ್ ಕುತಂತ್ರಾಂಶವನ್ನು ಯಾವ ದೇಶಕ್ಕೆ ಮಾರಾಟ ಮಾಡಬಹುದು ಎಂಬುದರ ಮೇಲೆ ಹಲವು ನಿರ್ಬಂಧಗಳು ಉಂಟಾಗಬಹುದು. ಆದರೆ, ಬೇಹುಗಾರಿಕೆಗೆ ಸಂಬಂಧಿಸಿ ಜನರು ಕಂಪನಿಯ ಮೇಲೆ ಮೊಕದ್ದಮೆ ಹೂಡುವುದರಿಂದ ರಕ್ಷಣೆ ದೊರೆಯಬಹುದು ಎಂದು ಬೆನ್ ಗಾಲ್ ಭಾವಿಸಿದ್ದರು.

ಸರ್ಕಾರದ ಜತೆಗಿನ ಸಂಬಂಧದ ಫಲವಾಗಿ ಕೆಲವು ನಿರ್ಬಂಧಗಳನ್ನು ಎನ್‌ಎಸ್‌ಒ ಹಾಕಿಕೊಂಡಿದೆ. ವ್ಯಕ್ತಿಗಳು ಅಥವಾ ಕಂಪನಿಗಳಿಗೆ ಕುತಂತ್ರಾಂಶ ಮಾರಾಟ ಇಲ್ಲ; ಸರ್ಕಾರಗಳಿಗೆ ಮಾತ್ರ ಇವು ಲಭ್ಯ ಎಂಬುದು ಅಂತ ನಿರ್ಬಂಧಗಳಲ್ಲಿ ಒಂದು. ಯಾವುದೇ ಸರ್ಕಾರದ ಪರವಾಗಿ ಎನ್‌ಎಸ್‌ಒ ಕಂಪನಿಯು ಕುತಂತ್ರಾಂಶವನ್ನು ಬಳಸುವುದಿಲ್ಲ. ಇಸ್ರೇಲ್‌ನ ರಕ್ಷಣಾ ರಫ್ತು ನಿಯಂತ್ರಣ ಸಂಸ್ಥೆಯು (ಡಿಇಸಿಎ) ಹೇಳಿದಂತೆ ಎನ್‌ಎಸ್‌ಒ ಕೇಳುತ್ತದೆ. ಪ್ರತಿಯೊಂದು ಮಾರಾಟಕ್ಕೂ ಡಿಇಸಿಎ ಪರವಾನಗಿಯನ್ನು ಕಂಪನಿ ಪಡೆದುಕೊಳ್ಳುತ್ತದೆ. ಹೀಗಾಗಿ, ಎನ್‌ಎಸ್‌ಒ, ಇಸ್ರೇಲ್ ಸರ್ಕಾರದ ಒಂದು ಅಂಗದ ರೀತಿಯಲ್ಲಿಯೇ ಕೆಲಸ ಮಾಡುತ್ತದೆ.

ಇಸ್ರೇಲ್ ಪ್ರಧಾನಿಯಾಗಿದ್ದ ಬೆಂಜಮಿನ್ ನೆತಾನ್ಯಾಹು ಅವರ ಸೇನಾ ಸಲಹೆಗಾರರೊಬ್ಬರು ಪೆಗಾಸಸ್‌ನ ಪ್ರಯೋಜನವನ್ನು ಬಹಳ ಸ್ಪಷ್ಟವಾಗಿಯೇ ವಿವರಿಸಿದ್ದರು ಎಂಬ ವಿವರ ಎನ್‌ವೈಟಿ ವರದಿಯಲ್ಲಿ ಇದೆ. ‘ಈ ವ್ಯವಸ್ಥೆಗಳು ಜಗತ್ತಿನಲ್ಲಿ ಹೇಗೆ ಚಲಾವಣೆಗೊಳ್ಳಲಿವೆ ಎಂಬುದರ ನಿಯಂತ್ರಣವು ನಮ್ಮ ರಕ್ಷಣಾ ಸಚಿವಾಲಯದಲ್ಲಿಯೇ ಇದ್ದರೆ, ಅದರ ಪ್ರಯೋಜವನ್ನು ನಾವು ಪಡೆದುಕೊಳ್ಳಬಹುದು ಮತ್ತು ರಾಜತಾಂತ್ರಿಕ ಲಾಭವನ್ನೂ ಮಾಡಿಕೊಳ್ಳಬಹುದು’ ಎಂದು ಅವರು ಹೇಳಿದ್ದರು. ಮುಂದಿನ ದಿನಗಳಲ್ಲಿ ಈ ಮಾತು ಸತ್ಯವೇ ಆಯಿತು.

ಪ್ರಭಾವ ವಿಸ್ತರಣೆ ತಂತ್ರ

ಮಾದಕ ಪದಾರ್ಥ ಮಾಫಿಯಾ ಹಾವಳಿಯಿಂದ ತತ್ತರಿಸಿದ್ದ ಮೆಕ್ಸಿಕೊ ದೇಶಕ್ಕೆ ಪೆಗಾಸಸ್‌ನಂತಹ ಕುತಂತ್ರಾಂಶದ ಅಗತ್ಯ ಇತ್ತು. ಆಗ ಪ್ರಚಲಿತದಲ್ಲಿದ್ದ ಬ್ಲ್ಯಾಕ್‌ಬೆರಿ ಫೋನ್‌ಗಳಿಂದ ಮಾಹಿತಿ ಕದಿಯುವ ಮೂಲಕ ಡ್ರಗ್ಸ್ ಮಾಫಿಯಾವನ್ನು ಮಟ್ಟಹಾಕಲು ಮೆಕ್ಸಿಕೊ ಬಯಸಿತ್ತು. ಆಗ ಮೆಕ್ಸಿಕೊ ಪ್ರಧಾನಿಯಾಗಿದ್ದ ಫಿಲಿಪ್ ಕಾಲ್ಡ್ರಾನ್ ಜತೆಗೆ ಇಸ್ರೇಲ್‌ನ ರಕ್ಷಣಾ ಸಚಿವಾಲಯದ ಅಧಿಕಾರಿಗಳು ಸಭೆ ನಡೆಸಿದರು. ಮೆಕ್ಸಿಕೊ ದೇಶಕ್ಕೆ ಪೆಗಾಸಸ್ ಕುತಂತ್ರಾಂಶದ ಮಾರಾಟಕ್ಕೆ ರಕ್ಷಣಾ ಸಚಿವಾಲಯವು ಹಸಿರು ನಿಶಾನೆ ತೋರಿತು. ಡ್ರಗ್ಸ್ ಮಾಫಿಯಾವನ್ನು ದಮನ ಮಾಡುವಲ್ಲಿ ಮೆಕ್ಸಿಕೊಕ್ಕೆ ಇದು ನೆರವು ನೀಡಿತು.

ಲ್ಯಾಟಿನ್ ಅಮೆರಿಕ ಪ್ರದೇಶದಲ್ಲಿ ಮೆಕ್ಸಿಕೊ ಪ್ರಭಾವಿ ದೇಶ. ಈ ಭಾಗದಲ್ಲಿ, ಮಧ್ಯಪ್ರಾಚ್ಯ ದೇಶಗಳ ಬೆಂಬಲಿತ ಇಸ್ರೇಲ್ ವಿರೋಧಿ ಗುಂಪುಗಳು ಬಲವಾಗಿದ್ದವು. ಇಂತಹ ಗುಂಪುಗಳನ್ನು ಮಟ್ಟಹಾಕುವ ಅಗತ್ಯ ಇಸ್ರೇಲ್‌ಗೆ ಇತ್ತು. ಈ ದಿಸೆಯಲ್ಲಿ ಲಾಭ ಆಯಿತೇ ಎಂಬುದು ಸ್ಪಷ್ಟವಾಗಿಲ್ಲ. ಆದರೆ, ಮೆಕ್ಸಿಕೊದಲ್ಲಿ ಕಾಲೂರಲು ಇಸ್ರೇಲ್‌ಗೆ ಅವಕಾಶ ಸಿಕ್ಕಿತು. ವಿಶ್ವ ಸಂಸ್ಥೆಯಲ್ಲಿ ಮೆಕ್ಸಿಕೊ, ಇಸ್ರೇಲ್ ವಿರುದ್ಧವೇ ಮತ ಚಲಾಯಿಸುವ ಸುದೀರ್ಘ ಪರಂಪರೆ ಹೊಂದಿತ್ತು. ವಿರುದ್ಧ ಮತ ಹಾಕುತ್ತಿದ್ದ ಮೆಕ್ಸಿಕೊ, ಗೈರು ಹಾಜರಿಯ ಹೊಸ ಕಾರ್ಯತಂತ್ರವನ್ನು ಅನುಸರಿಸಲು ಆರಂಭಿಸಿತು. ಕಾಲ್ಡ್ರಾನ್ ಅವರ ಉತ್ತರಾಧಿಕಾರಿ ಎನ್ರಿಕ್ ಪೆನಾ ನೀಟೊ ಅವರು 2016ರಲ್ಲಿ ಇಸ್ರೇಲ್‌ಗೆ ಭೇಟಿ ನೀಡಿದರು. 2000ದ ಬಳಿಕ ಇದೇ ಮೊದಲಿಗೆ ಮೆಕ್ಸಿಕೊ ಸರ್ಕಾರದ ಮುಖ್ಯಸ್ಥರು ಇಸ್ರೇಲ್‌ಗೆ ಹೋದರು.

2008–9ರ ಅವಧಿಯಲ್ಲಿ ಗಾಜಾದ ಮೇಲೆ ಇಸ್ರೇಲ್ ನಡೆಸಿದ ‘ಅತಿಕ್ರಮಣ’ದ ಬಗೆಗಿನ ಗೋಲ್ಡ್‌ಸ್ಟೋನ್ ಆಯೋಗದ ವರದಿಯ ಕುರಿತು ವಿಶ್ವಸಂಸ್ಥೆಯ ನಿರ್ಣಯದ ವಿರುದ್ಧ 2010ರಲ್ಲಿ ಪನಾಮಾ ಮತ ಹಾಕಿತು. ಅದರ ನಂತರದ ವಾರ, ಪನಾಮಾದ ಅಧ್ಯಕ್ಷರಾಗಿದ್ದ ರಿಕಾರ್ಡೊ ಮಾರ್ಟಿನೆಲ್ಲಿ ಅವರು ಇಸ್ರೇಲ್‌ಗೆ ಭೇಟಿ ನೀಡಿ ಬೇಹುಗಾರಿಕೆ ತಂತ್ರಾಂಶಗಳನ್ನು ಖರೀದಿಸಿದರು ಎಂದು ವರದಿಯಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು 2017ರಲ್ಲಿ ಇಸ್ರೇಲ್‌ಗೆ ಭೇಟಿ ಕೊಟ್ಟರು. ‘ಪ್ಯಾಲೆಸ್ಟೀನ್‌ಗೆ ಬದ್ಧತೆ’ ಎಂಬುದು ಸುದೀರ್ಘ ಕಾಲ ಭಾರತದ ಘೋಷಿತ ನಿಲುವು ಆಗಿತ್ತು. ಆದರೆ, 2017ರ ಬಳಿಕ ಈ ನಿಲುವು ಬದಲಾಯಿತು ಎಂದು ಎನ್‌ವೈಟಿ ವರದಿ ವಿಶ್ಲೇಷಿಸಿದೆ. 2019ರ ಜೂನ್‌ನಲ್ಲಿ ವಿಶ್ವ ಸಂಸ್ಥೆಯಲ್ಲಿ ಭಾರತವು ಇಸ್ರೇಲ್ ಪರವಾಗಿ ಮತ ಹಾಕಿತು ಎಂಬುದನ್ನೂ ವರದಿಯು ಉಲ್ಲೇಖಿಸಿದೆ.

ನೆರೆಯ ಅರಬ್ ಸಂಯುಕ್ತ ಸಂಸ್ಥಾನದ (ಯುಎಇ) ಜತೆಗೆ ಮೈತ್ರಿಗೂ ಪೆಗಾಸಸ್ ನೆರವಾಗಿದೆ. ಇಸ್ರೇಲ್‌ನ ಗುಪ್ತಚರ ಸಂಸ್ಥೆ ಮೊಸಾದ್‌ನ ಏಜೆಂಟರು ಹಮಾಸ್ ನಾಯಕನೊಬ್ಬನನ್ನು ದುಬೈನ ಹೋಟೆಲ್‌ನಲ್ಲಿ 2010ರಲ್ಲಿ ಹತ್ಯೆ ಮಾಡಿದರು. ಇದು ಯುಎಇ ಯುವರಾಜ ಮೊಹಮ್ಮದ್ ಬಿನ್ ಜಾಯೆದ್ ಅವರನ್ನು ಕೆರಳಿಸಿತ್ತು. ಇಸ್ರೇಲ್ ಜತೆಗಿನ ಎಲ್ಲ ಸಂಬಂಧ ಕಡಿದುಕೊಳ್ಳಲು ಅವರು ಆದೇಶಿಸಿದ್ದರು. ಆದರೆ, 2013ರಲ್ಲಿ ಯುಎಇಗೆ ಪೆಗಾಸಸ್ ಮಾರಾಟದ ಕೊಡುಗೆಯನ್ನು ಇಸ್ರೇಲ್ ನೀಡಿತು. ಜಾಯೆದ್ ತಕ್ಷಣವೇ ಒಪ್ಪಿಕೊಂಡರು. ಹೀಗೆ, ಪ್ರತಿಕೂಲ ಸನ್ನಿವೇಶವನ್ನು ಅನುಕೂಲಕರವಾಗಿಸಲು ಇಸ್ರೇಲ್‌ಗೆ ಪೆಗಾಸಸ್ ನೆರವಾಗುತ್ತಲೇ ಬಂದಿದೆ.

ಆಧಾರ: ದ ಬ್ಯಾಟಲ್ ಫಾರ್ ದ ವರ್ಲ್ಡ್ಸ್ ಮೋಸ್ಟ್ ಪವರ್‌ಫುಲ್ ಸೈಬರ್ ವೆಪನ್– ದ ನ್ಯೂಯಾರ್ಕ್ ಟೈಮ್ಸ್‌ನ ತನಿಖಾ ವರದಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 32

ಮಹಾಶಿವನ ಪಂಚಕೃತ್ಯಗಳು

ಜಗದೊಡೆಯನಾದ ಮಹಾಶಿವನ ಐದು ಕರ್ತವ್ಯದ ಬಗ್ಗೆ ತಿಳಿಸುವಂತೆ ಬ್ರಹ್ಮ ಮತ್ತು ವಿಷ್ಣು ಇಬ್ಬರೂ ಕೋರುವುದರೊಂದಿಗೆ ಶ್ರೀಶಿವಮಹಾಪುರಾಣದ ವಿದ್ಯೇಶ್ವರಸಂಹಿತೆಯ ಹತ್ತನೆ ಅಧ್ಯಾಯ ಆರಂಭವಾಗುತ್ತದೆ. ಆಗ ಪರಶಿವ ‘ಸೃಷ್ಟಿ, ಸ್ಥಿತಿ, ಸಂಹಾರ, ನಿಗ್ರಹ, ಅನುಗ್ರಹ’ ಎಂಬ ತನ್ನ ಪಂಚಕೃತ್ಯಗಳನ್ನು ತಿಳಿಸುತ್ತಾನೆ.

ತನ್ನಲ್ಲಿ ನಿತ್ಯಸಿದ್ಧವಾಗಿರುವ ಐದು ಜಗತ್ ಕೆಲಸಗಳಲ್ಲಿ ಮೊದಲನೆಯದು ‘ಜಗತ್ತನ್ನು ಪ್ರವರ್ತಿಸುವಂತೆ ಮಾಡುವುದು’ – ಇದೇ ಸೃಷ್ಟಿಕೃತ್ಯ. ಎರಡನೆಯದು ‘ಪ್ರವರ್ತಿಸಿದ ಅಂದರೆ, ಜನಿಸಿದ ಆ ಜಗತ್ತನ್ನು ಕೆಲವು ದಿನ ಸ್ಥಿರವಾಗಿರುವಂತೆ ಪಾಲಿಸುವುದೇ ಸ್ಥಿತಿಕೃತ್ಯ’. ಮೂರನೆಯದು ‘ಜಗತ್ತನ್ನು ಪ್ರಳಯದ ಮೂಲಕ ಮುಕ್ತಾಯಗೊಳಿಸುವುದು ಸಂಹಾರಕೃತ್ಯ’. ನಾಲ್ಕನೆಯದು ‘ದುಷ್ಟಮಾರ್ಗಕ್ಕೆ ಹೋಗುವ ಜಗತ್ತಿನ ಜೀವಿಯನ್ನು ನಿಗ್ರಹಿಸುವ ತಿರೋಭಾವ’ವೆ ನಿಗ್ರಹಕೃತ್ಯ. ಐದನೆಯದು ‘ಸಜ್ಜನರಿಗೆ ಜೀವಚಕ್ರದಿಂದ ಬಿಡುಗಡೆ ಮಾಡುವುದು. ಅಂದರೆ, ಮುಕ್ತಿ ನೀಡುವ ಕೆಲಸವೇ ಅನುಗ್ರಹಕೃತ್ಯ’ ಎಂದು ಬ್ರಹ್ಮ–ವಿಷ್ಣುವಿಗೆ ಪರಮಶಿವ ಮನದಟ್ಟು ಮಾಡಿಸುತ್ತಾನೆ.

ಇತರ ದೇವರುಗಳು ಇಂಥ ಕೃತ್ಯಗಳನ್ನು ಮಾಡಲು ಸಾಧ್ಯವಿಲ್ಲ. ಏಕೆಂದರೆ, ಅವರು ನನ್ನ ನೆರಳಿನ ರೂಪ. ನೆರಳಿನ ರೂಪಕ್ಕೆ ಸ್ವಂತ ಕ್ರಿಯಾಶಕ್ತಿ ಇರುವುದಿಲ್ಲ. ಮೂಲರೂಪದ ಅನುಗುಣವಾಗಿ ಪ್ರತಿಬಿಂಬ ವರ್ತಿಸುತ್ತದೆ. ಹೀಗಾಗಿ ಜಗತ್ತಿನ ಎಲ್ಲಾ ಐದು ಕ್ರಿಯೆಗಳು ನನ್ನಿಂದ ನಡೆಯುತ್ತದೆ. ಸೃಷ್ಟಿ ಮೊದಲಾದ ನಾಲ್ಕು ಕೃತ್ಯಗಳು ಜಗತ್ತಿಗೇ ಸಂಬಂಧಿಸಿದವು. ಅವುಗಳು ವಿಶ್ವ ಪರಿವರ್ತನೆಯ ರೂಪಗಳು. ಅದನ್ನು ಇತರೆ ದೇವರಿಗೆ ಹಂಚಬಹುದಾದರೂ, ಐದನೆಯದಾದ ಅನುಗ್ರಹಕೃತ್ಯ ಮುಕ್ತಿಗೆ ಸಾಧನವಾದುದು. ಅದು ಬೇರೆ ಯಾವ ದೇವರಿಗೂ ಸಲ್ಲುವುದಿಲ್ಲ. ಮುಕ್ತಿಸಾಧನ ನನ್ನಲ್ಲಿ ಸದಾ ಸ್ಥಿರವಾಗಿರುವುದು. ಹೀಗಾಗಿ ಮುಕ್ತಿಗಾಗಿ ಎಲ್ಲರೂ ನನ್ನನ್ನೇ ಆಶ್ರಯಿಸಬೇಕು – ಎನ್ನುತ್ತಾನೆ ಮಹಾಶಿವ.

ಶಿವ ತನ್ನ ಐದು ಕೃತ್ಯಗಳು ಪಂಚಭೂತಗಳಲ್ಲಿ ಇರುವುದನ್ನು ವಿವರಿಸುತ್ತಾನೆ. ಅದು ಹೇಗೆಂದರೆ, ಸೃಷ್ಟಿಯು ಭೂಮಿಯಲ್ಲಿದ್ದರೆ, ಸ್ಥಿತಿ ಜಲದಲ್ಲಿ ಇರುವುದು; ಅಗ್ನಿಯಲ್ಲಿ ಸಂಹಾರಕೃತ್ಯವಿದ್ದರೆ, ವಾಯುವಿನಲ್ಲಿ ನಿಗ್ರಹಕೃತ್ಯ ಮತ್ತು ಆಕಾಶದಲ್ಲಿ ಅನುಗ್ರಹವು ಇರುತ್ತದೆ. ಸೃಷ್ಟಿ ಎಂದರೆ ಅವ್ಯಕ್ತವಾದ ಪರಬ್ರಹ್ಮವಸ್ತು. ಅದು ವ್ಯಕ್ತರೂಪವನ್ನು ಹೊಂದಿ ದೃಶ್ಯಾ-ದೃಶ್ಯಪ್ರಪಂಚವಾಗಿ ಮಾರ್ಪಡುವುದು. ಅಂದರೆ ಒಂದು ವಸ್ತುವಿನ ರೂಪವು ಬದಲಾಯಿಸಿ, ಬೇರೆ ಬೇರೆ ರೂಪಾಂತರವಾಗುವುದು. ಇಂಥ ಕಾರ್ಯವು ಭೂಮಿಯಲ್ಲಿ ಕಂಡುಬರುವುದು.

ಭೂಮಿ ಮೇಲಿರುವ ವನಸ್ಪತಿಗಳು, ಪ್ರಾಣಿಗಳು ಹುಟ್ಟುತ್ತಲೂ ನಾಶವಾಗುತ್ತಲೂ ಇರುವುವು. ಹಾಗೇ ನದೀಪರ್ವತಾದಿಗಳೂ ಸಹ ಕಾಲಕ್ರಮದಲ್ಲಿ ರೂಪಾಂತರವನ್ನು ಹೊಂದುತ್ತಲಿರುತ್ತವೆ. ಆದುದುರಿಂದ ಪೃಥ್ವಿಯಲ್ಲಿ ಸೃಷ್ಟಿತತ್ವವು ಅಡಗಿರುವುದೆಂದು ತಿಳಿಯಬೇಕು. ಇದರಂತೆ ಜಲವು ವಾಯು ಮುಂತಾದವುಗಳ ಸಂಪರ್ಕವಿಲ್ಲದಿರುವಾಗ ನಿಶ್ಚಲವಾದ ಸ್ಥಿತಿಯಲ್ಲಿರುವುದರಿಂದ ಅಗ್ನಿಯಲ್ಲಿ ಸಂಹಾರತತ್ವವು ನೆಲೆಸಿರುವುದು. ಈ ಮೂರು ಅವಸ್ಥೆಗಳೂ ಸಮಸ್ತ ದೃಶ್ಯಾದೃಶ್ಯಪ್ರಪಂಚಕ್ಕೆ ಆಯಾ ಕಾಲದಲ್ಲಿ ಸಂಭವಿಸುವುವು.

ನಿಗ್ರಹವೆಂದರೆ ಮಾಡಿದ ಪಾಪಾದಿ ಕರ್ಮಗಳಿಗೆ ನೀಡುವ ಶಿಕ್ಷೆ. ಇದು ಕೆಲವರಿಗೆ ಮಾತ್ರ ಅನ್ವಯಿಸುವುದರಿಂದ, ನಿಯಮಿತವಾದ ಚಲನವಿಲ್ಲದಿರುವ ವಾಯುವಿನಲ್ಲಿ ಇರುವುದೆಂದು ತಿಳಿಯಬೇಕು. ಅನುಗ್ರಹವೆನ್ನುವುದು ಸಂಸಾರಬಂಧಗಳಿಂದ ಬಿಡುಗಡೆಯಾಗಿ ಮೋಕ್ಷಪ್ರಾಪ್ತಿ ಪಡೆಯುವುದು. ಮೋಕ್ಷವೆಂದರೆ ಪರಮಾತ್ಮನಲ್ಲಿ ಐಕ್ಯವಾಗುವುದು. ಆಕಾಶವು ರೂಪಾದಿ ಭೇದವಿಲ್ಲದೆ ಸರ್ವವ್ಯಾಪಿಯಾಗಿ ಪರಬ್ರಹ್ಮನನ್ನು ಹೋಲುವುದರಿಂದ ಅನುಗ್ರಹವನ್ನು ಪರಮೇಶ್ವರನೊಬ್ಬನೇ ಕೊಡಲು ಸಮರ್ಥನಾಗಿರುವುದ ಅನುಗ್ರಹವು ಆಕಾಶತತ್ವದಲ್ಲಿ ನೆಲೆಸಿರುವುದು.

ಭೂಮಿಯಿಂದ ಎಲ್ಲಾ ವಸ್ತುಗಳೂ ಸೃಷ್ಟಿಯಾಗುತ್ತೆ. ಜಲದಿಂದ ಆ ವಸ್ತುಗಳು ಅಭಿವೃದ್ಧಿಯಾಗಿ ಸ್ಥಿತಿಸ್ಥಾಪಕತ್ವ ಪಡೆಯುತ್ತವೆ. ಬೆಂಕಿ ಎಲ್ಲವನ್ನೂ ನಾಶಮಾಡುತ್ತೆ. ವಾಯು ಕಿತ್ತು ಹಾಕುತ್ತೆ. ಆಕಾಶವು ಭೂಮ್ಯಾದಿಯಾಗಿ ಎಲ್ಲ ವಸ್ತುವಿಗೂ ಅವಕಾಶ ಕೊಟ್ಟು ಅನುಗ್ರಹಿಸುತ್ತೆ. ಹೀಗೆ ಐದು ಭೂತಗಳಲ್ಲಿ ನನ್ನ ಐದು ಕೃತ್ಯಗಳು ಇರುವುದು. ಈ ಐದು ಕೃತ್ಯಗಳನ್ನು ಧರಿಸಲು ನನಗೆ ಐದು ಮುಖಗಳಿರುವುವು. ಅವುಗಳಲ್ಲಿ ನಾಲ್ಕು ಮುಖಗಳು ನಾಲ್ಕು ದಿಕ್ಕಿನಲ್ಲಿ ಮತ್ತು ಐದನೆಯದು ಅವುಗಳ ಮಧ್ಯದಲ್ಲಿ ಇರುವುದು ಎನ್ನುತ್ತಾನೆ ಜಗದೀಶ್ವರ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ದೇಶದ ಮೊದಲ ಪ್ರಧಾನಿ ಜವಾಹರ ಲಾಲ್ ನೆಹರೂ ಅವರೇ ದೇಶ ವಿಭಜನೆಗೆ ಕಾರಣ ಎಂಬರ್ಥದ ಪೋಸ್ಟ್ ಒಂದು ಜಾಲತಾಣಗಳಲ್ಲಿ ವೈರಲ್ ಆಗಿದೆ. ಅಮೆರಿಕದ ಸುದ್ದಿ ವಾಹಿನಿ ನಿರೂಪಕ ಅರ್ನಾಲ್ಡ್ ಮಿಶೇಲಿಸ್ ಎಂಬುವವರು 1964ರಲ್ಲಿ ನಡೆಸಿದ್ದ ನೆಹರೂ ಅವರ ಸಂದರ್ಶನದ ತುಣುಕೊಂದನ್ನು ಆಧಾರವಾಗಿ ಇರಿಸಿಕೊಂಡು ಈ ಮಾಹಿತಿ ಹಂಚಲಾಗುತ್ತಿದೆ. ‘ದೇಶ ವಿಭಜನೆಯ ನಿರ್ಧಾರ ನನ್ನದೇ’ ಎಂದು ನೆಹರೂ ಅವರು ಈ ಸಂದರ್ಶನದಲ್ಲಿ ಒಪ್ಪಿಕೊಂಡಿದ್ದಾರೆ ಎಂಬಂತೆ ಈ ವಿಡಿಯೊವನ್ನು ಬಿಂಬಿಸಲಾಗಿದೆ.

ವೈರಲ್ ಆಗುತ್ತಿರುವ ವಿಡಿಯೊ ತುಣುಕನ್ನು ದುರುದ್ದೇಶಪೂರ್ವಕವಾಗಿ ಬಳಸಿಕೊಳ್ಳಲಾಗಿದೆ ಎಂದು ಲಾಜಿಕಲ್ ಇಂಡಿಯನ್ ವೇದಿಕೆ ವರದಿ ಮಾಡಿದೆ. 45 ನಿಮಿಷಗಳ ಈ ವಿಡಿಯೊದಲ್ಲಿಯ ಒಂದು ತುಣುಕನ್ನು ವೈರಲ್ ಮಾಡಲಾಗಿದೆ. ‘ಭಾರತ ಮತ್ತು ಪಾಕಿಸ್ತಾನ ವಿಭಜನೆ ಕುರಿತು ನಿಮಗೆ ಮತ್ತು ಮಹಾತ್ಮ ಗಾಂಧಿ ಅವರಿಗೆ ಒಲವಿತ್ತಾ?’ ಎಂಬ ಪ್ರಶ್ನೆಗೆ ಉತ್ತರಿಸುವ ನೆಹರೂ, ‘ನಮ್ಮಿಬ್ಬರಿಗೆ ದೇಶ ವಿಭಜನೆ ಆಗುವುದು ಬೇಕಿರಲಿಲ್ಲ. ಆದರೆ ಎಲ್ಲರ ಒತ್ತಾಸೆ ದೇಶ ವಿಭಜನೆ ಆಗುವುದೇ ಆಗಿದ್ದರಿಂದ ಸಮ್ಮತಿ ನೀಡಬೇಕಾಯಿತು’ ಎಂಬರ್ಥದಲ್ಲಿ ಉತ್ತರಿಸಿದ್ದಾರೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಶ್ರುತಿ-ಮತಿ ಸಮನ್ವಯ

ಶ್ರುತಿಯರ್ಥ ವಿಶದವಪ್ಪುದು ಪುರುಷಭಾಷ್ಯದಿಂ |
ಶ್ರುತಿಮತಿಗಳನ್ಯೋನ್ಯ ಪರಿಪೂರಕಂಗಳ್ ||
ಯುತಿಯೊಳವು ಸೇರಿರಲು ಸತ್ಯದರ್ಶನ ನಿನಗೆ |
ಕೃತಸಮನ್ವಯನಾಗು – ಮಂಕುತಿಮ್ಮ || 552 ||

ಪದ-ಅರ್ಥ: ಶ್ರುತಿಯರ್ಥ = ಶ್ರುತಿಯ (ವೇದಶಾಸ್ತ್ರಗಳ) + ಅರ್ಥ, ವಿಶದವಪ್ಪುದು- ವಿಶದ + ಅಪ್ಪುದು(ಆಗುವುದು), ಶ್ರುತಿಮತಿಗಳನ್ಯೋನ್ಯ = ಶ್ರುತಿ + ಮತಿ(ಬುದ್ಧಿ)ಗಳ + ನ್ಯೋನ್ಯ, ಪರಿಪೂರಕಂಗಳ್ = ಒಂದಕ್ಕೊಂದು ಪೂರಕವಾದವು, ಯುತಿಯೊಳವು = ಯತಿಯೊಳು(ಹೊಂದಿಕೆಯಲ್ಲ) + ಅವು, ಕೃತಸಮನ್ವಯನಾಗು = ಕೃತ + ಸಮನ್ವಯನು + ಆಗು.

ವಾಚ್ಯಾರ್ಥ: ವೇದಶಾಸ್ತ್ರಗಳ ಅರ್ಥ ನಮಗೆ ಸರಿಯಾಗಿ ಅರ್ಥವಾಗುವುದು ಬುದ್ಧಿಯಿಂದ ಮಾಡಿದ ವಿವರಣೆಯಿಂದ. ಹೀಗೆ ಶ್ರುತಿ ಮತ್ತು ಬುದ್ಧಿ ಪರಸ್ಪರ ಪೂರಕವಾದವುಗಳು. ಅವು ಹೊಂದಿಕೆಯಾಗಿ ಒಂದನ್ನೊಂದು ಸೇರಿದಾಗ ನಿನಗೆ ಸತ್ಯದರ್ಶನವಾಗುತ್ತದೆ. ಹೀಗೆ ಸಮನ್ವಯದಲ್ಲಿ ಸಾರ್ಥಕನಾಗು.

ವಿವರಣೆ: ಶ್ರುತಿಗಳು ಎಂದರೆ ವೇದಗಳು. ವೇದವೆಂದರೆ ಜ್ಞಾನದ ಭಂಡಾರ. ಅದನ್ನು ತಿಳಿಯಲು ಸುಲಭವಾಗಲಿ ಎಂದು ವೇದವ್ಯಾಸರು ಅವುಗಳನ್ನು ವಿಭಜನೆ ಮಾಡಿ ನಾಲ್ಕು ವೇದಗಳನ್ನಾಗಿ ಮಾಡಿದರು. ನಂತರ ಮತ್ತೂ ಸ್ಪಷ್ಟಗೊಳಿಸಲು ವೇದಗಳನ್ನು ಸಂಹಿತೆ, ಬ್ರಾಹ್ಮಣ, ಅರಣ್ಯಕ ಮತ್ತು ಉಪನಿಷತ್ತುಗಳೆಂಬ ವಿಭಾಗಗಳಾಗಿ ಮಾಡಿ ಇಟ್ಟರು. ನಂತರ ಬ್ರಹ್ಮಸೂತ್ರಗಳನ್ನು ರಚಿಸಿದರು. ಇವೆಲ್ಲ ಜ್ಞಾನದ ವಿಧಿಗಳೇ ಸರಿ. ಆದರೆ ನಮಗೆ ಅರ್ಥವಾಗುವುದು ಹೇಗೆ? ಅದಕ್ಕಾಗಿ ಮೊದಲು ಶಂಕರಾಚಾರ್ಯರು, ನಂತರ ರಾಮಾನುಜಾಚಾರ್ಯರು ಆಮೇಲೆ ಮಧ್ವಾಚಾರ್ಯರು ಅವುಗಳಿಗೆ ವಿವರವಾದ ಭಾಷ್ಯಗಳನ್ನು ಬರೆದಿದ್ದಾರೆ. ಅವುಗಳೂ ಅರ್ಥವಾಗದಿದ್ದವರಿಗೆ ಅನೇಕ ಜನ ವಿದ್ವಾಂಸರು ತಮ್ಮ ಬುದ್ಧಿಶಕ್ತಿಯಿಂದ ಮತ್ತಷ್ಟು ತಿಳಿಯಾಗಿಸಿ ಸೂತ್ರರೂಪದಲ್ಲಿ ನೀಡಿದ್ದಾರೆ.

ಹೀಗೆ ಶ್ರುತಿಗಳು ಅರ್ಥವಾಗುವುದು ಬುದ್ಧಿಶಕ್ತಿಯಿಂದ ಬರೆದ ಭಾಷ್ಯಗಳಿಂದ. ಆದರೆ ಬೇರೆಬೇರೆ ಬುದ್ಧಿವಂತರು ಒಂದೇ ವಸ್ತುವಿನ ಬಗ್ಗೆ ಬಿನ್ನಭಿನ್ನವಾಗಿ ಬರೆದು ವಿವರಿಸಿದಾಗ ತಿಳಿವಳಿಕೆಯೇ ಸರಿಯಾಗುವುದಿಲ್ಲವಲ್ಲ? ಆ ಭೇದಕ್ಕೆ ಸತ್ಯದರ್ಶನ ಕಾರಣವಲ್ಲ, ನೋಡುವವರ ಸ್ಥಾನಭೇದದ ಕಾರಣ. ಬೆಂಗಳೂರಿನಿಂದ ತುಮಕೂರಿಗೆ ರಸ್ತೆಯಲ್ಲಿ ಹೋಗುವಾಗ ಎಡಗಡೆಗೆ ಶಿವಗಂಗೆ ಬೆಟ್ಟ ಕಾಣುತ್ತದೆ. ಬೆಂಗಳೂರಿನ ಕಡೆಯಿಂದ ನೋಡಿದರೆ ಒಂದು ನಂದಿ ಮೊಣಕಾಲೂರಿ ಕುಳಿತಂತೆ ಕಾಣುತ್ತದೆ. ಅದೇ ಬೆಟ್ಟ ತುಮಕೂರಿನ ಕಡೆಯಿಂದ ಕಂಡರೆ ಒಂದು ಈಶ್ವರ ಲಿಂಗದಂತೆ ತೋರುತ್ತದೆ. ಬೆಟ್ಟ ನಂದಿಯೂ ಅಲ್ಲ, ಈಶ್ವರ ಲಿಂಗವೂ ಅಲ್ಲ. ಸ್ಥಾನ ಭೇದದಿಂದ ದೃಷ್ಟಿ ಭೇದ. ಮನುಷ್ಯನ ಬುದ್ಧಿ ಮಿತವಾದದ್ದರಿಂದ ಅವನಿಗಾಗುವ ಸತ್ಯದರ್ಶನವೂ ಭಾಗಗ್ರಾಹಿಯಾಗಿರುವುದು.

ಹಾಗಾದರೆ ಸ್ವತಂತ್ರವಾದ ಬುದ್ಧಿಸಾಹಸವು ಯಾವುದನ್ನು ಕಾಣುತ್ತದೆಯೋ, ಅದನ್ನು ಸಂಪೂರ್ಣವಾದ ಸತ್ಯ ಎಂದು ನಂಬಬಹುದೆ? ಬುದ್ಧಿಯ ತೀರ್ಮಾನವನ್ನು ಪ್ರಮಾಣವೆಂದು ಸ್ವೀಕರಿಸಬಹುದೇ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಮತ್ತೊಂದು ಪ್ರಮಾಣ ಅಥವಾ ರುಜುವಾತು ಬೇಕಾಗುತ್ತದೆ. ಅದು ಶಾಸ್ತ್ರ. ಶಾಸ್ತ್ರವೆಂಬುದು ಯಾರೊಬ್ಬರ ವೈಯಕ್ತಿಕ ಅಭಿಪ್ರಾಯವಲ್ಲ. ಅದು ಬಹುಕಾಲ, ಬಹುಜನರ ದೀರ್ಘವಾದ ಅಧ್ಯಯನದ ಫಲ. ಅದಕ್ಕೇ ಅದನ್ನು ಅಪೌರುಷೇಯ ಎನ್ನುತ್ತಾರೆ. ಹಾಗೆಂದರೆ ಅದು ಯಾರೋ ಒಬ್ಬರ ಅಭಿಪ್ರಾಯವಲ್ಲ. ಕಗ್ಗದ ಮಾತು ಇದೇ. ಶಾಸ್ತ್ರಗಳನ್ನು ಅರ್ಥೈಸುವುದಕ್ಕೆ ಬುದ್ಧಿವಂತಿಕೆ ಬೇಕು. ಬುದ್ಧಿಯ ಮಾತನ್ನು ಸ್ವೀಕರಿಸುವುದಕ್ಕೆ ಶಾಸ್ತ್ರ ಬೇಕು. ಅವೆರಡೂ ಪರಸ್ಪರ ಹೊಂದಿಕೊಂಡಾಗ ಸತ್ಯದರ್ಶನ. ಹಾಗೆ ಅವೆರಡನ್ನು ಸಂಧಾನಿಸಿ ಕರೆದೊಯ್ಯುವುದು ಸಾರ್ಥಕವಾದ ಕಾರ್ಯ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ — ಸೋಮವಾರ ಜನವರಿ 31, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಹೇಮಂತ ಋತು ಮಕರ ಮಾಸದ 17 ನೇ ದಿನ
ತಿಥಿ: (ಪೌಷ ಕೃಷ್ಣ) ಚತುರ್ದಶಿ ಗಂ. 14-19 ನಕ್ಷತ್ರ: ಉತ್ತರಾಷಾಢಾ ಗಂ. 21-58 ಯೋಗ: ವಜ್ರ ಗಂ. 10-25, ಕರಣ: ಶಕುನಿ ಗಂ. 14-19. ರಾಹುಕಾಲ : ಬೆಳಿಗ್ಗೆ 07:30 – 09:00
ಸೂರ್ಯೋದಯ : 07-01 ಸೂರ್ಯಾಸ್ತ : 06-27
ಮುಸ್ಲಿಂ ದಿನಾಂಕ : 27 ಜುಮಾದುಸ್ಸಾನಿ ದಿನ ವಿಶೇಷ : ತೈ ಅಮಾವಾಸ್ಯೆ, ಮಕರ ವಾವು (ಕೇರಳ) ಅದೃಷ್ಟ ಸಂಖ್ಯೆ: 3, 12

ಮೇಷ: ಸಂಬಂಧಿಕರು ಹಾಗು ಸ್ನೇಹಿತರ ಜೊತೆ ಸಂಪರ್ಕದಲ್ಲಿರುವುದು ಆನಂದ ನೀಡಲಿದೆ. ಸಂಘ ಸಂಸ್ಥೆಗಳಲ್ಲಿ ಅಧಿಕಾರ ಹೊಂದಿದವರು ಲೆಕ್ಕ ಪತ್ರಗಳ ಪರಿಶೋಧನೆ ಮಾಡುವುದು ಉತ್ತಮ.

ವೃಷಭ: ಬಹುಕಾಲದಿಂದ ಅನುಭವಿಸುತ್ತಿರುವ ರೋಗಬಾಧೆಯು ಹಂತಹಂತವಾಗಿ ಚೇತರಿಕೆಯ ಮೆಟ್ಟಿಲನ್ನು ನೋಡಲಿದೆ. ದಲ್ಲಾಳಿಗಳಿಗೆ ಮತ್ತು ವೃತ್ತಿವ್ಯಾಪಾರ ಮಾಡುವವರಿಗೆ ಕನಸುಗಳು ನನಸಾಗಲಿದೆ.

ಮಿಥುನ: ಸಾಧಿಸಲೇಬೇಕೆಂದಿರುವ ನಿಮಗೆ ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ಇತರರಿಗೆ ಅಸೂಯೆಯಾಗದಂತೆ ಕಾರ್ಯಗಳನ್ನು ಸಾಧಿಸಿಕೊಳ್ಳುವ ಉತ್ತಮ ಗುಣ ನಿಮ್ಮಲ್ಲಿರುವುದರಿಂದ ಯಶಸ್ಸನ್ನು ಕಾಣುವಿರಿ.

ಕರ್ಕಾಟಕ: ಚಿರಂಜೀವಿಗಳ ಬಗೆಗಿನ ಚಿಂತೆಯೂ ಹೆಚ್ಚಾಗಲಿದೆ. ತಂದೆ-ತಾಯಿಯ ಆರೋಗ್ಯದ ಬಗ್ಗೆ ಕಾಳಜಿವಹಿಸುವುದು ಅನಿವಾರ್ಯವಾಗುತ್ತದೆ. ಈಶ್ವರ ಆರಾಧನೆಯಿಂದ ಶುಭವಾಗುವುದು.

ಸಿಂಹ: ಈ ದಿನದ ಪೂರ್ವಾರ್ಧದಲ್ಲಿ ನಿಮ್ಮ ಎಲ್ಲಾ ವ್ಯವಹಾರಗಳೂ ಸಾಮಾನ್ಯ ಗತಿಯಲ್ಲಿ ಮುಂದುವರಿಯಲಿದೆ. ವಿದ್ಯಾಭ್ಯಾಸದಲ್ಲಿ ಆಸಕ್ತಿ ಕಡಿಮೆಯಾಗುವುದು. ಸ್ವಶಕ್ತಿಯಿಂದ ಜೀವನದ ದಾರಿಯನ್ನು ಆರಿಸಿಕೊಳ್ಳಿ.

ಕನ್ಯಾ: ಪ್ರೀತಿಪಾತ್ರರೊಂದಿಗೆ ಇಂದು ಭವಿಷ್ಯದ ಯೋಜನೆಗಳ ಹಾಗೂ ಜೀವನದ ಗುರಿ ತಲುಪುವ ಬಗ್ಗೆ ಚರ್ಚೆ ನಡೆಸುವಿರಿ. ಪರಸ್ಪರ ಮನಸ್ಸು ಬಿಚ್ಚಿ ಮಾತನಾಡುವಿರಿ. ದೇಹಾರೋಗ್ಯದ ಬಗ್ಗೆ ಉದಾಸೀನತೆ ತೋರಬೇಡಿ.

ತುಲಾ: ಮಾತಿನ ಚತುರತೆಯಿಂದ ನೀವಾಡುವ ಮಾತಿಗೆ ಮರುಳಾಗುವರು. ಎಲ್ಲಾ ಕೆಲಸಗಳು ಸರಾಗವಾಗಿ ನೆರವೇರುವುದು. ನಿಮ್ಮ ಸ್ವಾರ್ಥಕ್ಕಾಗಿ ಅಥವಾ ಇಷ್ಟಾರ್ಥದ ಈಡೇರಿಕೆಗಾಗಲಿ ಪರರಿಗೆ ಹಿಂಸೆಯನ್ನು ಮಾಡಬೇಡಿ.

ವೃಶ್ಚಿಕ: ಮಿತ್ರರಲ್ಲಿ ಸ್ನೇಹವೂ ಬಂಧುಗಳಲ್ಲಿ ಸಂಬಂಧವೂ ಉಳಿಸಿಕೊಂಡು ಹೋಗುವುದು ಇಹಕ್ಕೂ ಪರಕ್ಕೂ ಒಳಿತು. ಹಾಲು ಉತ್ಪಾದಕರಿಗೆ ಹೆಚ್ಚಿನ ಲಾಭ. ಯಶಸ್ಸು ಹಾಗೂ ಹೆಸರು ನಿಮಗೆ ಒಲಿದು ಬರುವುದು ಕಷ್ಟಕರ ಸಂಗತಿ.

ಧನು: ಚರ್ಮಸಂಬಂಧವಾದ ಅನಾರೋಗ್ಯವು ಕಾಣಿಸಿದಲ್ಲಿ ಆಯುರ್ವೇದದ ಮೊರೆ ಹೋಗುವುದರಿಂದ ಸಮಸ್ಯೆಗೆ ಶಾಶ್ವತವಾಗಿ ಉತ್ತರ ದೊರಕಲಿದೆ. ಪಾನೀಯ ಮಾರಾಟಗಾರರಿಗೆ ಮಹಾಲಕ್ಷ್ಮಿಯ ಅನುಗ್ರಹವು ಸಿಗಲಿದೆ.

ಮಕರ: ರಸ್ತೆ ಗುತ್ತಿಗೆದಾರರಿಗೆ, ಮರ-ಮುಟ್ಟುಗಳ ಮತ್ತು ಕಲ್ಲಿನ ವ್ಯಾಪಾರ ಮಾಡುವವರು ತಮ್ಮ ಶ್ರಮದ ದುಪ್ಪಟ್ಟು ಸಂಪಾದನೆಯನ್ನು ಅಪೇಕ್ಷಿಸಬಹುದು. ಮನೆಯಲ್ಲಿ ಮಂಗಳಕಾರ್ಯಗಳು ನಡೆಯುವ ಸೂಚನೆ ಕಾಣುತ್ತದೆ.

ಕುಂಭ: ಪಶುಸಂಗೋಪನೆ ಮಾಡುವವರಿಗೆ ಮನೆಯಲ್ಲಿ ಶಾಂತ ವಾತಾವರಣವಿದ್ದು ಮನಸ್ಸಿಗೆ ತುಸು ನೆಮ್ಮದಿ ಬರುವುದು. ಮೂಳೆಗೆ ಸಂಬಂಧಿಸಿದ ಸಮಸ್ಯೆಯನ್ನು ನಿರ್ಲಕ್ಷಿಸಬೇಡಿ. ಶುಭಕ್ಕಾಗಿ ನವಗ್ರಹರನ್ನು ಆರಾಧಿಸಿ.

ಮೀನ: ನಿಮ್ಮ ಅನ್ವೇಷಣೆಯ ಸ್ವಭಾವವು ನಿಮ್ಮ ವೃತ್ತಿಯ ಬದುಕಿನಲ್ಲಿ ಹೊಸ ತಿರುವನ್ನು ತರಲಿದೆ. ಸದ್ಯದ ಸಮಸ್ಯೆಗಳ ಪರಿಹಾರಕ್ಕೆ ಹೆಚ್ಚಿನ ಆಸಕ್ತಿ ನೀಡುವುದು ಉತ್ತಮವಾಗಿ ಕಾಣುತ್ತದೆ.

ಪದಬಂಧ 4855

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮನಸ್ಸಿನಲ್ಲಿ ಮೊದಲೇ ಮಾಡಿಕೊಂಡ ಅಭಿಪ್ರಾಯ (4)
3.ಅಧಿಕಾರ ಕಳೆದುಕೊಳ್ಳುವಿಕೆ (4)
5.ಕೆರೆಯ ಹತ್ತಿರವಿರುವ ಎಕ್ಕಡ (2)
7.ತಾರುಣ್ಯವನ್ನು ಹೊಂದಿದವನು (3)
8.ಮನ್ಮಥನ ಇನ್ನೊಂದು ಹೆಸರು (2)
10.ಪರವಶಗೊಂಡಾಗ ಹೆಣ ಕಾಣುವುದೇ? (2)
11.ಬೆನ್ನೆಲುಬು ಕರುವಿನೊಳಗೆ ಕಾಣುತ್ತಿದೆ (3)
13.ಬುದ್ಧಿ ಇಲ್ಲಿದೆ (2)
15.ಮಧುರವಾದ ಧ್ವನಿಯಿದು (4)
16.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)

ಮೇಲಿಂದ ಕೆಳಕ್ಕೆ
1.ಒದಗಿಸುವಿಕೆಗೊಂದು ಪರ್ಯಾಯ ಪದ (3)
2.ಹರಿಯಿಂದ ಬಂದ ತೀಕ್ಷ್ಣತೆ! (3)
3.ಪಣ ಗೆದ್ದು ಮಾಡಿರುವ ಪ್ರವಾಸ! (3)
4.ಕೊನೆಗೆ ಸರವಿದ್ದರೆ ತೊಂದರೆ! (3)
6.ಬೆಳ್ಳಿ ಹಬ್ಬವಿದು (5)
8.ಕೊನೆಗೆ ಹೋಮವಿದ್ದರೆ ಅಳಿವು ಕಂಡೀತೇ? (5)
10.ನೂರರ ಗುಂಪು (3)
11.ಪೆದ್ದ ಇಲ್ಲಿದ್ದಾನೆ (3)
12.ರಕ್ತವನ್ನು ಹೀಗೂ ಹೇಳುವರು (3)
14.ಲೆಕ್ಕವಿಲ್ಲಿ ಉಲ್ಟಾ ಪಲ್ಟಾ ಆಗಿದೆ (3)



4854ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಮಹಾರಾಜ 3.ಆಯವ್ಯಯ 5.ಖಚಿತ 6.ಕ್ಷಿತಿಜ 8.ಮಾಪನ 9.ಅವನಿ 10.ಕಲಹ 12.ಬಸದಿ 14.ನವ್ಯಯುಗ 15.ಕಸರತ್ತು

ಮೇಲಿಂದ ಕೆಳಕ್ಕೆ: 1.ಮನಸಾಕ್ಷಿ 2.ಖನಿಜ 3.ಆಯಾತ 4.ಯಜಮಾನ 7.ಜನನಿ 8.ಮಾದಕ 9.ಅವಸಾನ 11.ಹಕೀಕತ್ತು 12.ಬಳಗ 13.ದಿನಾಂಕ

ಸುಡೊಕು 5241

	2					8		7
4		8						
	9					6		4
	5		7				6	
				9			5	
2		3			4		7	
7								6
	1		2		9		4	
6		2				9	8	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5240 ಸುಡೊಕು

7	6	3	5	9	2	4	1	8
1	9	4	8	7	3	5	6	2
8	5	2	1	6	4	3	9	7
5	1	7	2	4	9	6	8	3
4	2	8	6	3	1	7	5	9
6	3	9	7	5	8	1	2	4
2	8	5	4	1	7	9	3	6
3	4	1	9	2	6	8	7	5
9	7	6	3	8	5	2	4	1

ಉತ್ತರ ಪ್ರದೇಶ ಉತ್ತರಾಖಂಡ ಗೋವಾ ಮಣಿಪುರ ಪಂಜಾಬ್

ಪ್ರಜಾ ಮತ

ಜನತಂತ್ರದ ಹಬ್ಬ 2022

ನುಡಿ-ಕಿಡಿ

ಉತ್ತರ ಪ್ರದೇಶದಲ್ಲಿ ಅಪರಾಧ ಹಿನ್ನೆಲೆಯ 99 ಅಭ್ಯರ್ಥಿಗಳನ್ನು ಬಿಜೆಪಿ ಈವರೆಗೆ ಕಣಕ್ಕೆ ಇಳಿಸಿದೆ. ಯೋಗಿ ಆದಿತ್ಯನಾಥ ಅವರ ಬಗೆಗಿನ ಬ್ರೇಕಿಂಗ್ ನ್ಯೂಸ್ ಏನೆಂದರೆ, ಅಪರಾಧ ಹಿನ್ನೆಲೆಯ ಅಭ್ಯರ್ಥಿಗಳ ಸಂಖ್ಯೆ ಶತಕ ಬಾರಿಸಲು ಇನ್ನು ಒಬ್ಬರಷ್ಟೇ ಬೇಕು

ಅಖಿಲೇಶ್ ಯಾದವ್, ಎಸ್‌ಪಿ ಅಧ್ಯಕ್ಷ

ಸಮಾಜವಾದಿ ಪಕ್ಷದ ಸರ್ಕಾರ ಇದ್ದಾಗಲೇ ಗಲಭೆಗಳು ಏಕೆ ನಡೆಯುತ್ತವೆ ಎಂಬುದನ್ನು ತಿಳಿಯಲು ಬಯಸಿದ್ದೇನೆ. ಗೂಂಡಾಗಳು ಮತ್ತು ದುಷ್ಕರ್ಮಿಗಳು ಅವರ ಆಳ್ವಿಕೆಯಲ್ಲಿ ಮುಕ್ತವಾಗಿ ತಿರುಗಾಡುವುದು ಹೇಗೆ? ಈಗ ಗೂಂಡಾಗಳು ಮತ್ತು ಮಾಫಿಯಾಗಳಿಗೆ ರಕ್ಷಣೆ ಇಲ್ಲ. ಅವರ ಅಕ್ರಮ ಆಸ್ತಿಯ ಮೇಲೆ ಬುಲ್ಡೋಜರ್‌ಗಳು ಹರಿದಿವೆ

ರಾಜನಾಥ್ ಸಿಂಗ್, ರಕ್ಷಣಾ ಸಚಿವ

ಚುನಾವಣೆ ಬಳಿಕ ದುಪ್ಪಟ್ಟು ವೇಗದಲ್ಲಿ ಶುರು; ಪಾರದರ್ಶಕ ಹರಾಜು ಪ್ರಕ್ರಿಯೆ

ಗೋವಾದಲ್ಲಿ ಗಣಿಗಾರಿಕೆ ಪುನರಾರಂಭ: ಶಾ

ಪಣಜಿ (ಪಿಟಿಐ): ವಿಧಾನಸಭಾ ಚುನಾವಣೆ ಬಳಿಕ, ಗೋವಾದ ಗಣಿಗಾರಿಕೆ ಉದ್ಯಮವು ಎರಡು ಪಟ್ಟು ವೇಗದಲ್ಲಿ ಪುನರಾರಂಭವಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ಹೇಳಿದ್ದಾರೆ. ಗೋವಾ ವಿಧಾನಸಭೆಯ ಪ್ರಚಾರ ಕಣಕ್ಕೆ ಧುಮುಕಿರುವ ಅವರು, ನಾಲ್ಕು ವರ್ಷಗಳಿಂದ ಸ್ಥಗಿತಗೊಂಡಿರುವ ಕಬ್ಬಿಣದ ಅದಿರು ಗಣಿಗಾರಿಕೆಯನ್ನು ಪಾರದರ್ಶಕ ಹರಾಜು ಪ್ರಕ್ರಿಯೆ ಮೂಲಕ ಶುರು ಮಾಡಲಾಗುವುದು ಭರವಸೆ ನೀಡಿದರು.

2018ರಲ್ಲಿ 88 ಗಣಿ ಗುತ್ತಿಗೆ ಪರವಾನಗಿಗಳನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದ ಬಳಿಕ, ಗೋವಾದ ಪ್ರಮುಖ ಆದಾಯದ ಮೂಲವಾಗಿದ್ದ ಗಣಿಗಾರಿಕೆ ಸ್ತಬ್ಧವಾಗಿತ್ತು. ಚುನಾವಣೆ ಬಳಿಕ ಗಣಿಗಾರಿಕೆಗೆ ಜೀವಬರಲಿದೆ ಎಂದು ಗಣಿಗಾರಿಕೆಯ ಪ್ರಮುಖ ಭಾಗ ಎಂದು ಪರಿಗಣಿತವಾಗಿರುವ ಸನ್ವೋರ್ಡೆಮ್ ವಿಧಾನಸಭಾ ಕ್ಷೇತ್ರದಲ್ಲಿ ನಡೆಸಿದ ರ‍್ಯಾಲಿ ಬಳಿಕ ಅವರು ತಿಳಿಸಿದರು.

'ಗಣಿಗಾರಿಕೆ ಪುನರಾರಂಭ ಕುರಿತಂತೆ ಕೇಂದ್ರ ಸರ್ಕಾರ ಯಾವುದೇ ಸುಳ್ಳು ಭರವಸೆಗಳನ್ನು ನೀಡುವುದಿಲ್ಲ. ರಾಜ್ಯದ ಗಣಿ ಉದ್ಯಮದ ಕುರಿತು ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಬಿಜೆಪಿ ವಿಸ್ತೃತವಾಗಿ ಅಧ್ಯಯನ ಮಾಡಿದೆ. ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು ಈ ಸಂಬಂಧ ನನ್ನ ಜೊತೆ ನಾಲ್ಕು ಸಭೆಗಳನ್ನು ನಡೆಸಿದ್ದಾರೆ. ಕೇಂದ್ರ ಗಣಿ ಸಚಿವ ಪ್ರಲ್ಹಾದ ಜೋಷಿ, ಸಾಲಿಸಿಟರ್ ಜನರಲ್ ಮತ್ತು ಅಟಾರ್ನಿ ಜನರಲ್ ಅವರನ್ನೂ ಭೇಟಿ ಮಾಡಿ ಸಮಸ್ಯೆಗೆ ಪರಿಹಾರ ಕಂಡುಕೊಂಡಿದ್ದಾರೆ' ಎಂದು ಶಾ ವಿವರಿಸಿದರು.

ಕೇಂದ್ರ ಸರ್ಕಾರವು ವಿಶೇಷ ಗಣಿಗಾರಿಕೆ ನೀತಿಯನ್ನು ರಚಿಸಿದೆ. ಈ ನಂತರ ರಾಜ್ಯ ಸರ್ಕಾರವು ರಾಜ್ಯದಲ್ಲಿ ಖನಿಜ ನಿಗಮವನ್ನು ರಚಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದೆ ಎಂದು ಅವರು ಹೇಳಿದರು. ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷಗಳು (ಎಂಜಿಪಿ) ಸಹ ಶನಿವಾರ ತಮ್ಮ ಪಕ್ಷದ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದ್ದು, ಗಣಿಗಾರಿಕೆಯನ್ನು ಪುನರಾರಂಭಿಸುವ ಭರವಸೆ ನೀಡಿವೆ.

ಆಯ್ಕೆ ನಿಮ್ಮದು: ಅಮಿತ್ ಶಾ ಅವರು ಎರಡು ಆಯ್ಕೆಗಳನ್ನು ಜನರ ಮುಂದಿಟ್ಟರು. ಬಿಜೆಪಿಯ 'ಚಿನ್ನದ ಗೋವಾ' ಅಥವಾ ಕಾಂಗ್ರೆಸ್‌ನ 'ಗಾಂಧಿ ಪರಿವಾರದ ಗೋವಾ' – ಇವೆರಡರ ಮಧ್ಯೆ ಒಂದನ್ನು ಆಯ್ಕೆ ಮಾಡಿಕೊಳ್ಳುವಂತೆ ಅವರು ಕರೆ ನೀಡಿದರು. ಬಿಜೆಪಿಯಿಂದ ಮಾತ್ರ ರಾಜ್ಯದಲ್ಲಿ ರಾಜಕೀಯ ಸ್ಥಿರತೆ ತರಲು ಸಾಧ್ಯ ಎಂದು ಅವರು ಪ್ರತಿಪಾದಿಸಿದರು.

ರಾಜ್ಯದ ಹೊರಗಿನ ಪಕ್ಷಗಳಾದ ಟಿಎಂಸಿ ಹಾಗೂ ಎಎಪಿ ಗೋವಾಕ್ಕೆ ಬಂದು ಸ್ಪರ್ಧಿಸುತ್ತಿರುವುದನ್ನು ಶಾ ಟೀಕಿಸಿದ್ದಾರೆ. ಗೋವಾದ ಜನರ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳದ ಈ ಪಕ್ಷಗಳಿಂದ ಸಮಸ್ಯೆಗಳಿಗೆ ಪರಿಹಾರ ನೀಡಲು ಸಾಧ್ಯವಿಲ್ಲ. ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಗೋವಾದಂತಹ ಸಣ್ಣ ರಾಜ್ಯಗಳ ಅಭಿವೃದ್ಧಿಗೆ ಅದ್ಯತೆ ನೀಡುತ್ತಿದೆ ಎಂದು ಅವರು ಹೇಳಿದರು.

ಅಸಮರ್ಪಕ ಆಡಳಿತದಿಂದ ಗೋವಾವನ್ನು ನಾಶ ಮಾಡಿದ ಕಾಂಗ್ರೆಸ್ ಹಾಗೂ ಮಾಜಿ ಮುಖ್ಯಮಂತ್ರಿ ದಿಗಂಬರ್ ಕಾಮತ್ ಅವರನ್ನು ಶಾ ತರಾಟೆಗೆ ತೆಗೆದುಕೊಂಡರು. ಕಳೆದ ಹತ್ತು ವರ್ಷಗಳಲ್ಲಿ ರಾಜ್ಯದಲ್ಲಿ ಸ್ಥಿರವಾದ ಹಾಗೂ ಅಭಿವೃದ್ಧಿ ಪಥದ ಸರ್ಕಾರವನ್ನು ನೀಡಿದ್ದು ಬಿಜೆಪಿ ಎಂದು ಅವರು ಹೇಳಿದ್ದಾರೆ.

ಗೋವಾದ ಪೊಂಡಾದಲ್ಲಿ ಕೇಂದ್ರ ಸಚಿವ ಅಮಿತ್ ಶಾ ಅವರು ಭಾನುವಾರ ಚುನಾವಣಾ ಪ್ರಚಾರ ನಡೆಸಿದರು –ಪಿಟಿಐ ಚಿತ್ರ

ಹಿಂದೂಗಳ ರಕ್ತದಲ್ಲಿ ತೊಯ್ದ ಕೆಂಪು ಟೋಪಿ: ಯೋಗಿ

ಲಖನೌ: ಕೆಂಪು ಟೋಪಿಗಳು (ಸಮಾಜವಾದಿ ಪಕ್ಷದ ಟೋಪಿ) 2013ರ ಮುಜಫ್ಫರ್‌ನಗರ ಕೋಮು ಗಲಭೆಯಲ್ಲಿ ಬಲಿಯಾದ ಮುಗ್ಧ ಹಿಂದೂಗಳ ರಕ್ತದಿಂದ ತೊಯ್ದಿವೆ ಎಂದು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಹೇಳಿದ್ದಾರೆ. 1990ರಲ್ಲಿ ಅಯೋಧ್ಯೆಯಲ್ಲಿ ಗುಂಡು ಹಾರಿಸಿದ ಪಕ್ಷಕ್ಕೆ ಮತ ನೀಡುವುದರ ವಿರುದ್ಧ ಜನರಿಗೆ ಅವರು ಎಚ್ಚರಿಕೆ ನೀಡಿದ್ದಾರೆ.

ಉತ್ತರ ಪ್ರದೇಶದ ಪಶ್ಚಿಮ ಭಾಗದ ಬಾಗ್‌ಪತ್‌ನಲ್ಲಿ ಮತದಾರರ ಜತೆಗಿನ ಸಂವಾದದಲ್ಲಿ ಯೋಗಿ ಮಾತನಾಡಿದರು. ಮುಜಫ್ಫರ್‌ನಗರ ಕೋಮುಗಲಭೆ ಮತ್ತು ಅಯೋಧ್ಯೆಯಲ್ಲಿ ಕರಸೇವಕರ ಮೇಲೆ ನಡೆದ ಗುಂಡು ಹಾರಾಟವನ್ನು ಅವರು ನೆನಪಿಸಿದರು.

ಎಸ್‌ಪಿಗೆ ಮತ ನೀಡುವುದು ಎಂದರೆ ಮುಜಫ್ಫರ್‌ನಗರ ಗಲಭೆಯಲ್ಲಿ ಬಲಿಯಾದವರಿಗೆ ಅವಮಾನ ಮಾಡಿದಂತೆ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಕೂಡ ಕೆಂಪು ಟೋಪಿಗಳ ಬಗ್ಗೆ ಕಳೆದ ಡಿಸೆಂಬರ್‌ನಲ್ಲಿ ಮಾತನಾಡಿದ್ದರು.

'ಕೆಂಪು ಟೋಪಿ ಧರಿಸಿರುವ ಜನರಿಗೆ ಸಾಮಾನ್ಯ ಜನರ ಕಷ್ಟ ಕಾರ್ಪಣ್ಯಗಳ ಬಗ್ಗೆ ಕಾಳಜಿ ಇಲ್ಲ. ತಮ್ಮ ಬೊಕ್ಕಸ ತುಂಬಿಸುವುದಕ್ಕಾಗಿ, ಜೈಲಿನಲ್ಲಿರುವ ಉಗ್ರರನ್ನು ಬಿಡುಗಡೆ ಮಾಡುವುದಕ್ಕಾಗಿ ಮತ್ತು ಮಾಫಿಯಾಗಳಿಗೆ ಮುಕ್ತ ಅವಕಾಶ ಕೊಡುವುದಕ್ಕಾಗಿ ಅವರಿಗೆ ಅಧಿಕಾರ ಬೇಕು' ಎಂದು ಪ್ರಧಾನಿ ಹೇಳಿದ್ದರು. 'ಕೆಂಪು ಟೋಪಿ ಎಂದರೆ, ಉತ್ತರ ಪ್ರದೇಶಕ್ಕೆ ರೆಡ್ ಅಲರ್ಟ್, ಅಪಾಯದ ಸೂಚನೆ' ಎಂದು ಪ್ರಧಾನಿ ಹೇಳಿದ್ದರು.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಈ ಹೇಳಿಕೆಗೆ ತಿರುಗೇಟು ನೀಡಿದ್ದರು. ಕೆಂಪು ಟೋಪಿಯು ಬಿಜೆಪಿಗೆ ರೆಡ್ ಅಲರ್ಟ್ ಎಂದಿದ್ದರು.

'ಸರ್ಕಾರಿ ಕಚೇರಿಯಲ್ಲಿ ಅಂಬೇಡ್ಕರ್, ಭಗತ್ ಸಿಂಗ್ ಫೋಟೊ'

ಅಮೃತಸರ (ಪಿಟಿಐ): ಪಂಜಾಬ್‌ನಲ್ಲಿ ಎಎಪಿ ಅಧಿಕಾರಕ್ಕೆ ಬಂದರೆ ಸರ್ಕಾರದ ಎಲ್ಲ ಕಚೇರಿಗಳಲ್ಲಿ ಬಿ.ಆರ್.ಅಂಬೇಡ್ಕರ್ ಮತ್ತು ಭಗತ್ ಸಿಂಗ್ ಅವರ ಭಾವಚಿತ್ರ ಇರಿಸಲಾಗುವುದು ಎಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಭರವಸೆ ನೀಡಿದ್ದಾರೆ.

ಈ ಕಚೇರಿಗಳಲ್ಲಿ ಬೇರೆ ರಾಜಕಾರಣಿಗಳ ಭಾವಚಿತ್ರ ಇರುವುದಿಲ್ಲ ಎಂದೂ ಅವರು ಹೇಳಿದ್ದಾರೆ.

ಅಮೃತಸರ ಪೂರ್ವ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಪಂಜಾಬ್ ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಮತ್ತು ಶಿರೋಮಣಿ ಅಕಾಲಿ ದಳದ ಮುಖಂಡ ಬಿಕ್ರಂ ಸಿಂಗ್ ಮಜಿಥಿಯಾ ಅವರು ಜನರ ಸಮಸ್ಯೆ ಮರೆತು ಪರಸ್ಪರ ಬಯ್ದಾಡಿಕೊಂಡಿದ್ದಾರೆ ಎಂದೂ ಕೇಜ್ರಿವಾಲ್ ಹರಿಹಾಯ್ದಿದ್ದಾರೆ. ಈ ಇಬ್ಬರನ್ನು ಅವರು 'ರಾಜಕೀಯ ಆನೆಗಳು' ಎಂದಿದ್ದಾರೆ.



ಕೇಜ್ರಿವಾಲ್

ಸಿಧು ಅವರು ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತಿಲ್ಲ, ಅವರದ್ದು ಮುಂದಿನ ಮುಖ್ಯಮಂತ್ರಿಯಾಗುವ ಹೋರಾಟ ಮಾತ್ರ ಎಂದರು.

ಚುನಾವಣಾ ಕಣದಲ್ಲಿ

ಆಯೋಗದ ಸಭೆ ಇಂದು: ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ಭೌತಿಕ ರ‍್ಯಾಲಿಗಳಿಗೆ ಹೇರಿರುವ ನಿಷೇಧದ ಬಗ್ಗೆ ಪರಿಶೀಲನೆ ನಡೆಸಲು ಚುನಾವಣಾ ಆಯೋಗವು ಸೋಮವಾರ ಸಭೆ ನಡೆಸಲಿದೆ. ಭೌತಿಕ ಪ್ರಚಾರ ಕಾರ್ಯಕ್ರಮಗಳನ್ನು ನಡೆಸುವುದಕ್ಕಾಗಿ ಪಕ್ಷಗಳು ಮತ್ತು ಅಭ್ಯರ್ಥಿಗಳಿಗೆ ಇನ್ನಷ್ಟು ವಿನಾಯಿತಿಗಳನ್ನು ನೀಡಬಹುದೇ ಎಂಬ ಬಗ್ಗೆಯೂ ಆಯೋಗವು ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಿದೆ.

ಕಾಂಗ್ರೆಸ್‌ನ 4ನೇ ಪಟ್ಟಿ: ಉತ್ತರ ಪ್ರದೇಶ ವಿಧಾನಸಭೆಗೆ 61 ಅಭ್ಯರ್ಥಿಗಳ ನಾಲ್ಕನೇ ಪಟ್ಟಿಯನ್ನು ಕಾಂಗ್ರೆಸ್ ಪಕ್ಷವು ಭಾನುವಾರ ಪ್ರಕಟಿಸಿದೆ. 24 ಮಹಿಳೆಯರಿಗೆ ಟಿಕೆಟ್ ನೀಡಲಾಗಿದೆ. ಮೂರು ದಶಕಗಳಿಂದ ಉತ್ತರ ಪ್ರದೇಶದಲ್ಲಿ ಅಧಿಕಾರಕ್ಕೆ ಏರುವಲ್ಲಿ ವಿಫಲವಾಗಿರುವ ಕಾಂಗ್ರೆಸ್ ಪಕ್ಷವು ಈ ಬಾರಿ ಶೇ 40ರಷ್ಟು ಟಿಕೆಟ್‌ಗಳನ್ನು ಮಹಿಳೆಯರಿಗೆ ನೀಡುವುದಾಗಿ ಘೋಷಿಸಿತ್ತು. ಈವರೆಗೆ 311 ಅಭ್ಯರ್ಥಿಗಳ ಹೆಸರು ಪ್ರಕಟಿಸಿದೆ. ಅದರಲ್ಲಿ 127 ಮಹಿಳೆಯರಿದ್ದಾರೆ.

ಪಂಜಾಬ್: ಎರಡು ಕ್ಷೇತ್ರಗಳಿಂದ ಚನ್ನಿ ಸ್ಪರ್ಧೆ

ನವದೆಹಲಿ (ಪಿಟಿಐ): ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರನ್ನು ಎರಡು ಕ್ಷೇತ್ರಗಳಿಂದ ಕಣಕ್ಕೆ ಇಳಿಸಲು ಕಾಂಗ್ರೆಸ್ ನಿರ್ಧರಿಸಿದೆ. ಚನ್ನಿ ಅವರು ಈಗ ಪ್ರತಿನಿಧಿಸುತ್ತಿರುವ ಚಮಕೌರ್ ಸಾಹಿಬ್ ಕ್ಷೇತ್ರದಿಂದ ಅವರಿಗೆ ಈಗಾಗಲೇ ಟಿಕೆಟ್ ಪ್ರಕಟಿಸಲಾಗಿದೆ. ಈಗ, ಭಾದೌರ್ ಕ್ಷೇತ್ರದಿಂದಲೂ ಅವರಿಗೆ ಟಿಕೆಟ್ ನೀಡಲಾಗಿದೆ.

ಎಂಟು ಅಭ್ಯರ್ಥಿಗಳ ಮೂರನೇ ಪಟ್ಟಿಯನ್ನು ಕಾಂಗ್ರೆಸ್ ಭಾನುವಾರ ಪ್ರಕಟಿಸಿದೆ. ಮಾಜಿ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ಅವರು ಸ್ಪರ್ಧಿಸುತ್ತಿರುವ ಪಟಿಯಾಲಾ ಕ್ಷೇತ್ರದಿಂದ ಪಟಿಯಾಲಾದ ಮಾಜಿ ಮೇಯರ್ ವಿಷ್ಣು ಶರ್ಮಾ ಅವರನ್ನು ಕಾಂಗ್ರೆಸ್ ಕಣಕ್ಕೆ ಇಳಿಸಿದೆ. ಶರ್ಮಾ ಅವರು ಒಂದು ಕಾಲದಲ್ಲಿ ಅಮರಿಂದರ್ ಅವರ ಆಪ್ತವಲಯದಲ್ಲಿ ಗುರುತಿಸಿಕೊಂಡಿದ್ದವರು.

ಚನ್ನಿ

ಕೇಂದ್ರದ ಮಾಜಿ ಸಚಿವ ಪವನ್ ಕುಮಾರ್ ಬನ್ಸಲ್ ಅವರ ಮಗ ಮನೀಶ್ ಬನ್ಸಲ್ ಅವರಿಗೆ ಬರ್ನಾಲಾ ಕ್ಷೇತ್ರದ ಟಿಕೆಟ್ ನೀಡಲಾಗಿದೆ. ಶಿರೋಮಣಿ ಅಕಾಲಿದಳದ ಸುಖಬೀರ್ ಸಿಂಗ್ ಬಾದಲ್ ವಿರುದ್ಧ ಮೋಹನ್ ಸಿಂಗ್ ಫಲಿಯನ್‌ವಾಲಾ ಅವರನ್ನು ಕಣಕ್ಕೆ ಇಳಿಸಲು ನಿರ್ಧರಿಸಲಾಗಿದೆ.

ಫೆ. 20ರಂದು ಪಂಜಾಬ್‌ನಲ್ಲಿ ಒಂದೇ ಹಂತದಲ್ಲಿ ಮತದಾನ ನಡೆಯಲಿದೆ.

ಮಣಿಪುರ: ಟಿಕೆಟ್‌ಗಾಗಿ ಹಿಂಸಾಚಾರ

ಗುವಾಹಟಿ: ಮಣಿಪುರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಹಂಚಿಕೆ ವಿಚಾರ ಗಲಭೆಗೆ ಕಾರಣವಾಗಿದೆ. ಟಿಕೆಟ್ ಸಿಗದ್ದಕ್ಕೆ ಅಸಮಾಧಾನಗೊಂಡ ಮುಖಂಡರು ಹಾಗೂ ಕಾರ್ಯಕರ್ತರು ರಾಜ್ಯದ ವಿವಿಧ ಕಡೆಗಳಲ್ಲಿ ಬಿಜೆಪಿ ಕಚೇರಿಗಳ ಮೇಲೆ ಭಾನುವಾರ ದಾಳಿ ನಡೆಸಿದ್ದಾರೆ ಎಂದು 'ಎನ್‌ಡಿಟಿವಿ' ವರದಿ ಮಾಡಿದೆ.

ಫಲಕಗಳನ್ನು ಹಿಡಿದು ಬೀದಿಗಿಳಿದ ಪ್ರತಿಭಟನಕಾರರು, ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಎನ್. ಬೀರೇನ್ ಸಿಂಗ್ ಅವರ ಪ್ರತಿಕೃತಿ ದಹಿಸಿದ್ದಾರೆ. ಇಂಫಾಲದ ಬಿಜೆಪಿ ಕೇಂದ್ರ ಕಚೇರಿಗೆ ಪೊಲೀಸ್ ಭದ್ರತೆಯನ್ನು ಹೆಚ್ಚಿಸಲಾಗಿದೆ.

ಟಿಕೆಟ್ ಆಕಾಂಕ್ಷಿಗಳಾಗಿದ್ದ ಕೆಲವು ಮುಖಂಡರು ಪಕ್ಷದ ಮೇಲೆ ಮುನಿಸಿಕೊಂಡಿದ್ದು, ರಾಜೀನಾಮೆ ನೀಡಿದ್ದಾರೆ. ಆದರೆ ರಾಜೀನಾಮೆ ನೀಡಿದವರ ಸಂಖ್ಯೆ ಎಷ್ಟು ಎಂಬುದು ಖಚಿತಪಟ್ಟಿಲ್ಲ. ಮೂಲಗಳ ಪ್ರಕಾರ, ಕಾಂಗ್ರೆಸ್‌ನಿಂದ ಪಕ್ಷಾಂತರ ಆಗಿರುವ ಮುಖಂಡರಿಗೆ ಅವಕಾಶ ಕಲ್ಪಿಸಿದ್ದರಿಂದ, ಮೂಲ ಬಿಜೆಪಿಯಲ್ಲಿದ್ದ ಟಿಕೆಟ್ ಆಕಾಂಕ್ಷಿಗಳಿಗೆ ನಿರಾಸೆಯಾಗಿದೆ. ಕಾಂಗ್ರೆಸ್‌ನಿಂದ ಬಿಜೆಪಿಗೆ ವಲಸೆ ಬಂದಿದ್ದ 10 ಜನರಿಗೆ ಬಿಜೆಪಿ ಪಟ್ಟಿಯಲ್ಲಿ ಸ್ಥಾನ ನೀಡಲಾಗಿದೆ.

ರಾಹುಲ್ ಜೇಬು ಕತ್ತರಿಸಿದ್ದು ಯಾರು: ಹರ್‌ಸಿಮ್ರತ್ ಪ್ರಶ್ನೆ

ಚಂಡೀಗಡ (ಪಿಟಿಐ): 'ಶ್ರೀ ಹರ್‌ಮಂದಿರ್ ಸಾಹಿಬ್‌ನಲ್ಲಿ ರಾಹುಲ್ ಗಾಂಧಿ ಅವರ ಜೇಬಿಗೆ ಕತ್ತರಿ ಹಾಕಿದವರು ಯಾರು' ಎಂದು ಶಿರೋಮಣಿ ಅಕಾಲಿ ದಳದ ಸಂಸದೆ ಹರ್‌ಸಿಮ್ರತ್ ಕೌರ್ ಬಾದಲ್ ಪ್ರಶ್ನಿಸಿದ್ದಾರೆ. ಇದಕ್ಕೆ ತಿರುಗೇಟು ನೀಡಿರುವ ಕಾಂಗ್ರೆಸ್, ಸುಳ್ಳು ಸುದ್ದಿ ಹರಡುವುದನ್ನು ನಿಲ್ಲಿಸುವಂತೆ ಕೌರ್ ಅವರಿಗೆ ಹೇಳಿದೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪಕ್ಷದ ಅಭ್ಯರ್ಥಿಗಳ ಜತೆಗೆ ಅಮೃತಸರದ ಸ್ವರ್ಣ ಮಂದಿರಕ್ಕೆ ಬುಧವಾರ ಭೇಟಿ ಕೊಟ್ಟಿದ್ದರು. ಬಳಿಕ ಅವರು ಜಲಂಧರ್‌ಗೂ ಹೋಗಿದ್ದರು.

ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ, ಉಪ ಮುಖ್ಯಮಂತ್ರಿಗಳಾದ ಸುಖಜಿಂದರ್ ಸಿಂಗ್ ರಾಂಧವ ಮತ್ತು ಒ.ಪಿ. ಸೋನಿ, ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ನವಜೋತ್ ಸಿಂಗ್ ಸಿಧು ಅವರು ಮಾತ್ರ ರಾಹುಲ್ ಜತೆಗಿದ್ದರು. ಹಾಗಿರುವಾಗ ಜೇಬಿಗೆ ಕತ್ತರಿ ಹಾಕಿದ್ದು ಯಾರು ಎಂದು ಕೌರ್ ಅವರು ಟ್ವೀಟ್‌ನಲ್ಲಿ ಪ್ರಶ್ನಿಸಿದ್ದಾರೆ. ನಡೆದಿದೆ ಎನ್ನಲಾದ ಪ್ರಕರಣದ ಬಗ್ಗೆ ಅವರು ಹೆಚ್ಚಿನ ಮಾಹಿತಿ ಏನನ್ನೂ ಬಹಿರಂಗಪಡಿಸಿಲ್ಲ.

ಅಂತಹ ಯಾವುದೇ ಘಟನೆ ನಡೆದಿಲ್ಲ. ಹಾಗಾಗಿ, ಇಂತಹ ಸುಳ್ಳು ಸುದ್ದಿ ಹರಡುವುದು ಧರ್ಮನಿಂದೆಗೆ ಸಮಾನ ಎಂದು ಕಾಂಗ್ರೆಸ್‌ನ ಮುಖ್ಯ ವಕ್ತಾರ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದ್ದಾರೆ. ಕೌರ್ ಅವರು ಹೊಣೆಗಾರಿಕೆ ಮತ್ತು ಪ್ರೌಢಿಮೆ ತೋರಬೇಕು ಎಂದು ಅವರು ಸಲಹೆ ಕೊಟ್ಟಿದ್ದಾರೆ.

ಲತಾ ಮಂಗೇಶ್ಕರ್ ಆರೋಗ್ಯದಲ್ಲಿ ಚೇತರಿಕೆ

ಮುಂಬೈ (ಪಿಟಿಐ): ಖ್ಯಾತ ಗಾಯಕಿ ಲತಾ ಮಂಗೇಶ್ಕರ್ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದ್ದು, ಅವರಿಗೆ ಅಳವಡಿಸಲಾಗಿದ್ದ ವೆಂಟಿಲೇಟರ್ ಅನ್ನು ತೆಗೆಯಲಾಗಿದೆ. ಆದರೆ, ಅವರನ್ನು ಇನ್ನೂ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಇರಿಸಲಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಲತಾ ಅವರಿಗೆ ಕೋವಿಡ್ ದೃಢಪಟ್ಟಿದ್ದು, ಸೌಮ್ಯ ಲಕ್ಷಣಗಳಿದ್ದವು. ಅವರನ್ನು ಜನವರಿ 8ರಂದು ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಲತಾ ಮಂಗೇಶ್ಕರ್

'ಲತಾ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ' ಎಂದು ಡಾ.ಪ್ರತೀತ್ ಸಮದಾನಿ ಮತ್ತು ಅವರ ವೈದ್ಯರ ತಂಡವು ಮಾಹಿತಿ ನೀಡಿದೆ.

ಭಾರತದಲ್ಲಿ ಕೋವಿಡ್‌ಗೆ ಎರಡು ವರ್ಷ

'ಲಸಿಕೆ, ಮಾರ್ಗಸೂಚಿಯೇ ಪರಿಣಾಮಕಾರಿ ಅಸ್ತ್ರ'

ನವದೆಹಲಿ (ಪಿಟಿಐ): 'ಭಾರತದಲ್ಲಿ ಕೋವಿಡ್ ಸಾಂಕ್ರಾಮಿಕ ಸೋಂಕು ಕಂಡುಬಂದು ಜ. 30ಕ್ಕೆ ಎರಡು ವರ್ಷ ಪೂರ್ಣಗೊಂಡಿದ್ದು, ಲಸಿಕೆ ಪಡೆಯುವುದು ಮತ್ತು ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸುವುದು ಕೊರೊನಾ ವಿರುದ್ಧದ ಅತ್ಯಂತ ಪರಿಣಾಮಕಾರಿ ಅಸ್ತ್ರಗಳಾಗಿ ಉಳಿದಿವೆ' ಎಂದು ಆರೋಗ್ಯ ತಜ್ಞರು ಸಲಹೆ ನೀಡಿದ್ದಾರೆ.

ದೇಶದಲ್ಲಿ 2020ರ ಜ. 30ರಂದು ಮೊದಲ ಕೋವಿಡ್ ಪ್ರಕರಣ ವರದಿಯಾಗಿತ್ತು. ಚೀನಾದ ವುಹಾನ್ ವಿಶ್ವವಿದ್ಯಾಲಯದಲ್ಲಿ ಮೂರನೇ ವರ್ಷದ ವೈದ್ಯಕೀಯ ವಿದ್ಯಾರ್ಥಿನಿಯಾಗಿದ್ದ ಕೇರಳದ ಯುವತಿಯು ಸೆಮಿಸ್ಟರ್ ರಜೆಗೆಂದು ಭಾರತಕ್ಕೆ ಮರಳಿದ್ದಾಗ ಆಕೆಗೆ ಕೋವಿಡ್ ದೃಢಪಟ್ಟಿತ್ತು.

ಒಟ್ಟಾರೆ ಎರಡು ವರ್ಷಗಳ ಅವಧಿಯಲ್ಲಿ ಭಾರತವು ಕೋವಿಡ್–19ರ ಮೂರು ಅಲೆಗಳು ಮತ್ತು ಏಳು ರೂಪಾಂತರಿ ತಳಿಗಳೊಂದಿಗೆ ಹೋರಾಟ ಮಾಡಿದೆ. ಕೋವಿಡ್ ಮತ್ತು ಅದರ ರೂಪಾಂತರಿ ತಳಿಗಳಿಂದಾಗಿ ಭಾರತದಲ್ಲಿ ಒಟ್ಟು 4.8 ಕೋಟಿ ಪ್ರಕರಣಗಳು ವರದಿಯಾಗಿದ್ದು, 4.94 ಲಕ್ಷ ಮಂದಿ ಸಾವಿಗೀಡಾಗಿದ್ದಾರೆ.

'ಪರೀಕ್ಷೆ- ಪತ್ತೆ ಹಚ್ಚುವಿಕೆ- ಚಿಕಿತ್ಸೆ- ಲಸಿಕೆ (ಟೆಸ್ಟ್-ಟ್ರ್ಯಾಕ್-ಟ್ರೀಟ್-ವ್ಯಾಕ್ಸಿನೇಟ್) ಮತ್ತು ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸುವುದೇ ಕೋವಿಡ್ ನಿರ್ವಹಣೆಗೆ ಉಳಿದಿರುವ ಪರೀಕ್ಷಿತ ಕಾರ್ಯತಂತ್ರವಾಗಿದೆ' ಎಂದು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯಾ ಹೇಳಿದ್ದಾರೆ.

ಕಾಜೋಲ್‌ಗೆ ಕೋವಿಡ್

ಮುಂಬೈ: ಬಾಲಿವುಡ್ ನಟಿ ಕಾಜೋಲ್ ಅವರಿಗೆ ಭಾನುವಾರ ಕೋವಿಡ್ ದೃಢಪಟ್ಟಿದೆ.

ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪುತ್ರಿಯ ಜತೆಗಿರುವ ತಮ್ಮ ಚಿತ್ರವನ್ನು ಹಂಚಿಕೊಂಡಿರುವ ಅವರು, 'ನನಗೆ ಕೋವಿಡ್ ದೃಢಪಟ್ಟಿದೆ. ಶೀತದಿಂದಾಗಿ ಕಾಲ್ಪನಿಕ ರುಡಾಲ್ಫ್ ಜಿಂಕೆಯ ಮೂಗಿನಂತೆ ಕೆಂಪಾಗಿರುವ ನನ್ನ ಮೂಗನ್ನು ಇತರರಿಗೆ ತೋರಿಸಲು ತೀವ್ರ ಮುಜುಗರವಾಗುತ್ತದೆ' ಎಂದು ಬರೆದುಕೊಂಡಿದ್ದಾರೆ.

ಕಾಜೋಲ್

'ಮೂರನೇ ಅಲೆ ವಿರುದ್ಧ ಯಶಸ್ವಿ ಹೋರಾಟ'

ನವದೆಹಲಿ: 'ಕೋವಿಡ್‌ನ ಮೂರನೇ ಅಲೆ ವಿರುದ್ಧ ದೇಶವು ಭಾರಿ ಯಶಸ್ಸಿನೊಂದಿಗೆ ಹೋರಾಟ ನಡೆಸುತ್ತಿದೆ. ದೇಶಿ ನಿರ್ಮಿತ ಕೋವಿಡ್ ಲಸಿಕೆಯು ನಮ್ಮ ಶಕ್ತಿಯಾಗಿದೆ' ಎಂದು ವರ್ಷದ ಮೊದಲ 'ಮನ್ ಕಿ ಬಾತ್'ನಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. 'ದೇಶದಲ್ಲಿ 15ರಿಂದ 18 ವರ್ಷದೊಳಗಿನ ಸುಮಾರು ಶೇ 60ರಷ್ಟು ಮಕ್ಕಳು ಕೋವಿಡ್ ಲಸಿಕೆ ಪಡೆದಿದ್ದಾರೆ. ಇದರಿಂದ ಯುವ ಜನಾಂಗಕ್ಕೆ ಕೋವಿಡ್‌ನಿಂದ ರಕ್ಷಣೆ ಸಿಗುವುದಲ್ಲದೆ, ಕಲಿಕೆ ಮುಂದುವರಿಸಲು ನೆರವಾಗಲಿದೆ' ಎಂದೂ ತಿಳಿಸಿದ್ದಾರೆ.

ಪೆಗಾಸಸ್: ಪ್ರಧಾನಿ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ –'ಸುಪ್ರೀಂ'ಗೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಇಸ್ರೇಲ್‌ನಿಂದ ಗೂಢಚರ್ಯೆ ಕುತಂತ್ರಾಂಶ ಪೆಗಾಸಸ್ ಖರೀದಿಗೆ ಸಂಬಂಧಿಸಿ ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಆದೇಶಿಸಲು ಕೋರಿ ಸುಪ್ರೀಂ ಕೋರ್ಟ್‌ಗೆ ಹೊಸದಾಗಿ ಅರ್ಜಿ ಸಲ್ಲಿಸಲಾಗಿದೆ.

ಅಂತರರಾಷ್ಟ್ರೀಯ ಮಾಧ್ಯಮದಲ್ಲಿ ಪೆಗಾಸಸ್ ಗೂಢಚರ್ಯೆ ಕುರಿತಂತೆ ಹೊಸದಾಗಿ ಬಂದಿರುವ ವರದಿಗಳನ್ನು ಸುಪ್ರೀಂ ಕೋರ್ಟ್ ಪರಿಗಣಿಸಬೇಕು ಎಂದು ಅರ್ಜಿದಾರ, ವಕೀಲ ಮನೋಹರ್ ಲಾಲ್ ಶರ್ಮಾ ಅವರು ಕೋರಿದ್ದಾರೆ.

ಈ ಸಂಬಂಧ ಈಗಾಗಲೇ ಸುಪ್ರೀಂ ಕೋರ್ಟ್‌ನಲ್ಲಿ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದು, ಶರ್ಮಾ ಅವರು ಸಹ ಈ ಗುಂಪಿನಲ್ಲಿದ್ದಾರೆ. 'ಪ್ರಧಾನಿ ವಿರುದ್ಧ ಎಫ್‌ಐಆರ್ ದಾಖಲಿಸಬೇಕು, ಈ ವಹಿವಾಟಿಗೆ ಸಂಬಂಧಿಸಿದ ಹಣವನ್ನು ವಸೂಲಿ ಮಾಡಬೇಕು ಹಾಗೂ ಮೋದಿ ಅವರನ್ನು ಶಿಕ್ಷೆಗೊಳಪಡಿಸಬೇಕು' ಎಂದು ಮನವಿ ಮಾಡಿದ್ದಾರೆ.

ಪೆಗಾಸಸ್ ಸಂಬಂಧಿಸಿ ಸಲ್ಲಿಕೆಯಾಗಿರುವ ವಿವಿಧ ಅರ್ಜಿಗಳಿಗೆ ಸಂಬಂಧಿಸಿದಂತೆ 2021ರ ಅಕ್ಟೋಬರ್ 27ರಂದು ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠವು ಪ್ರಕರಣದ ತನಿಖೆಗೆ ಸ್ವತಂತ್ರ ತಜ್ಞರ ಸಮಿತಿಯನ್ನು ರಚಿಸಿದ್ದು, ತನಿಖೆಯ ಮೇಲ್ವಿಚಾರಣೆಗೆ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್.ವಿ.ರವೀಂದ್ರನ್ ಅವರನ್ನು ನೇಮಿಸಿತ್ತು.

'ಈ ಪ್ರಕರಣದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ, ವ್ಯಕ್ತಿಯ ಖಾಸಗೀತನಕ್ಕೆ ಧಕ್ಕೆ ಆಗಿರುವ ಆರೋಪಗಳಿವೆ. ಅದು ಪರೀಕ್ಷೆಗೆ ಒಳಪಡಬೇಕಿದೆ. ಇದರ ಪರಿಣಾಮ ಎಲ್ಲ ನಾಗರಿಕರ ಮೇಲಾಗುತ್ತದೆ' ಎಂದು ಕೋರ್ಟ್ ಈ ಕುರಿತ ಆದೇಶದಲ್ಲಿ ಹೇಳಿತ್ತು.

ಯಾವುದಾದರೂ ಸರ್ಕಾರಿ ಇಲಾಖೆಯು ಪೆಗಾಸಸ್ ಕುತಂತ್ರಾಂಶವನ್ನು ಯಾವುದೇ ನಾಗರಿಕನ ವಿರುದ್ಧ ಬಳಸಿದೆಯೇ? ಬಳಸಿದ್ದರೆ ಯಾವ ಕಾಯ್ದೆ, ನಿಯಮದಡಿ? ಕಾನೂನು ಪ್ರಕಾರ ಜಾರಿಗೊಳಿಸಿದೆಯೇ ಎಂದು ತಿಳಿಯಲೂ ಸಮಿತಿಗೆ ಸೂಚಿಸಿತ್ತು.

ಈಗ ಹೊಸದಾಗಿ ಅರ್ಜಿ ಸಲ್ಲಿಸಿರುವ ಶರ್ಮಾ, 'ಭಾರತ ಸರ್ಕಾರವು ಪೆಗಾಸಸ್ ಕುತಂತ್ರಾಂಶವನ್ನು ಇಸ್ರೇಲ್‌ನಿಂದ 2017ರಲ್ಲಿ ಕ್ಷಿಪಣಿ ವ್ಯವಸ್ಥೆ ಒಳಗೊಂಡ 2 ಶತಕೋಟಿ ಡಾಲರ್ ವಹಿವಾಟಿನ ಭಾಗವಾಗಿ ಖರೀದಿಸಿದೆ' ಎಂಬ ವರದಿಯನ್ನು ಉಲ್ಲೇಖಿಸಿದ್ದಾರೆ.

ಈ ಹಿಂದೆ 2021ರ ಜುಲೈ 18ರಂದು ಅಂತರರಾಷ್ಟ್ರೀಯ ತನಿಖಾ ಸಂಸ್ಥೆಯು, ಪೆಗಾಸಸ್ ಕುತಂತ್ರಾಂಶವನ್ನು ಬಳಸಿ ಭಾರತದ ಹಲವು ಸಚಿವರು, ರಾಜಕಾರಣಿಗಳು, ಕಾರ್ಯಕರ್ತರು, ಉದ್ಯಮಿಗಳು, ಪತ್ರಕರ್ತರು ಸೇರಿದಂತೆ 50,000 ಮೊಬೈಲ್ ಸಂಖ್ಯೆಗಳ ಮಾಹಿತಿಯನ್ನು ಹ್ಯಾಕ್ ಮಾಡಲಾಗಿದೆ ಎಂದು ವರದಿ ಮಾಡಿತ್ತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ

ಡಾ. ಬಿ.ಟಿ ಸಂಪತ್ ಕುಮಾರ್
(MS, MCH ಮೂತ್ರಶಾಸ್ತ್ರಜ್ಞ ಮತ್ತು ಶಿಕ್ಷಕರು)
(02.11.1931 - 30.01.2022)
ದುಃಖತಪ್ತರು:
ಡಾ. ಕೆ.ಎಚ್ ವಿಮಲಾ ಸಂಪತ್ ಕುಮಾರ್
ಡಾ. ಅರ್ಜುನ್ ಸಂಪತ್ ಕುಮಾರ್
ಡಾ. ಬೀನಾ, ಮಾಸ್ಟರ್ ಅಭಿ ಗೌಡ
ಬಿ.ಟಿ ಕುಟುಂಬ ಮತ್ತು ಕುಂಸಿ ಕುಟುಂಬ.
ಅಂತ್ಯಕ್ರಿಯೆಯನ್ನು ವಿಲ್ಸನ್ ಗಾರ್ಡನ್‌ನ ರುದ್ರಭೂಮಿಯಲ್ಲಿ ದಿ: 31.01.2022 ರಂದು ಮಧ್ಯಾಹ್ನ 12.00 ಘಂಟೆಗೆ ನೆರವೇರಿಸಲಾಗುವುದು.

ಭಾವಪೂರ್ಣ ಶ್ರದ್ಧಾಂಜಲಿ

ಡಾ|| ಪ್ರಕಾಶ್ ತೋಪಯ್ಯ
ಕಾರ್ಡಿಯೋಲಜಿಸ್ಟ್, ಶ್ಯಾಂಪೇನ್, ಯು.ಎಸ್.ಎ.
ಇವರು ದಿನಾಂಕ 27.01.2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಸದಾ ಪ್ರಾರ್ಥಿಸುವ
ಅವರ ದುಃಖತಪ್ತ ಕುಟುಂಬದವರು.
ಮೊಬೈಲ್: 98804 23610

ಉತ್ತರ ಕ್ರಿಯಾದಿ

ಶ್ರೀಮತಿ ಪುಷ್ಪಲತ ಮಂಜುನಾಥ್
ಗೌರವಾನ್ವಿತ ನಿವೃತ್ತ ನ್ಯಾಯಮೂರ್ತಿ ಶ್ರೀ ಕೆ.ಎಲ್. ಮಂಜುನಾಥ್‌ರವರ ಧರ್ಮಪತ್ನಿ ಶ್ರೀ ಸೋಮೇಶ್ವರ ನಿಲಯ: ನಂ. 7, ಸ್ವಯಂಪ್ರಭ ಕಲ್ಯಾಣ ಮಂಟಪ ರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 079. ಇವರು ಮಾಡುವ ವಿಜ್ಞಾಪನೆಗಳು
ಮಾನ್ಯರೇ, ಕರ್ನಾಟಕ ರಾಜ್ಯ ಹೈಕೋರ್ಟ್ ನಿವೃತ್ತ ಗೌರವಾನ್ವಿತ ನ್ಯಾಯಮೂರ್ತಿಗಳು ಹಾಗೂ ಕರ್ನಾಟಕದ ಗಡಿ ಮತ್ತು ನದಿಗಳ ರಕ್ಷಣಾ ಆಯೋಗದ ಅಧ್ಯಕ್ಷರಾಗಿದ್ದ ನನ್ನ ಪತಿ ಗೌರವಾನ್ವಿತ ನ್ಯಾಯಮೂರ್ತಿ
ಶ್ರೀ ಕೆ. ಎಲ್. ಮಂಜುನಾಥ್ ರವರು
ದಿನಾಂಕ 23-01-2022 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿಗಳನ್ನು ದಿನಾಂಕ 02-02-2022 ರ ಬುಧವಾರ ಮಧ್ಯಾಹ್ನ 12:30 ಗಂಟೆಗೆ ನೆಲಮಂಗಲ ತಾಲ್ಲೂಕು ಕೆಂಪಲಿಂಗನ ಹಳ್ಳಿ ಹತ್ತಿರದ ಎಲೆಚಗೆರೆ ಕಾಲೋನಿಯಲ್ಲಿರುವ ನಮ್ಮ ತೋಟದಲ್ಲಿ ಏರ್ಪಡಿಸಲಾಗಿದೆ. ದಯಮಾಡಿ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ಕೋರುತ್ತೇವೆ.
ಇಂತಿ ದುಃಖತಪ್ತರು: ಪತ್ನಿ ಶ್ರೀಮತಿ ಪುಷ್ಪಲತ ಮಂಜುನಾಥ್
ಪುತ್ರಿ ಡಾ. ಚೈತ್ರ ಮಂಜುನಾಥ್, ಪುತ್ರ ದರ್ಪಣ್ ಮಂಜುನಾಥ್ ಮತ್ತು ಮೊಮ್ಮಗ ಚಿ. ಭೌತಿಕ್ ಹೆಚ್. ಎಸ್. ಮತ್ತು ಬಂಧು–ಮಿತ್ರರು
Scan this QR Code
Go to Google Map
(Justice K. L. Manjunath Farm)

OBITUARY

Dr. B.T. Sampathkumar
Urologist, former professor and head of urology, BMC and former director of The Bangalore Hospital
left for the heavenly abode on 30/01/2022.
Beloved teacher, wonderful clinician and human being par excellence.
May his soul attain Sadgati.
Directors and Promoters
SMARH
The Bangalore Hospital

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Walk-in

GRT JEWELLERS Since 1964
ಉದ್ಯೋಗ ಅವಕಾಶಗಳು
1964 ರಿಂದ ಅತ್ಯಂತ ವಿಶ್ವಾಸಕ್ಕೆ ಪಾತ್ರವಾಗಿರುವ GRT ಜ್ಯುವೆಲ್ಲರ್ಸ್
RR ನಗರ್, ಬೆಂಗಳೂರು
ಷೋರೂಂಗಳಿಗೆ ಮಾರಾಟ ಸಿಬ್ಬಂದಿ ಬೇಕಾಗಿದ್ದಾರೆ. ಹೊಸದಾಗಿ ಕೆಲಸವನ್ನು ಹುಡುಕುತ್ತಿರುವ ಹಾಗೂ ಅನುಭವವಿರುವ ಅಭ್ಯರ್ಥಿಗಳು ತಮ್ಮ ಸ್ವವಿವರಗಳು ಹಾಗೂ ವಿದ್ಯಾರ್ಹತೆಯ ಪ್ರಮಾಣ ಪತ್ರಗಳ ನಕಲು ಪ್ರತಿಯೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಬಹುದು. ಕಡ್ಡಾಯವಾಗಿ ಕನ್ನಡ ಮಾತನಾಡಲು ಗೊತ್ತಿರಬೇಕು.
ಸೇಲ್ಸ್‌ಮನ್ / ಸೇಲ್ಸ್‌ಗರ್ಲ್ಸ್
ಪದವೀಧರರು ಅಥವಾ PUC ಉತ್ತೀರ್ಣತೆ ಪಡೆದವರು (ಹೊಸಬರು ಅಥವಾ ಆಭರಣ ಮಾರಾಟ ಹಾಗೂ ಇತರೆ ರೀಟೈಲ್ ವಿಭಾಗದಲ್ಲಿ ಅನುಭವವಿರುವವರು)
ವಯೋಮಿತಿ : 22 ರಿಂದ 27 ವರ್ಷಗಳ ವರೆಗೆ
ಸೇಲ್ಸ್ ಅಸಿಸ್ಟೆಂಟ್ಸ್
PUC ಮತ್ತು 10ನೇ ತರಗತಿ (ಉತ್ತೀರ್ಣತೆ ಅಥವಾ ವಿದ್ಯೆಯನ್ನು ಮುಂದುವರೆಸಲಾಗದವರು).
ವಯೋಮಿತಿ : 17 ರಿಂದ 22 ವರ್ಷಗಳ ವರೆಗೆ
ದಿನಾಂಕ ಮತ್ತು ಸಮಯ
31-01-2022, ಸೋಮವಾರ; 01-02-2022, ಮಂಗಳವಾರ
(ಬೆಳಿಗ್ಗೆ 10.00 ರಿಂದ ಸಂಜೆ 5.00 ರ ವರೆಗೆ)
ಸಂದರ್ಶನದ ಸ್ಥಳ
ಹೋಟೆಲ್ ರಾಯಲ್ ಇಂದ್ರಪ್ರಸ್ಥ
202, 4ನೇ ಹಂತ, BEML ಲೇಔಟ್, ಕಾರ್ಯಪ್ಪ ಪಾರ್ಕ್ ಎದುರು, ರಾಜ ರಾಜೇಶ್ವರಿ ನಗರ, RR ನಗರ ಪೊಲೀಸ್ ಠಾಣೆ ಹತ್ತಿರ, ಬೆಂಗಳೂರು – 560 098.
ಸಂಪರ್ಕ ಸಂಖ್ಯೆಗಳು : 96869 05786 96867 99888
ಅನುಭವವಿರುವವರಿಗೆ ಹೆಚ್ಚಿನ ವೇತನ ನೀಡಲಾಗುವುದು.
ನಿಮ್ಮ ಸ್ವವಿವರಗಳನ್ನು (Resume) recruitment@grtjewels.comಗೆ ಕಳುಹಿಸಬಹುದು.

Cook
ಅಡಿಗೆಯವರು ಬೇಕಾಗಿದ್ದಾರೆ (ಹೆಂಗಸರು) ರುಚಿ-ರುಚಿಯಾಗಿ ಸಸ್ಯಾಹಾರ ಮತ್ತು ಮಾಂಸಾಹಾರ ತಯಾರಿಸಬಲ್ಲ ನುರಿತ ಅಡಿಗೆಯವರು ಜೆ.ಪಿ. ನಗರದಲ್ಲಿ ವಾಸವಾಗಿರುವ ವೈದ್ಯರ ಕುಟುಂಬಕ್ಕೆ ಬೇಕಾಗಿದ್ದಾರೆ. ಹತ್ತಿರ ಇದ್ದವರಿಗೆ ಮೊದಲ ಆದ್ಯತೆ ಅನುಭವಕ್ಕೆ ತಕ್ಕ ಸಂಬಳ ಸಂಪರ್ಕಿಸಿ ಶಂಕರ್ : 9449405317

General
WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600 -62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 8123884588, 8123884788

TOYOTA, ಟಾಟಾಮೋಟಾರ್ಸ್, ಬಿಗ್ ಬಜಾರ್ಸ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000- 60,000 /- ವಸತಿಯೂಟವಿದೆ. 7795837319, 9901312461

Part-Time Jobs
ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

EDUCATION
To Place your Classified Ads Contact: 9845114560

Wanted
ಚಲನಚಿತ್ರ, ಧಾರಾವಾಹಿಗಾಗಿ ನಟ- ನಟಿ ಪೋಷಕರು, ಮಕ್ಕಳು ಅಭಿನಯಿಸಲು ಹೊಸ ಕಲಾವಿದರಿಗೆ ಅವಕಾಶವಿದೆ ಮೊದಲು ಭಾವಚಿತ್ರದೊಂದಿಗೆ ಸಂಪರ್ಕಿಸಿ: 9353637689, 9035541461

ಹೋಂನರ್ಸ್/ ಮನೆಕೆಲಸಕ್ಕೆ, ಹೆಂಗಸರು/ ಹುಡುಗಿಯರು ಬೇಕಾಗಿದ್ದಾರೆ. (12,000-18,000) ಉಚಿತ ಊಟ-ವಸತಿ. ಉಡುಪಿ: 9845276452, 0820-2557676.

ಭವಿಷ್ಯ

Astrology
★ಓಂದುರ್ಗಾ ಅಂಜನಂ★ ಜ್ಯೋತಿಷ್ಯ ಮತ್ತು ವಾಸ್ತುಕೇಂದ್ರ, ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳಿಯ ದೈವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿದ್ವಾನ್ ಗುರು ಶ್ರೀದೇವನಂದನ್ ರವರಿಂದ ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ,ಸುಖಶಾಂತಿ ನೆಮ್ಮದಿಗಾಗಿ,ಸಿರಿಸಂಪತ್ತು,ಸ್ತ್ರೀ ಪುರುಷ,ದಾಂಪತ್ಯ,ಮದುವೆ, ಸಂತಾನ,ಆರೋಗ್ಯಕ್ಕೆ ಬೇಕಾಗುವ ಸರ್ವಮನಇಚ್ಛಾ ಅತಿಘೋರ,ನಿಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾವಶೀಕರಣ ಆಕರ್ಷಣ ಸಂಮೋಹನ,ದುಷ್ಟಶಕ್ತಿಗಳು ಉಚ್ಚಾಟನೆ ಮತ್ತು ಶತ್ರು ಸಂಬಂಧಿತ ಮಾಟ,ದೃಷ್ಟಿಶಾಪಗಳಿಗೆ ಇಲ್ಲೇ ಇಂದೇ_ಪರಿಹಾರಕ್ಕೆ ಸಂಪರ್ಕಿಸಿರಿ: 8217437023 ನಿಮ್ಮ ಇಚ್ಛೆಗೆ 24ಘಂಟೆಗಳು ಮಾತ್ರ.

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

ಸ್ತ್ರೀ ಪುರುಷ ವಶೀಕರಣ ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಕಡಿಮೆ ಖರ್ಚಿನಲ್ಲಿ ಒಂದು ದಿನದಲ್ಲಿ ಕೇರಳದಿಂದ ನೇರಪರಿಹಾರ 9148890039

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕ್ರಿಶ್ ತ್ಯಾಗಿ

ಟೆನಿಸ್: ಕ್ರಿಶ್ ತ್ಯಾಗಿ ಚಾಂಪಿಯನ್

ಬೆಂಗಳೂರು: ಕರ್ನಾಟಕದ ಕ್ರಿಶ್ ತ್ಯಾಗಿ ಅವರು ಇಂದೋರ್‌ನಲ್ಲಿ ನಡೆದ ಐಟಿಎಫ್ 18 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಬಾಲಕರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಶನಿವಾರ ನಡೆದ ಫೈನಲ್‌ನಲ್ಲಿ ಕ್ರಿಶ್ 6-1, 2-6, 6-4ರಿಂದ ದಕ್ಷ್ ಅಗರವಾಲ್ ಅವರನ್ನು ಸೋಲಿಸಿದರು.

ಸೋಲ್ ಸ್ಪೋರ್ಟ್ಸ್ ಅಕಾಡೆಮಿಯ ಕ್ರಿಶ್ ಅವರು ಪ್ರಜ್ವಲ್ ತಿವಾರಿ ಅವರೊಂದಿಗೆ ಡಬಲ್ಸ್‌ನಲ್ಲಿ ರನ್ನರ್ ಅಪ್ ಆದರು. ಫೈನಲ್ ಪಂದ್ಯದಲ್ಲಿ ಈ ಜೋಡಿಯು 6-2, 5-7, 4-10ರಿಂದ ದೀಪ್ ಮುನಿಮ್ ಮತ್ತು ಡೆನಿಮ್ ಯಾದವ್ ಎದುರು ಸೋತರು.

ಒಡಿಶಾ ಓಪನ್ ಬ್ಯಾಡ್ಮಿಂಟನ್: ಗಾಯತ್ರಿ– ತ್ರೀಶಾಗೆ ಮಹಿಳಾ ಡಬಲ್ಸ್ ಗರಿ

ಕಿರಣ್, ಉನ್ನತಿ ಮುಡಿಗೇರಿದ ಪ್ರಶಸ್ತಿ

ಕಟಕ್ (ಪಿಟಿಐ): ಭಾರತದ ಉನ್ನತಿ ಹೂಡಾ ಹಾಗೂ ಕಿರಣ್ ಜಾರ್ಜ್ ಅವರು ಒಡಿಶಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳಾ ಸಿಂಗಲ್ಸ್ ಮತ್ತು ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಮುಡಿಗೇರಿಸಿಕೊಂಡರು.

ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ 14 ವರ್ಷದ ಉನ್ನತಿ 21-18, 21-11ರಿಂದ ಭಾರತದವರೇ ಆದ ಸ್ಮಿತ್ ತೋಶ್ನಿವಾಲ್ ಅವರನ್ನು ಮಣಿಸಿದರು. ಇದರೊಂದಿಗೆ ಸೂಪರ್ 100 ಟೂರ್ನಿಯೊಂದರಲ್ಲಿ ಚಾಂಪಿಯನ್ ಆದ ದೇಶದ ಅತಿ ಕಿರಿಯ ಆಟಗಾರ್ತಿ ಎಂಬ ಶ್ರೇಯ ಗಳಿಸಿದರು.

ಉನ್ನತಿ ಅವರಿಗೆ ಒಲಿದ ಮೊದಲ ಒಡಿಶಾ ಓಪನ್ ಕಿರೀಟ ಇದು.

ಪಂದ್ಯದ ಆರಂಭದಲ್ಲಿ ಹಿನ್ನಡೆ ಕಂಡಿದ್ದ ಉನ್ನತಿ ಬಳಿಕ ಪುಟಿದೆದ್ದು, ಮೊದಲ ಗೇಮ್ ವಶಪಡಿಸಿಕೊಂಡರು. ಅದೇ ಲಯದಲ್ಲಿ ಮುಂದುವರಿದು ಎರಡನೇಯದ್ದರಲ್ಲೂ ಸುಲಭವಾಗಿ ಗೆದ್ದರು. ಉನ್ನತಿಯ ವೇಗದ ಸರ್ವ್‌ಗಳಿಗೆ ತೋಶ್ನಿವಾಲ್ ನಿರುತ್ತರರಾದರು. ಈಚೆಗೆ ಇಂಡಿಯಾ ಓಪನ್ ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದ ಮಾಳವಿಕಾ ಬಂಸೋಡ್ ಅವರನ್ನು ಇಲ್ಲಿ ಸೆಮಿಫೈನಲ್‌ನಲ್ಲಿ ಮಣಿಸಿ ಫೈನಲ್ ತಲುಪಿದ್ದ ಉನ್ನತಿ,



ಪ್ರಶಸ್ತಿಯೊಂದಿಗೆ ಉನ್ನತಿ ಹೂಡಾ– ಟ್ವಿಟರ್ ಚಿತ್ರ

ಕೇವಲ 35 ನಿಮಿಷಗಳ ಆಟದಲ್ಲಿ ತೋಶ್ನಿವಾಲ್ ಸವಾಲು ಮೀರಿದರು. ತೋಶ್ನಿವಾಲ್ ಅವರು ಅಸ್ಮಿತಾ ಚಲಿಹಾ ಅವರಿಗೆ ಸೋಲುಣಿಸಿ ಪ್ರಶಸ್ತಿ ಸುತ್ತು ತಲುಪಿದ್ದರು. 21 ವರ್ಷದ ಕಿರಣ್ ಜಾರ್ಜ್ ಪುರುಷರ ಫೈನಲ್ ಜಿದ್ದಾಜಿದ್ದಿ ಪೈಪೋಟಿಯಲ್ಲಿ 21-15 14-21 21-18ರಿಂದ ಸ್ವದೇಶದ ಪ್ರಿಯಾಂಶು ರಾಜಾವತ್ ಅವರನ್ನು ಸೋಲಿಸಿದರು.

ಮೊದಲ ಗೇಮ್ ಗೆದ್ದ ಕಿರಣ್, ಎರಡನೇ ಗೇಮ್‌ನ ಆರಂಭದಲ್ಲೂ 5–3ರಿಂದ ಮೇಲುಗೈ ಸಾಧಿಸಿದ್ದರು. ಆದರೆ ತಿರುಗೇಟು ನೀಡಿದ ಪ್ರಿಯಾಂಶು ಗೇಮ್ ಜಯಿಸಿದರು. ತೀವ್ರ ಪೈಪೋಟಿ ಕಂಡುಬಂದ ಮೂರನೇ ಮತ್ತು ನಿರ್ಣಾಯಕ ಗೇಮ್‌ನಲ್ಲಿ ಕಿರಣ್ ಜಯದ ನಗೆ ಬೀರಿದರು.

ಭಾರತದ ತ್ರೀಶಾ ಜೋಲಿ ಹಾಗೂ ಗಾಯತ್ರಿ ಗೋಪಿಚಂದ್ ಅವರಿಗೆ ಮಹಿಳಾ ಡಬಲ್ಸ್ ವಿಭಾಗದ ಪ್ರಶಸ್ತಿ ಒಲಿಯಿತು. ಫೈನಲ್‌ನಲ್ಲಿ ಈ ಜೋಡಿಯು 21-12, 21-10ರಿಂದ ಸಂಯೋಗಿತಾ ಘೋರ್ಪಡೆ– ಶ್ರುತಿ ಮಿಶ್ರಾ ಎದುರು ಜಯಭೇರಿ ಮೊಳಗಿಸಿದರು.

ಮಲೇಷ್ಯಾದ ನೂರ್ ಮೊಹಮ್ಮದ್ ಅಜ್ರಿನ್ -ಲಿಮ್ ಅವರು ಪುರುಷರ ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು. ಫೈನಲ್‌ನಲ್ಲಿ ಅವರು 18-21, 21-14, 21-16ರಿಂದ ಭಾರತದ ರವಿಕೃಷ್ಣ ಪಿ.ಎಸ್. -ಶಂಕರ್ ಪ್ರಸಾದ್ ಉದಯಕುಮಾರ್ ಅವರನ್ನು ಮಣಿಸಿದರು.

ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತದ ಎಂ.ಆರ್. ಅರ್ಜುನ್ ಮತ್ತು ತ್ರೀಶಾ ಜೋಲಿ 16-21, 20-22ರಿಂದ ಶ್ರೀಲಂಕಾದ ಸಚಿನ್ ದಿಯಾಸ್ ಮತ್ತು ತಿಳಿನಿ ಹೆಂದಾದಹೆವಾ ಎದುರು ಸೋತು ರನ್ನರ್ ಅಪ್ ಆದರು.

ಚೆಸ್: ಅರ್ಜುನ್ ಎರಿಗೈಸಿ ಸಾಧನೆ

ವಿಜ್ಕ್ ಆನ್ ಜಿ, ನೆದರ್ಲೆಂಡ್ಸ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಅವರು ಟಾಟಾ ಸ್ಟೀಲ್ ಚೆಸ್ ಟೂರ್ನಿ ಚಾಲೆಂಜರ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಟೂರ್ನಿಯುದ್ದಕ್ಕೂ ಚುರುಕಿನ ಆಟವಾಡಿದ ಅರ್ಜುನ್, ಒಂದು ಗೇಮ್ ಬಾಕಿ ಉಳಿದಿರುವಂತೆಯೇ ಅವರು ಪ್ರಶಸ್ತಿ ಸಂಭ್ರಮದಲ್ಲಿ ಮಿಂದೆದ್ದರು. 12ನೇ ಗೇಮ್‌ನಲ್ಲಿ ಅವರು ಜೆಕ್ ಗಣರಾಜ್ಯದ ಥಾಯ್ ಡೈ ವ್ಯಾನ್ ಗುಯೆನ್ ಎದುರು ಡ್ರಾ ಸಾಧಿಸಿದರು. ಜಂಟಿ ಎರಡನೇ ಸ್ಥಾನ ಗಳಿಸಿದ ಜೆಕ್ ಆಟಗಾರನ ಜೊತೆ ಅರ್ಜುನ್ 15 ನಡೆಗಳಲ್ಲಿ ಡ್ರಾ ಮಾಡಿಕೊಳ್ಳಲು ಸಮ್ಮತಿಸಿದರು.

18 ವರ್ಷದ ಅರ್ಜುನ್ ಒಟ್ಟು 9.5 ಪಾಯಿಂಟ್ಸ್ ಕಲೆಹಾಕಿದರು. ಗುಯೆನ್ ಹಾಗೂ ಡೆನ್ಮಾರ್ಕ್‌ನ ಜೋನಸ್ ಬುಹ್ಲ್ ಜೆರೆ (ಎರಡನೇ ಸ್ಥಾನ) ಎಂಟು ಪಾಯಿಂಟ್ಸ್ ಗಳಿಸಿದರು.

ಅರ್ಜುನ್ (ಎಲೊ ರೇಟಿಂಗ್ 2632) ಇದುವರೆಗೆ ಏಳು ಗೇಮ್‌ಗಳನ್ನು ಗೆದ್ದುಕೊಂಡರೆ, ಐದರಲ್ಲಿ ಡ್ರಾ ಸಾಧಿಸಿದ್ದಾರೆ. ಇಲ್ಲಿ ಪ್ರಶಸ್ತಿ ಜಯಿಸುವ ಮೂಲಕ ಅವರು ಮುಂದಿನ ವರ್ಷದ ಟಾಟಾ ಸ್ಟೀಲ್ ಮಾಸ್ಟರ್ಸ್ ಗುಂಪಿಗೆ ಅರ್ಹತೆ ಪಡೆದರು. ಭಾರತದ ಸೂರ್ಯಶೇಖರ್ ಗಂಗೂಲಿ (5.5 ಪಾಯಿಂಟ್ಸ್) ಸದ್ಯ ಒಂಬತ್ತನೇ ಸ್ಥಾನದಲ್ಲಿದ್ದಾರೆ. ಟೂರ್ನಿಯ ಚಾಲೆಂಜರ್ಸ್ ವಿಭಾಗದಲ್ಲಿ ಗೆದ್ದ ಭಾರತದ ನಾಲ್ಕನೇ ಆಟಗಾರ ಅರ್ಜುನ್. ಈ ಹಿಂದೆ

ಪ್ರಶಸ್ತಿಯೊಂದಿಗೆ ಅರ್ಜುನ್ ಎರಿಗೈಸಿ– ಟ್ವಿಟರ್ ಚಿತ್ರ

ಪೆಂಟಾಲ ಹರಿಕೃಷ್ಣ, ಬಿ.ಅದಿಬನ್, ವಿದಿತ್ ಗುಜರಾತಿ ಈ ಸಾಧನೆ ಮಾಡಿದ್ದರು. ಅರ್ಜುನ್ ಅವರನ್ನು ವಿಶ್ವದ ಅಗ್ರಕ್ರಮಾಂಕದ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ಮಾಜಿ ವಿಶ್ವ ಚಾಂಪಿಯನ್ ಭಾರತದ ವಿಶ್ವನಾಥನ್ ಆನಂದ್ ಅಭಿನಂದಿಸಿದ್ದಾರೆ. ಅರ್ಜುನ್ ಅವರಿಗೆ ಗ್ರ್ಯಾಂಡ್‌ಮಾಸ್ಟರ್ ಶ್ರೀನಾಥ್ ನಾರಾಯಣನ್ ತರಬೇತಿ ನೀಡಿದ್ದರೆ, ವಿಶ್ವನಾಥನ್ ಆನಂದ್ ಮಾರ್ಗದರ್ಶನ ಮಾಡಿದ್ದಾರೆ.

ಕಾರ್ಲ್‌ಸನ್‌ಗೆ ಗರಿ: ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್ ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು.

ಶನಿವಾರ ನಡೆದ 12ನೇ ಸುತ್ತಿನ ಗೇಮ್‌ನಲ್ಲಿ ಅವರು ಇಟಲಿಯ ಫ್ಯಾಬಿಯಾನೊ ಕಾರುವಾನ ಎದುರು ಜಯ ಸಾಧಿಸಿದರು. ವಿಜ್ಕ್ ಆನ್ ಜಿಯಲ್ಲಿ ಅವರಿಗೆ ಒಲಿದ ಎಂಟನೇ ಪ್ರಶಸ್ತಿ ಇದು.

ಭಾರತದ ವಿದಿತ್ ಗುಜರಾತಿ ಅವರು 12ನೇ ಸುತ್ತಿನ ಪಂದ್ಯದಲ್ಲಿ ಅಜರ್‌ಬೈಜಾನ್‌ನ ಶಖರಿಯಾರ್ ಮಮೆದ್ಯಾರೊವ್ ವಿರುದ್ಧ ಸೋಲು ಅನುಭವಿಸಿದರು. ಭಾರತದ ಆಟಗಾರ ಪಾಯಿಂಟ್ಸ್ ಪಟ್ಟಿಯಲ್ಲಿ ಸದ್ಯ ಆರನೇ ಸ್ಥಾನದಲ್ಲಿದ್ದಾರೆ.

ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್: ಕೇರಳ ಬ್ಲಾಸ್ಟರ್ಸ್‌ಗೆ ನಿರಾಸೆ

ಬೆಂಗಳೂರು ಎಫ್‌ಸಿ ಜಯಭೇರಿ

ವಾಸ್ಕೊ, ಗೋವಾ: ರೋಶನ್ ಸಿಂಗ್ ನೋರೆಮ್ ಗಳಿಸಿದ ಏಕೈಕ ಗೋಲಿನ ನೆರವಿನಿಂದ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಜಯ ಗಳಿಸಿತು.

ತಿಲಕ್ ಮೈದಾನ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 1-0ಯಿಂದ ಕೇರಳ ಬ್ಲಾಸ್ಟರ್ಸ್ ತಂಡವನ್ನು ಸೋಲಿಸಿತು.

ರೋಶನ್ ಸಿಂಗ್ ನೋರೆಮ್ 56ನೇ ನಿಮಿಷದಲ್ಲಿ ಕಾಲ್ಚಳಕ ತೋರಿದರು. ಈ ಗೆಲುವಿನೊಂದಿಗೆ ಬೆಂಗಳೂರು ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನಕ್ಕೇರಿತು.

ಎಚ್‌ಎಫ್‌ಸಿಗೆ ಅಗ್ರಸ್ಥಾನ ಭದ್ರಪಡಿಸುವ ನಿರೀಕ್ಷೆ: ಫತೋರ್ಡದ ಜವಾಹರ್ ಲಾಲ್ ನೆಹರು ಕ್ರೀಡಾಂಗಣದಲ್ಲಿ ಸೋಮವಾರ ನಡೆಯಲಿರುವ ಪಂದ್ಯದಲ್ಲಿ ಹೈದರಾಬಾದ್ ಎಫ್‌ಸಿ ಮತ್ತು ನಾರ್ತ್ ಈಸ್ಟ್

ಗೋಲು ಗಳಿಸಿದ ರೋಶನ್ ಸಿಂಗ್ ನೋರೆಮ್ ಸಂಭ್ರಮ– ಪಿಟಿಐ ಚಿತ್ರ

ಯುನೈಟೆಡ್ ಎಫ್‌ಸಿ ತಂಡಗಳು ಮುಖಾಮುಖಿಯಾಗಲಿವೆ. ಪಾಯಿಂಟ್ ಪಟ್ಟಿಯ ಅಗ್ರ ಸ್ಥಾನದಲ್ಲಿರುವ ಹೈದರಾಬಾದ್ ಈ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಳ್ಳಲು ಪ್ರಯತ್ನಿಸಲಿದೆ.

ಹಿಂದಿನ ಮೂರು ಪಂದ್ಯಗಳಲ್ಲಿ ಅಜೇಯವಾಗಿರುವ ಹೈದರಾಬಾದ್ ಎಫ್‌ಸಿ ಈ ವರೆಗೆ 13 ಪಂದ್ಯಗಳಲ್ಲಿ 23 ಪಾಯಿಂಟ್ ಕಲೆ ಹಾಕಿದೆ. ಕಳೆದ ಮೂರು ಪಂದ್ಯಗಳ ಪೈಕಿ ಚೆನ್ನೈಯಿನ್ ಎಫ್‌ಸಿ ಎದುರು 1-1 ಡ್ರಾ ಸಾಧಿಸಿದ್ದ ತಂಡ ನಂತರ ಎಸ್‌ಸಿ ಈಸ್ಟ್ ಬೆಂಗಾಲ್ ವಿರುದ್ಧ 4–0ಯಿಂದ ಮತ್ತು ಒಡಿಶಾ ಎಫ್‌ಸಿ ವಿರುದ್ಧ 3–2ರ ಜಯ ಸಾಧಿಸಿತ್ತು.

ನಾರ್ತ್ ಈಸ್ಟ್ ಯುನೈಟೆಡ್ 14 ಪಂದ್ಯಗಳನ್ನು ಆಡಿದ್ದು ಎರಡರಲ್ಲಿ ಮಾತ್ರ ಜಯ ಗಳಿಸಿದೆ. ಎಂಟು ಪಂದ್ಯಗಳನ್ನು ಸೋತಿದೆ. ಹಿಂದಿನ ಏಳು ಪಂದ್ಯಗಳಲ್ಲಿ ಜಯ ಕಾಣದ ತಂಡ ಈ ಪಂದ್ಯದಲ್ಲಾದರೂ ಸೋಲಿನ ಸರಪಳಿ ಕಳಚಲು ಪ್ರಯತ್ನಿಸಲಿದೆ. ಆದರೆ ಹೈದರಾಬಾದ್ ಎದುರು ಈ ಕನಸು ನನಸು ಮಾಡುವುದು ಸುಲಭವಲ್ಲ. ಆ ತಂಡದ ಬಾರ್ತೊಲೊಮೆ ಒಗ್ಬೆಚೆ ಅತ್ಯುತ್ತಮ ಫಾರ್ಮ್‌ನಲ್ಲಿದ್ದು 12 ಬಾರಿ ಚೆಂಡನ್ನು ಗುರಿಸೇರಿಸಿ ಈ ಬಾರಿ ಹೆಚ್ಚು ಗೋಲು ಗಳಿಸಿದವರ ಪಟ್ಟಿಯ ಅಗ್ರಸ್ಥಾನದಲ್ಲಿದ್ದಾರೆ. ರಕ್ಷಣಾ ವಿಭಾಗದಲ್ಲಿ ಆಶಿಶ್ ರಾಯ್ ಮತ್ತು ಆಕಾಶ್ ಮಿಶ್ರಾ ಮಿಂಚುತ್ತಿದ್ದಾರೆ. ತಂಡದ ಯಶಸ್ಸಿನಲ್ಲಿ ಇವರಿಬ್ಬರು ಮಹತ್ವದ ಪಾತ್ರ ವಹಿಸಿದ್ದಾರೆ. ಮಿಶ್ರಾ ರಕ್ಷಣೆಯಲ್ಲಿ ಮಾತ್ರವಲ್ಲ, ಆಕ್ರಮಣದಲ್ಲೂ ಸಾಧನೆ ಮಾಡಿದ್ದಾರೆ.

ಬೋಪಣ್ಣಗೆ ಎರಡನೇ ಶ್ರೇಯಾಂಕ

ಪುಣೆ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ರಾಮಕುಮಾರ್ ರಾಮನಾಥನ್ ಜೋಡಿಯು ಟಾಟಾ ಓಪನ್ ಮಹಾರಾಷ್ಟ್ರ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದಲ್ಲಿ ಎರಡನೇ ಶ್ರೇಯಾಂಕ ಪಡೆದಿದೆ. ಟೂರ್ನಿಯು ಸೋಮವಾರ ಇಲ್ಲಿ ಆರಂಭವಾಗಲಿದೆ.

ಆಸ್ಟ್ರೇಲಿಯನ್ ಓಪನ್‌ಗೂ ಮುನ್ನ ಅಡಿಲೇಡ್‌ನಲ್ಲಿ ಪ್ರಶಸ್ತಿ ಗೆದ್ದಿದ್ದ ಬೋಪಣ್ಣ ಮತ್ತು ರಾಮಕುಮಾರ್ ಅವರು ಈ ಟೂರ್ನಿಯ ಮೊದಲ ಸುತ್ತಿನಲ್ಲಿ ಅಮೆರಿಕದ ಅನುಭವಿ ಜೋಡಿಯಾದ ಜೇಮಿ ಸೆರೆಟಾನಿ ಮತ್ತು ನಿಕೋಲಸ್ ಮನ್ರೋ ವಿರುದ್ಧ ಕಣಕ್ಕಿಳಿಯುವರು. ಆಸ್ಟ್ರೇಲಿಯಾದ ಲ್ಯೂಕ್ ಸೆವಿಲ್ಲೆ ಮತ್ತು ಜಾನ್ ಪ್ಯಾಟ್ರಿಕ್ ಸ್ಮಿತ್ ಅವರಿಗೆ ಅಗ್ರಶ್ರೇಯಾಂಕ ನೀಡಲಾಗಿದೆ.

ಬೋಪಣ್ಣ ಮತ್ತು ರಾಮ್‌ಕುಮಾರ್ ಹೊರತುಪಡಿಸಿ, ಡಬಲ್ಸ್‌ನಲ್ಲಿ ಭಾರತದ ಮತ್ತೆರಡು ಜೋಡಿಗಳು ಕಾಣಿಸಿಕೊಳ್ಳಲಿವೆ.

ಮಹಿಳಾ ಏಷ್ಯಾಕಪ್ ಫುಟ್‌ಬಾಲ್: ಸೆಮಿಗೆ ಜಪಾನ್, ವಿಶ್ವಕಪ್‌ಗೆ ಅರ್ಹತೆ

ನವಿ ಮುಂಬೈ (ಪಿಟಿಐ): ಜಪಾನ್ ತಂಡವು ಎಎಫ್‌ಸಿ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಥಾಯ್ಲೆಂಡ್‌ಅನ್ನು ಮಣಿಸಿ ಸೆಮಿಫೈನಲ್ ತಲುಪಿತು. ಇದರೊಂದಿಗೆ 2023ರ ಫಿಫಾ ವಿಶ್ವಕಪ್ ಟೂರ್ನಿಗೂ ಸ್ಥಾನ ಖಚಿತಪಡಿಸಿಕೊಂಡಿತು.

ಭಾನುವಾರ ನಡೆದ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಜಪಾನ್ 7–0ಯಿಂದ ಎದುರಾಳಿಯನ್ನು ಹಣಿಯಿತು.

ಎರಡು ಬಾರಿಯ ಚಾಂಪಿಯನ್ ಜಪಾನ್ ಪರ ಯುಯಿಕಾ ಸುಗಾಸವಾ ಅಮೋಘ ನಾಲ್ಕು ಗೋಲು ಗಳಿಸಿದರು. 1983ರಲ್ಲಿ ಏಷ್ಯನ್ ಚಾಂಪಿಯನ್ ಆಗಿದ್ದ ಥಾಯ್ಲೆಂಡ್ ತಂಡಕ್ಕೆ ವಿಶ್ವಕಪ್ ಟೂರ್ನಿಗೆ ಅರ್ಹತೆ ಗಳಿಸಲು ಇನ್ನೂ ಅವಕಾಶವಿದೆ. ಫೆಬ್ರುವರಿ 2 ಮತ್ತು 4ರಂದು ಪ್ಲೇ ಆಫ್ ಪಂದ್ಯಗಳ ಮೂಲಕ ಅರ್ಹತೆಗೆ ಪ್ರಯತ್ನಿಸಲಿದೆ. ಗುರುವಾರ ನಡೆಯುವ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಚೀನಾ– ವಿಯೆಟ್ನಾಂ ಮುಖಾಮುಖಿಯಾಗಲಿವೆ.

ಜಪಾನ್‌ನ ರಿಸಾ ಶಿಮಿಜು ಹಾಗೂ ಥಾಯ್ಲೆಂಡ್‌ನ ಪಾರ್ನ್‌ಫಿರುನ್ ನಡುವೆ ಚೆಂಡಿಗಾಗಿ ಪೈಪೋಟಿ– ಪಿಟಿಐ ಚಿತ್ರ

ಮ್ಯೂಚುವಲ್ ಫಂಡ್: ಪದಬಳಕೆ ಪರಿಚಯ

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವಾಗ ಪದಗಳ ಪರಿಚಯ ಬಹಳ ಮುಖ್ಯ. ಎಸ್‌ಐಪಿ, ಆ್ಯಕ್ಟಿವ್ ಫಂಡ್, ಪ್ಯಾಸಿವ್ ಫಂಡ್, ಡೈರೆಕ್ಟ್ ಮ್ಯೂಚುವಲ್ ಫಂಡ್, ರೆಗ್ಯೂಲರ್ ಮ್ಯೂಚುವಲ್ ಫಂಡ್, ವೆಚ್ಚ ಅನುಪಾತ ಹೀಗೆ ಹಲವು ಪಾರಿಭಾಷಿಕ ಪದಗಳು ಮ್ಯೂಚುವಲ್ ಫಂಡ್‌ಗಳಲ್ಲಿ ಇರುತ್ತವೆ. ಅವನ್ನು ಸರಿಯಾಗಿ ಅರ್ಥೈಸಿಕೊಂಡಾಗ ಮಾತ್ರ ಮ್ಯೂಚುವಲ್ ಫಂಡ್ ಹೂಡಿಕೆಯ ಹಾದಿ ಸುಗಮವಾಗುತ್ತದೆ.

1) ಎಸ್‌ಐಪಿ: ಹೂಡಿಕೆ ವಲಯದಲ್ಲಿ ಸಾಮಾನ್ಯವಾಗಿ ಕೇಳಿ ಬರುವ ಪದ ಸಿಸ್ಟಮ್ಯಾಟಿಕ್ ಇನ್ವೆಸ್ಟ್‌ಮೆಂಟ್ ಪ್ಲಾನ್ ಅರ್ಥಾತ್ ‘ಎಸ್‌ಐಪಿ’. ಕ್ರಮಬದ್ಧವಾಗಿ ಹೂಡಿಕೆ ಮಾಡಬೇಕು ಎನ್ನುವವರಿಗೆ ‘ಎಸ್‌ಐಪಿ’ ವಿಧಾನ ಒಳ್ಳೆಯ ಆಯ್ಕೆ. ಕನ್ನಡದಲ್ಲಿ ‘ಎಸ್‌ಐಪಿ’ಯನ್ನು ವ್ಯವಸ್ಥಿತ ಹೂಡಿಕೆ ಯೋಜನೆ ಎನ್ನಬಹುದು. ‘ಎಸ್‌ಐಪಿ’ ಎನ್ನುವುದು ಹೂಡಿಕೆ ಉತ್ಪನ್ನವಲ್ಲ, ಅದು ಹೂಡಿಕೆಯ ವಿಧಾನ. ಪೂರ್ವನಿಗದಿತ ದಿನದಂದು, ಪೂರ್ವನಿಗದಿತ ಮೊತ್ತವನ್ನು ಹೂಡಿಕೆ ಉತ್ಪನ್ನವೊಂದಕ್ಕೆ ವ್ಯವಸ್ಥಿತವಾಗಿ ವರ್ಗಾಯಿಸುವ ವಿಧಾನವೇ ‘ಎಸ್‌ಐಪಿ’. ಮ್ಯೂಚುವಲ್ ಫಂಡ್ ಹೂಡಿಕೆಗಳಲ್ಲಿ ಎಸ್‌ಐಪಿ ವಿಧಾನ ಹೆಚ್ಚು ಚಾಲ್ತಿಯಲ್ಲಿದೆ. ಉದಾಹರಣೆಗೆ, ಮ್ಯೂಚುವಲ್ ಫಂಡ್ ಒಂದರಲ್ಲಿ ಪ್ರತಿ ತಿಂಗಳ 10ನೆಯ ತಾರೀಕಿನಂದು ನೀವು ₹ 1,000 ಹೂಡಿಕೆ ಮಾಡಲು ನಿರ್ಧರಿಸಿದ್ದರೆ ಪ್ರತಿ ತಿಂಗಳು ಅದನ್ನು ನಿಯಮಿತವಾಗಿ ಮುಂದುವರಿಸಿಕೊಂಡು ಹೋಗುವ ಪ್ರಕ್ರಿಯೆಯನ್ನು ಎಸ್‌ಐಪಿ ಎನ್ನಬಹುದು.

2) ಆ್ಯಕ್ಟಿವ್ ಫಂಡ್: ಮಾರುಕಟ್ಟೆಯ ಏರಿಳಿತ ಆಧರಿಸಿ ಹೆಚ್ಚು ಲಾಭ ಬರುವಂತೆ ಮ್ಯೂಚುವಲ್ ಫಂಡ್ ಹೂಡಿಕೆ ಮೊತ್ತವನ್ನು ನಿಭಾಯಿಸುವ ಪ್ರಕ್ರಿಯೆಗೆ ಆ್ಯಕ್ಟಿವ್ ಮ್ಯೂಚುವಲ್ ಫಂಡ್ ಎಂದು ಕರೆಯಬಹುದು. ಆ್ಯಕ್ಟಿವ್ ಫಂಡ್‌ನಲ್ಲಿ ಫಂಡ್ ಮ್ಯಾನೇಜರ್ ಇರುತ್ತಾರೆ. ಷೇರು ಮಾರುಕಟ್ಟೆಯಲ್ಲಿರುವ ಸಾವಿರಾರು ಕಂಪನಿಗಳ ಪೈಕಿ ಲಾಭ ಕೊಡಬಹುದಾದ ಷೇರುಗಳು ಯಾವುವು ಎಂದು ಅಧ್ಯಯನ ಮಾಡಿ ಅವುಗಳಲ್ಲಿ ಹೂಡಿಕೆದಾರರ ಮೊತ್ತವನ್ನು ತೊಡಗಿಸುವ ಹೊಣೆಗಾರಿಕೆ ಫಂಡ್ ಮ್ಯಾನೇಜರ್‌ನದ್ದಾಗಿರುತ್ತದೆ.

3) ಪ್ಯಾಸಿವ್ ಫಂಡ್: ಪ್ಯಾಸಿವ್ ಫಂಡ್‌ಗಳಲ್ಲಿ, ಯಾವ ಷೇರಿನಲ್ಲಿ ಹೂಡಿಕೆ ಮಾಡಬೇಕು, ಯಾವುದರಲ್ಲಿ ಹೂಡಿಕೆ ಮಾಡಬಾರದು ಎನ್ನುವ ನಿರ್ಧಾರವನ್ನು ಫಂಡ್ ಮ್ಯಾನೇಜರ್ ತೆಗೆದುಕೊಳ್ಳುವುದಿಲ್ಲ. ಸೂಚ್ಯಂಕದ ಭಾಗವಾಗಿರುವ ಕಂಪನಿಗಳ ಷೇರುಗಳಲ್ಲಿಯೇ ಹಣವನ್ನು ತೊಡಗಿಸಲಾಗುತ್ತದೆ. ಉದಾಹರಣೆಗೆ, ನಿಫ್ಟಿ ಮತ್ತು ಸೆನ್ಸೆಕ್ಸ್ ಪಟ್ಟಿಯಲ್ಲಿರುವ ಕಂಪನಿಗಳೇ ಪ್ಯಾಸಿವ್ ಫಂಡ್ ಹೂಡಿಕೆಯ ಪಟ್ಟಿಯಲ್ಲಿಯೂ ಇರುತ್ತವೆ. ಇಂಡೆಕ್ಸ್ ಫಂಡ್, ಪ್ಯಾಸಿವ್ ಫಂಡ್‌ಗೆ ಉತ್ತಮ ಉದಾಹರಣೆ.

4) ಡೈರೆಕ್ಟ್ ಮ್ಯೂಚುವಲ್ ಫಂಡ್: ಮಧ್ಯವರ್ತಿಯ (ಏಜೆಂಟ್) ಸಹಾಯವಿಲ್ಲದೆ ಅಸೆಟ್ ಮ್ಯಾನೇಜ್ಮೆಂಟ್ ಕಂಪನಿಗಳ ಮೂಲಕ ನೇರವಾಗಿ ಮ್ಯೂಚುವಲ್ ಫಂಡ್ ಹೂಡಿಕೆ ಮಾಡಿದರೆ ಅದು ಡೈರೆಕ್ಟ್ ಮ್ಯೂಚುವಲ್ ಫಂಡ್. ಮಧ್ಯವರ್ತಿಯ ಕಮಿಷನ್ ಇಲ್ಲದ ಕಾರಣ ಈ ರೀತಿಯ ಫಂಡ್‌ನಲ್ಲಿ ವೆಚ್ಚ ಅನುಪಾತ (Expense Ratio), ಅಂದರೆ ನಿರ್ವಹಣಾ ಶುಲ್ಕ, ಕಡಿಮೆ. ಜಿರೋದಾ, ಗ್ರೋ, ಪೇಟಿಎಂ ಮನಿ ಸೇರಿ ಹಲವು ಕಂಪನಿಗಳು ತಮ್ಮ ಆ್ಯಪ್ ಮೂಲಕವೇ ಡೈರೆಕ್ಟ್ ಮ್ಯೂಚುವಲ್ ಫಂಡ್ ಹೂಡಿಕೆಗೆ ಅವಕಾಶ ಕಲ್ಪಿಸಿವೆ. ನೇರವಾಗಿ ಅಸೆಟ್ ಮ್ಯಾನೇಜ್ಮೆಂಟ್ ಕಂಪನಿಗಳ ವೆಬ್‌ಸೈಟ್ ಮೂಲಕವೂ ಡೈರೆಕ್ಟ್ ಮ್ಯೂಚುವಲ್ ಫಂಡ್ ಹೂಡಿಕೆ ಸಾಧ್ಯ.

5) ರೆಗ್ಯೂಲರ್ ಮ್ಯೂಚುವಲ್ ಫಂಡ್: ಮಧ್ಯವರ್ತಿಯ ಸಹಾಯದಿಂದ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದರೆ ಅದು ರೆಗ್ಯೂಲರ್ ಮ್ಯೂಚುವಲ್ ಫಂಡ್. ಇಲ್ಲಿ ಹಣಕಾಸು ಸಲಹೆಗಾರರು/ಬ್ಯಾಂಕಿನ ರಿಲೇಷನ್ ಶಿಪ್ ಮ್ಯಾನೇಜರ್‌ಗಳು ಗ್ರಾಹಕರಿಗೆ ಮ್ಯೂಚುವಲ್ ಫಂಡ್ ಹೂಡಿಕೆ ಸಲಹೆ ನೀಡುತ್ತಾರೆ. ಅದಕ್ಕಾಗಿ ಅವರಿಗೆ ಕಮಿಷನ್ ನೀಡಬೇಕಾಗುತ್ತದೆ. ಈ ಕಾರಣದಿಂದಾಗಿ ರೆಗ್ಯೂಲರ್ ಪ್ಲಾನ್‌ನಲ್ಲಿ ವೆಚ್ಚ ಅನುಪಾತ (Expense Ratio) ಶುಲ್ಕ ಹೆಚ್ಚಿಗೆ ಇರುತ್ತದೆ.

6) ವೆಚ್ಚ ಅನುಪಾತ (Expense Ratio): ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದಾಗ ಫಂಡ್ ಹೌಸ್‌ಗಳು ವಾರ್ಷಿಕ ಶುಲ್ಕ ಪಡೆಯುತ್ತವೆ. ಈ ಶುಲ್ಕವನ್ನು ಮ್ಯೂಚುವಲ್ ಫಂಡ್ ಪರಿಭಾಷೆಯಲ್ಲಿ ವೆಚ್ಚ ಅನುಪಾತ (Expense Ratio) ಎಂದು ಕರೆಯಲಾಗುತ್ತದೆ. ಎಲ್ಲ ರೀತಿಯ ನಿರ್ವಹಣಾ ಶುಲ್ಕವನ್ನು ಇದು ಒಳಗೊಂಡಿರುತ್ತದೆ. ಉದಾಹರಣೆಗೆ, ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳ ವೆಚ್ಚ ಅನುಪಾತ ಶೇಕಡ 0.36ರಿಂದ ಶೇ 1.51ರವರೆಗೂ ಇರುತ್ತದೆ. ವೆಚ್ಚ ಅನುಪಾತ ಕಡಿಮೆಯಿದ್ದರೆ ನಿಮಗೆ ಸಿಗುವ ಒಟ್ಟಾರೆ ಲಾಭಾಂಶ ಹೆಚ್ಚಾಗುತ್ತದೆ. ಹಾಗಾಗಿ ಕಡಿಮೆ ವೆಚ್ಚ ಅನುಪಾತವಿರುವ ಮತ್ತು ಸ್ಥಿರವಾಗಿ ಹೆಚ್ಚು ಲಾಭಾಂಶ ನೀಡುವ ಡೈರೆಕ್ಟ್ ಮ್ಯೂಚುವಲ್ ಫಂಡ್ ಆಯ್ಕೆ ಮಾಡುವುದು ಉತ್ತಮ.

(ಲೇಖಕ: ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹ ವಿಭಾಗದ ಮುಖ್ಯಸ್ಥ)

ಸತತ ಎರಡನೇ ವಾರವೂ ಷೇರುಪೇಟೆ ಕುಸಿತ

ಮಾರಾಟದ ಒತ್ತಡಕ್ಕೆ ಸಿಲುಕಿ ಸತತ ಎರಡನೇ ವಾರವೂ ಷೇರುಪೇಟೆ ಸೂಚ್ಯಂಕಗಳು ಕುಸಿತ ಕಂಡಿವೆ. ಜನವರಿ 28ರಂದು ಕೊನೆಗೊಂಡ ವಾರದಲ್ಲಿ 57,200 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 3.11ರಷ್ಟು ಕುಸಿದಿದೆ. 17,101 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 2.92ರಷ್ಟು ತಗ್ಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಮಾರಾಟ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ನಕಾರಾತ್ಮಕತೆ ಮತ್ತು ಉಕ್ರೇನ್ ಬಿಕ್ಕಟ್ಟು ಸೇರಿ ಹಲವು ಅಂಶಗಳು ಕುಸಿತಕ್ಕೆ ಕಾರಣ.

ವಲಯವಾರು ಪ್ರಗತಿಯಲ್ಲಿ, ನಿಫ್ಟಿ ಐ.ಟಿ. ಸೂಚ್ಯಂಕ ಶೇ 6ರಷ್ಟು ಕುಸಿತ ಕಂಡಿದೆ. ನಿಫ್ಟಿ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 5ರಷ್ಟು, ಲೋಹ ಸೂಚ್ಯಂಕ ಶೇ 4.4ರಷ್ಟು ತಗ್ಗಿದೆ. ಆದರೆ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 7ರಷ್ಟು ಏರಿಕೆ ಕಂಡಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 22,158.15 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 10,849.40 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 3.4ರಷ್ಟು ಕುಸಿತ ಕಂಡಿದೆ. ಮಿಡ್ ಕ್ಯಾಪ್ ಸೂಚ್ಯಂಕ ಶೇ 3ರಷ್ಟು ತಗ್ಗಿದೆ. ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕದಲ್ಲಿ ಪ್ರಮುಖವಾಗಿ ಟೆಕ್ ಮಹೀಂದ್ರ, ಇಂಟರ್ ಗ್ಲೋಬ್ ಏವಿಯೇಷನ್, ವಿಪ್ರೊ, ಟೈಟನ್, ಪಿಡಿಲೈಟ್, ಹ್ಯಾವೆಲ್ಸ್ ಇಂಡಿಯಾ ಕುಸಿತ ಕಂಡಿವೆ. ಬ್ಯಾಂಕ್ ಆಫ್ ಬರೋಡಾ, ಸಿಪ್ಲಾ, ಬಂಧನ್ ಬ್ಯಾಂಕ್, ಎಕ್ಸಿಸ್ ಬ್ಯಾಂಕ್ ಮತ್ತು ಇಂಡಸ್ ಬ್ಯಾಂಕ್ ಕುಸಿತ ಕಂಡಿವೆ.

ಮುನ್ನೋಟ: ಈ ವಾರ ಟಾಟಾ ಮೋಟರ್ಸ್, ಟಾಟಾ ಸ್ಟೀಲ್, ಟಾಟಾ ಕನ್ಸ್ಯೂಮರ್, ಟೈಟನ್, ಪೇಟಿಎಂ, ಐಟಿಸಿ, ಆರತಿ ಡ್ರಗ್ಸ್, ಬಿಪಿಸಿಎಲ್, ಐಒಸಿ, ಆಕ್ರಸಿಲ್, ಅದಾನಿ ಪವರ್, ಅದಾನಿ ಪೋರ್ಟ್ಸ್, ಗೇಲ್, ಜೆಕೆ ಟೈರ್ಸ್, ಎಚ್‌ಡಿಎಫ್‌ಸಿ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಬಜೆಟ್, ಜಾಗತಿಕ ವಿದ್ಯಮಾನಗಳು, ಮುಂಬರುವ ಆರ್‌ಬಿಐ ಹಣಕಾಸು ಸಮಿತಿ ಸಭೆ ಸೇರಿದಂತೆ ಪ್ರಮುಖ ಬೆಳವಣಿಗೆಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಆರ್ಥಿಕ ಸಮೀಕ್ಷಾ ವರದಿ: ಇರಲಿವೆ ಹಲವು ಸಲಹೆಗಳು

ಬಂಡವಾಳ ವೆಚ್ಚ ಹೆಚ್ಚಳಕ್ಕೆ ಸಲಹೆ?

• ಅನ್ನಪೂರ್ಣಾ ಸಿಂಗ್

ಮುಖ್ಯಾಂಶಗಳು

- ಆರ್ಥಿಕ ಸಮೀಕ್ಷೆಯಲ್ಲಿ ಇರಲಿದೆ ಆರ್ಥಿಕ ಸ್ಥಿತಿಯ ಚಿತ್ರಣ
- ಪಿಎಲ್‌ಐ ಯೋಜನೆ ವಿಸ್ತರಣೆಗೆ ಸಲಹೆ?

ನವದೆಹಲಿ: ಮಾರುಕಟ್ಟೆಯಲ್ಲಿ ಬೇಡಿಕೆಯನ್ನು ಹೆಚ್ಚಿಸಲು, ಖಾಸಗಿ ಹೂಡಿಕೆಯನ್ನು ಹೆಚ್ಚು ಆಕರ್ಷಿಸಲು ಹಾಗೂ ಉದ್ಯೋಗ ಸೃಷ್ಟಿಗೆ ಇಂಬು ಕೊಡಲು ಕೇಂದ್ರ ಸರ್ಕಾರವು ಬಂಡವಾಳ ವೆಚ್ಚವನ್ನು ಜಾಸ್ತಿ ಮಾಡಬೇಕು ಎಂಬ ಸಲಹೆಯು ಸೋಮವಾರ ಮಂಡನೆ ಆಗುವ ಆರ್ಥಿಕ ಸಮೀಕ್ಷಾ ವರದಿಯಲ್ಲಿ ಇರುವ ಸಾಧ್ಯತೆ ಇದೆ.

ಆರೋಗ್ಯ ಸೇವೆಗಳು ಹಾಗೂ ಶಿಕ್ಷಣದ ಮೇಲೆ ಹೆಚ್ಚು ವೆಚ್ಚ ಮಾಡುವಂತೆಯೂ ಸಮೀಕ್ಷೆಯು ಸರ್ಕಾರಕ್ಕೆ ಸಲಹೆ ನೀಡುವ ಸಾಧ್ಯತೆ ಇದೆ. ಹಿಂದಿನ ಬಜೆಟ್‌ನಲ್ಲಿ ಶಿಕ್ಷಣದ ಮೇಲೆ ₹ 93 ಸಾವಿರ ಕೋಟಿಗಿಂತ ತುಸು ಹೆಚ್ಚು ಹಣ ನಿಗದಿ ಮಾಡಲಾಗಿತ್ತು. ಮಧ್ಯಮ ಆದಾಯದ ವರ್ಗದವರು ಹಾಗೂ ವೇತನ ವರ್ಗದವರ ಮೇಲೆ ಹೆಚ್ಚಿನ ಹೊರೆ ಹಾಕದೆಯೇ, ಕೋವಿಡ್ ಲಸಿಕೆ ನೀಡುವ ವೆಚ್ಚಕ್ಕೆ ಹೆಚ್ಚಿನ ವರಮಾನ ಸಂಗ್ರಹಿಸಲು ಕೆಲವು ಸಲಹೆಗಳನ್ನು ಸಮೀಕ್ಷೆಯು ನೀಡುವ ನಿರೀಕ್ಷೆ ಇದೆ ಎಂದು ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಹಿಂದಿನ ಬಜೆಟ್‌ನಲ್ಲಿ ಅಂದಾಜಿಸಿದ್ದಕ್ಕಿಂತಲೂ ಒಳ್ಳೆಯ ಮಟ್ಟದಲ್ಲಿ ತೆರಿಗೆ ವರಮಾನ ಕೇಂದ್ರಕ್ಕೆ ಬರುತ್ತಿರುವ ಕಾರಣ, ಕುಟುಂಬಗಳಿಗೆ ಕೆಲವು ವಿನಾಯಿತಿಗಳನ್ನು ನೀಡುವ, ಆ ಮೂಲಕ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗುವಂತೆ ಮಾಡಲು ಸಮೀಕ್ಷೆಯು ಸರ್ಕಾರಕ್ಕೆ ಕಿವಿಮಾತು ಹೇಳಬಹುದು. ಉದ್ಯೋಗ ಸೃಷ್ಟಿಯನ್ನು ಹೆಚ್ಚಿಸುವ ಸಾಮರ್ಥ್ಯವಿರುವ ತಯಾರಿಕಾ ವಲಯದ ಕೆಲವು ಉದ್ದಿಮೆಗಳಿಗೆ ಉತ್ಪಾದನೆ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯ ಪ್ರಯೋಜನವನ್ನು ವಿಸ್ತರಿಸುವಂತೆ ಸೂಚಿಸುವ ಸಾಧ್ಯತೆಯೂ ಇದೆ.

ಕೇಂದ್ರದ ಮುಖ್ಯ ಆರ್ಥಿಕ ಸಲಹೆಗಾರರು ಆರ್ಥಿಕ ಸಮೀಕ್ಷೆಯ ವರದಿಯನ್ನು ಸಿದ್ಧಪಡಿಸುತ್ತಾರೆ. ಕೇಂದ್ರ ಸರ್ಕಾರವು ಎರಡು ದಿನಗಳ ಹಿಂದೆ ವಿ. ಅನಂತ ನಾಗೇಶ್ವರನ್ ಅವರನ್ನು ಮುಖ್ಯ ಆರ್ಥಿಕ ಸಲಹೆಗಾರ ಸ್ಥಾನಕ್ಕೆ ನೇಮಕ ಮಾಡಿದೆ.

ಪಿಡಿಐಎಲ್: ಬಿಡ್ ಸಲ್ಲಿಕೆ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಪ್ರಾಜೆಕ್ಟ್ಸ್ ಆ್ಯಂಡ್ ಡೆವಲಪ್‌ಮೆಂಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಪಿಡಿಐಎಲ್) ಖರೀದಿಗೆ ಆಸಕ್ತಿ (ಇಒಐ) ಹೊಂದಿರುವ ಬಗ್ಗೆ ತಿಳಿಸಲು ನೀಡಿರುವ ಗಡುವನ್ನು ಕೇಂದ್ರ ಸರ್ಕಾರವು ಫೆಬ್ರುವರಿ 28ರವರೆಗೆ ವಿಸ್ತರಿಸಿದೆ.

ಖರೀದಿ ಬಗ್ಗೆ ಆಸಕ್ತಿ ಹೊಂದಿರುವುದನ್ನು ತಿಳಿಸಲು ಸೋಮವಾರ ಕಡೆಯ ದಿನವಾಗಿತ್ತು. ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಗಡುವು ವಿಸ್ತರಿಸುವಂತೆ ಬಿಡ್‌ದಾರರು ಮನವಿ ಮಾಡಿದ್ದರು. ಹೀಗಾಗಿ ಬಿಡ್ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆ (ಡಿಐಪಿಎಎಂ) ತಿಳಿಸಿದೆ.

ಪಿಡಿಐಎಲ್‌ನಲ್ಲಿ ಕೇಂದ್ರ ಸರ್ಕಾರ ಹೊಂದಿರುವ ಶೇ 100ರಷ್ಟು ಷೇರುಗಳನ್ನು ಮಾರಾಟ ಮಾಡುವ ಸಂಬಂಧ ಪ್ರಾಥಮಿಕ ಬಿಡ್ ಸಲ್ಲಿಸುವಂತೆ ಇಲಾಖೆಯು ಡಿಸೆಂಬರ್ 14ರಂದು ಆಹ್ವಾನಿಸಿತ್ತು.

2021ರ ಮಾರ್ಚ್ 31ರವರೆಗಿನ ಮಾಹಿತಿಯಂತೆ, ಪಿಡಿಐಎಲ್‌ನ ವರಮಾನವು ₹ 129.68 ಕೋಟಿ ಹಾಗೂ ನಿವ್ವಳ ಲಾಭ ₹ 19.07 ಕೋಟಿ ಇದೆ. 1978ರ ಮಾರ್ಚ್ 7ರಂದು ಆರಂಭ ಆದ ಕಂಪನಿಯು ವಿವಿಧ ಯೋಜನೆಗಳಿಗೆ ಎಂಜಿನಿಯರಿಂಗ್ ಮತ್ತು ಸಲಹಾ ಸೇವೆಗಳನ್ನು ಒದಗಿಸುವಲ್ಲಿ ತೊಡಗಿಕೊಂಡಿದೆ. ಈ ಕಂಪನಿಯ ಮಾರಾಟವು ಮುಂದಿನ ಹಣಕಾಸು ವರ್ಷದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಮಾಡಲಾಗಿದೆ.

‘ಪೆಗಾಸಸ್ ಕುತಂತ್ರಾಂಶ: ತಪ್ಪು ಮಾಡಿಲ್ಲ, ಒಂದು ದೇಶಕ್ಕಷ್ಟೇ ಮಾರಿಲ್ಲ’

ಜೆರುಸಲೇಂ (ಪಿಟಿಐ): ‘ಪ್ರಜಾಪ್ರಭುತ್ವಯೇತರ ದೇಶಗಳಿಗೂ ಪೆಗಾಸಸ್ ಕುತಂತ್ರಾಂಶವನ್ನು ಮಾರಲಾಗಿದ್ದು, ತಪ್ಪು ಎಸಗಲಾಗಿದೆ ಎಂಬ ಟೀಕೆಗಳು ಪೂರ್ವಗ್ರಹಪೀಡಿತವಾದುದು’ ಎಂದು ಇಸ್ರೇಲ್‌ನ ಎನ್‌ಎಸ್‌ಒ ಗ್ರೂಪ್ ಹೇಳಿದೆ.

ಸೇನಾ ಶಸ್ತ್ರಾಸ್ತ್ರಗಳು ವ್ಯವಸ್ಥೆಯ ಕಣ್ಗಾವಲು ತಂತ್ರಜ್ಞಾನವನ್ನು ಇಸ್ರೇಲ್ ಸೇರಿದಂತೆ ವಿವಿಧ ದೇಶಗಳು ದುರ್ಬಳಕೆ ಮಾಡಿಕೊಳ್ಳುತ್ತಿವೆ ಎಂಬ ಆರೋಪಗಳಿದ್ದರೂ ಅವುಗಳನ್ನು ಮಾರಲಾಗುತ್ತಿದೆ ಎಂದೂ ಸಂಸ್ಥೆ ಪ್ರತಿಪಾದಿಸಿದೆ.

ಇಸ್ರೇಲ್‌ನ ಟಿ.ವಿ.ವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಸಮೂಹದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶಲೆವ್ ಹುಲಿಯೊ ಅವರು, ‘ಕಂಪನಿಯ ಕಾರ್ಯಚಟುವಟಿಕೆಯನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಇದೇ ಸಂದರ್ಭದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ಕೆಲ ತಪ್ಪುಗಳೂ ಆಗಿರಬಹುದು’ ಎಂದು ಒಪ್ಪಿಕೊಂಡಿದ್ದಾರೆ.

‘ನಾವು ಒಂದು ದೇಶಕ್ಕಷ್ಟೇ ಪೆಗಾಸಸ್ ಕುತಂತ್ರಾಂಶವನ್ನು ಮಾರಿಲ್ಲ. ಇದನ್ನು ಅಮೆರಿಕ ಅಥವಾ ಇಸ್ರೇಲ್ ಮಾರುವುದಿಲ್ಲ. ಎಫ್–25 ವಿಮಾನ, ಯುದ್ಧನೌಕೆ, ಡ್ರೋನ್ ಮಾರಬಹುದು. ಗೌಪ್ಯ ಮಾಹಿತಿ ಸಂಗ್ರಹಿಸುವ ಪರಿಕರ ಮಾರಬಾರದು ಎಂಬುದು ಪೂರ್ವಗ್ರಹಪೀಡಿತ ಚಿಂತನೆ’ ಎಂದು ಕಂಪನಿಯನ್ನು ಸಮರ್ಥಿಸಿಕೊಂಡರು.

ಪೆಗಾಸಸ್ ಕುತಂತ್ರಾಂಶ ಕುರಿತು ವಿಶ್ವದಾದ್ಯಂತ ಟೀಕೆಗಳು ಎದುರಾಗಿರುವ ಕಾರಣ ನೀವು ನೆಮ್ಮದಿಯಿಂದ ನಿದ್ರೆ ಮಾಡುವಿರಾ ಎಂಬ ಪ್ರಶ್ನೆಗೆ, ‘ಖಂಡಿತ. ನಾನು ರಾತ್ರಿ ಗಡದ್ದಾಗಿ ನಿದ್ರೆ ಹೊಡೆಯುತ್ತೇನೆ’ ಎಂದು ಹೇಳಿದ್ದಾರೆ.

ಪೆಗಾಸಸ್ ಕುತಂತ್ರಾಂಶವನ್ನು ಭಾರತ ಖರೀದಿಸಿದೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಉಲ್ಲೇಖಿಸಿದ ಹಿಂದೆಯೇ ಕಂಪನಿಯ ಸಿಇಒ ಸಂದರ್ಶನ ಹೊರಬಿದ್ದಿದೆ. ನ್ಯೂಯಾರ್ಕ್ ಟೈಮ್ಸ್ ವರದಿಯು ತೀವ್ರ ಚರ್ಚೆಗೆ ಗ್ರಾಸವಾಗಿದೆ. ಕುತಂತ್ರಾಂಶ ಕೋರಿ 90 ಅರ್ಜಿಗಳು ಬಂದಿದ್ದವು. ನಿಯಮಗಳಿಗೆ ಬದ್ಧವಾದ 40ಕ್ಕೆ ಮಾತ್ರ ತಂತ್ರಾಂಶವನ್ನು ಮಾರಿದ್ದೇವೆ ಎಂದು ತಿಳಿಸಿದರು.ಪೆಗಾಸಸ್ ಕುತಂತ್ರಾಂಶವು ಭಾರತದಲ್ಲಿ ದುರ್ಬಳಕೆಯಾಗಿದೆ ಎಂಬುದನ್ನು ಭಾರತ ಸರ್ಕಾರ ನಿರಾಕರಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹450

ರಾಮನಗರ ರೇಷ್ಮೆ ಧಾರಣೆ

ಮಿಶ್ರತಳಿ	₹400-770
ದ್ವಿತಳಿ	₹335-943

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

‘ಉದ್ಯಮದ ವೆಚ್ಚ ಹೆಚ್ಚಳ ಕಳವಳಕಾರಿ’

ನವದೆಹಲಿ (ಪಿಟಿಐ): ದೇಶದಲ್ಲಿ ಉದ್ಯಮ ನಡೆಸುವ ವೆಚ್ಚವು ಹೆಚ್ಚಾಗುತ್ತಿರುವುದು ಕಳವಳಕ್ಕೆ ಕಾರಣವಾಗಿದ್ದು, ನೇಮಕಾತಿಯು ಮಂದಗತಿಯಲ್ಲಿಯೇ ಇದೆ ಎಂದು ಭಾರತೀಯ ವಾಣಿಜ್ಯೋದ್ಯಮ ಮಹಾಸಂಘದ (ಫಿಕ್ಕಿ) ಸಮೀಕ್ಷೆಯು ತಿಳಿಸಿದೆ.

ಕಚ್ಚಾ ಸಾಮಗ್ರಿಗಳ ಬೆಲೆಯು ಗರಿಷ್ಠ ಮಟ್ಟದಲ್ಲಿ ಇರುವುದು, ಡೀಸೆಲ್ ದರ ಏರಿಕೆ, ಎಲ್‌ಪಿಜಿ, ನೈಸರ್ಗಿಕ ಅನಿಲ, ವಿದ್ಯುತ್ ಮತ್ತು ಇಂಧನ ದರ ಏರಿಕೆಯು ತಯಾರಿಕಾ ವೆಚ್ಚದಲ್ಲಿ ಹೆಚ್ಚಳಕ್ಕೆ ಕಾರಣವಾಗುತ್ತಿವೆ. ಅಲ್ಲದೆ, ಕಾರ್ಮಿಕರ ವೆಚ್ಚ, ಕಚ್ಚಾ ಸಾಮಗ್ರಿಗಳ ಕೊರತೆ, ವಿದೇಶಿ ವಿನಿಮಯ ದರದಲ್ಲಿನ ಏರಿಳಿತ ಸಹ ತಯಾರಿಕಾ ವೆಚ್ಚದ ಮೇಲೆ ಪರಿಣಾಮ ಉಂಟುಮಾಡುತ್ತಿವೆ ಎಂದು ಸಮೀಕ್ಷೆಯು ತಿಳಿಸಿದೆ.

ಬಜೆಟ್‌ಗೂ ಮುನ್ನ ತಯಾರಿಕಾ ವಲಯದ ತ್ರೈಮಾಸಿಕ ಸಮೀಕ್ಷೆಯನ್ನು ಫಿಕ್ಕಿ ಬಿಡುಗಡೆ ಮಾಡಿದೆ. ವಲಯದ ಬೆಳವಣಿಗೆ ಮತ್ತು ಹೂಡಿಕೆಗೆ ಉತ್ತೇಜನ ನೀಡುವ ಕುರಿತು ಬಜೆಟ್‌ನಲ್ಲಿ ನಿರ್ಧಾರ ಹೊರಬೀಳಲಿದೆ ಎನ್ನುವುದು ತಯಾರಕರ ನಿರೀಕ್ಷೆಯಾಗಿದೆ.

20021ರ ಅಕ್ಟೋಬರ್–ಡಿಸೆಂಬರ್ ಅವಧಿಯಲ್ಲಿ ತಯಾರಿಕಾ ವಲಯವು ಸುಧಾರಿಸಿಕೊಂಡಂತೆ ಕಾಣುತ್ತಿದೆ. ವಲಯದ ಒಟ್ಟಾರೆ ಸಾಮರ್ಥ್ಯದ ಶೇಕಡ 65ರಿಂದ ಶೇ 70ರಷ್ಟು ಬಳಕೆ ಆಗುತ್ತಿದೆ ಎಂದು ಹೇಳಿದೆ.

ನೇಮಕಾತಿಯು ಮಂದಗತಿಯಲ್ಲಿಯೇ ಇದೆ. ಮುಂದಿನ ಮೂರು ತಿಂಗಳಲ್ಲಿ ಹೆಚ್ಚುವರಿ ಕೆಲಸಗಾರರನ್ನು ನೇಮಿಸಿಕೊಳ್ಳುವ ಸಾಧ್ಯತೆ ಕಡಿಮೆ ಎಂದು ಸಮೀಕ್ಷೆಯಲ್ಲಿ ಭಾಗವಹಿಸಿದ್ದವರಲ್ಲಿ ಶೇ 75ರಷ್ಟು ಮಂದಿ ಹೇಳಿದ್ದಾರೆ.

ಎಲ್‌ಐಸಿ ಅಧ್ಯಕ್ಷರ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಐಪಿಒ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಅದರ ಅಧ್ಯಕ್ಷ ಎಂ.ಆರ್. ಕುಮಾರ್ ಅವರ ಸೇವಾ ಅವಧಿಯನ್ನು ಒಂದು ವರ್ಷದವರೆಗೆ ವಿಸ್ತರಿಸಿದೆ ಎಂದು ಮೂಲಗಳು ತಿಳಿಸಿವೆ.

ಇದರಿಂದಾಗಿ ಕುಮಾರ್ ಅವರು 2023ರ ಮಾರ್ಚ್‌ವರೆಗೆ ಅಧಿಕಾರದಲ್ಲಿ ಇರಲಿದ್ದಾರೆ. ಎರಡನೇ ಬಾರಿಗೆ ಅಧಿಕಾರಾವಧಿ ವಿಸ್ತರಣೆ ಮಾಡಲಾಗಿದೆ.

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ: ರಷ್ಯಾದ ಡ್ಯಾನಿಲ್ ಮೆಡ್ವೆಡೆವ್‌ಗೆ ನಿರಾಸೆ

ರಫೆಲ್ ನಡಾಲ್ ಚಾರಿತ್ರಿಕ ಸಾಧನೆ

ಮೆಲ್ಬರ್ನ್ (ಎಪಿ/ಎಎಫ್‌ಪಿ): ಸ್ಪೇನ್‌ನ ರಫೆಲ್ ನಡಾಲ್ ಟೆನಿಸ್ ಕ್ರೀಡೆಯಲ್ಲಿ ಹೊಸ ಇತಿಹಾಸ ಬರೆದರು. ಭಾನುವಾರ ರಾಡ್ ಲೇವರ್ ಅರೇನಾದಲ್ಲಿ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಟ್ರೋಫಿಗೆ ಮುತ್ತಿಕ್ಕಿದರು. ಅದರೊಂದಿಗೆ 21ನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದ ದಾಖಲೆಯನ್ನು ತಮ್ಮದಾಗಿಸಿಕೊಂಡರು.

ಅವರು ಈ ಹಾದಿಯಲ್ಲಿ ದಿಗ್ಗಜ ರೋಜರ್ ಫೆಡರರ್ (20) ಮತ್ತು ನೊವಾಕ್ ಜೊಕೊವಿಚ್ (20) ಅವರನ್ನು ಹಿಂದಿಕ್ಕಿದರು. ಈ ಸಲದ ಟೂರ್ನಿಯಲ್ಲಿ ಫೆಡರರ್ ಸ್ಪರ್ಧಿಸಿಲ್ಲ. ಕೋವಿಡ್ ಲಸಿಕೆ ಪಡೆಯದ ಕಾರಣಕ್ಕೆ ವೀಸಾ ರದ್ದುಗೊಂಡಿದ್ದರಿಂದ ನೋವಾಕ್ ಟೂರ್ನಿಯಲ್ಲಿ ಆಡುವ ಅವಕಾಶದಿಂದ ವಂಚಿತರಾಗಿದ್ದರು.

ಭಾನುವಾರ ಸಂಜೆ ನಡೆದ ಫೈನಲ್ ಹಣಾಹಣಿಯಲ್ಲಿ ನಡಾಲ್ 2–6, 6–7, 6–4, 6–4, 7–5ರಿಂದ ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ವಿರುದ್ಧ ಮೇಲುಗೈ ಸಾಧಿಸಿದರು. ಐದು ತಾಸು, 24 ನಿಮಿಷಗಳ ಕಾಲ ನಡೆದ ಆರಂಭದ ಎರಡು ಸೆಟ್‌ಗಳಲ್ಲಿ ಮೆಡ್ವೆಡೆವ್ ಜಯಿಸಿದರು. ಅದರಲ್ಲೂ ಎರಡನೇ ಸೆಟ್ ಬಹಳ ತುರುಸಿನ ಪೈಪೋಟಿ ಕಂಡಿತು. ರಷ್ಯಾದ ಆಟಗಾರ ಶರವೇಗದ ಸರ್ವ್‌ಗಳು ಗಮನ ಸೆಳೆದವು. ಈ ಸೆಟ್‌ನಲ್ಲಿ 35 ವರ್ಷದ ನಡಾಲ್ ನಿಕಟ ಪೈಪೋಟಿಯೊಡ್ಡಿದರು. ಆದರೆ ಮೂರನೇ ಸೆಟ್‌ನಲ್ಲಿ ಮೆಡ್ವೆಡೆವ್‌ಗೆ ಭರ್ಜರಿ ತಿರುಗೇಟು ನೀಡಿದರು. ಅವರನ್ನು ನಾಲ್ಕನೇ ಸೆಟ್‌ನಲ್ಲಿಯೂ ಪುಟಿದೇಳಲು ಬಿಡಲಿಲ್ಲ. ಆದರೆ, ಕೊನೆಯ ಸೆಟ್ ನಡಾಲ್ ಪಾಲಿಗೆ ಭಾರಿ ಸವಾಲಿನಿಂದ ಕೂಡಿತ್ತು. ರಷ್ಯಾದ ಆಟಗಾರ ದಿಟ್ಟ ಪೈಪೋಟಿಯೊಡ್ಡಿದರು. ಟೈ ಬ್ರೇಕರ್‌ನಲ್ಲಿ ನಡಾಲ್ ಜಯಶಾಲಿಯಾದರು.

29ನೇ ಬಾರಿ ಗ್ರ್ಯಾನ್‌ಸ್ಲಾಮ್ ಫೈನಲ್ ತಲುಪಿದ್ದ ಸ್ಪೇನ್ ಆಟಗಾರನಿಗೆ ಇದು ಎರಡನೇ ಆಸ್ಟ್ರೇಲಿಯನ್ ಓಪನ್ ಕಿರೀಟ. 2009ರಲ್ಲಿ ಅವರು ಇಲ್ಲಿ ಚಾಂಪಿಯನ್ ಆಗಿದ್ದರು. ಎಲ್ಲ ನಾಲ್ಕೂ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಕನಿಷ್ಠ ಎರಡು ಬಾರಿ ಗೆದ್ದ ಸಾಧನೆಯನ್ನೂ ನಡಾಲ್ ಮಾಡಿದರು. ನಡಾಲ್ ಎರಡು ಸೆಟ್‌ಗಳ ಹಿನ್ನಡೆಯಿಂದ ಪುಟಿದೆದ್ದು ಗೆಲುವು ಸಾಧಿಸಿದ್ದು ಎರಡು ಬಾರಿ ಮಾತ್ರ. 2019ರ ಅಮೆರಿಕ ಓಪನ್ ಟೂರ್ನಿಯ ಫೈನಲ್‌ನಲ್ಲೂ ನಡಾಲ್ ಮೆಡ್ವೆಡೆವ್ ಅವರನ್ನು ಮಣಿಸಿದ್ದರು.

ಕಳೆದ ಬಾರಿಯೂ ಇಲ್ಲಿ ಪ್ರಶಸ್ತಿ ಸುತ್ತು ತಲುಪಿದ್ದ ಮೆಡ್ವೆಡೆವ್ ಅವರು ಜೊಕೊವಿಚ್ ಎದುರು ಸೋತಿದ್ದರು.ನನ್ನ ವೃತ್ತಿಜೀವನದ ಅತ್ಯಂತ ಭಾವನಾತ್ಮಕ ಪಂದ್ಯಗಳಲ್ಲಿ ಒಂದು. ಈ ಗೆಲುವು ಅದ್ಭುತ. ಈ ಕ್ಷಣಕ್ಕಾಗಿ ಬಹಳಷ್ಟು ಹೋರಾಟದ ಹಾದಿ ಸವೆಸಿದ್ದೇನೆ ಎಂದು ನಡಾಲ್ ಹೇಳಿದರು.

ಪಂದ್ಯ ಗೆದ್ದ ನಂತರ ರಫೆಲ್ ನಡಾಲ್ ಸಂಭ್ರಮಿಸಿದ ಪರಿ –ರಾಯಿಟರ್ಸ್ ಚಿತ್ರ

ಫೈನಲ್ ಅಂಕಿ ಅಂಶ

ಮೆಡ್ವೆಡೆವ್		ನಡಾಲ್
23	ಏಸ್	3
5	ಡಬಲ್ ಫಾಲ್ಟ್ಸ್	5
76	ವಿನ್ನರ್ಸ್	69
189	ಗೆದ್ದ ಒಟ್ಟು ಪಾಯಿಂಟ್ಸ್	182

ನಡಾಲ್ ಗೆದ್ದ ಒಟ್ಟು ಪ್ರಶಸ್ತಿ 90

ಗ್ರ್ಯಾನ್ ಸ್ಲಾಂ ಪ್ರಶಸ್ತಿಗಳು 21

(ಫ್ರೆಂಚ್ ಓಪನ್: 2005, 2006, 2007, 2008, 2010, 2011, 2012, 2013, 2014, 2017, 2018, 2019, 2020); ವಿಂಬಲ್ಡನ್ (2008, 2010); ಅಮೆರಿಕ ಓಪನ್ (2010, 2013, 2017, 2019) ಆಸ್ಟ್ರೇಲಿಯನ್ ಓಪನ್ (2009, 2022)

ಪ್ರಶಸ್ತಿಯೊಂದಿಗೆ ಬಾರ್ಬರಾ (ಬಲ) ಕಟೆರಿನಾ– ರಾಯಿಟರ್ಸ್ ಚಿತ್ರ

ಬಾರ್ಬರಾ –ಕಟೆರಿನಾಗೆ ಡಬಲ್ಸ್ ಪ್ರಶಸ್ತಿ

ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿರುವ, ಜೆಕ್ ಗಣರಾಜ್ಯದ ಬಾರ್ಬರಾ ಕ್ರೆಜಿಕೋವಾ ಹಾಗೂ ಕಟೆರಿನಾ ಸಿನಿಯಾಕೊವಾ ಅವರು ಮಹಿಳಾ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಅವರು 6-7 (3), 6-4, 6-4ರಿಂದ ಶ್ರೇಯಾಂಕರಹಿತ ಆಟಗಾರ್ತಿಯರಾದ ಕಜಕಸ್ತಾನದ ಅನ್ನಾ ಡಾನಿಲಿನಾ ಮತ್ತು ಬ್ರೆಜಿಲ್‌ನ ಬೀಟ್‌ರಿಜ್ ಹದ್ದಾದ್ ಮೈಯಾ ಅವರನ್ನು ಮಣಿಸಿದರು. ಜೆಕ್ ಗಣರಾಜ್ಯದ ಆಟಗಾರ್ತಿಯರಿಗೆ ಒಲಿದ ಮೊದಲ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿ ಇದು. ಈ ಮೊದಲು ಒಂದು ಬಾರಿ ವಿಂಬಲ್ಡನ್ ಮತ್ತು ಎರಡು ಬಾರಿ ಫ್ರೆಂಚ್ ಓಪನ್ ಟೂರ್ನಿಗಳಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದರು. ಎರಡು ತಾಸು 42 ನಿಮಿಷಗಳ ಕಾಲ ಈ ಪಂದ್ಯ ನಡೆಯಿತು.

ಡ್ಯಾನಿಲ್ ಮೆಡ್ವೆಡೆವ್ ಅವರ ಆಟದ ಭಂಗಿ –ಎಎಫ್‌ಪಿ ಚಿತ್ರ

ನೀರಜ್ ರಿಷಭ್ ಭೇಟಿ

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ವಿಕೆಟ್‌ಕೀಪರ್ ರಿಷಭ್ ಪಂತ್ ಅವರನ್ನು ಭೇಟಿಯಾದ ಸಂತಸದ ಕ್ಷಣದ ಚಿತ್ರವನ್ನು ಟೋಕಿಯೊ ಒಲಿಂಪಿಕ್ಸ್ ಚಿನ್ನದ ಪದಕ ವಿಜೇತ ಅಥ್ಲೀಟ್ ನೀರಜ್ ಚೋಪ್ರಾ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. 'ರಿಷಭ್ ಅವರಂತಹ ಒಳ್ಳೆಯ ಸ್ನೇಹಿತ ಜೊತೆಗಿದ್ದರೆ ಕ್ಯಾಮೆರಾಗಳನ್ನು ಎದುರಿಸುವುದು ಸುಲಭ' ಎಂದು ನೀರಜ್ ಬರೆದುಕೊಂಡಿದ್ದಾರೆ.

ರಿಷಭ್ ಪಂತ್ ಮತ್ತು ನೀರಜ್ ಚೋಪ್ರಾ –ಟ್ವಿಟರ್ ಚಿತ್ರ



ವಿಶ್ವಕಪ್ ಪಂದ್ಯದ ವೇಳೆ ಭೂಕಂಪ

ಪೋರ್ಟ್ ಆಫ್ ಸ್ಪೇನ್ (ಪಿಟಿಐ): ಇಲ್ಲಿ ನಡೆಯುತ್ತಿರುವ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಜಿಂಬಾಬ್ವೆ ಮತ್ತು ಐರ್ಲೆಂಡ್ ನಡುವಿನ ಪಂದ್ಯದ ಸಂದರ್ಭದಲ್ಲಿ ಭೂಕಂಪ ಸಂಭವಿಸಿ ಕೆಲಕಾಲ ಆತಂಕ ನಿರ್ಮಾಣವಾಯಿತು.

ಕ್ವೀನ್ಸ್ ಪಾರ್ಕ್ ಓವಲ್‌ನಲ್ಲಿ ಪಂದ್ಯ ನಡೆಯುತ್ತಿತ್ತು. ಭೂಕಂಪವಾದುದು ಆಟಗಾರರ ಗಮನಕ್ಕೆ ಬರಲಿಲ್ಲ. ಆದ್ದರಿಂದ ಆಟಕ್ಕೆ ಧಕ್ಕೆಯಾಗಲಿಲ್ಲ. ಆದರೆ ವೀಕ್ಷಕ ವಿವರಣೆಕಾರರ ಬಾಕ್ಸ್ ಅಲುಗಾಡಿತು. ಭೂಕಂಪವು ರಿಕ್ಟರ್ ಮಾಪನದಲ್ಲಿ 5.2 ಮ್ಯಾಗ್ನಿಟ್ಯೂಡ್ ದಾಖಲಾಗಿದೆ. ಸುಮಾರು 20 ಸೆಕೆಂಡುಗಳ ಕಾಲ ಕಂಪನ ಅನುಭವವಾಗಿತ್ತು.

'ನಮಗೀಗ ಭೂಕಂಪದ ಅನುಭವ ಆಗುತ್ತಿದೆ. ನಾವು ಕುಳಿತಿರುವ ಬಾಕ್ಸ್ ಅಲುಗಾಡುತ್ತಿದೆ. ನಮ್ಮ ಹಿಂದೆ, ಸಮೀಪದಲ್ಲೇ ರೈಲು ಸಂಚರಿಸಿದಂತೆ ಆಗುತ್ತಿದೆ. ನಮಗೆ ಮಾತ್ರವಲ್ಲ, ಕ್ವೀನ್ಸ್ ಪಾರ್ಕ್ ಓವಲ್‌ನ ಮಾಧ್ಯಮ ಕೇಂದ್ರವಿಡೀ ಅಲುಗಾಡುತ್ತಿದೆ' ಎಂದು ವೀಕ್ಷಕ ವಿವರಣೆ ನೀಡುತ್ತಿದ್ದ ಆ್ಯಂಡ್ರ್ಯೂ ಲಿಯೊನಾರ್ಡ್ 'ಲೈವ್' ಆಗಿ ಹೇಳಿದರು.

ಟಾಸ್ ಗೆದ್ದ ಜಿಂಬಾಬ್ವೆ ಬ್ಯಾಟಿಂಗ್ ಆರಿಸಿಕೊಂಡಿತ್ತು. ಆರನೇ ಓವರ್‌ನ ಐದನೇ ಎಸೆತವನ್ನು ಐರ್ಲೆಂಡ್ ಸ್ಪಿನ್ನರ್ ಮ್ಯಾಥ್ಯೂ ಹಂಫ್ರೆಯಸ್ ಹಾಕಿದ್ದರು. ಅದನ್ನು ಬ್ರಯಾನ್ ಬೆನೆಟ್ ಎದುರಿಸಿದ್ದರು. ಆದರೆ ಇದನ್ನು ಸೆರೆಹಿಡಿಬೇಕಾಗಿದ್ದ ಕ್ಯಾಮೆರಾ ಅಲುಗಾಡಿತು. ಬೆನೆಟ್ ರಕ್ಷಣಾತ್ಮಕ ಆಟವಾಡಿ ಚೆಂಡನ್ನು ಮಿಡ್ ಆಫ್ ಕಡೆಗೆ ತಳ್ಳಿದರು. ಮುಂದಿನ ಎಸೆತದಲ್ಲಿ ಬೌಂಡರಿ ಸಿಡಿಸಿದರು.

167 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಐರ್ಲೆಂಡ್ ಆರಂಭಿಕ ಬ್ಯಾಟರ್ ಜ್ಯಾಕ್ ಡಿಕ್ಸನ್ (78; 88 ಎಸೆತ, 8 ಬೌಂಡರಿ, 3 ಸಿಕ್ಸರ್) ಮತ್ತು ನಾಯಕ, ನಾಲ್ಕನೇ ಕ್ರಮಾಂಕದ ಟಿಮ್ ಟೆಕ್ಟರ್ (76; 94 ಎ, 8 ಬೌಂ, 1 ಎ) ಅವರ ಅಮೋಘ ಆಟದ ಬಲದಿಂದ ಎಂಟು ವಿಕೆಟ್‌ಗಳಿಂದ ಜಯ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಜಿಂಬಾಬ್ವೆ: 48.4 ಓವರ್‌ಗಳಲ್ಲಿ 166 (ಸ್ಟೀವನ್ ಸಾಲ್ 24, ಬ್ರಯಾನ್ ಬೆನೆಟ್ 37, ಡೇವಿಡ್ ಬೆನೆಟ್ 35; ಮ್ಯಾಥ್ಯೂ ಹಂಫ್ರೆಯಸ್ 32ಕ್ಕೆ3; ಮುಜಮಿಲ್ ಶೆರ್ಜಾದ್ 20ಕ್ಕೆ5, ಜೆಮಿ ಫಾರ್ಬ್ಸ್ 29ಕ್ಕೆ1); ಐರ್ಲೆಂಡ್: 32 ಓವರ್‌ಗಳಲ್ಲಿ 2ಕ್ಕೆ169 (ಜ್ಯಾಕ್ ಡಿಕ್ಸನ್ ಔಟಾಗದೆ 78, ಟಿಮ್ ಟೆಕ್ಟರ್ ಔಟಾಗದೆ 76).

ಸೈಬರ್ ಟ್ರೋಲಿಂಗ್ ಧೈರ್ಯದಿಂದ ಎದುರಿಸಿ: ಪಿ.ವಿ ಸಿಂಧು ಸಲಹೆ

ಹೈದರಾಬಾದ್ (ಪಿಟಿಐ): ಸೈಬರ್ ಟ್ರೋಲಿಂಗ್‌ನ ಅವಮಾನವನ್ನು ತಾವು ಕೂಡ ಅನುಭವಿಸಿದ್ದು, ಧೈರ್ಯದಿಂದ ಎದುರಿಸಿ ನಿಂತಿರುವುದಾಗಿ ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಹೇಳಿದ್ದಾರೆ.

ಪಿ.ವಿ. ಸಿಂಧು

ತೆಲಂಗಾಣ ಪೊಲೀಸ್ ಇಲಾಖೆ ಸೈಬರ್ ಅಪರಾಧ ಕುರಿತು ಮಹಿಳೆಯರು ಮತ್ತು ಮಕ್ಕಳಲ್ಲಿ ಜಾಗೃತಿ ಮೂಡಿಸಲು ಆರಂಭಿಸಿರುವ ಅಭಿಯಾನಕ್ಕೆ ಚಾಲನೆ ನೀಡಿ ಸಿಂಧು ಮಾತನಾಡಿದರು.

'ಸೈಬರ್ ದಾಳಿಗೆ ಗುರಿಯಾದಾಗ ಹತ್ತಿರದ ಪೊಲೀಸ್ ಠಾಣೆಗೆ ದೂರು ನೀಡಬೇಕು. ಹೆದರಬಾರದು. ಮಕ್ಕಳು ಮೊಬೈಲ್, ಇಂಟರ್‌ನೆಟ್ ಬಳಕೆ ಸುವುದರ ಬಗ್ಗೆ ಪಾಲಕರು ನಿಗಾ ವಹಿಸಬೇಕು' ಎಂದರು.

ಲಡಾಖ್‌ನಲ್ಲಿ ಕ್ರೀಡಾಂಗಣ

ನವದೆಹಲಿ (ಪಿಟಿಐ): ಲಡಾಖ್‌ನಲ್ಲಿ ಅತ್ಯಾಧುನಿಕ ಫುಟ್‌ಬಾಲ್ ಅಂಗಣ ನಿರ್ಮಿಸುವುದಾಗಿ ತಿಳಿಸಿರುವ ಕೇಂದ್ರ ಸರ್ಕಾರಕ್ಕೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಕೃತಜ್ಞತೆ ಸಲ್ಲಿಸಿದೆ.

ಭಾನುವಾರ ನಡೆದ ಮನ್ ಕಿ ಬಾತ್ ಬಾನುಲಿ ಪ್ರಸಾರ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಫುಟ್‌ಬಾಲ್ ಅಂಗಣ ನಿರ್ಮಾಣದ ಬಗ್ಗೆ ಪ್ರಸ್ತಾಪಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿರುವ ಎಐಎಫ್‌ಎಫ್ ಕೇಂದ್ರಾಡಳಿತ ಪ್ರದೇಶದಲ್ಲಿ ಸ್ಥಳೀಯ ಪ್ರತಿಭೆಗಳು ಬೆಳಗಲು ಈ ಕ್ರಮ ನೆರವಾಗಲಿದೆ ಎಂದು ಅಭಿಪ್ರಾಯಪಟ್ಟಿದೆ.

ಲಡಾಖ್‌ನಲ್ಲಿ ಎಂಟು ಲೇನ್‌ಗಳ ಸಿಂಥೆಟಿಕ್ ಟ್ರ್ಯಾಕ್ ಮತ್ತು ಆಸ್ಟ್ರೊ ಟರ್ಫ್ ಫುಟ್‌ಬಾಲ್ ಕ್ರೀಡಾಂಗಣ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಮೋದಿ ತಿಳಿಸಿದ್ದರು.

ಪ್ರೊ ಕಬಡ್ಡಿ ಲೀಗ್: ಪವನ್ ಶೆರಾವತ್ ಹೋರಾಟ ವ್ಯರ್ಥ

ತಲೈವಾಸ್‌ಗೆ ಮಣಿದ ಬೆಂಗಳೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕ ಪವನ್ ಶೆರಾವತ್ (ಒಂಬತ್ತು ಪಾಯಿಂಟ್ಸ್) ಮಿಂಚಿದರೂ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಸೋಲು ಅನುಭವಿಸಿತು.

ಹೋಟೆಲ್ ಶೆರಟನ್ ಗ್ರ್ಯಾಂಡ್‌ನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ 24–42ರಿಂದ ತಮಿಳ್ ತಲೈವಾಸ್ ವಿರುದ್ಧ ನಿರಾಸೆ ಅನುಭವಿಸಿತು.

ರೇಡರ್ ಅಜಿಂಕ್ಯ ಪವಾರ್ (10) ಅವರ ಸೂಪರ್ ಟೆನ್ ಹಾಗೂ ಮಂಜೀತ್ (8) ತಲೈವಾಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಡಿಫೆಂಡರ್ ಸಾಗರ್ (5) ಮಿಂಚಿದರು.

ಬೆಂಗಳೂರು ಪರ ರೇಡರ್‌ಗಳಾದ ಭರತ್ ಹಾಗೂ ಚಂದ್ರನ್ ರಂಜೀತ್ ತಲಾ ಐದು ಪಾಯಿಂಟ್ಸ್ ಗಳಿಸಿದರು.

ಬುಲ್ಸ್ ತಂಡವು ಮೊದಲಾರ್ಧದಿಂದಲೇ 8–21ರಿಂದ ಹಿನ್ನಡೆ ಅನುಭವಿಸಿತ್ತು. ಬಳಿಕ ತಂಡಕ್ಕೆ ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಸೋಲಿನೊಂದಿಗೆ ಬೆಂಗಳೂರು ತಂಡವು ಪಾಯಿಂಟ್ಸ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕಿಳಿಯಿತು.

ಪಿಂಕ್ ಪ್ಯಾಂಥರ್ಸ್‌ಗೆ ಭರ್ಜರಿ ಜಯ: ಸ್ಟಾರ್ ರೇಡರ್ ಅರ್ಜುನ್ ದೇಸ್ವಾಲ್ ಗಳಿಸಿದ 17 ಪಾಯಿಂಟ್ಸ್ ನೆರವಿನಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಭರ್ಜರಿ ಜಯ ಗಳಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ 51–30ರಿಂದ ಪಟ್ನಾ ಪೈರೇಟ್ಸ್ ತಂಡವನ್ನು ಸೋಲಿಸಿತು. ತಂಡದ ಪರ ದೀಪಕ್ ಹೂಡಾ 8 ರೇಡಿಂಗ್ ಪಾಯಿಂಟ್ಸ್ ಗಳಿಸಿದರು. ಡಿಫೆಂಡರ್‌ಗಳಾದ ಸಂದೀಪ್ ಧುಳ್ ಮತ್ತು ವಿಶಾಲ್ ತಲಾ ಐದು ಪಾಯಿಂಟ್ಸ್ ಕಲೆಹಾಕಿ ತಂಡದ ಗೆಲುವಿಗೆ ಕಾಣಿಕೆ ನೀಡಿದರು.

ಜೈಪುರ ಮೊದಲಾರ್ಧದಲ್ಲೇ 25–11ರಿಂದ ಮುಂದಿತ್ತು. ಅದೇ ಲಯವನ್ನು ಕಾಯ್ದುಕೊಂಡು ಗೆಲುವಿನ ನಗೆ ಬೀರಿತು. ಪಟ್ನಾ ಪರ ರೇಡರ್‌ಗಳಾದ ಗುಮನ್ ಸಿಂಗ್ 11, ಸಚಿನ್ ಮತ್ತು ಮನು ಗೋಯತ್ ತಲಾ ಏಳು ಪಾಯಿಂಟ್ಸ್ ಗಳಿಸಿದರು. ಡಿಫೆಂಡರ್ ಸುನಿಲ್ 3 ಪಾಯಿಂಟ್ಸ್ ಕಲೆಹಾಕಿದರು. ಉಳಿದವರಿಂದ ಹೆಚ್ಚಿನ ಬೆಂಬಲ ತಂಡಕ್ಕೆ ಸಿಗಲಿಲ್ಲ.

ಜೈಪುರ ಪಿಂಕ್ ಪ್ಯಾಂಥರ್ಸ್ ತಂಡದ ಅರ್ಜುನ್ ದೇಸ್ವಾಲ್ ರೇಡಿಂಗ್ ವೈಖರಿ

ಇಂದಿನ ಪಂದ್ಯ (ರಾತ್ರಿ)

ಹರಿಯಾಣ ಸ್ಟೀಲರ್ಸ್ – ಗುಜರಾತ್ ಜೈಂಟ್ಸ್ 7.30

ದಬಂಗ್ ಡೆಲ್ಲಿ – ಯು ಮುಂಬಾ 8.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್
ದಬಂಗ್ ಡೆಲ್ಲಿ	14	8	4	2	48
ಬೆಂಗಳೂರು ಬುಲ್ಸ್	16	8	7	1	46
ಪಟ್ನಾ ಪೈರೇಟ್ಸ್	13	8	4	1	45
ಹರಿಯಾಣ ಸ್ಟೀಲರ್ಸ್	14	6	5	3	42
ಯು ಮುಂಬಾ	13	5	3	5	41
ಬೆಂಗಾಲ್ ವಾರಿಯರ್ಸ್	14	7	6	1	41
ಯುಪಿ ಯೋಧಾ	14	5	6	3	40
ಜೈಪುರ ಪಿಂಕ್ ಪ್ಯಾಂಥರ್ಸ್	14	6	6	2	40
ತಮಿಳ್ ತಲೈವಾಸ್	14	4	4	6	39
ಪುಣೇರಿ ಪಲ್ಟನ್	14	7	7	0	37
ಗುಜರಾತ್ ಜೈಂಟ್ಸ್	12	3	6	3	28
ತೆಲುಗು ಟೈಟನ್ಸ್	14	1	10	3	22

(ಭಾನುವಾರದ ಪಂದ್ಯಗಳ ಅಂತ್ಯಕ್ಕೆ)